ಬಸವೇಶ್ವರನ ವಚನಗಳು.

931
5198

ಶಿವಾನುಭವ ಗ್ರಂಥಮಾಲಾ ನಂ ೧

ಹೊಸ ಪದ್ಧತಿಯ

# ಬಸವೇಶ್ವರನ ವಚನಗಳು.

ಕೇಂದ್ರ ಗ್ರಂಥಾಲಯ
ಅರಿವೇ ಗುರು
ಕ್ರಮಾಂಕ

ಸಂಪಾದಕರು.

ರಾ|| ಬ|| ಫ. ಗು. ಹಳಕಟ್ಟಿ.

ಬಿ. ಏ. ಎಲ್. ಎಲ್. ಬಿ.

ವಿಜಾಪೂರ.

( ಈ ಗ್ರಂಥದ ಎಲ್ಲಪಕ್ಕುಗಳು ಕಾಯ್ದಿಡಲ್ಪಟ್ಟವೆ.)

ಇದನ್ನು ವಿಜಾಪುರದಲ್ಲಿ
ರಾ|| ಬ|| ಫ. ಗು. ಹಳಕಟ್ಟಿ ಇವರು ತಮ್ಮ
"ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ" ನಲ್ಲಿ ಮುದ್ರಿಸಿದರು.
ಮತ್ತು ಅವರು ಅಲ್ಲಿಯೇ ಪ್ರಕಟಿಸಿದರು.

ಈ ಗ್ರಂಥದ ಮೇಲಿನ ಅಧಿಕಾರವು ಸಂಪಾದಕರಿಂದ ಕಾದಿಡಲ್ಪಟ್ಟಿದೆ.
ಗ್ರಂಥವನ್ನಾಗಲಿ ಅಥವಾ ಅದರ ಯಾವದೇ ಭಾಗವನ್ನಾಗಲಿ
ಪ್ರಕಟಿಸುವ ಅಥವಾ ಯಾವ ಭಾಷೆಯಲ್ಲೂ ಭಾಷಾಂತ
ರಿಸುವ ಅಧಿಕಾರವು ಕಾದಿಡಲ್ಪಟ್ಟಿದೆ.

# ಪ್ರಸ್ತಾವನೆ.

## ( ೨ನೆಯ ಆವೃತ್ತಿ. )

೧೯೩೨ನೇ ಪೇಬರವರಿ ತಿಂಗಳಿನಲ್ಲಿ ನಾವು 'ಶಿವಾನುಭವ' ಎಂಬ ಹೆಸರಿನ ತ್ರೈಮಾಸಿಕ ಪತ್ರಿಕೆಯನ್ನು ಹೊರಡಿಸಿ ಅದರ ೧ನೇ ಸಂಚಿಕೆಯಲ್ಲಿಯೂ ಅದರ ಮುಂದಿನ ಸಂಚಿಕೆಯಲ್ಲಿಯೂ ಬಸವೇಶ್ವರನ ವಚನಗಳ ಸಮಗ್ರ ಗ್ರಂಥವನ್ನು ಮೊದಲು ಪ್ರಕಟಿಸಿದೆವು. ಅಗಸ್ಟ ತಿಂಗಳಿನಲ್ಲಿ ಹೊರಟ ಅದರ ೨ನೆಯ ಸಂಚಿಕೆಯಲ್ಲಿ ಮಹಾದೇವಿಯಕ್ಕನ ವಚನಗಳನ್ನು ಪ್ರಕಟಿಸಿದೆವು. ಆರಂಭದಲ್ಲಿ ಈ ಎರಡೂ ಗ್ರಂಥಗಳು ಯಾರ ಲಕ್ಷವನ್ನು ಎಳೆಯಲಿಲ್ಲ. ಆದರೆ ಈ ಸ್ಥಿತಿಯು ಈಗ ಬಹಳ ಬದಲಾಗಿದೆ. ಈ ಎರಡೂ ಗ್ರಂಥಗಳು ಜನರಲ್ಲಿ ಒಂದು ಕ್ರಾಂತಿಯನ್ನುಂಟು ಮಾಡಿದವೆಂದು ಹೇಳಬಹುದು. ಅವುಗಳಲ್ಲಿರುವ ಉಚ್ಚ ವಿಚಾರಗಳು ಕನ್ನಡನಾಡಿನಲ್ಲಿ ಪ್ರಸಾರಹೊಂದಹತ್ತಿರುತ್ತವೆ. ಆದ್ದರಿಂದ ಜನರಲ್ಲಿ ಆ ಗ್ರಂಥಗಳನ್ನು ಓದುವ ಅಭಿಲಾಷೆಯು ಹೆಚ್ಚುತ್ತಲಿದೆ. ಬಹು ಜನರು ಅವರ ತತ್ವಗಳಾವವೆಂಬುವನ್ನು ತಿಳಿಯಲು ಅಪೇಕ್ಷಿಸಹತ್ತಿದ್ದಾರೆ. ಅದರಲ್ಲಿ ಅವರಿಗೆ ಸಹಾಯವಾಗಬೇಕೆಂದೆಣಿಸಿ ಈಗಿನ ಹೊಸ ಪದ್ಧತಿಯಿಂದ ಬಸವೇಶ್ವರನ ವಚನ ಗ್ರಂಥವನ್ನು ಪ್ರಕಟಿಸಿದ್ದೇವೆ.

ಮಹಾನುಭಾವನಾದ ಬಸವೇಶ್ವರನ ತತ್ವಗಳು ತೀವ್ರವಾಗಿ ಮತ್ತು ಸ್ಪಷ್ಟವಾಗಿ ತಿಳಿಯುವಂತೆ ವಿಷಯಗಳ ಸಂಗ್ರಹವು ಈಗಿನ ಗ್ರಂಥದಲ್ಲಿ ಮಾಡಲ್ಪಟ್ಟಿದೆ. ಬಸವೇಶ್ವರನ ಎಲ್ಲ ವಚನಗಳು ವಿಷಯಾನುಸಾರವಾಗಿ ಇದರಲ್ಲಿ ಸೇರ್ಪಡೆಮಾಡಲ್ಪಟ್ಟಿವೆ. ಈ ವಿಷಯಗಳು ಧಾರ್ಮಿಕ, ನೈತಿಕ, ಸಾಮಾಜಿಕ ಹೀಗೆ ಅನೇಕ ವಿಧವಾಗಿವೆ. ಅವುಗಳ ಸಂಬಂಧವಾಗಿ ಬಸವೇಶ್ವರನ ವಿಚಾರಗಳೇನಿವೆಂಬುದನ್ನು ಈ ಗ್ರಂಥದ ಮೂಲಕ ವಾಚಕರು ಸುಲಭವಾಗಿ ಅರಿತುಕೊಳ್ಳಬಹುದಾಗಿದೆ.

ಈ ಗ್ರಂಥದಲ್ಲಿ ವಿವರಿಸಲ್ಪಟ್ಟ ವಿಷಯಗಳ ಜೋಡಣೆಯು ಪಠ್ಯಪುಸ್ತಕಗಳಲ್ಲಿಯ ಪಾಠಗಳಂತೆಯೇ ಇದೆ. ಅನೇಕ ವಿಧ ವಿಷಯಗಳನ್ನು ಪ್ರತಿಪಾದಿಸುವ ವಚನಗಳು ಅದರಲ್ಲಿ ಒತ್ತಟ್ಟಿಗೆ ಸೇರಿಸಲ್ಪಟ್ಟಿರುವದರಿಂದ ಅವುಗಳ ಬಗ್ಗೆ ಬಸವೇಶ್ವರನ ವಿಚಾರಗಳಾವವೆಂಬುದನ್ನರಿಯಲು ಈ ಗ್ರಂಥವು ಓದುಗರಿಗೆ ಬಹಳ ಸಹಾಯವಾಗದಿರದು.

ಬಸವೇಶ್ವರನ ವಚನಗಳಲ್ಲಿ ವೀರಶೈವಾಚಾರಕ್ಕೆ ಸಂಬಂಧಿಸಿದ ವಿಶಿಷ್ಟಾರ್ಥವುಳ್ಳ ಅನೇಕ ವಚನಗಳಿವೆ. ವೀರಶೈವೇತರರಿಗೆ ಅವುಗಳ ಅರ್ಥವು ಅಷ್ಟು ಸ್ಫುಟವಾಗಲಾರದು. ಅಂಥವುಗಳನ್ನು ನಾವು ಬೇರೆಯಾಗಿ ತೆಗೆದು ಅಷ್ಟಾವರಣಗಳಿಗನುಸಾರವಾಗಿ ಕ್ರಮಗೊಳಿಸಿ ಈ ಪುಸ್ತಕದ ಅಂತ್ಯದಲ್ಲಿ ಪ್ರಕಟಿಸಿದ್ದೇವೆ. ಅವುಗಳನ್ನು ನಾವು ಹಾಗೆ ಇಲ್ಲಿ ಒತ್ತಟ್ಟಿಗೆ ಸೇರಿಸಿದ್ದರಿಂದ ವಾಚಕರಿಗೆ ಈ ಧಾರ್ಮಿಕ ವಿಷಯವು ಮೊದಲಿನಕಿಂತಲೂ ಹೆಚ್ಚಿಗೆ ವಿಶದವಾಗದಿರದು.

ಮೇಲಿನವುಗಳನ್ನು ಬಿಟ್ಟು ಉಳಿದ ಎಲ್ಲಾ ವಚನಗಳ ಭಾವವನ್ನು ಯಾವ ಮತಸ್ಥನಾದರೂ ಕೂಡ ತಿಳಿದುಕೊಳ್ಳಬಹುದಾಗಿದೆ. ಅವುಗಳಲ್ಲಿಯ ವಿವೇಚನಾಪದ್ಧತಿಯು ಒಂದು ವಿಶಿಷ್ಟತರನಾಗಿದ್ದರೂ, ಅವುಗಳ ಮೂಲಭೂತ ತತ್ವಗಳು ಸರ್ವಸಾಮಾನ್ಯವಾಗಿವೆ. ಅವುಗಳ ಪರಿಶೀಲನೆಯಿಂದ ಬಸವೇಶ್ವರನ ಸಾಮಾಜಿಕ, ಧಾರ್ಮಿಕ, ನೈತಿಕ ವಿಚಾರಗಳಾವವೆಂಬುದನ್ನು ನಾವು ಅರಿತುಕೊಳ್ಳಬಹುದಾಗಿದೆ.

ಈ ವಚನಗಳು ಷಟ್‌ಸ್ಥಲಗಳ ಪ್ರಕಾರ ಈ ಗ್ರಂಥದಲ್ಲಿ ಜೋಡಿಸಲ್ಪಟ್ಟಿರುತ್ತವೆ. ಈ ಷಟ್‌ಸ್ಥಲಗಳು ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂದಿವೆ. ಇವು ಮನುಷ್ಯನಲ್ಲಿರುವ ಸ್ಥೂಲ, ಸೂಕ್ಷ್ಮ. ಕಾರಣ ಶರೀರಗಳಿಗೆ ಸಂಬಂಧಪಡುತ್ತವೆ ಭಕ್ತ ಮಹೇಶ್ವರಸ್ಥಲಗಳು ಸ್ಥೂಲಶರೀರವನ್ನೂ, ಪ್ರಸಾದಿ ಪ್ರಾಣಲಿಂಗಿ ಸ್ಥಲಗಳು ಸೂಕ್ಷ್ಮಶರೀರವನ್ನೂ, ಶರಣ ಐಕ್ಯಸ್ಥಲಗಳು ಕಾರಣ ಶರೀರವನ್ನೂ ಹದಗೊಳಿಸುತ್ತವೆ. ಅವುಗಳ ಈ ಕಾರ್ಯವನ್ನು ವಚನಶಾಸ್ತ್ರವು ಅಥವಾ ಷಟ್‌ಸ್ಥಲಸಿದ್ಧಾಂತವು ಅಥವಾ ಶಿವಾನುಭವವು ಹೇಳುತ್ತಿದೆ. ಈ ಆರು ಸ್ಥಲಗಳಿಗನ ಸಾರವಾಗಿಯೇ ಬಸವೇಶ್ವರನ ವಚನಗಳೆಲ್ಲ ಈ ಗ್ರಂಥದಲ್ಲಿ ಬೇರೆ ಬೇರೆಯಾಗಿ ವಿಂಗಡಿಸಲ್ಪಟ್ಟಿರುತ್ತವೆ.

ಸ್ಥೂಲಶರೀರದ ಮೂಲಕ ಇಂದ್ರಿಯಗಳಿಗೆ ಗೋಚರವಾಗುವ ಬಾಹ್ಯ ಕ್ರಿಯೆಗಳು ನಡಿಯುತ್ತವೆ. ಆದ್ದರಿಂದ ಬಾಹ್ಯ ವರ್ತನೆಯ ಸುಧಾರಣೆಗಳನ್ನು ಕುರಿತು ವಚನಕಾರರು ಇಲ್ಲಿ ವಿವೇಚಿಸುವದುಂಟು. ಹೀಗೆ ನಿರೂಪಿಸುವ ಸ್ಥಲಗಳು ಭಕ್ತ ಮತ್ತು ಮಹೇಶ್ವರ ಎಂದಿವೆ. ಮನುಷ್ಯನಲ್ಲಿರುವ ದುಷ್ಟ ವಾಸನೆಗಳನ್ನು ಮನುಷ್ಯನು ಮೊದಲು ದೂರಮಾಡತಕ್ಕದ್ದು. ಈ ಕಾರ್ಯಕ್ಕೋಸ್ಕರ ಅವನಲ್ಲಿ ಪರಮಾತ್ಮನ ಬಗ್ಗೆ ಶ್ರದ್ಧೆ ಸದ್ವರ್ತನೆಗಳು



ಅತ್ಯವಶ್ಯವಾಗಿ ಬೇಕು. ಈ ಎಲ್ಲ ವಿಷಯಗಳು ಭಕ್ತಸ್ಥಲದಲ್ಲಿ ನಿರೂಪಿಸಲ್ಪಟ್ಟಿವೆ. ಮುಂದೆ ಇವುಗಳು ಅವನಲ್ಲಿ ದೃಢಪಡಬೇಕು. ಈ ಸ್ಥಿತಿಯು ಮಹೇಶ್ವರಸ್ಥಲದಲ್ಲಿ ಒದಗುತ್ತದೆ. ಆಗ ಅವನಿಗೆ ಎಂಥ ಕಷ್ಟಗಳು ಬಂದರೂ ಕೂಡ ಅವನು ತನ್ನ ಸದ್ವಿಚಾರ, ಭಕ್ತಿ, ಧರ್ಮ, ನೀತಿ, ನಡೆಗಳನ್ನು ಬಿಡುವುದಿಲ್ಲ. ಇವು ಮಹೇಶ್ವರಸ್ಥಲದಲ್ಲಿ ವಿವೇಚಿಸಲ್ಪಟ್ಟಿವೆ.

ಸ್ಥೂಲಶರೀರವು ಸೂಕ್ಷ್ಮಶರೀರವನ್ನವಲಂಬಿಸಿ ವ್ಯವಹರಿಸುತ್ತದೆ. ಈ ಸೂಕ್ಷ್ಮಶರೀರದಲ್ಲಿ ಮನಸ್ಸು, ಬುದ್ಧಿ, ಚಿತ್ತ ಈ ಮೊದಲಾದವುಗಳ ವ್ಯಾಪಾರಗಳು ನಡೆಯುತ್ತವೆ ಇವುಗಳ ವಿಕಾಸವನ್ನು ಮನುಷ್ಯನು ಮಾಡಿಕೊಳ್ಳುವದು ಬಹು ಅವಶ್ಯವು. ಇದು ಪ್ರಸಾದಿ ಪ್ರಾಣಲಿಂಗಿಸ್ಥಲಗಳಲ್ಲಿ ಉಂಟಾಗುತ್ತದೆ. ಸ್ವಾರ್ಥವನ್ನು ತ್ಯಜಿಸಿ ಆತ್ಮಾರ್ಪಣದಿಂದ ವರ್ತಿಸುವದೇ ಪ್ರಸಾದಿಸ್ಥಲದ ಲಕ್ಷಣವು. ಇದರ ರೀತಿಗಳು ಈ ಸ್ಥಲದಲ್ಲಿ ವಿಶದವಾಗಿ ನಿರೂಪಿಸಲ್ಪಟ್ಟಿವೆ. ಪ್ರಸಾದಿಸ್ಥಲವ ಆಚರಣೆಗಳ ಮೂಲಕ ಮನುಷ್ಯನ ಅಂತಃಶಕ್ತಿಯು ಮುಂದೆ ಹೆಚ್ಚೆಚ್ಚಿಗೆ ಬೆಳೆಯುತ್ತ ಹೋಗುತ್ತದೆ. ಅದೇ ಪ್ರಾಣಲಿಂಗಸ್ಥಲವು.

ಶರಣ ಮತ್ತು ಐಕ್ಯಸ್ಥಲಗಳು ಕಾರಣ ಶರೀರಕ್ಕೆ ಸಂಬಂಧಪಡುತ್ತವೆ ಕ್ರಿಯೆಗಳ ಪರಿಣಾಮಗಳು ಈ ಶರೀರದಲ್ಲಿ ಸಂಗ್ರಹಿಸಲ್ಪಡುತ್ತವೆ. ಅರುಹು ಅಥವಾ ಜ್ಞಾನವುಳ್ಳಾತನು ಶರಣನೆನಿಸಿಕೊಳ್ಳುತ್ತಾನೆ. ಅವನು ಸ್ಥಿರಚಿತ್ತನು, ಸ್ವತಂತ್ರನು, ಸ್ವಾವಲಂಬಿಯು. ಐಕ್ಯಸ್ಥಲವು ಶರಣಸ್ಥಲಕ್ಕಿಂತಲೂ ಮುಂದಿನದು. ಕೆಳಗಿನ ಎಲ್ಲ ಸ್ಥಳಗಳಲ್ಲಿಯ ಅನುಭವವು ಇಲ್ಲಿ ಸಂಗ್ರಹಿಸಲ್ಪಡುತ್ತದೆ. ಇಲ್ಲಿ ಕ್ರಿಯೆಗಳು ದೃಗ್ಗೋಚರವಾಗುವದಿಲ್ಲ ಅವು ಶೂನ್ಯಸ್ಥಿತಿಯಲ್ಲಿರುತ್ತವೆ. ವಚನಕಾರರು ಈ ಶೂನ್ಯ ಶಬ್ದವನ್ನು ಅಸ್ತಿತ್ವರಹಿತವಾದದ್ದು ಎಂಬ ಅರ್ಥದಲ್ಲಿ ಉಪಯೋಗಿಸುವದಿಲ್ಲ ಈ ಸ್ಥಿತಿಯುಳ್ಳ ಮನುಷ್ಯನಲ್ಲಿ ಅನಂತ ಶಕ್ತಿಯು ಹುದುಗಿರುತ್ತದೆ. ಆದರೆ ಅದು ಪ್ರಕಟವಾಗಿರುವದಿಲ್ಲ. ಅದರ ಅವಶ್ಯಕತೆಯು ಅವನಿಗುಂಟಾದ ಕೂಡಲೆ ಅದರಲ್ಲಿಯ ಪ್ರಚಂಡ ಶಕ್ತಿಯನ್ನು ಅವನು ಉಪಯೋಗ ಮಾಡಿಕೊಳ್ಳಬಹುದು. ಇದು ಷಟ್‌ಸ್ಥಲವ ಕೊನೆಯ ಸ್ಥಿತಿಯು.

ಪುರಾತನ ಗ್ರಂಥಗಳನ್ನು ಶುದ್ಧವಾಗಿ ಮುದ್ರಿಸುವದು ಯಾವಾಗಲೂ ಕಷ್ಟಕರವಾದದ್ದು. ಯಾಕಂದರೆ ಯಾವ ಹಸ್ತಲಿಖಿತ ಪ್ರತಿಯೂ ಶುದ್ಧವಾಗಿರುವದಿಲ್ಲ. ಈ ಸ್ಥಿತಿಯಲ್ಲಿ ಯಾವ ಪಾಠವು ಎಲ್ಲಕ್ಕೂ ಹೆಚ್ಚು ಪ್ರತಿಗಳಲ್ಲಿ ತೋರಿಬರುತ್ತದೆಯೋ ಅದೇ ಶುದ್ಧವಾದುದೆಂದು ಗ್ರಹಿಸಿ ಅದನ್ನೇ

ನಾವು "ಬಸವೇಶ್ವರನ ವಚನಗಳು" ಈ ಗ್ರಂಥದ ಹಿಂದಿನ ಆವೃತ್ತಿಗಳಲ್ಲಿ ಸೇರಿಸುತ್ತ ಬಂದೆವು. ಆದರೆ ಈ ಪದ್ಧತಿಯಿಂದ ಶುದ್ಧಪಾಠಗಳು ನಮಗೆ ದೊರೆದವೆಂದು ಹೇಳಲಿಕ್ಕೆ ಬರಲಾರದು. ಟೀಕಾಯುಕ್ತ ಬಸವೇಶ್ವರನ ವಚನಗ್ರಂಥವೊಂದು ಉಪಲಬ್ಧವಿದೆ ಅದರಲ್ಲಿ ವಚನಗಳಿಗೆ ಅರ್ಥವನ್ನು ಹಚ್ಚಲಿಕ್ಕೆ ಟೀಕಾಕಾರನು ಯತ್ನಿಸಿದ್ದಾನೆ. ಈ ಕಾರ್ಯದಲ್ಲಿ ಅವನು ಅನೇಕ ವಚನಗಳನ್ನು ಸಂಗ್ರಹಿಸಿ ತನ್ನ ಟೀಕೆಯನ್ನು ಬರೆದಿರುವನೆಂಬದು ಅದರಿಂದ ಸ್ಪಷ್ಟವಾಗುತ್ತದೆ ಆದ್ದರಿಂದ ಅವನ ಪಾಠಾಂತರಗಳನ್ನೇ ನಾವು ಈಗಿನ ಆವೃತ್ತಿಯಲ್ಲಿ ಅನುಸರಿಸಿದ್ದೇವೆ.

ವಚನಗಳ ಅರ್ಥವು ತಮಗೆ ಸರಿಯಾಗಿ ಆಗುವದಿಲ್ಲೆಂದು ಬಹು ಜನರು ಈಗಲೂ ಅನ್ನುವದುಂಟು. ಆದರೆ ಹೀಗೆ ಅವುಗಳ ಅರ್ಥ ತಿಳಿಯದೆ ಇರುವದು ಭಾಷೆಯ ಮೂಲಕವಲ್ಲ. ಯಾಕಂದರೆ ವಚನಕಾರರ ಭಾಷೆಯು ಮಾಧ್ಯಮಿಕ ಕಾಲದ ನಡುಗನ್ನಡವಾಗಿರುತ್ತದೆ. ಈ ಭಾಷೆಯು ಸುಲಭವಾದುದು. ಅಲ್ಲದೆ ವಚನಕಾರರು ಸಾಮಾನ್ಯ ಜನರಿಗೆ ಧರ್ಮತತ್ವಗಳನ್ನು ತಿಳಿಸಬೇಕೆಂದು ಉದ್ದೇಶಪಟ್ಟಿರುವದರಿಂದ ಅವರ ವಿವೇಚನೆಯ ಪದ್ಧತಿಯಾದರೂ ಕ್ಲಿಷ್ಟವಾದುದಲ್ಲ. ಆದರೆ ಅವರ ನಿರೂಪಣಾಪದ್ಧತಿಯು ಮಾತ್ರ ಹೊಸತರದ್ದಿರುವದರಿಂದ ವಚನಗಳು ಜನರಿಗೆ ಕೂಡಲೆ ಬೋಧವಾಗುವದಿಲ್ಲ. ವಚನವಾಙ್ಮಯದ ಅಭ್ಯಾಸವು ನಿಂತುಹೋಗಿರುವದರಿಂದ ಈ ಸ್ಥಿತಿಯುಂಟಾಗಿದೆ. ಅಲ್ಲದೆ ಅವರ ವಾಕ್ಯಗಳಲ್ಲಿ ವಿಶೇಷಾರ್ಥವುಳ್ಳ ಷಟ್‌ಸ್ಥಲಕ್ಕೆ ಸಂಬಂಧಿಸಿದ ಅನೇಕ ಶಬ್ದಗಳು ಪದೇ ಪದೇ ಬರುತ್ತವೆ. ಅವುಗಳ ತಿಳುವಳಿಕೆಯೂ ಜನರಲ್ಲಿಲ್ಲ. ಆದರೆ ಮುಂದೆ ವಚನಗಳ ಪ್ರಚಾರವು ಹೆಚ್ಚಾದಂತೆ ಈ ಸ್ಥಿತಿಯು ಉಳಿಯಲಾರದು.

ಆದರೆ ಸ್ವಲ್ಪ ದಿವಸಗಳಂದಿನಿಂದ ನಾವು ಈಗಿನ ಗ್ರಂಥವನ್ನು ಅಭ್ಯಾಸಮಾಡುವವರಿಗೆ ಉಪಯೋಗವಾಗುವಂತೆ ಒಂದು ಟೀಕೆಯನ್ನು ಸಿದ್ಧಪಡಿಸುತ್ತಲಿದ್ದೇವೆ. | ಈಗಿನ ಗ್ರಂಥದ ಬೆಲೆಯು ಹೆಚ್ಚಾಗಬಹುದೆಂದೆಣಿಸಿ ಅದನ್ನು ನಾವು ಇದಕ್ಕೆ ಜೋಡಿಸಿಲ್ಲ, ಅದು ಪ್ರಸಿದ್ಧವಾದ ಬಳಿಕ ವಾಚಕರಿಗೆ ಈಗ ಉಂಟಾಗುತ್ತಿರುವ ತೊಂದರೆಗಳು ದೂರಾಗಬಹುದು.

ಒಟ್ಟಿಗೆ ಬಸವೇಶ್ವರನ ವಚನಗಳು ಕನ್ನಡ ವಾಙ್ಮಯದಲ್ಲಿ ಉಚ್ಚಸ್ಥಾನವನ್ನು ಹೊಂದಿವೆ. ಅವು ಇನ್ನು ಮುಂದೆ ಮುಳುಗಲಾರವೆಂದು ಭಾವಿಸಿದ್ದೇವೆ. ಬಸವಣ್ಣನ ಮೋಹಕ ಭಾಷೆಯು, ಅವನ ವಿಚಾರಗಳ



ಸವಿಯು, ಅವನ ಕೋಮಲಹೃದಯವು ಯಾರ ಮನಸ್ಸನ್ನು ಆಕರ್ಷಿಸಲಿಕ್ಕಿಲ್ಲ? ಅವನ ವಚನಗಳಲ್ಲಿ ಬಿರು ನುಡಿಗಳೆಂಬುವು ದೊರೆಯಲಿಕ್ಕಿಲ್ಲ. ಅವನ ಒಳಗೂ, ಹೊರಗೂ, ಸುತ್ತಲೂ, ಮೃದುತ್ವ, ಸಮತೆ, ಸಮಾಧಾನಗಳು ತುಂಬಿತುಳುಕುತ್ತವೆ. ಅವನು ತನ್ನ ವಚನಗಳಲ್ಲಿ ತಪ್ಪುದಾರಿ ಹಿಡಿದವರನ್ನು ಹಾಗೆ ವರ್ತಿಸಬೇಡಿರೆಂದು ಅಂಗಲಾಚಿ ಬೇಡಿಕೊಳ್ಳುತ್ತಾನೆ. ದುಃಖಿತರನ್ನು ಸಮಾಧಾನಪಡಿಸುತ್ತಾನೆ. ಕಷ್ಟದಲ್ಲಿದ್ದವರಿಗೆ ಧೈರ್ಯ ಹೇಳುತ್ತಾನೆ. ಅವನು ಯಾವಾಗಲೂ ಬಡವರು, ದೀನರು, ದುಃಖಿತರಲ್ಲಿರುತ್ತಾನೆ. ಇವರ ಸಲುವಾಗಿ ಅವನಲ್ಲಿರುವ ಪ್ರೇಮ, ಅವರನ್ನು ಉದ್ಧರಿಸಬೇಕೆಂಬ ಅವನ ಹಂಬಲ, ಇವು ಯಾರ ಮನಸ್ಸನ್ನಾದರೂ ಕದಡಿಸುವಂಥವಿರುತ್ತವೆ. ಅವನು ಒಮ್ಮೆ ನಮ್ಮನ್ನು ಮೀನು ಬಲೆಗಾರರು, ಮಚ್ಚಿಗರು, ಅಗಸರು, ಬೇಟೆಗಾರರು, ಯೋದ್ಧರು, ಒಕ್ಕಲಿಗರು ಇಂಥವರ ಸಮೀಪಕ್ಕೆ ಒಯ್ದುಬಿಡುತ್ತಾನೆ. ಆಗ ಅವರಲ್ಲಿರುವ ಏತ, ಇಕ್ಕುಳ, ಈಟಿ, ಕೊಂತಗಳು, ಅವರೊಡನಾಡಿಗಳಾದ ನಾಯಿ, ಮೊಲ, ನರಿ, ಉಡ, ಕಾಗೆ, ಉಸುರುವಳ್ಳಿ, ತೊಗಲಬಾವುಲಿ ಇಂಥ ಪ್ರಾಣಿಗಳ ಉದಾಹರಣೆಗಳನ್ನು ತೆಗೆದುಕೊಂಡು, ಉಚ್ಚ ಧಾರ್ಮಿಕ ತತ್ವಗಳನ್ನು ಬೋಧಿಸುತ್ತಾನೆ. ಹೀಗೆ ಅವನು ಬೋಧಿಸುತ್ತ ಬೋಧಿಸುತ್ತ ನಮ್ಮನ್ನು ಪರಮಾತ್ಮನ ಸನ್ನಿಧಿಯಲ್ಲಿಯೇ ಒಯ್ದುಬಿಡುತ್ತಾನೆ ಅಲ್ಲಿಯ ಬೆಳಗಿನೊಳಗಿನ ಬೆಳಗಿನಲ್ಲಿ ನಮ್ಮನ್ನು ತೇಲಿಸಿಬಿಡುತ್ತಾನೆ. ಆಗ ನಮಗೆ ಪರಮಾತ್ಮನ ದರ್ಶನವೇ ಆದಂತೆ ಭಾಸವಾಗುತ್ತದೆ. ಇದು ಮಹಾನುಭಾವ ಬಸವಣ್ಣನವರ ವಚನಗಳ ರೀತಿಯು. ಇಂಥವನು ಯಾರಿಗೆ ಪ್ರಿಯನಾಗಲಿಕ್ಕಿಲ್ಲ!

ಈ ಗ್ರಂಥವನ್ನು ಅಚ್ಚು ಹಾಕಲು ಅನೇಕ ಬಗೆಯಿಂದ ನಮಗೆ ಸಹಾಯ ಮಾಡಿದ ಶ್ರೀ ಮನಿರಂಜನ ಬಂಥನಾಳ ಶಿವಯೋಗಿಗಳು ಶ್ರೀಯುತ ನಾಗಪ್ಪ ಕಾಡಾದಿ ಎಮ್. ಎಲ್. ಸಿ, ಸೊಲ್ಲಾಪುರ ಶ್ರೀಯುತ ಮಲ್ಲೇಶಪ್ಪಾ ಮೂರುಸಾವಿರಪ್ಪ ಸಾವರಹಳ್ಳಿ ಬಂಧುಗಳು ಮು॥ ಹುಬ್ಬಳ್ಳಿ, ಶ್ರೀಯುತ ಮಹಾಲಿಂಗಪ್ಪಾ ಕೋರಿ. ಮು॥ ವಿಜಾಪುರ. ಇವರಿಗೆ ನಾವು ಬಹಳ ಆಭಾರಿಯಾಗಿದ್ದೇವೆ.

ವಿಜಾಪೂರ.<br>ತಾ. ೧—೯—೧೯೩೦. }

ಫ. ಗು. ಹಳಕಟ್ಟಿ.<br>ಸಂಪಾದಕ.

# ಅನುಕ್ರಮಣಿಕೆ.


| ನಂ\|\| | ವಿಷಯಗಳು. | ಪುಟ. |
|---|---|---|
| ೧ | ವಚನಗಳ ಮಹತ್ವ. .... | ೧ |
| ೨ | ಪರಮಾತ್ಮನ ಸ್ವರೂಪ. .... | ೨ |
| ೩ | ಜಗತ್ತಿನ ಪೂರ್ವಸ್ಥಿತಿ. .... | ೪ |
| ೪ | ಜಗತ್ತಿನ ಆವಿರ್ಭಾವ. .... | ೪ |
| ೫ | ಸಂಸಾರವು ದುಃಖಮಯವು-ಮೋಕ್ಷವನ್ನು ಬಯಸು. .... | ೫ |
| ೬ | ಪರಮಾತ್ಮನಲ್ಲಿ ಸಾಮರಸ್ಯವು. ... | ೭ |
| | **ಭಕ್ತಸ್ಥಲ.** | |
| ೭ | ಭಕ್ತಿಯುಳ್ಳವನಾಗಿರು. ... | ೮ |
| ೮ | ನಿಷ್ಕಪಟ ಭಕ್ತಿಯುಳ್ಳವನಾಗಿರು. .... | ೧೦ |
| ೯ | ಲಿಂಗವನ್ನು ಪೂಜಿಸು. | ೧೨ |
| ೧೦ | ಭಕ್ತಿಭಾವದಿಂದ ಲಿಂಗವನ್ನು ಪೂಜಿಸು. .... | ೧೩ |
| ೧೧ | ಅನುಭಾವಿಯಾಗಿರು. ... | ೧೪ |
| ೧೨ | ಶರಣರ ಸಾನ್ನಿಧ್ಯವನ್ನು ಅಪೇಕ್ಷಿಸು. ... | ೧೭ |
| ೧೩ | ಶುದ್ಧ ಮನಸ್ಸುಳ್ಳವನಾಗಿರು. ... | ೧೮ |
| ೧೪ | ಮನಸ್ಸಿಗೆ ನಿವೇದನ. ... | ೧೯ |
| ೧೫ | ಪರಮಾತ್ಮನನ್ನು ಧ್ಯಾನಿಸು. ... | ೨೧ |
| ೧೬ | ಲಿಂಗಪೂಜೆಯಲ್ಲಿ ತಾದಾತ್ಮ್ಯಭಾವವು. ... | ೨೩ |
| ೧೭ | ಪರಮಾತ್ಮನಲ್ಲಿ ಬೆರೆಯು. ( ಸತಿಪತಿ ಭಾವದ ವಚನಗಳು. ) | ೨೪ |
| | **ನೈತಿಕ ವಚನಗಳು.** | |
| ೧೮ | ಸದ್ವರ್ತನೆಯುಳ್ಳವನಾಗಿರು. .... | ೨೫ |
| ೧೯ | ಸತ್ಸಂಗದಲ್ಲಿರು. ... | ೨೭ |
| ೨೦ | ಸಿಟ್ಟಾಗಬೇಡ. ... | ೩೧ |
| ೨೧ | ಸತ್ಯವನ್ನು ನುಡಿ. ... | ೩೧ |
| ೨೨ | ನಿಷ್ಕಪಟಿಯಾಗಿರು. ... | ೩೨ |





| | | |
|---|---|---|
| ೨೩ | ಅಹಂಕಾರಿಯಾಗಬೇಡ. ... | ೩೪ |
| ೨೪ | ವಿನಯವುಳ್ಳವನಾಗಿರು. ... | ೩೫ |
| ೨೫ | ಶರಣರನ್ನು ಮನ್ನಿಸು. ... | ೩೭ |
| ೨೬ | ಭೃತ್ಯಾಚಾರವನ್ನು ಪಾಲಿಸು. ... | ೩೮ |
| ೨೭ | ಸ್ತ್ರೀಯರನ್ನು ಮನ್ನಿಸು-ವ್ಯಭಿಚಾರಿಯಾಗದಿರು. ... | ೪೦ |
| ೨೮ | ದಯವುಳ್ಳವನಾಗಿರು. ... | ೪೧ |
| ೨೯ | ದಾನಧರ್ಮಮಾಡು. ... | ೪೧ |
| ೩೦ | ಶರಣರಿಗೆ ದಾನಮಾಡು. ... | ೪೨ |
| ೩೧ | ಕಳವು ಮಾಡಬೇಡ. .... | ೪೩ |
| ೩೨ | ಭಕ್ತರ ನೋವು ತನ್ನ ನೋವೆಂದು ಭಾವಿಸು. ... | ೪೩ |
| ೩೩ | ದುರಾಶೆಯುಳ್ಳವನಾಗಬೇಡ. ... | ೪೪ |
| | **ಪ್ರಾರ್ಥನೆಯ ವಚನಗಳು.** | |
| ೩೪ | ಪರಮಾತ್ಮನಿಗೆ ಶರಣುಹೋಗು. .... | ೪೫ |
| ೩೫ | ಪರಮಾತ್ಮನ ಕಾರುಣ್ಯವನ್ನು ಬೇಡು. ... | ೪೬ |
| ೩೬ | ಪರಮಾತ್ಮನ ರಕ್ಷಣೆಯನ್ನು ಬೇಡು. ... | ೪೯ |
| ೩೭ | ನನ್ನ ತಪ್ಪುಗಳನ್ನು ಕ್ಷಮಿಸು. ... | ೪೯ |
| ೩೮ | ನನ್ನ ಅವಗುಣಗಳನ್ನು ದೂರಮಾಡು. ... | ೫೧ |
| ೩೯ | ಶರಣರನ್ನು ಅವಲಂಬಿಸು. ( ಸತಿಪತಿ ಭಾವದ ವಚನಗಳು ) | ೫೨ |
| | **ಮಹೇಶ್ವರ ಸ್ಥಲ.** | |
| ೪೦ | ಹಿಡಿದ ಕ್ರಿಯೆಗಳನ್ನು ಬಿಡಬೇಡ. .... | ೫೪ |
| ೪೧ | ಕ್ರಿಯೆಯಲ್ಲಿ ಧೈರ್ಯವುಳ್ಳವನಾಗಿರು. ... | ೫೫ |
| ೪೨ | ನಿಷ್ಠೆಯುಳ್ಳವನಾಗಿರು. ... | ೫೮ |
| ೪೩ | ಎಂಥ ಕಷ್ಟಗಳು ಬಂದರೂ ನಿನ್ನ ಕ್ರಿಯೆಗಳನ್ನು ಬಿಡಬೇಡ. | ೬೦ |
| ೪೪ | ದೇವರು ಒಬ್ಬನೇ ಇದ್ದಾನೆ. ... | ೬೪ |
| ೪೫ | ಬ್ರಹ್ಮ ವಿಷ್ಣು ರುದ್ರರಲ್ಲಾರೂ ಪರಮಾತ್ಮನಲ್ಲ. ... | ೬೬ |
| ೪೬ | ಬ್ರಹ್ಮ ವಿಷ್ಣುಗಳಲ್ಲಾರೂ ಪರಮಾತ್ಮನಲ್ಲ. ... | ೬೬ |
| ೪೭ | ಕಿರುಕುಳ ದೈವಗಳಲ್ಲಾವುದೂ ಪರಮಾತ್ಮನಲ್ಲ. .... | ೬೮ |
| ೪೮ | ಯಜ್ಞಗಳನ್ನು ಮಾಡದಿರು. ಬಲಿಕೊಡಬೇಡ. ... | ೭೧ |
| ೪೯ | ಜ್ಯೋತಿಷ್ಯವನ್ನು ನಂಬಬೇಡ. ... | ೭೩ |

೫೦ ತೀರ್ಥಯಾತ್ರೆಗಳನ್ನು ಮಾಡಬೇಡ. ... ೭೪
೫೧ ಪ್ರಾಯಶ್ಚಿತ್ತಗಳಿಲ್ಲ. ... ೭೫
೫೨ ಕರ್ಮಠನಾಗಬೇಡ. ... ೭೬
೫೩ ವೀರಶೈವರಲ್ಲಿ ಜಾತಿಭೇದವಿಲ್ಲ. ... ೭೭
೫೪ ಉಚ್ಚನೀಚತ್ವವು ಉದ್ಯೋಗಗಳ ಮೇಲೆ ಅವಲಂಬಿಸಿಲ್ಲ. ೭೯
೫೫ ಭಕ್ತರು ಪರಸ್ಪರ ಅನ್ನೋದಕ ಮತ್ತು ಲಗ್ನ ವ್ಯವಹಾರ ಮಾಡುವದು. ೮೦
೫೬ ಹೊಲೆಯನಾದರೂ ಸದಾಚಾರಿಯೇ ಕುಲಜನು. .... ೮೧

## ಪ್ರಸಾದಿ ಸ್ಥಲ

೫೭ ಕರ್ಮ. ... ೮೪
೫೮ ನಿಷ್ಕಾಮಕರ್ಮ. .... ೮೬
೫೯ ಕ್ರಿಯೆಯಲ್ಲಿ ಪರಾವಲಂಬಿಯಾಗಬೇಡ. ... ೮೮
೬೦ ಮಾಟವರತು ಮಾಡುವದು. .... ೮೮
೬೧ ಕರ್ಮಚ್ಛೇದನವು. ... ೮೯
೬೨ ಲಿಂಗಾರ್ಪಿತದಿಂದ ಮಾಡುವದು. ... ೯೧
೬೩. ಆತ್ಮಾರ್ಪಣೆ. ... ೯೩
೬೪ ತನುಮನಧನವನ್ನರ್ಪಿಸು .... ೯೪
೬೫ ಪರಮಾತ್ಮನ ಸೊಮ್ಮನ್ನು ಪರಮಾತ್ಮನಿಗೆ ಅರ್ಪಿಸು. .... ೯೪
೬೬ ಭಾವದಲ್ಲಿ ಅರ್ಪಣವು. ... ೯೫
೬೭ ಪ್ರಸಾದದಿಂದ ಸಾಮರಸ್ಯವು. ... ೯೬
೬೮ ಪ್ರಸಾದದಲ್ಲಿ ನಂಬಿಗೆ. ... ೯೭
೬೯ ಪ್ರಸಾದಿಯ ಪ್ರಾರ್ಥನೆಗಳು. .... ೯೮
೭೦ ದಾಸೋಹ. ... ೯೯
೭೧ ಇಂದ್ರಿಯಗಳನ್ನು ವ್ಯಥೆಪಡಿಸದಿರು. .. ೧೦೧
೭೨ ಕರ್ಮಿಗಳಿಗೆ ಪ್ರಸಾದವಿಲ್ಲ. ... ೧೦೧

## ಪ್ರಾಣಲಿಂಗಿ ಸ್ಥಲ.

೭೩ ಪರಮಾತ್ಮನು ತನ್ನಲ್ಲಿಯೇ ಇದ್ದಾನೆ. ... ೧೦೨
೭೪ ಪರಮಾತ್ಮನನ್ನು ತನ್ನಲ್ಲಿಯೇ ಕಾಣುವುದು. .... ೧೦೩
೭೫ ಲಿಂಗಧ್ಯಾನ. ... ೧೦೪
೭೬ ಅಂತರಂಗದಲ್ಲಿ ಲಿಂಗಸಾನ್ನಿಧ್ಯವು. ... ೧೦೫
೭೭ ಲಿಂಗದಲ್ಲಿ ಸಾಮರಸ್ಯವು. .... ೧೦೫



## ಶರಣ ಸ್ಥಲ.

೭೮ ಶರಣನ ಲಕ್ಷಣಗಳು. ... ೧೦೭
೭೯ ಶರಣನು ನಿರ್ಭಯನು. ... ೧೦೯
೮೦ ಶರಣನ ಅರ್ಪಣಭಾವವು. ... ೧೧೦
೮೧ ಶರಣನು ಲಿಂಗಮಯನು. ... ೧೧೦
೮೨ ಶರಣನು ಲಿಂಗಜ್ಞಾನಿಯು. ... ೧೧೧
೮೩ ಶರಣನ ಸಾಮರಸ್ಯವು. ... ೧೧೩

## ಐಕ್ಯಸ್ಥಲ.

೮೪ ಕ್ರಿಯೆಯಲ್ಲಿ ಶೂನ್ಯತ್ವವು. ... ೧೧೪
೮೫ ಲಿಂಗಪೂಜೆಯಲ್ಲಿ ಶೂನ್ಯತ್ವವು. ... ೧೧೫
೮೬ ಲಿಂಗಾಂಗ ಸಾಮರಸ್ಯವು. .... ೧೧೬

## ಅಷ್ಟಾವರಣಗಳು.

### ಗುರು.

೧ ಗುರುಕರುಣ .... ೧೧೯

### ಲಿಂಗ

೨ ಇಷ್ಟಲಿಂಗ. ... ೧೨೧
೩ ಲಿಂಗಧಾರಿಯು ಸದ್ವರ್ತನೆಯುಳ್ಳವನಾಗಿರುವದು. .... ೧೨೧

### ಜಂಗಮ.

೪ ಲಿಂಗ ಜಂಗಮ ಸಂಬಂಧ. ... ೧೨೨
೫ ಸ್ಥಾವರ ಜಂಗಮ ಸಂಬಂಧ. .... ೧೨೩
೬ ಭಕ್ತ ಜಂಗಮ ಸಂಬಂಧ ... ೧೨೪
೭ ಜಂಗಮ ಸನ್ನಿಹಿತ ಲಿಂಗಾರ್ಚನೆ. ... ೧೨೫
೮ ಭಕ್ತ ಜಂಗಮ ಸಾಮರಸ್ಯ ... ೧೨೬
೯ ಜಂಗಮದಲ್ಲಿ ನಂಬಿಗೆ. ... ೧೨೭
೧೦ ಜಂಗಮದಲ್ಲಿ ಭೇದವಿಲ್ಲ. ... ೧೨೮

### ಪಾದೋದಕ.

೧೧ ಪಾದೋದಕದ ಸ್ವರೂಪ. ... ೧೨೯

### ಪ್ರಸಾದ.

೧೨ ಜಂಗಮಪ್ರಸಾದ. ... ೧೨೯
೧೩ ಲಿಂಗಜಂಗಮ ಪ್ರಸಾದಗಳು. ... ೧೩೦
೧೪ ಗುರುಲಿಂಗಜಂಗಮ ಪ್ರಸಾದಗಳು. .... ೧೩೦
೧೫ ಗುರುಲಿಂಗಜಂಗಮ ಇವುಗಳಲ್ಲಿ ಸಾಮರಸ್ಯ. ... ೧೩೧
೧೬ ಪ್ರಸಾದದ ಪರಿಣಾಮಗಳು. ... ೧೩೨

### ವಿಭೂತಿ.

೧೭ ವಿಭೂತಿಯ ಮಹತ್ವ. ... ೧೩೨

### ರುದ್ರಾಕ್ಷಿ

೧೮ ರುದ್ರಾಕ್ಷಿಯ ಮಹತ್ವ. .... ೧೩೩

### ಮಂತ್ರ.

೧೯ ಮಂತ್ರದ ಮಹತ್ವ. .... ೧೩೪

---

## ಹೊಸಪದ್ಧತಿಯ

# ಬಸವೇಶ್ವರನ ವಚನಗಳು.

---

## (೧) ವಚನಗಳ ಮಹತ್ವ.

೧. ಹಾಲ ತೊರೆಗೆ ಬೆಲ್ಲದ ಕೆಸರು, ಸಕ್ಕರೆಯ ಮಳಲು, ತವರಾಜದ ನೊರೆತೆರೆಯಂತೆ ಆದ್ಯರ ವಚನವಿರಲು, ಬೇರೆ ಬಾವಿಯ ತೋಡಿ, ಉಪ್ಪ ನೀರನುಂಬುವ ವಿಧಿಯಂತೆ ಆಯಿತ್ತೆನ್ನ ಮತಿ ಕೂಡಲಸಂಗಮದೇವಾ.

೨. ಆದ್ಯರ ವಚನ ಪರುಷ ಕಂಡಯ್ಯ! ಸದಾಶಿವನೆಂಬ ಲಿಂಗವ ನಂಬುವುದು. ನಂಬಲೊಡನೆ ನೀ ವಿಜಯ ಕಂಡಯ್ಯ! ಅಧರಕ್ಕೆ ಕಹಿ, ಉದರಕ್ಕೆ ಸಿಹಿ. ಕೂಡಲಸಂಗನ ಶರಣರ ವಚನ ಬೇವ ಸವಿದಂತೆ.

೩. ಆದ್ಯರ ವಚನ ಆದ್ಯರಿಗಾಯಿತ್ತು. ವೇದ್ಯರಿಗಲ್ಲದೆ ಸಾಧ್ಯವಾಗದು. ಕೂಡಲಸಂಗಮದೇವ ನಿಮ್ಮ ಅನುಭಾವದಿಂದ ಎನ್ನ ಭವಂ ನಾಸ್ತಿಯಾಯಿತ್ತು.

೪. ಅಶ್ವಮೇಧಯಾಗವಂತಿರಲಿ, ಅಜಪೆಯುಪದೇಶವು ಸಮಾಧಿಯಂತಿರಲಿ, ಹೋಮ ನೇಮ ಗಾಯತ್ರಿಯ ಜಪವಂತಿರಲಿ, ಜನಮೋಹನಮಂತ್ರವಂತಿರಲಿ. ಹೋ, ಕೂಡಲಸಂಗನ ಶರಣನ ನುಡಿಯ ಗಡಣೆ ಎಲ್ಲಕ್ಕಧಿಕ ನೋಡಾ.

೫. ಅಡಿಗಡಿಗೆ ದೇವರಾಣೆ, ಅಡಿಗಡಿಗೆ ಭಕ್ತರಾಣೆ, ಅಡಿಗಡಿಗೆ ಗುರುವಿನಾಣೆ, ಎಂಬ ವಚನ ಹೊಲ್ಲ. ಮುಂದೆ ಪಥಕ್ಕೆ ಸಲ್ಲರು. ಆದಿಯಿಂದ ಬಂದ ವಚನವೆಂದು ಶರಣರ ಕೂಡೆ ಸರಸವಾಡಿದರೆ, ನಗುತಲಿರಿದುಕೊಂಡರೆ, ಅಲಗು ನೆಡದಿಹುದೇ ಕೂಡಲಸಂಗಮದೇವ?

೬. ಮುನ್ನಿನ ಆದ್ಯರ ಪಥಂಗಳು ಇನ್ನಾರಿಗಳವಡದು ನೋಡಾ. ಬಲ್ಲನಾಗಿ ಒಲ್ಲನವರ. ಸಲ್ಲರು ಸಲ್ಲರು ಶಿವಪಥಕ್ಕೆ. ಒಳ್ಳಿಹ ಮೈಲಾರನ ಸಿಂಗಾರದಂತೆ, ವೇಶಿಯ ಬಾಯ ಎಂಜಲನುಂಬ ದಾಸಿಯ ಸಂಸಾರದಂತೆ, ಕೂಡಲಸಂಗನ ಶರಣರನರಿಯದೆ ಉಳಿದ ಭಂಗಿತರ.

೭. ಆದ್ಯರ ವಚನ ಪರುಷವೆಂದೆಂಬೆನು. ಆ ಪರುಷವೆನಗೆಂತು ದೊರೆಕೊಂಬುದಯ್ಯ? ತನುಮನಧನವ ವಿವರಿಸಿ ನುಡಿವೆ. . ಸೋಂಕಿಂಗೆ ಸೈರಿಸಲಾರೆ. ಹೊಲೆಯರ ಮದ್ದಳೆಯಂತೆ ನುಡಿವ ಡಂಭಕ ನಾನಯ್ಯ ಕೂಡಲಸಂಗಮದೇವಾ.

## (೨) ಪರಮಾತ್ಮನ ಸ್ವರೂಪು.

೮. ಎತ್ತೆತ್ತ ನೋಡಿದಡತ್ತತ್ತ ನೀನೇ ದೇವಾ. ಸಕಳ ವಿಸ್ತಾರದ ರೂಹು ನೀನೇ ದೇವಾ. ವಿಶ್ವತೋ ಬಾಹು ನೀನೇ ದೇವಾ. ವಿಶ್ವತೋ ಚಕ್ಷು ನೀನೇ ದೇವಾ. ವಿಶ್ವತೋ ಮುಖ ನೀನೇ ದೇವಾ. ವಿಶ್ವತೋ ಪಾದ ನೀನೇ ದೇವಾ ಕೂಡಲಸಂಗಮದೇವಾ.

೯. ಸಕಳ ನಿಃಕಳವ ಕೂಡಿಕೊಂಡಿಪ್ಪೆಯಾಗಿ, ಸಕಳ ನೀನೇ ನಿಃಕಳ ನೀನೇ ಕಂಡಯ್ಯಾ. ವಿಶ್ವತೋ ಚಕ್ಷು ನೀನೇ ದೇವಾ. ವಿಶ್ವತೋ ಮುಖ ನೀನೇ ದೇವಾ. ವಿಶ್ವತೋ ಬಾಹು ನೀನೇ ದೇವಾ ಕೂಡಲಸಂಗಮದೇವಾ.

೧೦. ಶ್ರುತಿತತಿ ಶಿರದ ಮೇಲೆ ಅತ್ಯತಿಷ್ಠದ್ದಶಾಂಗುಲನ ನಾನೇನೆಂಬೆನಯ್ಯ? ಘನಕ್ಕೆ ಘನ ಮಹಿಮನ ಮನಕ್ಕಗೋಚರನ ಅಣೋರಣೀಯಾನ್ ಮಹತೋ ಮಹೀಯಾನ್ ಮಹಾದಾನಿ ಕೂಡಲಸಂಗಮದೇವ.

೧೧. ಅಷ್ಟತನುಮೂರ್ತಿ ಲಿಂಗವೆಂಬರು. ಇವರಾರೆಂದು ನಾನರಿಯೆನಯ್ಯಾ. ಆದಿಯ ಮಗನತೀತನು. ಅತೀತನ ಮಗನಾಕಾಶ. ಆಕಾಶನ ಮಗ ವಾಯು. ವಾಯುವಿನ ಮಗ ಅಗ್ನಿ. ಅಗ್ನಿಯ ಮಗನಪ್ಪು. ಅಪ್ಪುವಿನ ಮಗ ಪೃಥ್ವಿ. ಪೃಥ್ವಿಯ ಮಗ ಚಂದ್ರ. ಚಂದ್ರನ ಮಗ ಸೂರ್ಯ, ಸೂರ್ಯನ ಮಗ ದೇಹ. ದೇಹನ ಮಗನಾತ್ಮ. ಇಂತೀ ಅಷ್ಟ ತನುವೆಲ್ಲಕ್ಕೆಯೂ ಉತ್ಪತ್ತಿಯುಂಟು. ಅಜಾತಜನಿತ ನಮ್ಮ ಕೂಡಲಸಂಗಮದೇವಂಗೆ ಮಾತಾಪಿತರುಗಳಿಲ್ಲ.

೧೨. ಭೂ ತೋಯ ಪಾವಕ ಸಮೀರಣ ಅಂಬರಾದಿಗಳಿಲ್ಲ ಆದಿಯಾಧಾರ ಪರಮಾತ್ಮಲಿಂಗದಲ್ಲಿ. ಆದಿ ಮಧ್ಯಾವಸಾನವನರಿಯದೆ ಅಗಮ್ಯ ವೇದಾದಿ ಸಕಲಶಾಸ್ತ್ರಪ್ರಮಾಣರು ಅದಸಿಂತಿಂತೆಂದುಪಮಿಸಲಿಲ್ಲ ಮಹಾಂತ ಕೂಡಲಸಂಗಮದೇವ.

೧೩. ರುದ್ರ ಮುಖದಲ್ಲಿ ವಿಷ್ಣು ಭುಜದಲ್ಲಿ ಜಂಘೆಯಲ್ಲಿ ಅಜನ ಜನನವು. ಇಂದ್ರ ಪಾದದಲ್ಲಿ ಚಂದ್ರ ಮನದಲ್ಲಿ ಚಕ್ಷುವಿನಲ್ಲಿ ಸೂರ್ಯ ಜನನವು. ಮುಖದಲ್ಲಿ ಅಗ್ನಿ ಪ್ರಾಣದಲ್ಲಿ ವಾಯು ನಾಭಿಯಲ್ಲಿ ಅಂತರಿಕ್ಷವು. ಶಿರದಲುದಯವು ತೆತ್ತೀಸಕೋಟಿ ದೇವರ್ಕಳು. ಪಾದತಳದಲ್ಲಿ ಭೂಮಿಜನನವು. ಶ್ರೋತ್ರದಲ್ಲಿ ದಶದಿಕ್ಕುವು. ಜಗವ ನಿಕ್ಷೇಪಿಸಿದ ಕುಕ್ಷಿಯಲ್ಲಿ. ಅಕ್ಷಯನಗಣಿತನು. ಸಾಸಿರ ತಲೆ, ಸಾಸಿರ ಕಣ್ಣು, ಸಾಸಿರ ಕೈ, ಸಾಸಿರ ಪಾದ, ಸಾಸಿರ ಸನ್ನಿಹಿತ ನಮ್ಮ ಕೂಡಲಸಂಗಯ್ಯ.

೧೪. ಸಹಸ್ರಶೀರ್ಷನಾದಿ ಪುರುಷನು. ವೇದಪುರುಷನೊಬ್ಬ ಪುರುಷನು. ಶ್ರೋತ್ರಿಪುರುಷನೊಬ್ಬ ಪುರುಷನು. ತ್ರಿಪಾದೂರ್ಧ್ವ ಪುರುಷನೊಬ್ಬನು. ಉದಙ್ಮುಖನೊಬ್ಬ ಪುರುಷನು. ಉದಯಮುಖನೊಬ್ಬ ಪುರುಷನು. ವಿರಾಟ ಪುರುಷನೊಬ್ಬ ಪುರುಷನು. ಆದಿಪುರುಷನೊಬ್ಬ ಪುರುಷನು. ವಿಯತ್ಪುರುಷನೊಬ್ಬ ಪುರುಷನು. ವಿಯತ್ಪುರುಷನೊಬ್ಬ ಪುರುಷನೊಬ್ಬ ಪುರುಷನು. ತದ್ವಿಯತ್ ಪುರಷಾತ್ ಪುರುಷರಿಲ್ಲದ ಪ್ರಭೆಯ ನೋಡಿರೇ. ವೇದನಾದಾತೀತ ತುರೀಯ ಪರಮಾನಂದ ನಿರವಯ ಷಟ್ ತ್ರಿಂಶತ್‌ಪ್ರಭಾಪಟಲದ ಪ್ರಭೆಯ ಬೆಳಗಿದೆ ನೋಡಿರೇ. ಬೆಳಗಿನೊಳಗಣ ಮಹಾ ಬೆಳಗಿನ ಬೆಳಗು ಕೂಡಲಸಂಗಮದೇವಯ್ಯ.



೧೫. ಅದರಿತು ಪಾದಾಘಾತದಿಂದ ಧರೆ. ಬಿದಿರಿದವು ಮಕುಟಂತಾಗಿ ತಾರಕಿಗಳುದುರಿದವು ಕೈ ತಾಗಿ ಲೋಕಂಗಳೆಲ್ಲ. ।ಶ್ಲೋ॥ 'ಮಹೀಪಾದಾಘಾತಾದ್ವ್ರಜತಿ ಸಹಸಾ ಸಂಶಯಪದಂ । ಪದಂ ವಿಷ್ಣೋರ್ಭ್ರಾಮ್ಯದ್ಭುಜ ಪರಿಘರುಗ್ಣಗ್ರಹಗಣಂ । ಮುಹುರ್ದ್ಯೌರ್ದೌಸ್ಥ್ಯಂ ಯಾತ್ಯನಿಭೃತ ಜಟಾತಾಡಿತತಟಾ । ಜಗದ್ರಕ್ಷಾಯೈ ತ್ವಂ ನಟಸಿ ನನು ವಾ ಮ್ಯೈವ ವಿಭುತಾ'॥ ನಮ್ಮ ಕೂಡಲಸಂಗಮದೇವ ನಿಂದು ನಾಂಟ್ಯವನಾಡೆ.

೧೬. ಮಹಾಲಿಂಗದ ಸ್ಥಾನಂಗಳು ಮಹಾಲಿಂಗದ ಹೆಸರಲ್ಲದೆ ಲಿಂಗ ಬೇರೆ ರೂಪನಲ್ಲ, ನಿರೂಪನಲ್ಲ. ಲಿಂಗ ಬೇರೆ ಕಾಯ ಸಂಬಂಧಿಯಲ್ಲ. ಲಿಂಗ ಬೇರೆ ಮಹಾಘನದಿಂದತ್ತತ್ತ: ಕೂಡಲಸಂಗಮದೇವರ ನಿಲವ ಆರಿಗೆಯೂ ಅರಿಯಬಾರದು.

೧೭. ವೇದ ವೇದಿಸಲರಿಯದೆ ಅಭೇದ್ಯಲಿಂಗವೆಂದು ನಡನಡುಗಿತ್ತು. ಶಾಸ್ತ್ರ ಸಾಧಿಸಲರಿಯದೆ ಅಸಾಧ್ಯಲಿಂಗವೆಂದು ಸಾರುತ್ತೈದಾವೆ. ತರ್ಕ ತರ್ಕಿಸಲರಿಯದೆ ಅತರ್ಕ್ಯಲಿಂಗವೆಂದು ಮನಗೊಳ್ಳವು. ಆಗಮ ಅಗಮ್ಯ ಲಿಂಗವೆಂದು ಗಮಿಸಲರಿಯದೆ ಹೋದವು. ನರರು ಸುರರು ಅಂತುವ ಕಾಣರು. ನಮ್ಮ ಕೂಡಲಸಂಗಮದೇವನ ಪ್ರಮಾಣವ ಶರಣ ಬಲ್ಲ.

೧೮. ವಿಶ್ವಜಿತನು, ದನುಜಜಿತನು, ಸರ್ವಜಿತನು, ಸುತ್ರಾಮಜಿತನು, ನೃಜಿತನು, ಊರ್ವಜಿತನು, ಅಶ್ವಜಿತನು, ಗೋಜಿತನು, ಅಚ್ಯುತಜಿತನು, ಸುಸಂವೇದ್ಯನು, ವೇದನಾದಾತೀತನು, ತುರೀಯ ಪರಮಾನಂದ ನಿರವಯ ಕೋಟಿಸೂರ್ಯಪ್ರಭೆಯ ಬೆಳಗಿನ ಸಹಸ್ರಕಿರಣದ ಅಗ್ರಪಟಲದ ಬೆಳಗು ಕೂಡಲಸಂಗಯ್ಯ.

೧೯. ವೇದಾತೀತ ಷಡುವರ್ಣರಹಿತ ಅಷ್ಟತ್ರಿಂಶತ್ಕಳಾತೀತ ವ್ಯೋಮಾತೀತ ಕೂಡಲಸಂಗಮದೇವ.

## (೩) ಜಗತ್ತಿನ ಪೂರ್ವಸ್ಥಿತಿ.

೨೦. ಉದಕದೊಳಗೆ ಬೈಚಿಟ್ಟ ಬಯಕೆಯು ಕಿಚ್ಚಿನಂತೆ ಇದ್ದಿತ್ತು. ಶಶಿಯೊಳಗಣ ರಸದ ರುಚಿಯಂತೆ ಇದ್ದಿತ್ತು. ನನೆಯೊಳಗಣ ಪರಿಮಳದಂತೆ ಇದ್ದಿತ್ತು. ಕೂಡಲಸಂಗಮದೇವ ಕನ್ನೆಯ ಸ್ನೇಹದಂತಿದ್ದಿತ್ತು.

---

## (೪) ಜಗತ್ತಿನ ಅವಿರ್ಭಾವ.

೨೧. ಕಾಳಿಯ ಕಂಕಾಳದಿಂದ ಮುನ್ನ, ತ್ರಿಪುರ ಸಂಹಾರದಿಂದ ಮುನ್ನ, ಹರಿವಿರಿಂಚಿಗಳಿಂದ ಮುನ್ನ, ಉಮೆಯ ಕಲ್ಯಾಣದಿಂದ ಮುನ್ನ, ಮುನ್ನ, ಮುನ್ನ, ಅಂದಿಂಗೆಳೆಯ ನೀನು ಹಳೆಯ ನಾನು ಮಹಾದಾನಿ ಕೂಡಲಸಂಗಮದೇವಾ.

೨೨. ಜಲ ಕೂರ್ಮ ನಾಗ ಮೇದಿನಿ ಸಪ್ತಸಾಗರ ಅಜಾಂಡಖಂಡ ಹರಿವಿರಿಂಚಿಗಳು ನಿಮ್ಮ ಉದರದ ಕೊನೆಯ ಪ್ರಾಣಿಗಳಯ್ಯ. ಕೂಡಲ ಸಂಗನ ಮಹಾಮನೆಯಲ್ಲಿ ಅಸ್ತಿಗ್ರಾಹಕನೆಂಬ ಗಣೇಶ್ವರನ ಇಚ್ಛಾ ಮಾತ್ರದಿಂದ ಯುಗಜುಗವಯ್ಯ.

೨೩. ಅಯ್ಯಾ. ನೀನು ನಿರಾಕಾರವಾಗಿರ್ದಲ್ಲಿ, ನಾನು ಜ್ಞಾನವೆಂಬ ವಾಹನವಾಗಿರ್ದೆ ಕಾಣಾ! ಅಯ್ಯಾ, ನೀನು ನಾಂಟ್ಯಕ್ಕೆ ನಿಂದಲ್ಲಿ, ನಾನು ಚೈತನ್ಯವೆಂಬ ವಾಹನವಾಗಿರ್ದೆ ಕಾಣಾ! ಅಯ್ಯಾ, ನೀನು ಆಕಾರಪಾಗಿರ್ದಲ್ಲಿ, ನಾನು ವೃಷಭನೆಂಬ ವಾಹನವಾಗಿರ್ದೆ ಕಾಣಾ! ಅಯ್ಯಾ, ನೀನೆನ್ನ ಭವವ ಕೊಂದಿಹೆನೆಂದು ಜಂಗಮಲಾಂಛನವಾಗಿ ಬಂದರೆ, ನಾನು ಭಕ್ತನೆಂಬ ವಾಹನವಾಗಿರ್ದೆ ಕಾಣಾ ಕೂಡಲಸಂಗಮದೇವಾ.

೨೪. ಎನ್ನ ಗುಣವವಗುಣವ ಸಂಪಾದಿಸುವೆ ಅಯ್ಯಾ! ಪ್ರತಿಯೇ ಅಪ್ರತಿಮ ಮಹಿಮ, ನಿಮಗಾನು ಪ್ರತಿಯೇ? ಕೂಡಲಸಂಗಮದೇವಾ ನೀವು ಮಾಡಲಾನಾದೆನು.

೨೫. ಅಯ್ಯಾ, ಏಳೇಳು ಜನ್ಮದಲ್ಲಿ ಶಿವಭಕ್ತನಾಗಿ ಬಾರದಿರ್ದರೆ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ನಿಮ್ಮ ಪ್ರಸಾದಕ್ಕಲ್ಲದೆ, ಬಾಯ್ದೆರೆಯೆನಯ್ಯಾ. ಪ್ರಥಮ ಭವಾಂತರದಲ್ಲಿ ಶಿಲಾದನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು, ನಿಮ್ಮ ಭೃತ್ಯನ ಮಾಡಿ, ಎನ್ನನಿರಿಸಿಕೊಂಡಿದ್ದಿರಯ್ಯಾ! ಎರಡನೆಯ ಭವಾಂತರದಲ್ಲಿ ಸ್ಕಂದನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು, ನಿಮ್ಮ ಕಾರುಣ್ಯವ ಮಾಡಿಕೊಂಡಿದ್ದಿರಯ್ಯ! ಮೂರನೆಯ ಭವಾಂತರದಲ್ಲಿ ನೀಲಲೋಹಿತನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು, ನಿಮ್ಮ ಲೀಲಾವಿನೋದದಿಂದಿರಿಸಿಕೊಂಡಿದ್ದಿರಯ್ಯಾ! ನಾಲ್ಕನೆಯ ಭವಾಂತರದಲ್ಲಿ ಮನೋಹರನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು, ನಿಮ್ಮ ಮನಃಪ್ರೇರಕನಾಗಲೆಂದು ಇರಿಸಕೊಂಡಿದ್ದಿರಯ್ಯಾ! ಐದನೆಯ ಭವಾಂತರದಲ್ಲಿ ಕಾಲಲೋಚನನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು, ಸರ್ವಕಾಲ ಸಂಹಾರವ ಮಾಡಿಸುತ್ತಿದ್ದಿರಯ್ಯಾ! ಆರನೆಯ ಭವಾಂತರದಲ್ಲಿ ವೃಷಭನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು, ನಿಮಗೇರಲು ವಾಹನವಾಗಲೆಂದಿರಿಸಿಕೊಂಡಿದ್ದಿರಯ್ಯಾ! ಏಳನೆಯ ಭವಾಂತರದಲ್ಲಿ ಬಸವನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು, ನಿಮ್ಮ ಒಕ್ಕುದ ಮಿಕ್ಕುದಕ್ಕೆ ಯೋಗ್ಯನಾಗಲೆಂದು ಇರಿಸಿಕೊಂಡಿದಿದ್ದಿರಯ್ಯಾ! ಇದು ಕಾರಣ ಕೂಡಲಸಂಗಮದೇವಾ ನೀವು ಬರಿಸಿದ ಭವಾಂತರದಲ್ಲಿ ನಾನು ಬರುತಿರ್ದೆನಯ್ಯಾ!



---

## (೫) ಸಂಸಾರವು ದುಃಖಮಯವು, ಮೋಕ್ಷವನ್ನು ಬಯಸು.

೨೬. ಸಂಸಾರವೆಂಬ ಬಲೆಯಲ್ಲಿ ಸಿಲುಕಿದೆನಯ್ಯಾ! ಎನ್ನುವನು ಕಾಯಯ್ಯಾ, ಕಾಯಯ್ಯಾ. ಹುರುಳಿಲ್ಲ. ಕೂಡಲಸಂಗಮದೇವಾ, ಶಿವಧೋ ಶಿವಧೋ.

೨೭. ನಾನೊಂದ ನೆನೆದಡೆ, ತಾನೊಂದ ನೆನೆವುದು. ನಾನಿತ್ತಲೆಳೆದಡೆ, ತಾನತ್ತಲೆಳೆವುದು. ತಾ ಬೇರೆ ಎನ್ನನಳಲಿಸಿ ಕಾಡಿತ್ತು. ತಾ ಬೇರೆ ಎನ್ನ ಬಳಲಿಸಿ ಕಾಡಿತ್ತು. ಕೂಡಲಸಂಗನ ಕೂಡಿಹೆನೆಂದರೆ ತಾನೆನ್ನ ಮುಂದುಗೆಡಿಸಿತ್ತು ಮಾಯೆ.

೨೮. ಇಂದಿಂಗೆಂತು, ನಾಳಿಂಗೆಂತು ಎಂದು ಬೆಂದೊಡಲ ಹೊರೆಯ ಹೋಯಿತ್ತೆನ್ನ ಸಂಸಾರ. ಹಿಂದೆ ನಾನಾ ಯೋನಿಯಲ್ಲಿ ಬಂದೆನೆಂಬ ಹೇಯವಿಲ್ಲ. ಮುಂದೆ ಮುಕ್ತಿಯಾಗಬೇಕೆಂಬ ಯುಕ್ತಿ ಇಲ್ಲ. ಎಂದೆಂದು ಸದಾಶಿವನ ಕುಂದದೆ ನೆನೆಯಲೀಯ್ಯದೆ ಕೊಂದುದಯ್ಯಾ ಈ ಮಾಯೆ ಕೂಡಲಸಂಗಮದೇವಾ.

೨೯. ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆ ಎನ್ನ ಬಾಳುವೆ. ಸಂಸಾರ ಸಂಗವ ಬಿಡದು ನೋಡೆನ್ನ ಮನವು. ಈ ನಾಯಿತನವ ಮಾಣಿಸು ಕೂಡಲಸಂಗಯ್ಯ ನಿಮ್ಮ ಧರ್ಮ.

೩೦. ನಿಮಿಷದ ನಿಮಿಷೆಂಬೋ. ಕ್ಷಣದೊಳಗರ್ಧೆಂಬೋ. ಕಣ್ಣ ಮುಚ್ಚುಬಿಚ್ಚುವೈಸು ಬೇಗೆಂಬೋ. ಸಂಸಾರದಾಗೆಂಬೋ. ಸಂಸಾರದ ಹೋಗೆಂಬೋ.

ಸಂಸಾರದೊಪ್ಪೆಂಬೋ. ಕೂಡಲಸಂಗಮದೇವ ನೀ ಮಾಡಿದ ಮಾಯೆಂಬೋ. ಅಭ್ರಚ್ಛಾಯೆಂಬೋ.

೩೧. ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ. ಮೋಹಕ್ಕೆ ಮಗುವಾಗಿ ಹುಟ್ಟಿದಳು ಮಾಯೆ. ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ. ಇದಾವಾವ ಪರಿಯಲ್ಲಿ ಕಾಡಿಹಳು ಮಾಯೆ. ಈ ಮಾಯೆಯು ಕಳೆವರೆ ಎನ್ನಳವಲ್ಲ. ನೀವೇ ಬಲ್ಲಿರಿ ಕೂಡಲಸಂಗಮದೇವಾ.

೩೨. ಸಂಸಾರ ಸಾಗರದ ತೆರೆ ಕೊಬ್ಬಿ, ಮುಖದ ಮೇಲೆ ಅಲೆವುತಿದ್ದುದೇ? ಸಂಸಾರ ಸಾಗರ ಉರದುದ್ದವೇ ಹೇಳಾ? ಸಂಸಾರ ಸಾಗರ ಕೊರಳುದ್ದವೇ ಹೇಳಾ? ಸಂಸಾರ ಸಾಗರ ಶಿರದುದ್ದವಾದ ಬಳಿಕ, ಏನು ಹೇಳುವೆನಯ್ಯಾ? ಅಯ್ಯಾ, ಅಯ್ಯಾ, ಎನ್ನ ಹುಯ್ಯಲ ಕೇಳಯ್ಯಾ. ಕೂಡಲಸಂಗಮದೇವಾ ನಾನೇವೆನೇವೆನಯ್ಯಾ?

೩೩. ಆದಿತ್ಯ ಸೋಮರು ಆಗಿಹೋಗುತ್ತಿದ್ದಾರು. ಬ್ರಹ್ಮ ಪ್ರಳಯಕ್ಕೊಳಗಾದ. ಹರಿಯ ಸಿಂಹಾಸನವಡಗಿತ್ತು. ಅಂತು ನಾಸ್ತಿ, ಇಂತು ನಾಸ್ತಿ. ರೋಮಜರೆಂಬುವರು ಸಿಟ್ಟುಗುಟ್ಟಿ ತರುಮರನಡಿಯಲ್ಲಿದ್ದರು. ಮಾರ್ಕಂಡೇಯ ಮಹಾಮುನಿ ಸ್ವೇಚ್ಛಾಮರಣಿ ಎನಿಸಿಕೊಂಡನಲ್ಲದೆ, ಲಿಂಗದ ನಿಜವನರಿಯನು. ಇದು ಕಾರಣ ಕೂಡಲಸಂಗಮದೇವಾ ನೀವು ಮಾಡಿದ ಬಯಲು ಭಕ್ಷಿಸಿತ್ತು ಅನಂತ ಹಿರಿಯರನು.

೩೪. ಕೊಡೆವಿಡಿಯೆ ಕುದುರೆಯ ದೃಢವುಳ್ಳ ರಾವುತನೇರೆ, ಕೊಡೆ ಕೋಟಿ ಶೂರರು ಹನ್ನಿಬ್ಬರಯ್ಯ! ಚಂದ್ರಕಾಂತದ ಗಿರಿಯ ಗಜ ಬಂದು ಮೂದಲಿಸಿ, ಅರಿದು ಕೊಲುವರೆ, ರಿಪುಗಳ ಕಲಿತನವ ನೋಡಾ. ಆವಿಗೆಯೊಳೊದವಿದ ಪುತ್ಥಳಿಯ ರೂಹಿನಂತೆ ಆಯಿತ್ತು ಕೂಡಲಸಂಗಮದೇವಾ ನಿಮ್ಮ ಹೆಸರಿಲ್ಲದ ಹೆಸರು.

೩೫. ಹಬ್ಬಕ್ಕೆ ತಂದ ಹರಿಕೆಯ ಕುರಿ ತೋರಣಕ್ಕೆ ತಂದ ತಳಿರ ಮೇಯಿತ್ತು. ಕೊಂದಿಹರೆಂಬುದನರಿಯದೆ, ಬೆಂದ ಒಡಲ ಹೊರೆಯ ಹೋಯಿತ್ತಲ್ಲದೆ. ಅಂದಂದೆ ಹುಟ್ಟಿತ್ತು, ಅಂದಂದೆ ಹೊಂದಿತ್ತು. ಕೊಂದವರುಳಿವರೇ ಕೂಡಲಸಂಗಮದೇವಾ?

೩೬. ಇಲಿಗಡಹನೊಡ್ಡಿದಲ್ಲಿ ಇರ್ಪಂತೆ ಎನ್ನ ಸಂಸಾರ ಕೆಡುವನ್ನಕ್ಕ ಮಾಣದು. ಹೆರರ ಬಾಧಿಸುವದನು ತನು ಕೆಡುವನ್ನಕ್ಕ ಮಾಣದು. ಹೆರರ ಛಿದ್ರಿಸುವದನು ತನು ಕೆಡುವನ್ನಕ್ಕ ಮಾಣದು. ಅಕಟಕಟಾ, ಸಂಸಾರಕ್ಕೆ ಆಸತ್ತೆ ಕೂಡಲಸಂಗಮದೇವಾ.



೩೭. ಎಂದೋ ಸಂಸಾರದ ದಂದುಗ ಹಿಂಗುವುದು? ಎಂದೋ ಮನದಲ್ಲಿ ಪರಿಣಾಮವಹುದೆನಗಿನ್ನೆಂದೋ? ಎಂದೋ ಕೂಡಲಸಂಗಮದೇವಾ? ಇನ್ನೆಂದೋ ಪರಮ ಸಂತೋಷದಲ್ಲಿಹುದೆನಗೆಂದೋ?

೩೮. ಚಂದ್ರಮನಂತೆ ಕಳೆ ಸಮನಿಸಿತ್ತೆನಗೆ. ಸಂಸಾರವೆಂಬ ರಾಹು ಸರ್ವಗ್ರಾಸಿಯಾಗಿ ನುಂಗಿತ್ತಯ್ಯಾ. ಇಂದೆನ್ನ ದೇಹಕ್ಕೆ ಗ್ರಹಣವಾಯಿತ್ತು. ಇನ್ನೆಂದಿಂಗೆ ಮೋಕ್ಷವಹುದೋ ಕೂಡಲಸಂಗಮದೇವಾ.

೩೯. ಒಂದು ಮೊಲಕ್ಕೆ ನಾಯನೊಂಬತ್ತ ಬಿಟ್ಟಂತೆ, ಎನ್ನ ಬಿಡು, ತನ್ನ ಬಿಡೆಂಬುದು ಕಾಯವಿಕಾರ. ಎನ್ನ ಬಿಡು, ತನ್ನ ಬಿಡೆಂಬುದು ಮನವಿಕಾರ. ಕರಣೇಂದ್ರಿಯಂಗಳೆಂಬ ಸೊಣಗ ಮುಟ್ಟದ ಮುನ್ನ, ಮನ ನಿಮ್ಮ ನೈದುಗೆ ಕೂಡಲಸಂಗಮದೇವಾ.

## (೬) ಪರಮಾತ್ಮನಲ್ಲಿ ಸಾಮರಸ್ಯವು.

೪೦. ಭಕ್ತನೆನಿಸುವೆನಯ್ಯ ಮೆಲ್ಲಮೆಲ್ಲನೆ. ಯುಕ್ತನೆನಿಸುವೆನಯ್ಯ ಮೆಲ್ಲಮೆಲ್ಲನೆ. ಶರಣನೆನಿಸುವೆನಯ್ಯ ಮೆಲ್ಲಮೆಲ್ಲನೆ. ಎಡಹು ಗುಳಿಗಳ ದಾಂಟಿ ಬರಬರ ಲಿಂಗೈಕ್ಯನೆನಿಸುವೆನಯ್ಯ. ಕೂಡಲಸಂಗಮದೇವಯ್ಯ ನಿಮ್ಮಿಂದಧಿಕನೆನಿಸುವೆನಯ್ಯಾ.

೪೧. ಆಚಾರಲಿಂಗವಿಡಿದು ಅನುಭಾವಲಿಂಗಸಿದ್ಧಿ. ಅನುಭಾವ ಲಿಂಗವಿಡಿದು ಮಾರ್ಗಕ್ರಿಲಿಂಗಸಿದ್ಧಿ. ಮಾರ್ಗಕ್ರಿಲಿಂಗವಿಡಿದು ಮೀರಿದ ಕ್ರಿಲಿಂಗಸಿದ್ಧಿ. ಮೀರಿದ ಕ್ರಿಲಿಂಗವಿಡಿದು ಕ್ರಿಯಾನಿಷ್ಪತ್ತಿಲಿಂಗಸಿದ್ಧಿ. ಇದು ಕಾರಣ ಕೂಡಲಸಂಗಮದೇವ ಲಿಂಗವಿಡಿದು ಲಿಂಗಸಿದ್ಧಿ.

# ಭಕ್ತಸ್ಥಲ.

## (೭) ಭಕ್ತಿಯುಳ್ಳವನಾಗಿರು.

೪೨. ನಂಬರು, ನೆಚ್ಚರು. ಬರಿದೆ ಕರೆವರು. ನಂಬಲರಿಯರೀ ಲೋಕದ ಮನುಜರು. ನಂಬಿ ಕರೆದಡೆ, 'ಓ' ಎನ್ನನೇ ಶಿವನು? ನಂಬದೆ ನೆಚ್ಚದೆ ಬರಿದೆ ಕರೆವರ ಕೊಂಬೆ ಮೆಟ್ಟಿ ಕೂಗೆಂದ ಕೂಡಲಸಂಗಮದೇವ.

೪೩. ನೆರೆ ನಂಬೊ, ನೆರೆ ನಂಬೋ, ದರದುರವಿಲ್ಲದೆ ಸಾಮವೇದಿಗಳಂತೆ. ನೆರೆ ನಂಬೋ, ನೆರೆ ನಂಬೋ, ದಾಸದುಗ್ಗಳೆಯಂತೆ. ನೆರೆ ನಂಬೋ, ನೆರೆ ನಂಬೋ, ಸಿರಿಯಾಳ ಚಂಗಳೆಯಂತೆ. ನೆರೆ ನಂಬೋ, ನೆರೆ ನಂಬೋ, ಸಿಂಧು ಬಲ್ಲಾಳನಂತೆ. ನಂಬಿದೆಯಾದರೆ, ತನ್ನನೀವ ಕೂಡಲಸಂಗಮದೇವ.

೪೪. ವ್ಯಾಧನೊಂದು ಮೊಲನ ತಂದರೆ, ಸಲುವ ಹಾಗಕ್ಕೆ ಬಿಲಿವರಯ್ಯ! ನೆಲನಾಳ್ವನ ಹೆಣನೆಂದರೆ, ಒಂದಡಿಕೆಗೆ ಕೊಂಬುವರಿಲ್ಲ ನೋಡಯ್ಯ! ಮೊಲನಿಂದ ಕರಕಷ್ಟ ನರನ ಬಾಳುವೆ. ಸಲೆ ನಂಬೋ ನಮ್ಮ ಕೂಡಲಸಂಗಮದೇವನ.

೪೫. ಒಂದು ಮಾತೆನ್ನಬಹುದೇ ಶಬ್ದ ಸಾರಾಯವನು? ಒಂದು ಮಾತೆನ್ನಬಹುದೇ ಶರಣ ಸಂಬಂಧವನು? ಕೂಡಲಸಂಗಮದೇವರು ನಂಬಿಗೆ 'ಓ' ಎಂದುದನೊಂದು ಮಾತೆನ್ನಬಹುದೇ?

೪೬. ಹೊಲಬುಗೊಂಡರಸಲು ಬೇಡ. ಬಿಲಿತು ತರಬೇಡ. ಒಲಿದೊಮ್ಮೆ ಶಿವಶರಣೆನ್ನಿರಯ್ಯಾ. ಒಂದು ಸೊಲ್ಲಿಂಗೆ ಮುಕ್ತಿ ಸಿದ್ಧಿ, ಕೂಡಲಸಂಗಮದೇವ ಭಕ್ತಿಲಂಪಟನಾಗಿ.

೪೭. ಗೀತವ ಬಲ್ಲಾತ ಜಾಣನಲ್ಲ. ಮಾತ ಬಲ್ಲಾತ ಜಾಣನಲ್ಲ. ಜಾಣನು ಜಾಣ, ಆತ ಜಾಣನು. ಲಿಂಗವ ನರೆ ನಂಬಿದಾತ ಜಾಣನು. ಜಂಗಮಕ್ಕೆ ಸವಿಸುವಾತ ಜಾಣನು. ಜವನ ಬಾಯಲು ಬಾಲವ ಕೊಯ್ದು ಹೋದಾತ ಜಾಣನು, ನಮ್ಮ ಕೂಡಲಸಂಗನ ಶರಣನು.

೪೮. ನಾದಪ್ರಿಯ ಶಿವನೆಂಬರು. ನಾದಪ್ರಿಯ ಶಿವನಲ್ಲಯ್ಯ. ವೇದಪ್ರಿಯ ಶಿವನೆಂಬರು. ವೇದಪ್ರಿಯ ಶಿವನಲ್ಲಯ್ಯ. ನಾದವ ಮಾಡಿದ ರಾವಣಂಗೆ ಅರೆಯಾಯುಷ್ಯವಾಯಿತ್ತು. ವೇದವನೋದಿದ ಬ್ರಹ್ಮನ ಶಿರ ಹೋಯಿತ್ತು. ನಾದಪ್ರಿಯನು ಅಲ್ಲ, ವೇದಪ್ರಿಯನು ಅಲ್ಲ. ಭಕ್ತಿಪ್ರಿಯ ನಮ್ಮ ಕೂಡಲಸಂಗಮದೇವ.



೪೯. ಸರವಿಂಧ್ಯದೊಳಗೆನ್ನ ಹುಲುಗಿಳಿಯ ಮಾಡಿ ಸಲಹುತ್ತ, 'ಶಿವ ಶಿವಾ' ಎಂದೋದಿಸಯ್ಯ. ಭಕ್ತಿ ಎಂಬ ಪಂಜರದೊಳಗಿಕ್ಕಿ ಸಲಹು ಕೂಡಲಸಂಗಮದೇವಾ.

೫೦. ನಿಸ್ಸೀಮ ಗುಗ್ಗುಳವನಿಕ್ಕಿದನೊಬ್ಬ ಶರಣ. ಉಘೇ, ಚಾಂಗು, ಭಲಾ, ಎಂಬ ಹೊಗೆ ಗಗನವ ತೀವಿ ಓಹಿಲನೆಂದು ಮೆರೆದ ಸೌರಾಷ್ಟ್ರ ಮಂಡಲದಲ್ಲಿ, ಕೂಡಲಸಂಗಮದೇವ ಭಕ್ತವತ್ಸಲನಾಗಿ.

೫೧. ಭಕ್ತರೇ ಸಮರ್ಥರು. ಅಸಮರ್ಥರೆನಲುಂಟೇ? ಚನ್ನನೆತ್ತ? ಚೋಳನೆತ್ತ? ಚೆನ್ನನೊಡನುಂಡ ಶಿವ. ಆಹಾ ಅಯ್ಯ, ಚನ್ನ ಚೋಳನ ಮನೆಯ ಕಂಪಣಿಗನಯ್ಯ. ಕೂಡಲಸಂಗಮದೇವ ಭಕ್ತಿಲಂಪಟನಯ್ಯ.

೫೨. ಶಬ್ದ ಸುಖಕ್ಕೆ ಮೆಚ್ಚಿ ಮಾತಿಂಗೆ ಮಾತು ಕೊಟ್ಟು, ಕೆಟ್ಟೆನಯ್ಯಾ. ಅನುಭಾವ ಅಕ್ಕವೆಯಾಗದೆ ಬೆಬ್ಬನೆ ಬೆರೆತೆನಯ್ಯಾ. ಅಮೃತದ ಕೊಡನ ತುಂಬಿ ಒಡೆಯ ಹೊಯಿದು, ಅರಸಲುಂಟೇ? ಸ್ವಾಮಿಭೃತ್ಯ ಸಂಬಂಧವೆನ್ನ ಭಕ್ತಿ. ಪ್ರತ್ಯುತ್ತರ ನಾಯಕನರಕ ಕೂಡಲಸಂಗಮದೇವಾ.

೫೩. ಹರಿವ ನದಿಯ ತೆರನ ಹೋಲಬಲ್ಲರೆ ಭಕ್ತಿ. ಕೂಡಿ ಸಾಯಿಧಾನವ ನೀಡಬಲ್ಲರೆ ಭಕ್ತಿ. ನೀಡಿ ಮಿಕ್ಕುದ ಕಾಯ್ದುಕೊಂಡಿರಬಲ್ಲರೆ, ಕೊಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವ.

೫೪. ಎಂತಕ್ಕೆ ನಾ ನಿಮ್ಮ ದೇವನೆಂದರಿದೆನು? ಇಂತಾಗಿ ನೀವೆನ್ನನಾರೆಂದರಿಯಿರಿ. ನಂಬಲರಿಯೆ, ನಂಬಿಸಲರಿಯೆ. ಒಲಿಯಲರಿಯೆ, ಒಲಿಸಲರಿಯೆ. ॥ಶ್ಲೋ॥ ಯಥಾ ಭಾವಸ್ತಥಾ ಲಿಂಗಂ । ಸತ್ಯಂ ಸತ್ಯಂ ನ ಸಂಶಯಃ ॥ ಯಥಾ ಭಕ್ತಿಸ್ತಥಾ ಸಿದ್ಧಿಃ । ಸತ್ಯಂ ಸತ್ಯಂ ನ ಸಂಶಯಃ ॥ ಕೂಡಲಸಂಗಮದೇವ ಕೇಳಯ್ಯ, ಕೋಟಿ ಕೋಟಿ ವರುಷ ಕೋಟಲೆಗೊಂಡರೇನಯ್ಯ?

೫೫. ಚಂದ್ರಕಾಂತದ ಸಿಲೆಯಲ್ಲಿ ಜಲವಿಲ್ಲದನ್ನಕ್ಕ ಶೈತ್ಯವ ತೋರುವ ಪರಿ ಎಂತೋ? ಸೂರ್ಯಕಾಂತದ ಶಿಲೆಯಲ್ಲಿ ಅಗ್ನಿ ಇಲ್ಲದನ್ನಕ್ಕ ಉಷ್ಣವ ತೋರುವ ಪರಿ ಎಂತೋ? ಶರಣಂಗೆ ಭಕ್ತಿಕಾಯವಿಲ್ಲದನ್ನಕ್ಕ ಕೂಡಲಸಂಗನನರಿವ ಪರಿ ಎಂತೋ?

೫೬. ಕಾಣೆಯ ಲೋಭ ಕೋಟಿಯ ಲಾಭವ ಕೆಡಿಸಿದುದ ನಾನರಿಯೆನಯ್ಯ. ಭಕ್ತಿಯ ಕುಳವ ನಾನರಿಯದೆ ಮತಿಗೆಟ್ಟ ಪರಿಯ ನಾನರಿಯೆನಯ್ಯ. ಕೂಡಲಸಂಗನ ಶರಣರ ಸಂಗದಿಂದರಿದರೆ, ನಾನು ಬದುಕುವೆನಯ್ಯಾ.

---

## (೮) ನಿಷ್ಕಪಟ ಭಕ್ತಿಯುಳ್ಳವನಾಗಿರು.

೫೭. ಭಕ್ತಿ ಎಳ್ಳನಿತಿಲ್ಲ. ಯುಕ್ತಿ ಶೂನ್ಯನಯ್ಯ ನಾನು. ತನುವಂಚಕ ಮನವಂಚಕ ಧನವಂಚಕ ನಾನಯ್ಯ! ಕೂಡಲಸಂಗಮದೇವ ಮಳಲೊಟ್ಟಿಲೆನ್ನ ಮಾತು.

೫೮. ಒಂದುವನರಿಯದ ಸಂದೇಹಿ ನಾನಯ್ಯಾ. ನಂಬುಗೆ ಇಲ್ಲದ ಡಂಭಕ ನಾನಯ್ಯ. ನಿಮ್ಮ ನಂಬಿದ ಶರಣರ ಡಿಂಗರಿಗ ನಾನು ಕೂಡಲಸಂಗಮದೇವಾ.

೫೯. ಆನು ಭಕ್ತನಲ್ಲಯ್ಯ. ಆನು ವೇಷಧಾರಿಯಯ್ಯ. ಕಾಟುಗ, ಕೆತ್ತುಗ, ಪೊಲ್ಲುಗನೆಂಬುದು ಎನ್ನ ಹೆಸರು. ಕೂಡಲಸಂಗಮದೇವಾ, ನಿಮ್ಮ ಶರಣರ ಮನೆಯ ಮಗ ನಾನಯ್ಯ.

೬೦. ಭಕ್ತಿ ಸುಭಾಷೆಯ ನುಡಿಯ ನುಡಿವೆ. ನುಡಿದಂತೆ ನಡೆವೆ. ನಡೆಯೊಳಗೆ ನುಡಿಯ ಪೂರೈಸುವೆ. ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೈಯ್ಯಲು ಒಂದು ಜವೆ ಕೊರತೆಯಾದರೆ, ಎನ್ನನದ್ದಿ ನೀನೆದ್ದು ಹೋಗು ಕೂಡಲಸಂಗಮದೇವಾ.

೬೧. ಮಸಿಯನೇಸು ಕಾಲ ಬೆಳಗಿದರೆ, ಬಿಳಿದಾಗಬಲ್ಲುದೇ? ಕರ್ಮಸ್ಥಿತಿ ಬೆನ್ನ ಬಿಡದು. ಅನಂತಕೋಟಿ ಸನ್ಮಾನವ ಮಾಡಿದರೇನು? ನಿಮಿಷದ ಉದಾಸೀನ ಕೆಡಿಸಿತ್ತು. ಕೂಡಲಸಂಗಮದೇವಾ ನಿಮ್ಮ ನಂಬಿಯೂ ನಂಬದ ಡಂಭಕ ನಾನಯ್ಯ.

೬೨. ಶಬ್ದ ಸಂಭಾಷಣೆಯ ನುಡಿಯ ವರ್ತಿಸಿ ನುಡಿವೆ. ತೊಡೆಹದ ಕೆಲಸದ ಬಣ್ಣದಂತೆ, ಕಡಿಹಕ್ಕೆ ಒರೆಗೆ ಬಾರದು ನೋಡಾ! ಎನ್ನ ಮನದಲೊಂದು, ಹೃದಯದಲೊಂದು, ವಚನದಲೊಂದು ನೋಡಾ! ಕೂಡಲ ಸಂಗಮದೇವಾ ಆನು ಭಕ್ತನೆಂಬ ಹುಸಿಯ ಮುಸುಕವನೇನ ಬಣ್ಣಿಸುವೆನಯ್ಯ?

೬೩. ಅರ್ಥ ಪ್ರಾಣ ಅಭಿಮಾನ ನಿಮ್ಮದೆಂಬಿರಿ. ಒತ್ತಿ ನೋಡಿದರೆ, ಮುಟ್ಟಲೀಯರಿ. ಮುಟ್ಟಿ ಬಂದಲ್ಲಿ, ಕಠಾರಿ ಕಾಳಗವ ನಿವಾರಿಸುವಿರಲ್ಲದೆ ಲಿಂಗಜಂಗಮವಂತನಾಗಬಾರದು. ಕೂಡಲಸಂಗಮದೇವ ವೇಷಡಂಭಕರಿಗೆ ಭಕ್ತಿ ಎಂತಪ್ಪುದಯ್ಯ?

೬೪. ದಿಟ ಪುಟ ಭಕುತಿ ಸಂಪುಟ ನೆಲೆಗೊಳ್ಳದಾಗಿ, ಟಂಬಕನಾಡಿಸುತಿದ್ದಿತಯ್ಯಾ ನಿನ್ನ ಮಾಯೆ. ಟೀವಕ ಟಂಬಕನಾಡಿಸುತಿದ್ದಿತಯ್ಯಾ ನಿನ್ನ ಮಾಯೆ. ಕೂಡಲಸಂಗಮದೇವಯ್ಯ, ಹೊನ್ನು ಹೆಣ್ಣು ಮಣ್ಣು ತೋರಿ.

೬೫. ಗೀಜಗನ ಗೂಡು, ಕೋಡಗದಣಲಸಂಚೆ, ಬಾದುಮನ ಮದುವೆ, ಬಾವಲ ಬಿದ್ದಿನಂತೆ ಜೂಜುಗಾರನ ಮಾತು. ಬೀದಿಯ ಗುಂಡನ ಸೊಬಗು,



ಓಡಿನೊಳಗಗೆಯ ಹೊಯಿದಂತೆ ಕಾಣಿರೋ. ಶಿವನ ಆದಿಯಂತುವನರಿಯದವನ ಭಕ್ತಿ ಸುಖ ಶೋಧನೆಗೆ ಮದ್ದ ಕೊಂಡಂತೆ ಕೂಡಲಸಂಗಮದೇವಾ.

೬೬. ಸ್ನೇಹ ತಪ್ಪಿದ ಠಾವಿನಲ್ಲಿ ಗುಣವನರಸುವರೇ [ಅಯ್ಯ ?] ಹೂವು ಬಾಡಿದಲ್ಲಿ ಪರಿಮಳವನರಸುವರೇ ಅಯ್ಯಾ? ಎನ್ನ ತಂದೆ ಕೂಡಲಸಂಗಮದೇವ ತೊರೆ ಇಳಿದರೆ ಅಂಬಿಗಂಗೇನುಂಟು?

೬೭. ಅಳವುತ್ತಳವುತ್ತ ಬಳಲುವರಲ್ಲದೆ, ಕೊಳಗ ಬಳಲುವುದೇ? ಬಟ್ಟೆಯ ನಡೆವುತ್ತ ನಡೆವುತ್ತ ಬಳಲುವರಲ್ಲದೆ, ಬಟ್ಟೆ ಬಳಲುವುದೇ? ಶ್ರಮವ ಮಾಡುತ್ತ ಮಾಡುತ್ತ ಬಳಲುವರಲ್ಲದೆ, ಕೋಲು ಬಳಲುವುದೇ? ನಿಜವನರಿಯದ ಭಕ್ತ ಬಳಲುವನಲ್ಲದೆ, ಲಿಂಗ ಬಳಲುವುದೇ? ಕೂಡಲಸಂಗಮದೇವ ಅರಸರಿಯದ ಬಿಟ್ಟೆಯೋ.

೬೮. ಸಿಂಗದ ನಡು ಮುರಿಯಲಾ ಸಿಂಗವೇನು ಬಾತೆ? ಸುಂಡಿಲ ಮುರಿದರೆ ಗಜವೇನು ಬಾತೆ? ಸಂಗ್ರಾಮದಲ್ಲಿ ವೀರನುಳಿಯಲದೇನು ಬಾತೆ? ಶೃಂಗಾರದ ಮೂಗು ಹೋದರೆ ಶೃಂಗಾರವೇನು ಬಾತೆ? ನಿಜ ತುಂಬಿದ ಭಕ್ತಿ ತುಳುಕಾಡದವರ ಸಂಗವೇನು ಬಾತೆ ಕೂಡಲಸಂಗಮದೇವ?

೬೯. ಮಾತಿನಲ್ಲಿ ಶ್ರೋತ್ರಸುಖವ ನುಡಿಯಬಹುದಲ್ಲದೆ, ಮಾಡುವ ಸತ್ಕ್ರಿಯಿಂದ ಭಕ್ತನೆನಿಸಲು ಬಾರದು. ಅರ್ಥ ಪ್ರಾಣಾಭಿಮಾನವಾರಿಗೆಯೂ ಸಮನಿಸದು, ಲಿಂಗ ಮುಖದಲುದಯವಾದ ಶರಣಂಗಲ್ಲದೆ ಅಯ್ಯ. ಕೂಡಲ ಸಂಗನ ಶರಣರ ಭಕ್ತಿಭಂಡಾರವು ಎನಗೆಂತು ಸಾಧ್ಯವಪ್ಪುದು ಹೇಳೆನ್ನ ತಂದೆ?

೭೦ ಲೌಕಿಕರ ಕಂಡು, ಆಡುವೆ ಹಾಡುವೆ. ತಾರ್ಕಿಕರ ಕಂಡು, ಆಡುವೆ ಹಾಡುವೆ. ಸಹಜ ಗುಣವೆನ್ನಲಿಲ್ಲಯ್ಯ. ನಿಜಭಕ್ತಿ ಎನಗಿಲ್ಲ. ತಂದೆ ಏಕೋಭಾವ ಎನಗುಳ್ಳರೆ, ಏಕೆ ನೀ ಕರುಣಿಸೆ ಕೂಡಲಸಂಗಮದೇವಾ?

೭೧. ಏನನೋದಿ, ಏನ ಕೇಳಿ, ಏನ ಮಾಡಿಯೂ ಫಲವೇನು ನಿನ್ನವರೊಲಿಯದನ್ನಕ್ಕ? ಶಿವಶಿವ, ಮಹಾದೇವ, ಬಾಳಿಲ್ಲದವಳ ಓಲೆಯಂತಾಯಿತ್ತೆನಗೆ ಕೂಡಲಸಂಗಮದೇವಾ.

೭೨. ಉಡುವಿನ ಭಾವದಲ್ಲಿ ಹಡೆದರೆಮ್ಮವರು. ಉಸಿರುವಳ್ಳಿಯಂತೆನ್ನ ಇರವು. ಬಾವುಲ ಬಾಳುವೆಯ ತೆರನಂತೆ. ಹೊತ್ತಾರೆ ಎದ್ದ ಕುರುಡಂಗೆ ಅಗುಸೆಯಲ್ಲಿ ಅಸ್ತಮಯವಾದಂತೆ. ಆನು ಭಕ್ತಿಯ ಬಯಸಿದರಹುದೇ ಕೂಡಲ ಸಂಗಮದೇವಾ?

## (೯) ಲಿಂಗವನ್ನು ಪೂಜಿಸು.

೭೩. ಸಂಸಾರವೆಂಬುದೊಂದು ಗಾಳಿಯ ಸೊಡರು. ಸಿರಿಯೆಂಬುದೊಂದು ಸಂತೆಯ ಮಂದಿ ಕಂಡಯ್ಯ. ಇದ ನೆಚ್ಚಿ ಕೆಡಬೇಡ ಸಿರಿ ಎಂಬುದ. ಮರೆಯದೆ ಪೂಜಿಸು ನಮ್ಮ ಕೂಡಲಸಂಗಮದೇವನ.

೭೪. ಹೊತ್ತಾರೆ ಎದ್ದು ಅಗ್ಗವಣಿ ಪತ್ರೆಯ ತಂದು ಹೊತ್ತು ಹೋಗದ ಮುನ್ನ, ಪೂಜಿಸು ಲಿಂಗವ. ಹೊತ್ತು ಹೋದ ಬಳಿಕ ನಿನ್ನನಾರು ಬಲ್ಲರು? ಹೊತ್ತು ಹೋಗದ ಮುನ್ನ, ಮೃತ್ಯು ಒಯ್ಯದ ಮುನ್ನ, ತೊತ್ತುಗೆಲಸವ ಮಾಡು ಕೂಡಲಸಂಗಮದೇವ.

೭೫. ನೆರೆ ಕೆನ್ನೆಗೆ, ತೆರೆ ಗಲ್ಲಕ್ಕೆ, ಶರೀರ ಗೂಡುವೋಗದ ಮುನ್ನ, ಹಲ್ಲು ಹೋಗಿ, ಬೆನ್ನು ಬಾಗಿ, ಅನ್ಯರಿಗೆ ಹಂಗಾಗದ ಮುನ್ನ, ಕಾಲ ಮೇಲೆ ಕೆಯ್ಯ ನೂರಿ, ಕೋಲ ಹಿಡಿಯದ ಮುನ್ನ, ಮುಪ್ಪಿಂದೊಪ್ಪವಳಿಯದ ಮುನ್ನ, ಮೃತ್ಯು ಮುಟ್ಟದ ಮುನ್ನ, ಪೂಜಿಸು ಕೂಡಲಸಂಗಮದೇವನ.

೭೬. ಎಲೆಲೆ ಮಾನವಾ, ಅಳಿಯಾಸೆ ಬೇಡವೋ. ಕಾಳಬೆಳದಿಂಗಳ ಸಿರಿ ಸ್ಥಿರವಲ್ಲ. ಕೇಡಿಲ್ಲದ ಪದವಿ. ಕೂಡಲಸಂಗಮದೇವನ ಮರೆಯದೆ ಪೂಜಿಸು,

೭೭. ಮನವೇ ಸರ್ಪ ತನುವೇ ಹೇಳಿಗೆ. ಹಾವಿನೊಡತಣವಹುದು ಇನ್ನಾವಾಗ ಕೊಂದಿಹುದೆಂದರಿಯೆ. ಇನ್ನಾವಾಗ ತಿಂದಿಹುದೆಂದರಿಯೆ. ನಿಚ್ಚಕ್ಕೆ ನಿಮ್ಮ ಪೂಜಿಸಬಲ್ಲಡೆ ಅದೇ ಗಾರುಡ ಕೂಡಲಸಂಗಮದೇವಾ.

೭೮. ನೀರ ಬೊಬ್ಬುಳಿಕೆಗೆ ಕಬ್ಬುನದ ಕಟ್ಟ ಕೊಟ್ಟು ಸುರಕ್ಷಿತವ ಮಾಡುವ ಭರವ ನೋಡಾ! ಮಹಾದಾನಿ ಕೂಡಲಸಂಗಯ್ಯನ ಪೂಜಿಸಿ ಬದುಕೋ ಕಾಯವ ನಿಶ್ಚಯಿಸದೆ.

೭೯. ಅಚ್ಚುಗವೇಕಯ್ಯ ಸಂಸಾರದೊಳಗೆ? ನಿಚ್ಚ ನಿಚ್ಚ ಶಿವರಾತ್ರಿಯ ಮಾಡುವುದು. ಬೇಗ ಬೇಗ ಅರ್ಚನೆ ಪೂಜೆಯ ಮಾಡುವುದು. ಕೂಡಲ ಸಂಗನ ಕೂಡುವುದು.

೮೦ ಉತ್ಪತ್ತಿ ಶುಕ್ಲ ಶೋಣಿತದಿಂದಾದ ಲಜ್ಜೆ ಸಾಲದೇ? ಮತ್ತೆ ದುರಿತಂಗಳ ಹೊರುವ ಎಗ್ಗತನವೇಕಯ್ಯಾ! ಮೃತ್ಯುವಿನ ಬಾಯಿಗೆ ಒಳಗಾಗಲೇಕೆ? ಒತ್ತೊತ್ತುನ ಜನನವ ಗೆಲುವರೆ, ಕರ್ತನ ಪೂಜಿಸು ನಮ್ಮ ಕೂಡಲ ಸಂಗಮದೇವನ.

೮೧ ಹೊಯ್ದರೆ ಹೊಯ್ಗಳು ಕೆಯ್ಯ ಮೇಲೆ. ಬಯ್ದರೆ ಬಯ್ಗಳು ಕೆಯ್ಯ ಮೇಲೆ. ಹಿಂದಣ ಜನನವೇನಾದಡಾಗಲಿ. ಇಂದಿನ ಭೋಗವು ಕೆಯ್ಯ ಮೇಲೆ. ಕೂಡಲಸಂಗಮದೇವಯ್ಯ, ನಿಮ್ಮ ಪೂಜಿಸಿದ ಫಲವು ಕೆಯ್ಯ ಮೇಲೆ.



೮೨. ಆಡಿಹರಯ್ಯ, ಹಾಡಿಹರಯ್ಯ, ಮನ ಬಂದ ಪರಿಯಲಿ. ಶಿವ ಶರಣರ ಮುಂದೆ, ಆಡಿಹರಯ್ಯ, ಹಾಡಿಹರಯ್ಯ! ಕೋಡಂಗಿಯಾಟವನಾಡಿದ ಭಕ್ತಂಗೆ ಬೇಡಿತ್ತನೀವ ನಮ್ಮ ಕೂಡಲಸಂಗಮದೇವ.

೮೩. ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡುವುದು. ಮಾಡಿದ ಪೂಜೆಯ ನೋಡುವುದಯ್ಯ. ಶಿವತತ್ವಗೀತವ ಪಾಡುವುದು. ಶಿವನ ಮುಂದೆ ನಲಿದಾಡುವುದಯ್ಯ. ಭಕ್ತಿಸಂಭಾಷಣೆಯ ಮಾಡುವುದು. ನಮ್ಮ ಸಂಗಯ್ಯನ ಕೂಡುವುದು.

೮೪. ||ಶ್ಲೋಕ|| ವರಂ ಪ್ರಾಣಪರಿತ್ಯಾಗ | ಛ್ಛೇದನಂ ಶಿರಸೋಪಿ ವಾ | ನತ್ವನಭ್ಯರ್ಚ್ಯ ಭುಂಜೀಥ | ಭಗವಂತಂ ತ್ರಿಲೋಚನಂ || ಎಂದುದಾಗಿ ದೇಹ ಧರ್ಮ ತನ್ನ ಆದಂತೆ ಆಗಲಿ. ಕೂಡಲಸಂಗನ ಪೂಜಿಸಿದಲ್ಲದೆ ನಿಲಲಾರೆನು.

---

## (೧೦) ಭಕ್ತಿಭಾವದಿಂದ ಲಿಂಗವನ್ನು ಪೂಜಿಸು.

೮೫. ಲೋಕೋಪಚಾರಕ್ಕೆ ಮಜ್ಜನಕ್ಕೆರೆವೆನಯ್ಯಾ! ಮನದ ತಾಮಸ ಬಿಡದು. ಮನದ ಕಪಟ ಬಿಡದು. ಶಿವ ಶರಣೆಂಬುದಳವಡದಯ್ಯ! ಎನ್ನ ಮನದಲ್ಲಿ ಎರಡುಳ್ಳನ್ನಕ್ಕ ಕೂಡಲಸಂಗಮದೇವನೆಂತೊಲಿವ?

೮೬. ಒಲವಿಲ್ಲದ ಪೂಜೆ, ನೇಹವಿಲ್ಲದ ಮಾಟ. ಆ ಪೂಜೆಯು ಆ ಮಾಟವು ಚಿತ್ರದ ರೂಹು ಕಾಣಿರಣ್ಣ. ಚಿತ್ರದ ರಬ್ಬು ಕಾಣಿರಣ್ಣಾ. ಅಪ್ಪಿದರೆ ಸುಖವಿಲ್ಲ. ಮೆಲಿದರೆ ರುಚಿ ಇಲ್ಲ. ಕೂಡಲಸಂಗಮದೇವ ನಿಜವಿಲ್ಲದವನ ಭಕ್ತಿ.

೮೭. ಮಾಡಿ ನೀಡಿ ಲಿಂಗವ ಪೂಜಿಸಿಹೆವೆಂಬವರು ನೀವೆಲ್ಲ ಕೇಳಿರಣ್ಣಾ! ಹಾಗದ ಕೆರಹ ಹೊರಗೆ ಕಳೆದು ದೇಗುಲಕ್ಕೆ ಹೋಗಿ ನಮಸ್ಕಾರವ ಮಾಡುವನಂತೆ, ತನ್ನ ಕೆರಹಿನ ಧ್ಯಾನವಲ್ಲದೆ ದೇವರ ಧ್ಯಾನವಿಲ್ಲ. ಧನವನಿರಿಸದಿರಾ. ಇರಿಸಿದರೆ ಭವ ಬಪ್ಪುದು ತಪ್ಪದು. ಕೂಡಲಸಂಗನ ಶರಣರಿಗೆ ಸವಿಸಲೇಬೇಕು.

೮೮. ಕುಳ್ಳಿದ್ದು ಲಿಂಗವ ಪೂಜಿಸಿ, ಅಲ್ಲದಾಟವನಾಡುವರಯ್ಯ. ಬೆಳ್ಳಿತ್ತಿನ ಮರೆಯಲಿದ್ದು, ಹುಲ್ಲೆಗಂಬ ತೊಡುವಂತೆ. ಕಳ್ಳ ಹಾದರಿಗನ ಕೆಯ್ಯಲು ಪೂಜೆಯ ಕೊಳ್ಳ ನಮ್ಮ ಕೂಡಲಸಂಗಮದೇವ.

೮೯. ಬಂಡಿ ತುಂಬಿದ ಪತ್ರೆಯ ತಂದು, ಕಂಡಕಂಡಲ್ಲಿ ಮಜ್ಜನಕ್ಕೆರೆವಿರಯ್ಯ. ತಾಪತ್ರಯವ ಕಳೆದು ಪೂಜಿಸಿ. ತಾಪತ್ರಯವ ಲಿಂಗನೊಲ್ಲ. ಕೂಡಲಸಂಗಮದೇವ ಬರಿಯುದಕದಲಿ ನೆನೆವನೇ?

೯೦. ಒಲೆಯ ಬೂದಿಯ ಬಲಿಯಲು ಬೇಡ. ಒಲಿದಂತೆ ಹೂಸಿಕೊಂಡಿಪ್ಪುದು ಹುಸಿ. ಏನು ಫಲ, ಮನದಲ್ಲಿ ಲೇಸಿಲ್ಲದನ್ನಕ್ಕ ? ಒಂದನಾಡ ಹೋಗಿ ಒಂಬತ್ತನಾಡುವ ಡಂಭಕರ ಮೆಚ್ಚ ನಮ್ಮ ಕೂಡಲಸಂಗಮದೇವ.

೯೧. ಹೃದಯ ಕತ್ತರಿ, ತುದಿ ನಾಲಿಗೆ ಬೆಲ್ಲೆಂಬೋ. ಆಡಿಹೆನೆಂಬೋ. ಹಾಡಿಹೆನೆಂಬೋ. ನಿಚ್ಚ ನಿಚ್ಚ ಶಿವರಾತ್ರಿಯ ಮಾಡಿಹೆನೆಂಬೋ ಆನು ಎನ್ನಂತೆ, ಮನ ಮನದಂತೆ, ಕೂಡಲಸಂಗಮದೇವ ತಾನು ತನ್ನಂತೆ.

೯೨. ಒಳ್ಳಿಹ ಮೈಲಾರನ ಒಳಗೆಲ್ಲ ಸಣಬು. ಹೊರಗಣ ಬಣ್ಣ ಕರ ಲೇಸಾಯಿತ್ತಯ್ಯ ! ಶ್ವಾನನ ನಿದ್ರೆ, ಅಜ್ಞಾನಿಯ ತಪದಂತೆ ಆಯಿತ್ತಯ್ಯ ಎನ್ನ ಮತಿ ಕೂಡಲಸಂಗಮದೇವಾ.

೯೩. ಹಸಿವಾದಡುಂಬುದನು, ಸತಿಯ ಸಂಭೋಗವನು, ಆನಾಗಿ ನೀ ಮಾಡೆಂಬುವರುಂಟೇ? ಮಾಡುವುದು ಮಾಡುವುದು ಮನಮುಟ್ಟಿ. ಮಾಡುವುದು ಮಾಡುವುದು ತನುಮುಟ್ಟಿ. ತನುಮುಟ್ಟಿ, ಮನ ಮುಟ್ಟದಿರ್ದರೆ, ಕೂಡಲಸಂಗಮದೇವನೇತರಲ್ಲಿಯೂ ಮೆಚ್ಚ.

೯೪. ತನ್ನಾಶ್ರಯದ ರತಿಸುಖವನು ತಾನುಂಬ ಊಟವನು ಬೇರೆ ಮತ್ತೊಬ್ಬರ ಕೆಯ್ಯಲು ಮಾಡಿಸಬಹುದೇ ? ತನ್ನ ಲಿಂಗಕ್ಕೆ ಮಾಡುವ ನಿತ್ಯ ನೇಮವ ತಾ ಮಾಡಬೇಕಲ್ಲದೆ, ಬೇರೆ ಮತ್ತೊಬ್ಬರ ಕೆಯ್ಯಲು ಮಾಡಿಸಬಹುದೇ ? ಕೆಮ್ಮನೆಯುಪಚಾರಕ್ಕೆ ಮಾಡುವರಲ್ಲದೆ ನಿಮ್ಮನೆತ್ತ ಬಲ್ಲರು ಕೂಡಲಸಂಗಮದೇವಾ?

---

## (೧೧) ಅನುಭಾವಿಯಾಗಿರು.

೯೫. ಮರ ಮರ ಮಥನದಿಂದ ಅಗ್ನಿ ಹುಟ್ಟಿ, ಆ ಮರನೆಲ್ಲವ ಸುಡದಿಪ್ಪುದೇ ? ಮಹಾನುಭಾವರ ಸಂಗದಿಂದ ಜ್ಞಾನಾಗ್ನಿ ಹುಟ್ಟಿ, ಎನ್ನ ತನುಗುಣವೆಲ್ಲವ ಸುಡದಿಪ್ಪುದೇ ? ಇದು ಕಾರಣ ಮಹಾನುಭಾವರ ತೋರಿಸು ಕೂಡಲಸಂಗಮದೇವಾ.

೯೬. ಗುರು ಉಪದೇಶ ಮಂತ್ರವೈದ್ಯ. ಜಂಗಮ ಉಪದೇಶ ಶಸ್ತ್ರವೈದ್ಯ ನೋಡಾ. ಭವರೋಗವ ಕಳೆವ ಪರಿಯ ನೋಡಾ. ಕೂಡಲಸಂಗನ ಶರಣರ ಅನುಭಾವ ಮಡಿವಳನ ಕಾಯಕದಂತೆ.

೯೭. ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ. ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯ. ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯ. ಪರುಷದ ಬಲದಿಂದ ಅವಲೋಹದ ಕೇಡು ನೋಡಯ್ಯ. ಕೂಡಲಸಂಗನ ಶರಣರ ಅನುಭಾವದಿಂದ ಎನ್ನ ಭವದ ಕೇಡು ನೋಡಯ್ಯಾ.



೯೮. ಭಕ್ತಿ ಎಂಬ ನಿಧಾನವ ಸಾಧಿಸುವರೆ, ಶಿವಪ್ರೇಮವೆಂಬ ಅಂಜನವನೆಚ್ಚುಕೊಂಬುದು. ಭಕ್ತನಾದವಂಗೆ ಇದೇ ಪಥವಾಗಿರಬೇಕು. ನಮ್ಮ ಕೂಡಲಸಂಗನ ಶರಣರ ಅನುಭಾವ ಗಜವೈದ್ಯ.

೯೯. ತಂದೆ ಮಕ್ಕಳಿಗೆ ಬುದ್ಧಿಯ ಹೇಳುವಲ್ಲಿ ತಪ್ಪಿಂಗೆ ಮುನಿವನಲ್ಲದೆ ಪ್ರಾಣಕ್ಕೆ ಮುನಿಯ. ಲಿಂಗವಂತನು ಲಿಂಗವಂತರಿಗೆ ಬುದ್ಧಿಯ ಹೇಳುವಲ್ಲಿ, ಅವರವಗುಣಕ್ಕೆ ಮುನಿವನಲ್ಲದೆ ಲಾಂಛನಕ್ಕೆ ಮುನಿಯ. ಲಿಂಗಭಕ್ತನು ಲಿಂಗಪಥವ ಹೇಳಿದರೆ, ಮಚ್ಚರಿಸುವರ ಮೆಚ್ಚ ಕೂಡಲಸಂಗಮದೇವ.

೧೦೦. ಅಯ್ಯ ನಿಮ್ಮ ಅನುಭಾವದಿಂದ ಎನ್ನ ಮನ ಹಾಳಾಯಿತ್ತಯ್ಯ! ನಿಮ್ಮ ಅನುಭಾವದಿಂದ ಎನ್ನ ಕರ್ಮ ಛೇದನವಾಯಿತ್ತಯ್ಯ! ಅಯ್ಯ ನಿಮ್ಮವರು ಅಡಿಗಡಿಗೆ ಹೇಳಿ ಭಕ್ತಿ ಎಂಬ ಒಡವೆಯನು ದಿಟಮಾಡಿ ತೋರಿದರು ಕಾಣಾ ಕೂಡಲಸಂಗಮದೇವಾ.

೧೦೧. ಒಂದಕ್ಕೊಂಬತ್ತು ನುಡಿದು, ಕಣ್ಣ ಕೆಂಚನೆ ಮಾಡಿ, ಗಂಡುಗೆದರಿ, ಮುಡುಹಿಕ್ಕಿ ಕೆಲವರ ಕಂಡಡಂಜುವೆ, ಓಸರಿಸುವೆ. ಓಡಿದೆನೆಂಬ ಭಂಗವಾದಡಾಗಲಿ. ನಮ್ಮ ಕೂಡಲಸಂಗನ ಶರಣರ ಅನುಭಾವವಿಲ್ಲದವರ ಹೊಲ ಮೇರೆಯ ಹೊದ್ದೆ. ಹೊಲನ ಬಿಟ್ಟೋಡುವೆ.

೧೦೨. ನಿಮ್ಮ ಶ್ರೀಪಾದವ ಮುಟ್ಟಿ ಎನ್ನ ಕರ್ಮ ನಿರ್ಮಳವಾಯಿತ್ತು. ನಿಮ್ಮ ಪ್ರಸಾದದಿಂದಲಾನು ಭವಗೆಟ್ಟೆ ನೋಡಯ್ಯ. ಮನ ಪರುಷ, ದೃಷ್ಟಿ ಪರುಷ, ಭಾವ ಪರುಷ ಲಿಂಗ ಗಣಂಗಳು. ಕೂಡಲಸಂಗಮದೇವ ನಿಮ್ಮ ಶರಣರನು ಭಾವದಿಂದಲಾನು ಸುಖಿಯಾದೆನಯ್ಯ.

೧೦೩. ಮರುಳ ಕಂಡ ಕನಸಿನ ಪರಿಯಂತೆ ಶಿವಾಚಾರ. ಕರಿಯು ಕನ್ನಡಿಯೊಳಡಗಿದಂತಯ್ಯ. ಗುಣಿ ಅವಗುಣಿಯೊಡನಾಡಿದರೆ, ಅದೇ ಆತನ ಕರ್ಮದ ಫಲ ನೋಡಾ. ಕೂಡಲಸಂಗಮದೇವನ ಶರಣರ ಅನುಭಾವ ಭವದುಃಖಿಗಳಿಗೆ ವೇದ್ಯವಾಗದು.

೧೦೪. ಇರುಳೆಂದೇನೋ ಕುರುಡಂಗೆ? ಹಗಲೆಂದೇನೋ ಕುರುಡಂಗೆ? ತಾಳವ ಬಾರಿಸಿದರೇನಯ್ಯ ? ಪಂಚ ಮಹಾಶಬುದವ ಬಾರಿಸಿದರೇನೋ ಕಿವುಡಂಗೆ, ಕೂಡಲಸಂಗಮದೇವಯ್ಯನ ಪಥವಿನ್ನಾವುದೆಂದರಿಯದಂಗೆ ?

೧೦೫. ಆದಿಯಲ್ಲಿ ಶಿವಬೀಜವಿಲ್ಲದವರಿಗೆ ವೇದ್ಯವಾಗದು. ಶಿವಜ್ಞಾನ, ಶಿವಭಕ್ತಿ, ಲಿಂಗಸ್ಥಲವಳವಡದು. ಜಂಗಮಸ್ಥಲವಳವಡದು. ಪಾದೋದಕಸ್ಥಲವಳವಡದು. ನರಕದಲ್ಲಿ ಬೀಳುವ ಕರ್ಮಿಗಳಿಗೆ ಕೂಡಲಸಂಗನ ಶರಣರನುಭಾವ ನೆಲೆಗೊಳ್ಳದು.

೧೦೬. ಗುರಿ ತಾಗಿದ ಮೃಗವು ಒಂದಡಿಯನಿಡುವುದೇ ಅಯ್ಯ? ತನುವ ತಾಗಿದ ಸುಖವು ಅಗಲುವುದೇ ಅಯ್ಯ? ಕೂಡಲಸಂಗನ ಶರಣರ ಅನುಭಾವವರಿದವರ ಮರಳಿ ಮರ್ತ್ಯರೆಂದೆನಬಹುದೇ?

೧೦೭. ಎನಗಾರು ಇಲ್ಲ, ಎನಗಾರು ಇಲ್ಲವೆಂಬರು. ಬಾಣನವ ನಾನು. ಮಯೂರನವ ನಾನು. ಕಾಳಿದಾಸನವ ನಾನು. ಕಕ್ಕಯ್ಯ ಹಿರಿಯಯ್ಯ ಚಿಕ್ಕಯ್ಯ ಚೆನ್ನಯ್ಯ ಎತ್ತಿ ಮುದ್ದಾಡಿಸಿದರೆನ್ನ ಕೂಡಲಸಂಗಮದೇವಾ.

೧೦೮. ಅಸಂಬಂಧ ಸಂಬಂಧವಾಯಿತ್ತು, ಲಿಂಗಸಾರಾಯರ ಸನುಮತದಿಂದ. ಉತ್ತಮ ಮಧ್ಯಮವ ಕೆಡಿಸಿತ್ತು, ಏಕೋ ಸತಿಪತಿಗುಣದಿಂದ. ಗರುವರ ಗರುವತನ ಕೂಡಲಸಂಗಯ್ಯನ ಅನುಭಾವದಿಂದ.

೧೦೯. ಗೀತವ ಹಾಡಿದರೇನು, ಶಾಸ್ತ್ರ ಪುರಾಣಗಳ ಕೇಳಿದರೇನು, ವೇದ ವೇದಾಂತವ ನೋಡಿದರೇನು, ಮನ ಒಲಿದು ಲಿಂಗ ಜಂಗಮವ ಪೂಜಿಸಲರಿಯದವರು? ಎಲ್ಲರಲ್ಲಿಯೂ ಅನುಭಾವಿಯಾದರೇನು? ಭಕ್ತಿ ಇಲ್ಲದವರನೊಲ್ಲ ಕೂಡಲಸಂಗಮದೇವ.

೧೧೦. ಬಚ್ಚಲ ನೀರು ತಿಳಿದಿದ್ದರೇನು? ಸಲ್ಲದ ಹೊನ್ನು ಮತ್ತೆಲ್ಲಿದ್ದರೇನು? ಆಕಾಶದ ಮಾವಿನ ಫಲವೆಂದರೇನು? ಕೊಯ್ಯಲಿಲ್ಲ, ಮೆಲಲಿಲ್ಲ. ಕೂಡಲಸಂಗನ ಶರಣರ ಅನುಭಾವವಿಲ್ಲದವರೆಲ್ಲಿದ್ದರೇನು, ಎಂತಾದರೇನು?

೧೧೧. ಏನಿದ್ದರೇನಿದ್ದರೊಲ್ಲದು ನಿಮ್ಮನುಭಾವಕ್ಕೆನ್ನ ಮನವು. ಡಂಭಕನೆಂಬುವ ನಾನು ಕಂಡಯ್ಯ. ಕೂಡಲಸಂಗನ ಪೂಜಿಸಿ, ಮಾನವರಾಸೆ ಬಿಡದಾಗಿ.

೧೧೨. ಇಂದು ಹುಟ್ಟಿದ ಕೂಸಿಂಗೆ ಇಂದೇ ಜವ್ವನವಾಯಿತ್ತಯ್ಯಾ! ಆ ಕೂಸು ಬೀದಿಯಲ್ಲಿ ಒತ್ತಿಗೊಳಲು ನಿಂದಿತ್ತಯ್ಯಾ! ಇದರ ಸಂಗಸುಖದನುಭಾವವ ಕೂಡಲಸಂಗಮದೇವ ತಾನೇ ಬಲ್ಲ.

೧೧೩. ಪರಮತತ್ವದ ನಿಜ ಸಂಯುಕ್ತರ ಆನು ನೀನೆಂಬ ಶಬ್ದ ಸುಖಿಗಳ ತೋರಾ ಎನಗೆ. ಮಹಾನುಭಾವರ ತೋರಾ ಎನಗೆ. ಲಿಂಗೈಕ್ಯರ ಲಿಂಗಸುಖಿಗಳ ಲಿಂಗಗೂಡಾಗಿಪ್ಪ ಲಿಂಗಾನುಭಾವಿಗಳ ತೋರಾ ಎನಗೆ. ಅಹೋರಾತ್ರೆ ನಿಮ್ಮ ಶರಣರ ಸೇವೆಯಲ್ಲಿರಿಸಾ ಕೂಡಲಸಂಗಮದೇವಾ.

೧೧೪. ಕಾಮಸಂಗವಳಿದು, ಅನುಭಾವಸಂಗದಲುಳಿದವರ ಅಗಲಲಾರೆನು. ಶಿವಂಗೆ ಮಿಗೆ ಒಲಿದವರನು ನಾನು ಅಗಲಲಾರೆನು ಕಾಣಾ ಕೂಡಲಸಂಗಮದೇವಾ.

---



## (೧೦) ಶರಣರ ಸಾನ್ನಿಧ್ಯವನ್ನು ಅಪೇಕ್ಷಿಸು.

೧೧೫. ಸಟೆ ಇಲ್ಲದಂತೆ, ಪ್ರಪಂಚು ಇಲ್ಲದಂತೆ, ವೈಶಿಕವಿಲ್ಲದಂತೆ, ನಡಿಸಯ್ಯಾ ಲಿಂಗ ತಂದೆ. ಒಂದು ನಿಮಿಷವಾದರೆಯೂ ನಿಮ್ಮ ಶರಣರ ಸಂಗದಲ್ಲಿರಿಸಯ್ಯಾ. ಬೇರೆ ಮತ್ತೆ ಅನ್ಯವ ತೋರದಿರಯ್ಯಾ. ಹೊಲಬುಗೆಟ್ಟೆನಯ್ಯಾ ಕೂಡಲಸಂಗಮದೇವಾ.

೧೧೬. ಅಯ್ಯಾ. ನಿಮ್ಮ ಮಹಾಪ್ರತಿಗಳನಗಲಿ ಬದುಕಲಾರೆನು. ಶಿವಧೋ ಶಿವಧೋ. ಕಂಗಳಶ್ರುಗಳಲ್ಲಿ ಮುಂದುಗಾಣೆನು. ಲಿಂಗಸಂಗಿಗಳನಗಲಿ ಆನೆಂತು ಬದುಕುವೆನು ಕೂಡಲಸಂಗಮದೇವಾ?

೧೧೭. ಆವಾವ ಭಾವದಲ್ಲಿ ಮಾಡಿ ಕೂಡಿಹೆನೆಂಬವರ ಬಾಗಿಲ ತೋರಯ್ಯ! ತನುವನೊಪ್ಪಿಸಿದವರ, ಮನವನೊಪ್ಪಿಸಿದವರ, ಧನವನೊಪ್ಪಿಸಿದವರ ಬಾಗಿಲ ತೋರಯ್ಯ! ಇವೆಲ್ಲವನೊಪ್ಪಿಸಿ ಜಂಗಮವೆನ್ನವರೆನ್ನವರೆಂಬವರ ಕೆರಹ ಹೊತ್ತಿರಿಸೆನ್ನ ಕೂಡಲಸಂಗಮದೇವಾ.

೧೧೮. ಚಂದ್ರನ ಶೈತ್ಯದಲು ಬೆಳೆವ ಕಾಯಕ್ಕೆ ಬೆಳದಿಂಗಳ ಬಯಸುವ ಹಂಗೇಕಯ್ಯ? ಶರಣರ ಸಂಗದಲ್ಲಿದ್ದು ಶಿವನ ಬೇಡುವ ಹಂಗೇಕಯ್ಯ? ಕೂಡಲಸಂಗನ ಶರಣರು ಬಂದು ತಮ್ಮವನೆಂದರೆ, ಸಾಲದೇ ಅಯ್ಯಾ?

೧೧೯. ಸೂರ್ಯನುದಯ ತಾವರೆಗೆ ಜೀವಾಳ. ಚಂದ್ರಮನುದಯ ನೈದಿಲೆಗೆ ಜೀವಾಳ. ಕೂಪರ ತಾವಿನಲ್ಲಿ ಕೂಟ ಜೀವಾಳವಯ್ಯ. ಒಲಿದ ತಾವಿನಲ್ಲಿ ನೋಟ ಜೀವಾಳವಯ್ಯ. ಕೂಡಲಸಂಗನ ಶರಣರ ಬರವೆನಗೆ ಪ್ರಾಣ ಜೀವಾಳವಯ್ಯ.

೧೨೦. ಅರಸು ವಿಚಾರ ಸಿರಿಯು ಶೃಂಗಾರ ಸ್ಥಿರವಲ್ಲ ಮಾನವ. ಕೆಟ್ಟಿತ್ತು, ಕಲ್ಯಾಣ ಹಾಳಾಯಿತ್ತು ನೋಡಾ! ಒಬ್ಬ ಜಂಗಮದ ಅಭಿಮಾನದಿಂದ ಚಾಳುಕ್ಯರಾಯನ ಆಳಿಕೆ ತೆಗೆಯಿತ್ತು ಸಂದಿತ್ತು, ಕೂಡಲಸಂಗಮದೇವ ನಿಮ್ಮ ಕಳವಳಿಕೆಗೆ.

೧೨೧. ಸಾಸಿವೆಯ ಮೇಲೆ ಸಾಗರವರಿದಂತಾಯಿತ್ತಯ್ಯಾ! ಆನಂದದಿಂದೆ ನಲಿನಲಿದಾಡುವೆನು. ಆನಂದದಿಂದೆ ಕುಣಿಕುಣಿದಾಡುವೆನು. ಕೂಡಲಸಂಗನ ಶರಣರು ಬಂದರೆ ಉಬ್ಬಿ ಕೊಬ್ಬಿ ಹರುಷದಲೋಲಾಡುವೆನು.

೧೨೨. ಹೊಲಬುಗೆಟ್ಟ ಶಿಶು ತನ್ನ ತಾಯನರಸುವಂತೆ, ಬಳಿವಪ್ಪಿದ ಪಶು ತನ್ನ ಹಿಂಡನರಸುವಂತೆ, ಬಯಸುತಿರ್ದೆನಯ್ಯ ನಿಮ್ಮ ಶರಣರ ಬರವನು. ಬಯಸುತಿರ್ದೆನಯ್ಯ ನಿಮ್ಮ ಭಕ್ತರ ಬರವನು. ದಿನಕರನುದಯಕ್ಕೆ ಕಮಳ ವಿಕಸಿತವಾದಂತೆ ಎನಗೆ ನಿಮ್ಮ ಶರಣರ ಬರವು ಕೂಡಲಸಂಗಮದೇವಾ.

೧೨೩. ಅನುದಿನ ಮನಮುಟ್ಟಿ ಧನ್ಯನಯ್ಯ. ನಮ್ಮಯ್ಯ, ನಮ್ಮಯ್ಯ! ನಿಮ್ಮ ಧರ್ಮದ ಕವಿಲೆಯಾನಯ್ಯಾ. ಕೂಡಲಸಂಗಮದೇವ ನಿಮ್ಮ ಶರಣರ ಮನೆಯ ಮಗ ನಾನಯ್ಯ

೧೨೪. ಅಡವಿಯಲೊಬ್ಬ ಕಡು ನೀರಡಿಸಿ, ಎಡೆಯಲ್ಲಿ ನೀರ ಕಂಡಂತಾಯಿತ್ತಯ್ಯಾ. ಕುರುಡ ಕಣ್ಣ ಹಡೆದಂತೆ, ಬಡವ ನಿಧಾನವ ಹಡೆದಂತಾಯಿತ್ತಯ್ಯಾ. ನಮ್ಮ ಕೂಡಲಸಂಗನ ಶರಣರ ಬರವೆನ್ನ ಪ್ರಾಣ ಕಂಡಯ್ಯಾ.

೧೨೫. ಜಜ್ಜನೆ ಜರಿದೆನು, ಜಜ್ಜನೆ ಜರಿದೆನು, ಜಜ್ಜನೆ ಜರಿದೆ ನೋಡಯ್ಯ! ಬಿಬ್ಬನೆ ಬಿರಿದೆನು, ಬಿಬ್ಬನೆ ಬಿರಿದೆನು, ಬಿಬ್ಬನೆ ಬಿರಿದೆ ನೋಡಯ್ಯ! ನಾನೊಬ್ಬನೆ ಉಳಿದೆನು, ನಾನೊಬ್ಬನೆ ಉಳಿದೆನು, ಕೂಡಲಸಂಗಮದೇವಾ ನಿಮ್ಮ ಶರಣರನಗಲಿದ ಕಾರಣ.

---

## (೧೩) ಶುದ್ಧಮನಸ್ಸುಳ್ಳವನಾಗಿರು

೧೨೬. ಕರಿ ಘನ, ಅಂಕುಶ ಕಿರಿದೆನ್ನಬಹುದೇ? ಬಾರದಯ್ಯಾ. ಗಿರಿ ಘನ, ವಜ್ರ ಕಿರಿದೆನ್ನಬಹುದೇ? ಬಾರದಯ್ಯ. ತಮ್ಮಂಧ ಘನ, ಜ್ಯೋತಿ ಕಿರಿದೆನ್ನಬಹುದೇ? ಬಾರದಯ್ಯಾ. ಮರಹು ಘನ, ನಿಮ್ಮ ನೆನೆವ ಮನ ಕಿರಿದೆನ್ನಬಹುದೇ? ಬಾರದಯ್ಯಾ ಕೂಡಲಸಂಗಮದೇವಾ.

೧೨೭. ಜೇಳಿಂಗೆ ಬಸುರಾಯಿತ್ತೇ ಕಡೆ. ಬಾಳೆಗೆ ಫಲವಾಯಿತ್ತೇ ಕಡೆ ನೋಡಾ. ರಣರಂಗದಲ್ಲಿ ಕಾದುವ ಓಲೆಕಾರಂಗೆ ಓಸರಿಸಿತ್ತೇ ಕಡೆ. ಮಾಡುವ ಭಕ್ತಂಗೆ ಮನ ಹೀನವಾದರೆ ಅದೇ ಕಡೆ ಕೂಡಲಸಂಗಮದೇವಾ.

೧೨೮. ಓತಿ ಬೇಲಿವರಿದಂತೆ ಎನ್ನ ಮನವಯ್ಯ. ಹೊತ್ತಿಗೊಂದು ಪರಿಯಪ್ಪ ಗೋಸುಂಬೆಯಂತೆನ್ನ ಮನವು. ಬಾವಲ ಬಾಳುವೆಯಂತೆನ್ನ ಮನವು. ನಡುವಿರುಳೆದ್ದ ಕುರುಡಂಗೆ ಅಗುಸೆಯಲ್ಲಿ ಬೆಳಗಾದಂತೆ, ಎನಗಿಲ್ಲದ ಭಕ್ತಿಯ ಬಯಸಿದರುಂಟೇ ಕೂಡಲಸಂಗಮದೇವಾ?

೧೨೯. ಹುಲಿಯ ಹಾಲು ಹುಲಿಗಲ್ಲದೆ, ಹೊಲದ ಹುಲ್ಲಿಗೆ ಉಣಬಾರದು. ಕಲಿಯ ಕಾಲ ತೊಡರು ಛಲದಾಳಿಗಲ್ಲದೆ, ಇಕ್ಕಬಾರದು. ಅಳಿಮನದಾಸೆಯವರ ಮೂಗ ಹಲ್ಲುದೋರ ಕೊಯ್ವ ಕೂಡಲಸಂಗಮದೇವಾ?

೧೩೦. ತನು ಶುಚಿ ಇಲ್ಲದವನ ದೇಹಾರವೇಕೆ? ದೇವರು ಕೊಡನೆಂಬ ಭ್ರಾಂತದೇಕೆ? ಮನಕ್ಕೆ ಮನವೇ ಸಾಕ್ಷಿ ಸಾಲದೇ ಲಿಂಗತಂದೆ? ಹೇಗೆ ಮನ ಹಾಗೆ ಘನ ತಪ್ಪದು ಕೂಡಲಸಂಗಮದೇವಾ.

೧೩೧. ಹೊರಗೆ ಹೂಸಿ ಏವೆನಯ್ಯಾ, ಒಳಗೆ ಶುದ್ಧವಿಲ್ಲದನ್ನಕ್ಕ? ಮಣಿಯ ಕಟ್ಟಿ ಏವೆನಯ್ಯಾ, ಮನ ಮುಟ್ಟದನ್ನಕ್ಕ? ನೂರನೋದಿ ಏವೆನಯ್ಯಾ ನಮ್ಮ ಕೂಡಲಸಂಗಮದೇವರ ಮನ ಮುಟ್ಟದನ್ನಕ್ಕ?



೧೩೨. ಆವಳ ವಚನ ಬೆಲ್ಲದಂತೆ. ಹೃದಯದಲ್ಲಿಪ್ಪುದೆಲ್ಲ ನಂಜು ಕಂಡಯ್ಯ! ಕಂಗಳಲೊಬ್ಬನ ಕರೆವಳು. ಮನದಲೊಬ್ಬನ ನೆನೆವಳು. ಕೂಡಲಸಂಗಮದೇವ ಕೇಳಯ್ಯ ಮಾನಿಸಗಳ್ಳಿಯ ನಂಬದಿರಯ್ಯ

೧೩೩. ಕುಲಮದಕ್ಕೆ ಹೋರಿ, ಜಂಗಮಭೇದವ ಮಾಡುವೆ. ಫಲವೇನು? ನಿತ್ಯಲಿಂಗಾರ್ಚನೆ ಪ್ರಾಯಶ್ಚಿತ್ತ. ಛಲಮದಕ್ಕೆ ಹೋರಿ, ಲಿಂಗ ಭೇದವ ಮಾಡುವೆ. ಜಂಗುಳಿಯ ಕಾವ ಗೋವಳ ಹಲ ಪಶುವ ನಿವಾರಿಸುವಂತೆ, ತನು ಭಕ್ತನಾಯಿತ್ತೆನ್ನ ಮನ ಭವಿ, ಕೂಡಲಸಂಗಮದೇವಾ.

೧೩೪. ತನು, ಮನ, ಧನವ ಹಿಂದಿಕ್ಕಿಕೊಂಡು, ಮಾತಿನ ಬಣಬೆಯ ಮಳಲೊಟ್ಟೆಯ ನುಡಿವರು ನೀವೆಲ್ಲ ಕೇಳಿರೆ. ತಲೆ ಇಲ್ಲದ ಕೊಂಡು ಹೊಳ್ಳು ಹಾರುವದಲ್ಲದೆ, ಗುರಿಯ ತಾಗಬಲ್ಲುದೇ? ಮಾಯಾಪ್ರಪಂಚು ಹಿಂಗಿ ಮನದ ಗಂಟು ಬಿಡದನ್ನಕ್ಕ ಕೂಡಲಸಂಗಮದೇವನೆಂತೊಲಿವನಯ್ಯ?

೧೩೫. ತತ್ವವನರಿದೆನೆಂದು ಮೃತ್ಯುವ ಕರೆದುಕೊಂಡೆನಯ್ಯ ನಾನೆತ್ತ ಬಲ್ಲೆ, ನಿಮ್ಮ ಶರಣರಂತುವನು? ನಾನೆತ್ತ ಬಲ್ಲೆ, ನಿಮ್ಮ ಪ್ರಮಥರಂತುವನು? ಸರ್ವಾಪರಾಧಿ ನಾನು. ಎನ್ನ ಮನದ ಕೊನೆಯ ಸೂತಕ ಹಿಂಗದು ಕೂಡಲಸಂಗಮದೇವಾ.

೧೩೬. ಮುಂಗಯ್ಯ ಕಂಕಣಕ್ಕೆ ಕನ್ನಡಿಯ ತೋರುವಂತೆ, ಎನ್ನ ಮನವು ನಿಧಾನವನೊಲ್ಲದೆ ಜಲಗರವ ಮೆಚ್ಚಿತ್ತು ನೋಡಾ. ನಾಯಿಂಗೆ ನಾರಿವಾಣವಕ್ಕುದೇ ಕೂಡಲಸಂಗಮದೇವಾ?

೧೩೭. ಲೋಕದ ಡೊಂಕ ನೀವೇಕೆ ತಿದ್ದುವಿರಿ? ನಿಮ್ಮ ನಿಮ್ಮ ತನುವ ಸಂತಯಿಸಿಕೊಳ್ಳಿ. ನಿಮ್ಮ ನಿಮ್ಮ ಮನವ ಸಂತಯಿಸಿಕೊಳ್ಳಿ. ನೆರೆ ಮನೆಯ ದುಃಖಕ್ಕೆ ಅಳುವರ ಮೆಚ್ಚ ಕೂಡಲಸಂಗಮದೇವ.

೧೩೮. ಅಡಿಗಡಿಗೆ ಎನ್ನ ಮನವ ಜಡಿದು ನೋಡದಿರಯ್ಯ! ಬಡವನೆಂದು ಎನ್ನ ಕಾಡದಿರಯ್ಯ! ಎನಗೆ ಒಡೆಯರುಂಟು ಕೂಡಲಸಂಗನ ಶರಣರು.

---

## (೧೪) ಮನಸ್ಸಿಗೆ ನಿವೇದನ.

೧೩೯. ಕೋಟಾನುಕೋಟಿ ಜಪವ ಮಾಡಿ ಕೋಟಲೆಗೊಳಲದೇಕೆ ಮನವೇ? ಕಿಂಚಿತ್ತು ಗೀತ ಒಂದನಂತ ಕೋಟಿ ಜಪ. ಜಪವೆಂಬುದೇಕೆ ಮನವೇ? ಕೂಡಲಸಂಗನ ಶರಣರ ಕಂಡು ಆಡಿ ಹಾಡಿ ಬದುಕು ಮನವೇ.

೧೪೦, ಸುರರ ಬೇಡಿದರಿಲ್ಲ. ನರರ ಬೇಡಿದರಿಲ್ಲ. ಬರಿದೆ ಧೃತಿಗೆಡಬೇಡ ಮನವೇ. ಆರನಾದಡೆಯೂ ಬೇಡಿ ಬೇಡಿ ಬರಿದೆ ಧೃತಿಗೆಡಬೇಡ ಮನವೇ. ಕೂಡಲಸಂಗಮದೇವನಲ್ಲದೆ, ಆರ ಬೇಡಿದರಿಲ್ಲ ಮನವೇ.

೧೪೧. ಮರನನೇರಿದ ಮರ್ಕಟನಂತೆ ಹಲವು ಕೊಂಬಿಂಗೆ ಹಾರುತ ಲಿಪ್ಪೇನೆ. ಬೆಂದ ಮನವ ನಾನೆಂತು ನಂಬುವೆನಯ್ಯಾ! ಎಂತು ನೆಚ್ಚುವೆನಯ್ಯಾ! ಎನ್ನ ತಂದೆ ಕೂಡಲಸಂಗಮದೇವನಲ್ಲಿಗೆ ಹೋಗಲೀಯದಯ್ಯಾ.

೧೪೨. ಒಡೆಯನ ಕಂಡರೆ, ಕಳ್ಳನಾಗದಿರಾ ಮನವೇ. ಭವದ ಬಾಧೆಯ ತಪ್ಪಿಸಿಕೊಂಬರೆ, ನೀನು ನಿಯತನಾಗಿ ಭಯಭರಿತನಾಗಿ ಅಹಂಕಾರಿಯಾಗದೆ ಶರಣೆನ್ನು ಮನವೇ. ಕೂಡಲಸಂಗನ ಶರಣರಲ್ಲಿ ಭಕ್ತಿಯ ನೂಸುವರೆ, ಕಿಂಕರನಾಗಿ ಬದುಕು ಮನವೇ.

೧೪೩. ಆಡಿ ಅಳುಪದಿರಾ. ಲೇಸ ಮಾಡಿ ಮರುಗದಿರಾ. ಎಲೆ ಮನವೇ ಕೂಡಿ ತಪ್ಪದಿರಾ. ಬೇಡಿದವರಿಗೆ ಇಲ್ಲೆನ್ನದಿರಾ ಕಂಡಾ! ನಾಡ ಮಾತ ಬೇಡ. ಸೆರೆಗೊಡ್ಡಿ ಬೇಡು ಕೂಡಲಸಂಗನ ಶರಣರ.

೧೪೪. ತನ್ನಿಚ್ಚೆಯ ನುಡಿವರೆ ಮೆಚ್ಚುವುದೀ ಮನವು. ಇದಿರಿಚ್ಚೆಯ ನುಡಿವರೆ, ಮೆಚ್ಚದೀ ಮನವು. ಕೂಡಲಸಂಗನ ಶರಣರ ನಚ್ಚದ ಮೆಚ್ಚದ ಮನವ ಕಿಚ್ಚಿನೊಳಗಿಕ್ಕು.

೧೪೫. ಕೆಲಕ್ಕೆ ಶುದ್ಧನಾದೆನಲ್ಲದೆ ಎನ್ನ ಮನಕ್ಕೆ ಶುದ್ಧನಾಗೆನೇಕಯ್ಯ? ಕೈಮುಟ್ಟಿ ಪೂಜಿಸುವೊಡೆ, ಎನ್ನ ಕೈ ಶುದ್ಧವಲ್ಲಯ್ಯ! ಮನಮುಟ್ಟಿ ಪೂಜಿಸುವೊಡೆ, ಎನ್ನ ಕೈ ಶುದ್ಧವಲ್ಲಯ್ಯ! ಮನಮುಟ್ಟಿ ಪೂಜಿಸುವೊಡೆ, ಎನ್ನ ಮನ ಶುದ್ಧವಲ್ಲಯ್ಯ! ಭಾವಶುದ್ಧವಾದರೆ, ಕೂಡಲಸಂಗಯ್ಯನಿತ್ತ ಬಾ ಎಂದು ಎತ್ತಿಕೊಳ್ಳನೇಕಯ್ಯ?

೧೪೬. ಹಂಜರ ಬಲ್ಲಿತ್ತೆಂದು ಅಂಜದ ಓದುವ ಗಿಳಿಯೇ, ಎಂದೆಂದು ಅಳಿಯೆನೆಂದು ಗುಡಿಗಟ್ಟಿದೆಯಲ್ಲಾ! ನಿನ್ನ ಮನದಲ್ಲಿ ಮಾಯಾಮಂಜರ ಕೊಲುವರೆ, ನಿನ್ನ ಹಂಜರ ಕಾಯ್ವುದೇ ಕೂಡಲಸಂಗಮದೇವನಲ್ಲದೆ?

೧೪೭. ಮನವೇ, ನಿನ್ನ ಜನ್ಮದ ಪರಿಭವವ ಮರೆದೆಯಲ್ಲಾ ಮನವೇ! ಲಿಂಗವ ನಂಬು ಕಂಡಾ. ಜಂಗಮವ ನಂಬು ಕಂಡಾ ಮನವೇ! ಕೂಡಲ ಸಂಗಮದೇವರ ಬಿಡದೆ ಬೆಂಬತ್ತು ಕಂಡಾ ಮನವೇ.

೧೪೮. ಸುಚಿತ್ತದಿಂದ ನಿಮ್ಮ ನೆನೆಯಲೊಲ್ಲದೆನ್ನ ಮನ. ಎಂತಯ್ಯ? ಎನಗಿನ್ನಾವುದು ಗತಿ? ಎಂತಯ್ಯ? ಎನಗಿನ್ನಾವುದು ಮತಿ? ಎಂತಯ್ಯ? ಹರಹರ ಕೂಡಲಸಂಗಮದೇವಾ ಮನವ ಸಂತೈಸೆನ್ನ.

೪೯. ಬೆಲ್ಲವ ತಿಂದ ಕೋಡಗನಂತೆ, ಸಿಹಿಯ ನೆನೆಯದಿರಾ ಮನವೇ. ಕಬ್ಬ ತಿಂದ ನರಿಯಂತೆ ಹಿಂದನೆಣಿಸದಿರಾ ಮನವೇ. ಗಗನವನಡರಿದ ಕಾಗೆಯಂತೆ, ದೆಸೆದೆಸೆಗೆ ಹಂಬಲಿಸದಿರಾ ಮನವೇ. ಕೂಡಲಸಂಗನ ಶರಣರ ಕಂಡು ಲಿಂಗವೆಂದು ನಂಬು ಮನವೇ.



೧೫೦. ತನ್ನ ವಿಚಾರಿಸಲೊಲ್ಲದು. ಇದಿರ ವಿಚಾರಿಸಹೋಹುದೀ ಮನವು. ಏನ ಮಾಡುವೆನೀ ಮನವನು? ಎಂತು ಮಾಡುವೆನೀ ಮನವನು, ಕೂಡಲಸಂಗನ ಶರಣರ ನಚ್ಚದ ಮಚ್ಚದ ಮನವನು?

೧೫೧. ಕುದುರನೇಸು ತೊಳೆದರೆಯು ಕೆಸರು ಮಾಬುದೇ? ಎನ್ನ ಕಾಯದಲುಳ್ಳ ಅವಗುಣಂಗಳ ಕಳೆದು, ಕೃಪೆಯ ಮಾಡಯ್ಯ! ಕಂಬಳಿಯಲ್ಲಿ ಕಣಕವ ನಾದಿದಂತೆ ಕಾಣಿರೇ ಎನ್ನ ಮನ. ಕೂಡಲಸಂಗಮದೇವ ನಿಮಗೆ ಶರಣೆಂದು ಶುದ್ಧನಯ್ಯ.

೧೫೨. ಬಂದ ಯೋನಿಯನರಿದು ಸಲಹೆನ್ನ ತಂದೆ. ಬೆಂದ ಮನವೆನ್ನ ಗತಿಗೆಡಿಸಿ ಕಾಡಿತ್ತು. ಬೆಂದ ಮನವೆನ್ನ ಮತಿಗೆಡಿಸಿ ಕಾಡಿತ್ತು. ಎನ್ನ ತಂದೆ ಕೂಡಲಸಂಗಮದೇವ ಮಾಣಿಸು ನಿಮ್ಮ ಧರ್ಮ.

೧೫೩. ಕೊಂಬೆಯ ಮೇಲಣ ಮರ್ಕಟನಂತೆ, ಲಂಘಿಸುವುದೆನ್ನ ಮನವು. ನಿಂದಲ್ಲಿ ನಿಲ್ಲಲೀಯದೆನ್ನ ಮನವು. ಹೊಂದಿದಲ್ಲಿ ಹೊಂದಲೀಯದೆನ್ನ ಮನವು. ಕೂಡಲಸಂಗಮದೇವಾ ನಿಮ್ಮ ಚರಣಕಮಲದಲ್ಲಿ ಭ್ರಮರನಾಗಿರಿಸು ನಿಮ್ಮ ಧರ್ಮ.

೧೫೪. ಭವಭವದಲ್ಲಿ ಎನ್ನ ಮನವು ನೀವಲ್ಲದೆ, ಭವಭವದಲೆನ್ನ ಮನವು ಸಿಲುಕದೆ, ಭವರಾಟಣದೊಳು ತುಂಬದೆ ಕೆಡಹದೆ, ಭವರೋಗ ವೈದ್ಯ ನೀನು, ಭವ ರಹಿತ ನೀನು, ಅವಧಾರು ಕರುಣಿಸುವುದು ಕೂಡಲ ಸಂಗಮದೇವಾ.

೧೫೫, ಇಲ್ಲವೆಯ ಮೇಲೆ ಕಂಚೊಡೆದಂತೆ, ಬಡಮನವೆನ್ನ ಕಾಡಿಹಿತಯ್ಯ. ಮತಿ ಇಲ್ಲದ ಮರುಳ ನಾನಯ್ಯ! ಭಕ್ತಿಯಿಲ್ಲದ ಬಡವ ನಾನು! ನಿಮ್ಮ ನೆನಹಿಲ್ಲದೆ ನಿರ್ಭಾಗ್ಯನಾದೆ. ಎನಗೆ ನೀ ಕರುಣಿಸಾ ಕೂಡಲ ಸಂಗಮದೇವಾ.

೧೫೬. ಅಂದಣವನೇರಿದ ಸೊಣಗನಂತೆ, ಕಂಡಡೆ ಬಿಡದು ತನ್ನ ಮುನ್ನಿನ ಸ್ವಭಾವವನು. ಸುಡು ಸುಡು. ಮನವಿದು ವಿಷಯಕ್ಕೆ ಹರಿವುದು. ಮೃಡ, ನಿಮ್ಮನನುದಿನ ನೆನೆಯಲೀಯದು. ಎನ್ನೊಡೆಯ ಕೂಡಲಸಂಗಮದೇವಾ, ನಿಮ್ಮ ಚರಣವ ನೆನೆವಂತೆ ಕರುಣಿಸು. ಸೆರೆಗೊಡ್ಡಿ ಬೇಡುವೆ ನಿಮ್ಮ ಧರ್ಮ.

## (೧೫) ಪರಮಾತ್ಮನನ್ನು ಧ್ಯಾನಿಸು.

೧೫೭. ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ. ಅಂಬುಜಕೆ ಭಾನುವಿನ ಉದಯದ ಚಿಂತೆ. ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ. ಎನಗೆ ನಮ್ಮ ಕೂಡಲಸಂಗಮದೇವನ ನೆನೆವ ಚಿಂತೆ.

೧೫೮. ಎನಗೆ ನಿಮ್ಮ ನೆನಹಾದಾಗವೇ ಉದಯ. ಎನಗೆ ನಿಮ್ಮ ಮರಹಾದಾಗವೇ ಅಸ್ತಮಾನ. ಎನಗೆ ನಿಮ್ಮ ನೆನಹವೇ ಜೀವ. ಎನಗೆ ನಿಮ್ಮ ನೆನಹವೇ ಪ್ರಾಣ, ಕಾಣಾ ತಂದೆ ಸ್ವಾಮಿ. ಎನ್ನ ಹೃದಯದಲ್ಲಿ ನಿಮ್ಮ ಚರಣದುಂಡಿಗೆಯನೊತ್ತಯ್ಯಾ! ವದನದಲ್ಲಿ ಷಡಕ್ಷರಿಯ ಬರೆಯಯ್ಯಾ ಕೂಡಲ ಸಂಗಮದೇವಾ.

೧೫೯. ಆಡಿ ಕಾಲು ದಣಿಯವು. ನೋಡಿ ಕಣ್ಣು ದಣಿಯವು. ಹಾಡಿ ನಾಲಿಗೆ ದಣಿಯದು. ಇನ್ನೇನೆನಿನ್ನೇನೆ? ನಾ ನಿಮ್ಮ ಕೆಯ್ಯಾರೆ ಪೂಜಿಸಿ ಮನದಣಿಯಲೊಲ್ಲದಿನ್ನೇನೆನಿನ್ನೇನೆ? ಕೂಡಲಸಂಗಮದೇವ ಕೇಳಯ್ಯ, ನಿಮ್ಮ ಉದರವ ಬಗಿದಾನು ಹೊಗುವ ಭರವೆನಗೆ.

೧೬೦. ಕಾಮುಸಂಗ ನಿಸ್ಸಂಗವಾಗಿ, ಇನ್ನಾವ ಸಂಗವನರಿಯೆನಯ್ಯಾ. ಮಿಗೆ ಮಿಗೆ ಒಲಿದೆನಾಗಿ, ಅಗಲಲಾರೆನಯ್ಯ. ನಗೆಮೊಗದರಸ ಅವಧಾರು. ಕೂಡಲಸಂಗಮದೇವ ಬಗಿದು ಹೊಗುವೆ ನಾ ನಿಮ್ಮ ಮನವನು.

೧೬೧. ಸುರರು, ಕಿನ್ನರರು, ಕಿಂಪುರುಷರೆಂಬುವರಾರು ಬಲ್ಲರು? ಎನ್ನ ಚಿತ್ತವು ನಿಮ್ಮ ಮೇಲೆ ಸಂಗಯ್ಯ. ಎನ್ನ ಚಿತ್ತವು ನಿಮ್ಮ ಮೇಲೆ ಲಿಂಗಯ್ಯ. ಕೂಡಲಸಂಗಯ್ಯ ಅನ್ಯವೆಂಬುದನರಿಯೆನಯ್ಯ.

೧೬೨. ನೋಡಿ ನೋಡಿ ಲಿಂಗಧ್ಯಾನವೆನ್ನ ಮನ ರಾಗ ರಂಜನೆ. ಉತ್ಪತ್ತಿ ಸ್ಥಿತಿ ಲಯವು ನಿನಗೆಂದಾದವು? ರಾಗರಂಜನೆಯ ಪೂಜೆ ಎನ್ನ ಮನ. ಕೂಡಲ ಸಂಗಮದೇವ ಆಹಾ ಎನ್ನ ಮನವು!

೧೬೩. ಹೊನ್ನ ಹಾವುಗೆಯ ಮೆಟ್ಟಿದವನ, ನಿಡಿಯ ಮುಟ್ಟಿದ ಕೆಂಜಡೆಯವನ, ಮೈಯಲ್ಲಿ ವಿಭೂತಿಯ ಧರಿಸಿದವನ, ಕರದಲ್ಲಿ ಕಪಾಲವ ಪಿಡಿದವನ, ಅರ್ಧನಾರಿಯಾದವನ, ಬಾಣನ ಬಾಗಿಲ ಕಾಯ್ದವನ, ನಂಬಿಗೆ ಕುಂಟಣಿಯಾದವನ, ಜೋಳಂಗೆ ಹೊನ್ನ ಮಳೆಯ ಕರೆದವನ, ಎನ್ನ ಮನಕ್ಕೆ ಬಂದವನ, ಸದ್ಭಕ್ತರ ಹೃದಯದಲ್ಲಿಪ್ಪವನ, ಮಾಡಿದ ಪೂಜೆಯಲೊಪ್ಪವನ, ಕೂಡಲಸಂಗಯ್ಯನೆಂಬುವನ.

೧೬೪. ಅಂಕ ಕಳನೇರಿ ಕೈಮರೆದಿರ್ದಡೆ, ಮಾರಾಂಕ ಬಂದಿರುವುದ ಮಾಬನೇ? ನಿಮ್ಮ ನೆನೆವ ಮತಿ ಮರೆದಿರ್ದರೆ, ಪಾಪ ತನುವನಂಡಲೆಯದೆ ಮಾಬುದೆ? ಕೂಡಲಸಂಗಯ್ಯನ ನೆನೆದರೆ, ಪಾಪ ಉರಿಗೊಡ್ಡಿದರಗಿನಂತೆ ಕರಗುವುದಯ್ಯ!

---



## (೧೬) ಲಿಂಗಪೂಜೆಯಲ್ಲಿ ತಾದಾತ್ಮ್ಯಭಾವವು.

೧೬೫. ವಾರವೆಂದರಿಯೆ, ದಿನವೆಂದರಿಯೆ, ಏನೆಂದರಿಯೆನಯ್ಯಾ! ಇರುಳೆಂದರಿಯೆ, ಹಗಲೆಂದರಿಯೆ, ಏನೆಂದರಿಯೆನಯ್ಯಾ! ನಿಮ್ಮುವ ಪೂಜಿಸಿ ಎನ್ನುವ ಮರೆದೆ ಕೂಡಲಸಂಗಮದೇವಾ.

೧೬೬. ಎದೆ ಬಿರಿವನ್ನಕ್ಕ ಮನ ದಣಿವನ್ನಕ್ಕ ನಾಲಿಗೆ ನಲಿನಲಿದೋಲಾಡುವನ್ನಕ್ಕ ನಿಮ್ಮ ನಾಮಾಮೃತವ ತಂದಿರಿಸು ಕಂಡಯ್ಯಾ ಎನಗೆನ್ನ ತಂದೆ. ಬಿರಿ ಮುಗುಳಂತೆ ಎನ್ನ ಹೃದಯ ನಿಮ್ಮ ಶ್ರೀ ಚರಣದ ಮೇಲೆ ಬಿದ್ದರಳುಗೆ ಕೂಡಲಸಂಗಮದೇವಾ.

೧೬೭. ತಾಳ ಮಾನ ಸರಿಸವನರಿಯೆ. ಓಜೆ ಬಜಾವಣೆಯ ಲೆಕ್ಕವನರಿಯೆ. ಅಮೃತಗಣ ದೇವಗಣವನರಿಯೆ. ಕೂಡಲಸಂಗಮದೇವ ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ.

೧೬೮. ಅಂಗಯ್ಯೊಳಗಣ ಲಿಂಗವ ನೋಡುತ್ತ ಕಂಗಳು ಕಡೆಗೋಡಿ ವರಿವುತ್ತ ಸುರಿವುತ್ತ ಎಂದಿಪ್ಪೆನೋ? ನೋಟವೇ ಪ್ರಾಣವಾಗಿ ಎಂದಿಪ್ಪೆನೋ! ಕೂಟವೇ ಪ್ರಾಣವಾಗಿ ಎಂದಿಪ್ಪೆನೋ? ಎನ್ನ ಅಂಗವಿಕಾರದ ಸಂಗವಳಿದು ಕೂಲಸಂಗಯ್ಯ 'ಲಿಂಗ, ಲಿಂಗ' ಎನ್ನುತ್ತ?

೧೬೯. ಮನಮನ ಬೆರಸಿದಲ್ಲಿ, ತನು ಕರಗದಿದ್ದರೆ, ಸೋಂಕಿನಲ್ಲಿ ಪುಳಕಂಗಳು ಹೊರಹೊಮ್ಮದಿದ್ದರೆ, ಕಂಡಾಗಳಶ್ರುಜಲಂಗಳು ಸುರಿಯದಿದ್ದರೆ, ನುಡಿವಲ್ಲಿ ಗದ್ಗದಂಗಳು ಪೊಣ್ಮದಿದ್ದರೆ, ಕೂಡಲಸಂಗಮದೇವರ ಭಕ್ತಿಗಿದು ಚಿಹ್ನ. ಎನ್ನಲ್ಲಿ ಇಲ್ಲವಾಗಿ, ಆನು ಡಂಭಕ ಕಾಣಿರೇ.

೧೭೦. ಅಡಿಗಡಿಗೆ ಲಿಂಗವನಡರಿಯಡರಿ ನೋಡಿ ನೋಡಿ, ಕಂಗಳು ಕಡೆಗೋಡಿವರಿದವೆನಗಯ್ಯಾ. ಎನ್ನಶ್ರುಜಲಂಗಳು ಆಲಿಕಲ್ಲ ರೂಹಿನಂತೆ. ಅರಗಿನ ಪುತ್ತಳಿಯಂತೆ ತನು ಪುಳುಕಿತವಾದ ಬೆಮರು ಬಿಂದುಗಳೆಲ್ಲ. ಕೂಡಲ ಸಂಗನ ದರ್ಶನ ಸ್ಪರ್ಶನದಿಂದ ಮನ ಒಲಿದು ನೆರೆವ ಭರವನೇನ ಹೇಳುವೆನಯ್ಯಾ.

೧೭೧. ವಚನದಲ್ಲಿ ನಾಮಾಮೃತ ತುಂಬಿ, ನಯನದಲ್ಲಿ ನಿಮ್ಮ ಮೂರುತಿ ತುಂಬಿ, ಮನದಲ್ಲಿ ನಿಮ್ಮ ನೆನಹು ತುಂಬಿ, ಕಿವಿಯಲ್ಲಿ ನಿಮ್ಮ ಕೀರ್ತಿ ತುಂಬಿ, ಕೂಡಲಸಂಗಮದೇವ ನಿಮ್ಮ ಚರಣಕಮಲದೊಳಗಾನುತುಂಬಿ.

---

## (೧೭) ಪರಮಾತ್ಮನಲ್ಲಿ ಬೆರೆಯು.

### ( ಸತಿಪತಿ ಭಾವದ ವಚನಗಳು. )

೧೭೨. ಬಿಳಿಯ ಕರಿಕೆಯು ಕಣಿಗಿಲೆಲೆಯ, ತೊರೆಯ ತಡಿಯ ಮಳಲ ತಂದು, ಗೌರಿಯ ನೋನುವ ಬನ್ನಿರೇ, ಚಿಕ್ಕ ಚಿಕ್ಕ ಮಕ್ಕಳೆಲ್ಲರು ನೆರೆದು, ಅನುಪಮದಾನಿ ಕೂಡಲಸಂಗಮದೇವ ಗಂಡನಾಗಬೇಕೆಂದು.

೧೭೩. ಜಗವೆಲ್ಲ ಅರಿಯಲು, ಎನಗೊಬ್ಬ ಗಂಡನುಂಟು. ಆನು ಮುತ್ತೈದೆ. ಆನು ನಿಷ್ಠೈದೆ. ಕೂಡಲಸಂಗಯ್ಯನಂತಪ್ಪ ಎನಗೊಬ್ಬ ಗಂಡನುಂಟು

೧೭೪. ಮನಕ್ಕೆ ಮನೋಹರವಲ್ಲದ ಗಂಡರು ಮನಕ್ಕೆ ಬಾರರು ಕೇಳವ್ವ ಕೆಳದಿ. ಪನ್ನಗಭೂಷಣನಲ್ಲದ ಗಂಡರು. ಇನ್ನೆನಗಾಗದ ವೊರೆ ನೋಡವ್ವ! ಕನ್ನೆಯಂದಿನ ಕೂಟ ಚಿಕ್ಕಂದಿನ ಬಾಳುವೆ. ನಿಮ್ಮಾಣೆಯಯ್ಯಾ ಕೂಡಲ ಸಂಗಮದೇವಾ.

೧೭೫. ಅರಿಸಿನವನೆ ಮಿಂದು ಹೊಂದೊಡಿಗೆಯನೆ ತೊಟ್ಟು ಪುರುಷನ ಒಲವಿಲ್ಲದ ಲಲನೆಯಂತೆ ಆಗಿದ್ದೆನಯ್ಯಾ! ವಿಭೂತಿಯನೆ ಹೂಸಿ ರುದ್ರಾಕ್ಷಿಯ ತೊಟ್ಟು, ಶಿವ ನಿಮ್ಮ ಒಲವಿಲ್ಲದಂತೆ ಆನಿದ್ದೆನಯ್ಯಾ! ಕೆಟ್ಟು ಬಾಳುವರಿಲ್ಲ ಎಮ್ಮವರ ಕುಲದಲ್ಲಿ. ನೀನೊಲಿದಂತೆ ಸಲಹಯ್ಯ ಕೂಡಲಸಂಗಮದೇವಾ.

೧೭೬. ಸಂಸಾರವೆಂಬ ಶ್ವಾನನಟ್ಟಿ ಮೀಸಲ ಬೀಸರವ ಮಾಡದಿರಯ್ಯಾ! ಎನ್ನ ಚಿತ್ತವು ನಿಮ್ಮ ಧ್ಯಾನವಯ್ಯ! ನೀವಲ್ಲವೆ ಮತ್ತೇನನು ಅರಿಯೆನಯ್ಯ. ಕೆನ್ನೆಯಲ್ಲಿ ಕೈವಿಡಿದೆನು. ನಿಮ್ಮಲ್ಲಿ ನೆರೆದೆನು. ಮನ್ನಿಸು ಕಂಡಾ ಮಹಾ ಲಿಂಗವೇ. ಸತಿಯಾನು, ಪತಿ ನೀನಯ್ಯ. ಮನೆಯೊಡೆಯ ಮನೆಯ ಕಾಯ್ದಿಪ್ಪಂತೆ ನೀವೆನ್ನ ಮನವನು ಕಾಯ್ದಿಪ್ಪ ಗಂಡನು. ನಿನಗೋತ ಮನವನನ್ಯಕ್ಕೆ ಹರಿಸಿದರೆ, ನಿಮ್ಮಭಿಮಾನಕ್ಕೆ ಹಾನಿ ಕೂಡಲಸಂಗಮದೇವಾ.

೧೭೭. ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ, ಲಿಂಗದ ಮೇಲೆ ನಿಷ್ಠೆ ಇಲ್ಲದ ಭಕ್ತ ಇದ್ದರೇನೋ ಶಿವಶಿವಾ? ಹೋದರೇನೋ ಶಿವಶಿವಾ? ಕೂಡಲ ಸಂಗಮದೇವಯ್ಯ, ಊಡದ ಆವಿಂಗೆ ಉಣ್ಣದ ಕರುವ ಬಿಟ್ಟಂತೆ.

೧೭೮. ಕುರುಳು, ಬೆರಳು, ಮುಡುಹು, ಮುಂಬಲ್ಲಿ ಕೊಳ್ಳಾ. ನಿರಿಯ ನಿಕ್ಕಿ ದಾಂಟಿದಡೆ ಅಂತೆನ್ನನಂಬ ಪರ ಪುರುಷರ ಮುಖವ ನೋಡದಂತೆ ಮಾಡಾ. ಬಳಿಕ ನೀನೇ ಹೇಗೆ ಇರಿಸಿದಂತೆ ಇರಿಸಾ ಎನ್ನ ಉರದಲ್ಲಿ ಕೂಡಲ ಸಂಗಯ್ಯನೆಂದು ಬರೆಯಾ. ಹರಿಬ್ರಹ್ಮರಿಗೆರಗದಂತೆ ಬಳಿನೀರನೆರೆಯಾ.

೧೭೯. ಆಲಿಕಲ್ಲ ಹರಳಿನಂತೆ, ಅರಗಿನ ಪುತ್ಥಳಿಯಂತೆ, ತನು ಕರಗಿ ನೆರೆವ ಸುಖವ ನಾನೇನೆಂಬೆ? ಕಡೆಗೋಡಿವರಿದಪೆನಗಯ್ಯ ನಯನದ ಸುಖ ಜಲಂಗಳು. ನಮ್ಮ ಕೂಡಲಸಂಗಮದೇವರ ಮುಟ್ಟಿ ನೆರೆವ ಸುಖವ ನಾನಾರಿಗೇನೆಂಬೆ?

---



# ನೈತಿಕ ವಚನಗಳು.

## (೧೮) ಸದ್ವರ್ತನೆಯುಳ್ಳವನಾಗಿರು.

೧೮೦. ದೇವಲೋಕ ಮರ್ತ್ಯಲೋಕವೆಂಬುದು ಬೇರೆ ಮತ್ತುಂಟೇ? ಈ ಲೋಕದೊಳಗೆ ಮತ್ತನಂತಲೋಕ. ಶಿವಲೋಕ ಶಿವಾಚಾರವಯ್ಯಾ. ಶಿವ ಭಕ್ತನಿದ್ದ ಠಾವೇ ದೇವಲೋಕ. ಭಕ್ತನಂಗಣವೇ ವಾರಣಾಸಿ. ಕಾಯವೇ ಕೈಲಾಸ. ಇದು ಸತ್ಯ ಶಿವನಾಣೆ ಕೂಡಲಸಂಗಮದೇವಾ.

೧೮೧. ಕೆಡೆ ನಡೆಯದೆ, ಕೆಡೆ ನುಡಿಯದೆ, ಅನ್ಯರ ಪ್ರತಿಪಾದಿಸದಿದ್ದರೆ ಏನ ಮಾಡನಯ್ಯ ಲಿಂಗವು? ಏನ ಕೊಡನಯ್ಯ ಲಿಂಗವು? ತಾನೇನ ಬೇಡಿದುದನೀವನಾಗಿ, ನಂಬಿಕೆಯುಳ್ಳ ಶಿವಭಕ್ತಂಗೆ ಇದೇ ದಿಬ್ಯ ಕೂಡಲ ಸಂಗಮದೇವಾ.

೧೮೨. ಮನೆಯೊಳಗೆ ಮನೆಯೊಡೆಯನಿದ್ದಾನೋ, ಇಲ್ಲವೋ? ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ, ಮನೆಯೊಳಗೆ ಮನೆಯೊಡೆಯನಿದ್ದಾನೋ, ಇಲ್ಲವೋ? ತನುವಿನಲಿ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ, ಮನೆಯೊಳಗೆ ಮನೆಯೊಡೆಯನಿಲ್ಲ ಕೂಡಲಸಂಗಮದೇವಾ.

೧೮೩. ಲೇಸೆನಿಸಿಕೊಂಡು ಐದು ದಿನ ಬದುಕಿದರೇನು? ಲೇಸೆನಿಸಿಕೊಂಡು ನಾಲ್ಕು ದಿನ ಬದುಕಿದರೇನು? ಲೇಸೆನಿಸಿಕೊಂಡು ಮೂರು ದಿನ ಬದುಕಿದರೇನು? ಲೇಸೆನಿಸಿಕೊಂಡು ಎರಡು ದಿನ ಬದುಕಿದರೇನು?

ಜೀವಿತಂ ಶಿವಭಕ್ತಾನಾಂ । ವರಂ ಪಂಚ ದಿನಾನಿ ಚ ।
ಅಜಕಲ್ಪ ಸಹಸ್ರೇಭ್ಯೋ । ಭಕ್ತಿಹೀನಂ ತು ಶಾಂಕರಿ ॥

ಎಂದುದಾಗಿ ಕೂಡಲಸಂಗನ ಶರಣರಲ್ಲಿ ಲೇಸೆನಿಸಿಕೊಂಡು, ಒಂದು ದಿನ ಬದುಕಿದರೆ ಸಾಲದೇ?

೧೮೪: ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ. ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರು. ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು ಕೂಡಲ ಸಂಗಮದೇವಾ.

೧೮೫. ಕಳಬೇಡ. ಕೊಲಬೇಡ- ಹುಸಿಯ ನುಡಿಯಲು ಬೇಡ. ಮುನಿಯಬೇಡ. ಅನ್ಯರಿಗೆ ಅಸಹ್ಯಬಡಬೇಡ. ತನ್ನ ಬಣ್ಣಿಸಬೇಡ. ಇದಿರ ಹಳಿಯಲುಬೇಡ. ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ. ಇದೇ ನಮ್ಮ ಕೂಡಲಸಂಗನನೊಲಿಸುವ ಪರಿ.

೧೮೬. ಕಾಮವೇಕೋ ಲಿಂಗಪ್ರೇಮಿ ಎನಿಸುವಂಗೆ? ಕ್ರೋಧವೇಕೋ ಶರಣವೇದ್ಯನೆನಿಸುವಂಗೆ? ಲೋಭವೇಕೋ ಭಕ್ತಿಯ ಲಾಭವ ಬಯಸು

ವಂಗೆ? ಮೋಹವೇಕೋ ಪ್ರಸಾದವೇದ್ಯನೆನಿಸುವಂಗೆ? ಮದಮತ್ಸರವುಳ್ಳ ವಂಗೆ ಹೃದಯಶುದ್ಧವೆಲ್ಲಿಯದೋ? ಹಮುಳಿಗರಾದವರಲ್ಲಿಪ್ಪ ಕೂಡಲಸಂಗಮ ದೇವ.

೧೮೭. ಗಿಳಿಯೋದಿ ಫಲವೇನು? ಬೆಕ್ಕು ಬಾಹುದ ಹೇಳಲರಿಯದು. ಜಗವೆಲ್ಲವ ಕಾಂಬ ಕಣ್ಣು ತನ್ನ ಕೊಂಬ ಕೊಯಿಲೆಯ ಕಾಣಲರಿಯದು. ಇದಿರ ಗುಣವ ಬಲ್ಲೆವೆಂಬರು. ತಮ್ಮ ಗುಣವ ತಾವರಿಯರು ಕೂಡಲ ಸಂಗಮದೇವಾ.

೧೮೮. ಭಕ್ತನ ಮುಖದರ್ಪಣದಲ್ಲಿ ಲಿಂಗವ ಕಾಣಬಹುದು. ಭಕ್ತ ದೇಹಿಕದೇವ ಅನುಮಿಷನಾಗಿ, ಕೂಡಲಸಂಗಮದೇವ ಭಕ್ತನ ನುಡಿಯನಡುವೆ ರಾಶಿಯಾಗಿಪ್ಪನು.

೧೮೯. ಯೆಲವದ ಮರ ಹೂತು ಫಲವಾದ ತೆರನಂತೆ, ಸಿರಿಯಾದ ರೇನು, ಶಿವಭಕ್ತಿ ಇಲ್ಲದನ್ನಕ್ಕ? ಫಲವಾದರೇನು ಹಾವು ಮೆಕ್ಕೆಯಕಾಯಿ? ಕುಲವಿಲ್ಲದ ರೂಹು ಎಲ್ಲಿದ್ದರೇನು? ಬಚ್ಚಲನೀರು ತಿಳಿದಲ್ಲಿ ಫಲವೇನು? ಅವಗುಣಿಗಳನು ಮೆಚ್ಚ ಕೂಡಲಸಂಗಮದೇವ.

೧೯೦ ಆರತವಡಗದು. ಕ್ರೋಧ ತೊಲಗದು. ಕ್ರೂರ ಕುಭಾಷೆ ಕುಹಕ ಹಿಂಗದನ್ನಕ್ಕ, ನೀನೆತ್ತಲು ಶಿವನೆತ್ತಲು ಹೋಗುತ್ತಲು ಮರುಳೇ. ಭವ ರೋಗವೆಂಬ ತಿಮಿರ ತಿಳಿಯದನ್ನಕ್ಕ ಕೂಡಲಸಂಗಯ್ಯನೆತ್ತ ನೀನೆತ್ತ ಮರುಳೇ?

೧೯೧. ಶ್ರೀ ವಿಭೂತಿ ಶ್ರೀ ರುದ್ರಾಕ್ಷಿ ಇದ್ದವರ ಲಿಂಗವೆಂಬೆ. ಇಲ್ಲ ದವರ ಭವಿ ಎಂಬೆ. ಕೂಡಲಸಂಗಮದೇವ ಸದುಭಕ್ತರ ನೀನೆಂಬೆ.

೧೯೨. ಹಸಿದು ಎಕ್ಕೆಯ ಕಾಯ ಮೆಲಬಹುದೇ? ನೀರಡಿಸಿ ವಿಷವ ಕುಡಿಯಬಹುದೇ? ಸುಣ್ಣ ತುಯ್ಯಲ ಬಣ್ಣ ಒಂದೆಂದರೆ ನಂಟುತನಕ್ಕೆ ಉಣ ಬಹುದೇ? ಲಿಂಗಸಾರಾಯ ಸಜ್ಜನರಲ್ಲದವರ ಕೂಡಲಸಂಗಮದೇವರೆಂತೊಲಿವ?

೧೯೩. ಅಂಗದಿಚ್ಚೆಗೆ ಮದ್ಯಮಾಂಸವ ತಿಂಬರು. ಕಂಗಳಿಚ್ಚೆಗೆ ಪರ ವಧುವ ನೆರೆವರು. ಲಿಂಗಲಾಂಛನಧಾರಿಯಾದಲ್ಲಿ ಫಲವೇನು? ಲಿಂಗಪಥವ ತಪ್ಪಿ ನಡೆವರು ಜಂಗಮಮುಖದಿಂದ ನಿಂದೆಯು ಬಂದರೆ ಕೊಂಡ ಮಾರಿಂಗೆಹೋಹುದು ತಪ್ಪದು ಕೂಡಲಸಂಗಮದೇವಾ.

೧೯೪. ಓಡೆತ್ತ ಬಲ್ಲುದು ಅವಲಕ್ಕಿಯ ಸವಿಯ? ಕೋಡಗನೆತ್ತ ಬಲ್ಲುದು ಸೆಳೆಮಂಚದ ಸುಖವ? ಕಾಗೆ ನಂದನವನದೊಳಗಿದ್ದರೇನು ಕೋಗಿಲೆಯಾಗ ಬಲ್ಲುದೇ ಹೇಳಾ? ಕೊಳನ ತಡಿಯಲೊಂದು ಬಕ ಕುಳಿತಿದ್ದರೇನು? ಕಳಹಂಸ ನಾಗಬಲ್ಲುದೇ ಕೂಡಲಸಂಗಮದೇವಾ?



೧೯೫. ಹಲಬರ ನುಂಗಿದ ಹಾವಿಂಗೆ ತಲೆ ಬಾಲವಿಲ್ಲ ನೋಡಾ. ಕೊಲುವುದು ತ್ರಿಜಗವೆಲ್ಲವ. ತನಗೆ ಬೇರೆ ಪ್ರಳಯವಿಲ್ಲ. ನಾಲ್ಕಡಿಯನ್ನೈದು ವುದು. ಲೋಕದ ಕಡೆಯನೆ ಕಾಂಬುದು. ಸೂಕ್ಷ್ಮಪಥದಲ್ಲಿ ನಡೆವುದು. ತನಗೆ ಬೇರೆ ಒಡಲಿಲ್ಲ. ಅಹಂವೆಂಬ ಗಾರುಡಿಗನ ನುಂಗಿತ್ತು ಕೂಡಲ ಸಂಗನ ಶರಣರಲ್ಲದುಳಿದವರ.

೧೯೬. ತಾಮಸ ಮುಸುಕಿ ಕಂಗಳ ಕೆಡಿಸಿತ್ತೆನ್ನ ಭಕ್ತಿ. ಕಾಮವೆಂಬ ಅಗ್ನಿಯಲ್ಲಿ ಮುರಿದಿಕ್ಕಿತ್ತೆನ್ನ ಭಕ್ತಿ. ಉದರಕ್ಕೆ ಕುದಿಕುದಿದು ಮುಂದುಗೆಡಿಸಿ ತ್ತೆನ್ನ ಭಕ್ತಿ. ಇದಿರನಾಶ್ರಯಿಸ ಹೋಯಿತ್ತೆನ್ನ ಭಕ್ತಿ. ಹೆಣಮೂಲ ನಾನು ಕೂಡಲಸಂಗಮದೇವರಲ್ಲಿ ಕ್ಷಣ ಹದುಳವಿರದೆ ಬಾಯ ಟೊಣೆದು ಹೋಯಿ ತ್ತೆನ್ನ ಭಕ್ತಿ.

೧೯೭ ವಿಕಳನಾದೆನು ಪಂಚೇಂದ್ರಿಯ ಧಾತುವಿನಿಂದ. ಮತಿಗೆಟ್ಟೆನು ಮನದ ವಿಕಾರದಿಂದ. ಧೃತಿಗೆಟ್ಟೆನು ಕಾಯವಿಕಾರದಿಂದ. ಶರಣುವೊಕ್ಕೆನು ಕೂಡಲಸಂಗಮದೇವಯ್ಯ.

೧೯೮ ಅಯ್ಯಾ, ನಿಮ್ಮ ಶರಣನು ಮರ್ತ್ಯಕ್ಕೆ ತಂದೆಯಾಗಿ, ನೆನೆ ನೆನೆದು ಸುಖಿಯಾಗಿ, ಆನು ಬದುಕಿದೆನೆಯ್ಯಾ? ಅದೇನು ಕಾರಣ ತಂದೆ ಎಂದ ರಿದೆನಯ್ಯಾ? ಎನ್ನ ಕಾರಣ ತಂದೆ ಎಂದರಿದೆನಯ್ಯಾ. ಅರಿದರಿದು ನಿಮ್ಮ ಶರ ಣನು ಆಚರಿಸುವಾಚರಣೆಯ ಕಂಡು ಕಣ್ದೆರೆದೆನಯ್ಯಾ ಕೂಡಲಸಂಗಮ ದೇವಾ.

---

## (೧೯) ಸತ್ಸಂಗದಲ್ಲಿರು

೧೯೯. ಸಾರ ಸಜ್ಜನರ ಸಂಗವ ಮಾಡುವುದು. ದೂರ ದುರ್ಜನರ ಸಂಗ ಬೇಡವಯ್ಯ. ಆವ ಹಾವಾದಡೇನು? ವಿಷ ಒಂದೇ. ಅಂತವರ ಸಂಗ ಬೇಡವಯ್ಯ. ಅಂತರಂಗ ಶುದ್ಧವಿಲ್ಲದವರ ಸಂಗ ಸಿಂಗಿ ಕಾಳಕೂಟ ವಿಷವು ಕೂಡಲಸಂಗಮದೇವಾ.

೨೦೦. ಗಿರಿಗಳ ಮೇಲೆ ಹಲವು ತರುಮರಾದಿಗಳಿರ್ದು ಶ್ರೀಗಂಧದ ಸನ್ನಿಧಿಯಲು ಪರಿಮಳವಾಗದೇ? ಲಿಂಗವಂತನ ಸನ್ನಿಧಿಯಿಂದ ಹಿಂದಣ ದುಸ್ಸಂಗ ಕೆಡುವುವು. ಕೂಡಲಸಂಗಮದೇವಯ್ಯ ಸಿರಿಯಾಳನ ಸಾರ್ದ ನರರೆಲ್ಲ ಸುರರಾಗರೇ?

೨೦೧ ಒಲ್ಲೆನಯ್ಯಾ ಒಲ್ಲೆನಯ್ಯಾ ನಿಮ್ಮವರಲ್ಲದವರ ಒಲ್ಲೆನಯ್ಯ. ಜಗವೆಲ್ಲರಿಯಲು ಒಲ್ಲೆನಯ್ಯ ಒಲ್ಲೆನಯ್ಯ. ನೀ ಮುನಿದರೆ ಮುನಿ. ಕೂಡಲ ಸಂಗಮದೇವ, ನಿಮ್ಮಾಣೆ ನಿಮ್ಮ ಪ್ರಮಥರಾಣೆ.

೨೦೨. ಸಾರ ಸಜ್ಜನರ ಸಂಗ ಲೇಸು ಕಂಡಯ್ಯ ! ದೂರ ದುರ್ಜನರ ಸಂಗವದು ಭಂಗವಯ್ಯ ! ಸಂಗವೆರಡುಂಟು. ಒಂದ ಬಿಡು, ಒಂದ ಹಿಡಿ, ಮಂಗಳಮೂರ್ತಿ ನಮ್ಮ ಕೂಡಲಸಂಗನ ಶರಣರ.

೨೦೩. ಕಾಮವ ತೊರೆದಾತ, ಹೇಮವ ಜರಿದಾತ, ಭಾನುವಿನ ಉದಯಕ್ಕೆ ಒಳಗಾಗದಾತ ಶರಣನು. ಆವಾಗಳು ನಿಮ್ಮ ಮಾಣದೆ ನೆನೆವರ ಮನೆಯಲು ಶ್ವಾನನಾಗಿರಿಸು ಮಹಾದಾನಿ ಕೂಡಲ ಸಂಗಮದೇವ.

೨೦೪ ತೊತ್ತಿನ ಕೊರಳಲ್ಲಿ ಹೊಂಬಿತ್ತಾಳೆಯ ಸಿಂಗಾರವ ಮಾಡಿದಂತೆ ಕುಚಿತ್ತರ ಸಂಗ ಸುಸಂಗಿಗೆ ಸಂಗಡವಿಲ್ಲ. ಗುರುಗುಂಜಿ ಮಾಣಿಕಕ್ಕೆ ಸರಿಯಪ್ಪುದೇ ಕೂಡಲಸಂಗಮದೇವ ?

೨೦೫. ಆಚಾರ ಸಂಗವೇನೇನ ಮಾಡುವುದಯ್ಯ ? ಕೀಡಿ ಕುಂಡಲಿಗನಾಗದೇ ಅಯ್ಯ ? ಚಂದನದ ಸನ್ನಿಧಿಯಲ್ಲಿ ಪರಿಮಳ ತಾಗಿ ಜೇವು ಬೊಬ್ಬಿಲಿ ತರಿ ಗಂಧಂಗಳಾಗವೇ ? ನಮ್ಮ ಕೂಡಲಸಂಗನ ಶರಣರ ಸನ್ನಿಧಿಯಿಂದ ಕರ್ಮ ನಿರ್ಮಳವಾಗದಿಹುದೇ ಅಯ್ಯಾ?

೨೦೬ ಬೇವಿನ ಬೀಜವ ಬಿತ್ತಿ, ಬೆಲ್ಲದ ಕಟ್ಟೆಯ ಕಟ್ಟಿ, ಆಕಳ ಹಾಲನೆರೆದು, ಜೇನತುಪ್ಪವ ಹೊಯ್ದರೆ ಸಿಹಿಯಾಗಬಲ್ಲುದೇ ಕಹಿಯಹುದಲ್ಲದೆ? ಶಿವಭಕ್ತರಲ್ಲದವರ ಕೂಡ ನುಡಿಯಲಾಗದು ಕೂಡಲಸಂಗಮದೇವ.

೨೦೭ ಅರಸರ ಮನೆಯಲ್ಲಿ ಅರಸಿಯಾಗಿಪ್ಪುದರಿಂದ, ಭಕ್ತರ ಮನೆಯಲು ತೊತ್ತಾಗಿಪ್ಪುದು ಕರ ಲೇಸಯ್ಯ. ತಾರೌ ಅಗ್ಗವಣಿಯ, ನೀಡೌ ಪತ್ರೆಯ, ಲಿಂಗಕ್ಕೆ ಬೋನವ ಹಿಡಿಯೌ ಎಂಬರು. ಕೂಡಲಸಂಗನ ಮಹಾಮನೆಯಲು ಒಕ್ಕುದನುಣ್ಣಾ ತೊತ್ತೇ ಎಂಬರು.

೨೦೮ ಹೊಲೆಯ ಹೊಲಬಿಗನಾದೊಡೆ, ಅವನ ಹೊರೆಯಲಿಪ್ಪುದು ಲೇಸು ಕಂಡಯ್ಯ. ಹೊಲಬುಗೆಡವೆ ಲಿಂಗಕ್ಕೆ ಶರಣೆನ್ನಿರಯ್ಯ. ಹೊಲಬುಗೆಡಬೇಡ ಶಿವಶರಣೆನ್ನಿರಯ್ಯಾ. ನಮ್ಮ ಕೂಡಲಸಂಗನ ಮಹಾಮನೆಯಲು ಮಾದರ ಚನ್ನಯ್ಯ ಹೊಲಬಿಗನಯ್ಯಾ

೨೦೯ ಅರೆಭಕ್ತರಾದವರ ನೆರೆ ಬೇಡ, ಹೊರೆ ಬೇಡ, ದಾರಿಸಂಗಡ ಬೇಡ, ದೂರ ನುಡಿಯಲು ಬೇಡ. ಕೂಡಲಸಂಗನ ಶರಣರಲ್ಲಿ ಅಚ್ಚಲಿಂಗೈಕ್ಯಂಗೆ ತೊತ್ತಾಗಿಪ್ಪುದು ಕರ ಲೇಸಯ್ಯ.

೨೧೦. ಕಟ್ಟೆದಿರಿನಲ್ಲಿ ಶಿವಭಕ್ತನ ಕಂಡು, ದೃಷ್ಟಿಯಾರೆ ಶರಣೆಂದೊಡೆ, ಹುಟ್ಟಿದೇಳು ಜನ್ಮದ ಪಾಪ ಬಿಟ್ಟು ಹಿಂಗುವುದು ನೋಡಾ ! ಮುಟ್ಟಿ ಚರಣಕ್ಕೆರಗಿದೊಡೆ, ತನು ಒಪ್ಪಿದಂತೆ ಅಹುದು, ಪುರುಷ ಮುಟ್ಟಿದಂತೆ. ಕರ್ತು, ಕೂಡಲಸಂಗನ ಶರಣರ ಸಂಗವು ಮತ್ತೆ ಭವಮಾಲೆಯ ಹೊದ್ದಲೀಯ್ಯದು ನೊಡಾ.



೨೧೧. ತಾಳ ಮರದ ಕೆಳಗೆ ಒಂದು ಹಾಲ ಹರಿವೆ ಇದ್ದರೆ, ಅದ ಹಾಲ ಹರಿವೆ ಎನ್ನರು. ಸುರೆಯ ಹರಿವೆ ಎಂಬರು. ಈ ಭಾವ ನಿಂದೆಯ ಮಾಣಿಸು ಕೂಡಲಸಂಗಮದೇವಾ.

೨೧೨. ಅಣ್ಣ ತಮ್ಮ ಹೆತ್ತಪ್ಪ ಗೋತ್ರವಾದಡೇನು ? ಲಿಂಗಸಾಹಿತ್ಯವಿಲ್ಲದವರ ಎನ್ನವರೆನ್ನೆನಯ್ಯಾ. ನಂಟುಭಕ್ತಿ ನಾಯಕನರಕ ಕೂಡಲಸಂಗಮದೇವ.

೨೧೩. ಹುಟ್ಟುವಲ್ಲಿ ಭವಿ ಮರಳಿ ಭಕ್ತನ ಮಾಡಿ, ಪೂರ್ವಾಶ್ರಯವ ಕಳೆದು, ಹೊಂದುವಲ್ಲಿ ಭವಿಯಾಗಿ ಹೋದವರ ಮುಟ್ಟಲಾಗದು. ಅವನ ಮುಟ್ಟಿದವ ಮುನ್ನವೇ ವ್ರತಗೇಡಿ. ಅವನ ಶ್ರಾದ್ಧಕಾಲವೇ ಶ್ವಾನಮಾಂಸ. ಕ್ರಿಯಾಕಾಲವೇ ಕ್ರಿಮಿಗಳು. ತದ್ದಿನವೇ ಮದ್ಯ ಮಾಂಸ. ಇದು ಕಾರಣ ಕೂಡಲಸಂಗಮದೇವ ಅವನ ಮನೆಯ ವಿಚಾರಿಸದೆ ಹೊಕ್ಕವಂಗೆ ನಾಯಕ ನರಕ.

೨೧೪ ಲಿಂಗಾಂಗಿಗಳಲ್ಲದವರ, ಶರಣರ ಸಂಗವಿಲ್ಲದವರ ಕಂಡರೆ ನಾಚುವೆ. ಅವರ ನುಡಿ ಎನಗೆ ಸಮನಿಸದಯ್ಯ. ಕೂಡಲಸಂಗಮದೇವಾ ನೀನು ಅಲ್ಲಿ ಇಲ್ಲದ ಕಾರಣ.

೨೧೫. ಎಡದ ಕೆಯ್ಯಲು ಹಾಲುಬಟ್ಟಲು, ಬಲದ ಕೆಯ್ಯಲು ಓಜುಗಟ್ಟಿಗೆ. ಆವಾಗ ಬಂದಾನೆಮ್ಮಯ್ಯ, ಬಡಿದು ಹಾಲ ಕುಡಿಸುವ ತಂದೆ ? ॥ಶ್ಲೋಕ॥ ದಂಡಕ್ಷೀರದ್ವಯಂ ಹಸ್ತೆ । ಜಂಗಮೋ ಭಕ್ತಿಮಂದಿರಂ । ಅತಿಭಕ್ತ್ಯಾಲಿಂಗಸಂತುಷ್ಟಿಃ ! ಅಪಹಾಸ್ಯಂ ಯಮದಂಡನಂ ॥ ಎಂದುದಾಗಿ ಕೂಡಲಸಂಗಮದೇವಯ್ಯ ತಾನೇ ಭಕ್ತಿಪಥವ ತೋರುವ ತಂದೆ.

೨೧೬. ನಡೆವರಯ್ಯಾ ಒಡೆಯರು, ತನುಮನಧನದ ಮೇಲೆ. ನುಡಿವರಯ್ಯ ಒಂದು ನಿಮಿಷ ಬಾರದಿದ್ದರೆ. ಜರಿವರಯ್ಯ ಒಡೆಯರು ಮನಬಂದ ಪರಿಯಲು. ಶಿವಶಿವ ಅಣೆವರಯ್ಯ. ಮಂಡೆಯನೂರಿ ಪ್ರಾಣದ ಒಡೆಯರಯ್ಯ ಕೂಡಲಸಂಗಮದೇವ ನಿಮ್ಮ ಶರಣರು.

೨೧೭. ಕಾಲಿಲೊದೆದು ಜಡಿದು ಬಡಿವರಯ್ಯ. ಭಕ್ತಿಯೈದಲೆಂದನ್ನ ಜರಿವರಯ್ಯ. ನುಡಿವರಯ್ಯ, ಕೂಡಲಸಂಗನ ಶರಣರೊಡೆಯರಾಗಿರಿ.

೨೧೮. ಅಯ್ಯಾ, ಸಜ್ಜನ ಸದ್ಭಾವರ ಸಂಗದಿಂದ ಮಹಾನುಭಾವರ ಕಾಣಬಹುದಯ್ಯ. ಮಹಾನುಭಾವರ ಸಂಗದಿಂದ ಶ್ರೀ ಗುರುವನರಿಯಬಹುದು. ಲಿಂಗವನರಿಯಬಹುದು. ಜಂಗಮವನರಿಯಬಹುದು. ಪ್ರಸಾದವನರಿಯಬಹುದು. ತನ್ನ ತಾನರಿಯಬಹುದು. ಇದು ಕಾರಣ ಸದ್ಭಕ್ತರ ಸಂಗವನೆ ಕರುಣಿಸು ಕೂಡಲಸಂಗಮದೇವ ನಿಮ್ಮ ಧರ್ಮ.

೨೧೯. ದಂದುಗ ಬಿಡದು, ಮನದ ಸಂದೇಹ ಹಿಂಗದಾಗಿ. ಮುಂದೆ ಲಿಂಗವ ಕಂಡೆಹೆನೆಂಬುದು ಹುಸಿ ನೋಡಾ! ಬೆಂದ ಕರಣಾದಿಗಳು ಒಂದು ಪಥವನರಿಯವು. ಎಂತು ಶಿವಪಥವೆನಗೆ ಸಾಧ್ಯವಪ್ಪುದಯ್ಯಾ! ಎನ್ನ ತಂದೆ ಕೂಡಲಸಂಗಮದೇವ, ನಿಮ್ಮ ಶರಣರ ಬಳಿವಿಡಿದರೆ, ಎನ್ನ ದಂದುಗ ಹಿಂಗುವುದು.

೨೨೦ ಆದಿಯಲಾಗಲಿ ವೇದದಲಾಗಲಿ ಶಾಸ್ತ್ರದಲಾಗಲಿ ಸಮಯದಲಾಗಲಿ ಎನ್ನವರೆನ್ನೆನು, ಎನ್ನವರೆನ್ನೆನು. ಎನ್ನವರೆಂದರೆ ಸಂಗಾ ನಿಮ್ಮಲ್ಲಿಗೆ ದೂರ. ಎನ್ನವರಾದರೆ ಜನ್ಮಕ್ಕೆ ನಡೆವರೇ? ಎನ್ನವರಲ್ಲ ಕೂಡಲಸಂಗಮದೇವ ನಿಮ್ಮಾಣೆ.

೨೨೧ ಬಡ ಹಾರುವನೇಸು ಭಕ್ತನಾದರೆಯೂ ನೇಣಿನ ಹಂಗ ಬಿಡ. ಮಾಲೆಗಾರನೇಸು ಭಕ್ತನಾದರೆಯೂ ಬಾವಿಯ ಬೊಮ್ಮನ ಹಂಗ ಬಿಡ. ಬಣಜಿಗನೇಸು ಭಕ್ತನಾದರೆಯೂ ಒಟ್ಟೆಲ ಬೆನಕನ ಹಂಗ ಬಿಡ. ನಾನಾವ ಹಂಗಿನವನಲ್ಲ. ನಿಮ್ಮ ಶರಣರ ಹಂಗಿನವನಯ್ಯಾ ಕೂಡಲಸಂಗಮದೇವಾ.

೨೨೨ ಒಡೆಯರು ಬಂದರೆ ಗುಡಿ ತೋರಣವ ಕಟ್ಟಿ, ನೆಂಟರು ಬಂದರೆ, ಸಮಯವಿಲ್ಲೆನ್ನಿ. ಅಂದೇಕೆ ಬಾರರು ನೀರಿಂಗೆ ನೇಣಿಂಗೆ ಹೊರಗಾದಂದು, ಸಮಯಾಚಾರಕ್ಕೆ ಒಳಗಾದಂದು? ಪರುಷ ಮುಟ್ಟಲು, ಕಬ್ಬುನ ಸುವರ್ಣವಾಯಿತ್ತು. ಬಳಿಕ ಬಂಧುಗಳುಂಟೇ ಕೂಡಲಸಂಗಮದೇವಾ?

೨೨೩ ಶರಣ ಸಂಬಂಧವನರಿತ ಬಳಿಕ ಮರಳಿ ಭವಿಯ ಬೆರಸಲಾಗದು. ಬ್ರಹ್ಮಹತ್ಯ, ಭ್ರೂಣಹತ್ಯ, ವೈತರಣಿ, ದುರ್ಗತಿ ಪಂಚಮಹಾಪಾತಕದಿಂದಧಿಕ ನೋಡಾ. ಅಳುಪಿ ಭವಿಯೊಡನುಂಡರೆ ಭಕ್ತನಲ್ಲ ಕೂಡಲಸಂಗಮದೇವಾ.

೨೨೪ ಕೂಪರಿಗೆ ಹೇಳುಫೆನು ಕುಳಸ್ಥಳಂಗಳನೆಲ್ಲವ. ಕೂರದವರಿಗೆ ಹೇಳಿ ನಾನೇವೆನಯ್ಯ? ಕರಲ ಭೂಮಿಯಲ್ಲಿ ಕರೆವ ವೃಷ್ಟಿಯ ತೆರನಂತೆ, ಅವರೆತ್ತ ಬಲ್ಲರೆನ್ನ ಸುಖದುಃಖವ? ಅಂಗವಿಲ್ಲದ ಸಂಗವು ಅಳಲಿಲ್ಲದ ಹುಯ್ಯಲಂತೆ. ಇದುಕಾರಣ ಕೂಡಲಸಂಗಮದೇವಾ, ನಿಮ್ಮ ಶರಣರಿಗಲ್ಲದೆ ಬಾಯ್ದೆರೆಯೆನು.

೨೨೫ ಶ್ರೀವಿಭೂತಿಯ ಹೂಸದವರ ಶ್ರೀರುದ್ರಾಕ್ಷಿಯ ಧರಿಸದವರ ನಿತ್ಯ ಲಿಂಗಾರ್ಚನೆಯ ಮಾಡದವರ ಜಂಗಮನೇ ಲಿಂಗವೆಂದರಿಯದವರ ಸದ್ಭಕ್ತರ ಸಂಗದಲ್ಲಿರದವರ ತೋರದಿರು. ಕೂಡಲಸಂಗಮದೇವಾ ಸೆರೆಗೊಡ್ಡಿ ಬೇಡುವೆನು.



೨೨೬. ಜಲವ ತಪ್ಪಿದ ಮತ್ಸ್ಯ ಬದುಕುವುದೇ ಸೋಜಿಗ. ಗಣತಿಂಥಿಣಿಯೊಳಗಿರಿಸೆನ್ನ ತಂದೆ. ಶಿವಶಿವ ಕೂಡಲಸಂಗಮದೇವ ಸೆರೆಗೊಡ್ಡಿ ಬೇಡುವೆನು.

೨೨೭. ಬ್ರಹ್ಮಪದವಿಯನೊಲ್ಲೆ, ವಿಷ್ಣುಪದವಿಯನೊಲ್ಲೆ, ರುದ್ರಪದವಿಯನೊಲ್ಲೆ. ನಾನು ಮತ್ತಾವ ಪದವಿಯನೊಲ್ಲೆನಯ್ಯ. ಕೂಡಲಸಂಗಮದೇವಾ, ನಿಮ್ಮ ಸದ್ಭಕ್ತರ ಪಾದವನರಿದಿಪ್ಪ ಮಹಾಪದವಿಯ ಕರುಣಿಸಯ್ಯ.

---

## (೨೦) ಸಿಟ್ಟಾಗಬೇಡ.

೨೨೮. ತನಗೆ ಮುನಿವರಿಗೆ ತಾ ಮುನಿಯಲೇಕಯ್ಯ? ತನಗಾವಡೆಗೇನು? ಅವರಿಗಾವಡೆಗೇನು? ತನುವಿನ ಕೋಪ ತನ್ನ ಹಿರಿಯತನದ ಕೇಡು. ಮನದ ಕೋಪ ತನ್ನ ಅರುಹಿನ ಕೇಡು. ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ, ನೆರೆಮನೆಯ ಸುಡದು ಕೂಡಲಸಂಗಮದೇವ.

೨೨೯. ಪಾಪಿಗೆ ಕೋಪಿಗೆ ಭಕ್ತಿಯಾಗೆಂದಡಪ್ಪುದೇ? ನಾರಿವಾಣ ಪಕ್ಕುದೇ ನಾಯಿಗೆ, ಕೂಡಲಸಂಗಮದೇವ, ನಿಮ್ಮ ನಂಬಿಯೂ ನಂಬದ ಡಂಭಕಂಗೆ?

೨೩೦. ಕಾಣದ ಠಾವಿಯಲ್ಲಿ ಜರಿದರೆಂದರೆ, ಕೇಳಿ ಪರಿಣಾಮಿಸಬೇಕು. ಅದೇನು ಕಾರಣ? ಕೊಳ್ಳದೆ ಕೊಡದೆ ಅವರಿಗೆ ಸಂತೋಷವಹುದಾಗಿ. ಎನ್ನ ಮನದ ತದ್ವೇಷವಳಿದು, ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸುವುದು ಕೂಡಲಸಂಗಮದೇವಾ.

೨೩೧ ಕಣ್ಣ ಕೋಪಕ್ಕೆ ಮುಂದರಿಯದೆ ನುಡಿದು, ಮನ ಮಚ್ಚಿ ಮರುಳಾದೆ ನೋಡವ್ವಾ! ಕೇಳು ಕೇಳವ್ವಾ, ಕೆಳದಿ. ಸಖಿಯರಿಲ್ಲದ ಸುಖವ ಬಯಸಿದರೆ ದೊರೆಕೊಂಬುದೇ ಹೇಳಾ? ಎನ್ನ ಮುನಿಸು ಎನ್ನಲಡಗಿತ್ತು. ಇನ್ನು ಬಾರಯ್ಯ ಕೂಡಲಸಂಗಮದೇವಾ.

---

## (೨೧) ಸತ್ಯವನ್ನು ನುಡಿ.

೨೩೨ ದೇವಲೋಕ, ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೋ. ಸತ್ಯವ ನುಡಿವುದೇ ದೇವಲೋಕ. ಮಿಥ್ಯವ ನುಡಿವುದೇ ಮರ್ತ್ಯಲೋಕ. ಆಚಾರವೇ ಸ್ವರ್ಗ. ಅನಾಚಾರವೇ ನರಕ. ಕೂಡಲಸಂಗಮದೇವ ನೀವೇ ಪ್ರಮಾಣು.

೨೩೩. ಜಂಬೂದ್ವೀಪ ನವಖಂಡ ಪೃಥ್ವಿಯೊಳಗೆ ಕೇಳಿರಯ್ಯ ಎರಡಾಳಿನ ಭಾಷೆಯ. ಕೊಲುವೆನೆಂಬ ಭಾಷೆ ದೇವನದು, ಗೆಲುವೆನೆಂಬ ಭಾಷೆ ಭಕ್ತನದು. ಸತ್ಯವೆಂಬ ಕೂರಲಗನೆ ಕಳೆದುಕೊಂಡು ಸದ್ಭಕ್ತರು ಗೆದ್ದರು ಕಾಣಾ ಕೂಡಲಸಂಗಮದೇವ.

೨೩೪. ಸ್ವಾಮಿಭೃತ್ಯ ಸಂಬಂಧಕ್ಕೆ ಆವುದು ಪಥವೆಂದರೆ ದಿಟವ ನುಡಿವುದು, ನುಡಿದಂತೆ ನಡೆವುದು. ನುಡಿದು ಹುಸಿವ, ನಡೆದು ತಪ್ಪುವ ಪ್ರಪಂಚಿಯನೊಲ್ಲ ಕೂಡಲಸಂಗಮದೇವ.

೨೩೫. ಸತ್ಯಸಂಬಂಧ ಸ್ವಯವಾದ ಭೃತ್ಯಾಚಾರವೆನಗಿಲ್ಲವಯ್ಯಾ. ಅನುದಿನ ನಿಮ್ಮ ನೆನೆಯಲು ಭಕ್ತಿ ಇಲ್ಲವಯ್ಯ ಎನಗೆ. ಕೂಡಲಸಂಗಮದೇವ ನಿಮ್ಮ ಕರುಣ ಕೃಪೆಯ ಮಾಡಯ್ಯ.

---

## (೨೨) ನಿಷ್ಕಪಟಿಯಾಗಿರು.

೨೩೬. ಒಳಗೆ ಕುಟಿಲ, ಹೊರಗೆ ವಿನಯವಾಗಿ, ಭಕ್ತರೆನಿಸಿಕೊಂಬವರ ಬಲ್ಲನೊಲ್ಲನಯ್ಯಾ ಲಿಂಗವು. ಅವರು ಪಥಕ್ಕೆ ಸಲ್ಲರು, ಸಲ್ಲರಯ್ಯ. ಒಳಹೊರಗೊಂದಾದವರಿಗೆ ಅಳಿಯಾಸೆದೋರಿ, ಬಿಸಾಡುವನವರ ಜಗದೀಶ ಕೂಡಲಸಂಗಮದೇವ.

೨೩೭. ಎನ್ನ ನಡೆಯೊಂದು ಪರಿ, ಎನ್ನ ನುಡಿಯೊಂದು ಪರಿ. ಎನ್ನೊಳಗೇನು ಶುದ್ಧವಿಲ್ಲ ನೋಡಯ್ಯಾ! ನುಡಿಗೆ ತಕ್ಕ ನಡೆಯ ಕಂಡಡೆ, ಕೂಡಲಸಂಗಮದೇವನೆನ್ನೊಳಗಿಪ್ಪ ನೋಡಯ್ಯಾ.

೨೩೮. ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯಾ! ವಿಚಾರಿಸಿದಡೇನು ಹುರುಳಿಲ್ಲವಯ್ಯಾ! ಪ್ರಪಂಚಿನ ಡಂಭಿನಲ್ಲಿ ಎನ್ನನೊಂದು ರೂಪು ಮಾಡಿ, ನೀವಿರಿಸಿದಿರಯ್ಯಾ ಕೂಡಲಸಂಗಮದೇವಾ.

೨೩೯. ಅವರ ನುಡಿಯೊಂದು ನಡೆಯೊಂದಾದರೆ, ಶಿವಾಚಾರಕ್ಕವರು ಸಲ್ಲರಯ್ಯ. ಬಲ್ಲನು. ಸಾತ್ವಿಕರಲ್ಲದವರನೊಲ್ಲನು. ಶಿವಾಚಾರವ ಬಲ್ಲನು. ಅಲ್ಲಿ ನಿಲ್ಲನು. ಪ್ರಪಂಚಿಯ ಮನವನೊಲ್ಲನು ಕೂಡಲಸಂಗಮದೇವ.

೨೪೦. ತನುವಿನಲೊಂದಿಟ್ಟು ಮನದಲೆರಡಿಟ್ಟಡೆ, ಬಲ್ಲನೊಲ್ಲನಯ್ಯ ಲಿಂಗವು. ಬಲ್ಲನೊಲ್ಲನಯ್ಯಾ. ಪರಚಿಂತೆಯನೊಲ್ಲ ಕೂಡಲಸಂಗಮದೇವ.

೨೪೧. ಅರ್ಚಿಸಲರಿಯೆ. ಪೂಜಿಸಲರಿಯೆ. ನಿಚ್ಚ ಶಿವರಾತ್ರಿಯ ಮಾಡಲರಿಯೆ. ಕಪಟವೇಷದಿಂದಾಡುವೆ. ಈಶ ನಿಮ್ಮ ದಾಸರ ದಾಸಿಯ ದಾಸ



ನಾನಯ್ಯ! ನಿಮ್ಮ ಮನೆಯ ಪಂಗುಳ ನಾನಯ್ಯ. ಕೂಡಲಸಂಗಮದೇವ, ನಿಮ್ಮ ಲಾಂಛನ ಧರಿಸಿಪ್ಪ ಉದರಪೋಷಕ ನಾನಯ್ಯ.

೨೪೨. ಎನ್ನ ಭಕ್ತನೆಂದೆಂಬರು, ಎನ್ನ ಹೊರಹಂಚೆ ಒಳಬೊಳ್ಳೆತನವನರಿಯರಾಗಿ. ಎನ್ನ ಮಾನಾಪಮಾನವು ಶರಣರಲ್ಲಿ, ಎನ್ನ ಜಾತಿ ವಿಜಾತಿಯು ಶರಣರಲ್ಲಿ. ತನುಮನಧನವು ಶರಣರಲ್ಲಿ. ವಂಚನೆಯುಳ್ಳ ಡಂಭಕ ನಾನು. ತಲೆಯೊಡೆಯಂಗೆ ಕಣ್ಣ ಬೈಚಿಡುವೆ ಕೂಡಲಸಂಗಮದೇವಾ.

೨೪೩. ಜನ್ಮ ಹೊಲ್ಲೆಂಬೆನೆ ಜನ್ಮವ ಬಡಲಹೆನು. ಭಕ್ತರೊಲವ ಪಡೆವೆನೆ ಭಕ್ತಿಯ ಪಥವನರಿವೆನು. ಲಿಂಗವೆಂದು ಬಲ್ಲೆನೆ ಜಂಗಮವೆಂದು ಕಾಂಬೆನು. ನಿಚ್ಚ ಶಿವರಾತ್ರಿಯ ಮಾಡಬಲ್ಲೆನೆ ಕೈಲಾಸವ ಕಾಣಬಲ್ಲೆನು. ಎನ್ನಲ್ಲಿ ನಡೆ ಇಲ್ಲಾಗಿ ಆನು ಭಕ್ತನೆಂತಹೆನಯ್ಯ ಕೂಡಲಸಂಗಮದೇವಾ?

೨೪೪. ಮಜ್ಜನಕ್ಕೆರೆವೆನಲ್ಲದಾನು ಸಜ್ಜನವೆನ್ನಲಿಲ್ಲವಯ್ಯ. ಎನ್ನಲ್ಲೇನನರಿಸುವೆ? ನಂಬಿಯೂ ನಂಬದ ಡಂಭಕ ನಾನಯ್ಯ. ಹಾವ ತೋರಿ ಹವಿಯ ಬೇಡುವಂತೆ ಕೂಡಲಸಂಗಮದೇವಾ.

೨೪೫. ಯರೆದಲೆಯಂತೆ ಒಳಗೊಂದು ಹೊರಗೊಂದಾದರೆ ಮೆಚ್ಚುವನೆ? ಬಾರದ ಭವಂಗಳ ಬರಿಸುವನಲ್ಲದೆ ಮೆಚ್ಚುವನೆ? ಅಘೋರ ನರಕವನುಣಿಸುವನಲ್ಲದೆ ಮೆಚ್ಚುವನೆ? ಉಡುವಿನ ನಾಲಿಗೆಯಂತೆರಡಾದರೆ, ಕೂಡಲಸಂಗಯ್ಯ ಮೆಚ್ಚುವನೆ?

೨೪೬. ಬೆದಕದಿರು, ಬೆದಕದಿರು. ಬೆದಕಿದರೆ ಹುರುಳಿಲ್ಲ. ಚಿತ್ತರಟ್ಟೆಯ ಕಾಯಲ್ಲಿ ಮತ್ತೇನನರಸುವಿರಯ್ಯಾ? ನಿಮ್ಮ ಉತ್ತಮಿಕೆಯ ಪೂರೈಸುವುದು ಕೂಡಲಸಂಗಮದೇವಾ.

೨೪೭. ಹಾದರಕೆ ಹೋದರೆ, ಕಳ್ಳ ದಮ್ಮನಾಯಿತ್ತು. ಹಾಳುಗೋಡೆಗೆ ಹೋದರೆ, ಚೇಳೂರಿತ್ತು. ಅಬ್ಬರವ ಕೇಳಿ ತಳವಾರನುಟ್ಟ ಸೀರೆಯ ಸುಲಿದ. ನಾಚಿ ಹೋದರೆ, ಮನೆಯ ಗಂಡ ಬೆನ್ನಬಾರನೆತ್ತಿದ. ಅರಸು ಕೂಡಲಸಂಗಮದೇವ ದಂಡವ ಕೊಂಡ.

೨೪೮. ಸಂಸಾರದಲ್ಲಿ ಹುಟ್ಟಿ ಮತ್ತೊಂದ ಬಯಸಲೇಕಯ್ಯ? ನಗುವುದು ನುಡಿವುದು ಶಿವಭಕ್ತರೊಡನೆ. ಸುಮ್ಮನೆ ಹಮ್ಮು ಬಿಮ್ಮಾಗಿರಲೇಕಯ್ಯ? ॥ಶ್ಲೋ॥ ಅಭ್ಯಾಸಾಚ್ಚ ವಿಹೀನಸ್ಯ । ತಸ್ಯ ಜನ್ಮ ನಿರರ್ಥಕಂ । ಗುರೋರಪಿ ಸಮಂ ಹಾಸ್ಯಂ । ಕರ್ತವ್ಯಂ ಕುಟಿಲಂ ವಿನಾ ॥ ನಮ್ಮ ಕೂಡಲಸಂಗನ ಶರಣರೊಡನೆ ಮನದೆರೆದು ಮಾತನಾಡುವುದಯ್ಯಾ.

೨೪೯. ಕೌಳುಕೋಲ ಹಿಡಿದು ಶ್ರವವ ಮಾಡಬಹುದಲ್ಲದೆ, ಕಳನೇರಿ ಕಾದುವದರಿದು ನೋಡಾ! ಬಣ್ಣವಿಟ್ಟು ನುಡಿದಲ್ಲಿ ಫಲವೇನು? ಚಿನ್ನಗೊ

ಯ್ಕುವ ನೂಡುವನಂತೆ, ಬಂದ ಸಮಯುವನರಿದು, ಇದ್ದುದ ವಂಚಿಸದಿದ್ದರೆ,
ಕೂಡಲಸಂಗಮದೇವನೊಲಿದು ಸಲುಹುವನು.

೨೫೦. ನೋಡುವರುಳ್ಳರೆ ಮಾಡುವೆ ದೇಹಾರವ. ಎನಗೊಂದು ನಿಜ
ವಿಲ್ಲ. ಎನಗೊಂದು ನಿಷ್ಪತ್ತಿ ಇಲ್ಲ. ಲಿಂಗವ ತೋರಿ ಉವರವ ಹೊರೆವ
ಭಂಗಾರ ನಾನು ಕೂಡಲಸಂಗಮದೇವಾ,

೨೫೧. ನುಡಿವರೆ ಮುತ್ತಿನ ಹಾರದಂತಿರಬೇಕು. ನುಡಿವರೆ ಮಾಣಿ
ಕ್ಯದ ದೀಪ್ತಿಯಂತಿರಬೇಕು. ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು.
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು. ನುಡಿಯೊಳಗಾಗಿ ನಡೆಯ
ದಿದ್ದರೆ ಕೂಡಲಸಂಗಮದೇವನೆಂತೊಲಿವನಯ್ಯ ?

---

## (೨೩) ಅಹಂಕಾರಿಯಾಗಬೇಡ.

೨೫೨. ಅವರಿವರೆನ್ನದೆ, ಚರಣಕ್ಕೆರಗಲು, ಅಯ್ಯ, ತನುವೇರಿ ಬೆಬ್ಬನೆ
ಬೆರೆವೆ ನಾನು. ಕೆಚ್ಚು ಬೆಳೆಯಿತ್ತಯ್ಯ! ಆ ಕಿಚ್ಚಿಂಗೆ ಕಿಚ್ಚನಿಕ್ಕಿ ಸುಟ್ಟ
ಬೆಳುಕನ ಮಾಡಿ, ಬೆಳುಗಾರದಂತೆ ಮಾಡು ಕೂಡಲಸಂಗಮದೇವಾ.

೨೫೩. ಆನೆಯನೇರಿಕೊಂಡು ಹೊದಿರೇ ನೀವು. ಕುದುರೆಯನೇರಿ
ಕೊಂಡು ಹೊದಿರೇ ನೀವು. ಕುಂಕುಮ ಕಸ್ತುರಿಯ ಪೂಸಿಕೊಂಡು
ಹೋದಿರೇ ನೀವು. ಸತ್ಯದ ನಿಲವನರಿಯದೆ ಹೋದಿರಲ್ಲಾ! ಸದ್ಗುಣವೆಂಬ
ಫಲವ ಬಿತ್ತದೆ ಬೆಳೆಯದೆ ಹೋದಿರಲ್ಲಾ! ಅಹಂಕಾರವೆಂಬ ಮದಗಜವ
ನೇರಿ, ಮೂವಿಧಿಗೆ ಗುರಿಯಾಗಿ ಕೆಟ್ಟು ಹೋದಿರಲ್ಲಾ! ನಮ್ಮ ಕೂಡಲ
ಸಂಗಮದೇವರನರಿಯದೆ ನರಕಕ್ಕೆ ಭಾಜನವಾದಿರಲ್ಲಾ!

೨೫೪. ‖ಶ್ಲೋ॥ ವೇದಾದೀನಾಂ ತು ನಿರ್ನ್ನಾಮ । ಮಹತ್ವಂ ಮಹದ್ಯೈ
ಶ್ವರಂ । ಗೂರೂಕ್ತ ಮನ್ತ್ರಮಾರ್ಗೇಣ । ಇಷ್ಟಲಿಂಗಂ ತು ಶಾಂಕರೀ ॥ ಎಂದು
ದಾಗಿ, ವಚನಪಾತಕವೆನ್ನ ವಚನದೋಷವೆನ್ನ ಕಾಡಿ ಕಾಡಿ ಕೆಡಿಸಿಹವೆನ್ನ,
ಕೂಡಲಸಂಗಮದೇವಾ, ಅಹಂವೆಂಬ ಅಹಂಕಾರವೆನ್ನ.

೨೫೫. ಮನಕ್ಕೆ ನಾಚದ ವಚನ, ವಚನಕ್ಕೆ ನಾಚದ ಮನ. ಕುಂದು
ಹೆಚ್ಚು ನುಡಿವೆ. ಒಂದು ಮಾತಿನ ಗೆಲಕ್ಕೆ ಹಿಡಿದು ಹೋರುವೆ. ಕೂಡಲ
ಸಂಗನ ಶರಣರೆನ್ನಾಳ್ದರೆಂಬೆ.

೨೫೬. ನಡೆಯ ಕಂಡು ನಂಬೆ. ನುಡಿಯೆಲ್ಲ ಉಪಚಾರ. ಮಿಗಿ
ಲೊಂದು ಮಾತು ಬಂದರೆ ಸೈರಿಸಲಾರೆನು. ತುಯ್ಯಲಾದರೆ ಉಂಬೆ.



ಹುಯ್ಯಲಾದರೆ ಓಡುವೆ. ಆಳು ಬೇಡಿದರೆ ಆಳ್ದನೇನನೀವನಯ್ಯ? ಆಳಾಗಿ
ಹೊಕ್ಕು ಅರಸಾಗಿ ನಡೆದರೆ ಅಳಿಗೊಂಡಿತ್ತೆನ್ನ ಕೂಡಲಸಂಗನ ಭಕ್ತಿ.

೨೫೭. ಹಾವ ತಿಂದವರ ನುಡಿಸಬಹುದು. ಗರ ಹೊಡೆದವರ ನುಡಿಸ
ಬಹುದು. ಸಿರಿ ಗರ ಹೊಡೆದವರ ನುಡಿಸಲುಬಾರದು ನೋಡಯ್ಯ! ಬಡ
ತನವೆಂಬ ಮಂತ್ರವಾದಿ ಹೊಗಲು, ಒಡನೆ ನುಡಿವರಯ್ಯಾ ಕೂಡಲ
ಸಂಗಮದೇವಾ.

---

## (೨೪) ವಿನಯವುಳ್ಳವನಾಗಿರು.

೨೫೮. ಎನಗಿಂದ ಕಿರಿಯರಿಲ್ಲ. ಶಿವಭಕ್ತರಿಗಿಂದ ಹಿರಿಯರಿಲ್ಲ. ನಿಮ್ಮ
ಪಾದ ಸಾಕ್ಷಿ. ಎನ್ನ ಮನ ಸಾಕ್ಷಿ. ಕೂಡಲಸಂಗಮದೇವ ಎನಗಿದೇ ದಿಬ್ಯ.

೨೫೯. ಕಂಡ ಭಕ್ತರಿಗೆ ಕೈಮುಗಿವಾತನೇ ಭಕ್ತ. ಮೃದುವಚನವೇ
ಸಕಲ ಜಪಂಗಳಯ್ಯಾ! ಮೃದುವಚನವೇ ಸಕಲ ತಪಂಗಳಯ್ಯಾ! ಸದು
ವಿನಯವೇ ಸದಾಶಿವನ ಒಲುಮೆಯಯ್ಯ! ಕೂಡಲಸಂಗಯ್ಯನಂತಲ್ಲದೊ
ಲ್ಲನಯ್ಯ.

೨೬೦. ಏನಿ ಬಂದಿರಿ. ಹದುಳವಿದ್ದಿರೆಂದರೆ, ನಿಮ್ಮ ಮೈಸಿರಿ ಹಾರಿ
ಹೋಹುದೇ? ಕುಳ್ಳಿರೆಂದರೆ ನೆಲ ಕುಳಿ ಹೋಹುದೇ? ಒಡನೆ ನುಡಿದರೆ
ಶಿರ ಹೊಟ್ಟೆಯೊಡೆವುದೇ? ಕೊಡಲಿಲ್ಲದಿದ್ದರೆ ಒಂದು ಗುಣವಿಲ್ಲದಿದ್ದರೆ ಮೂಗ
ಕೊಯ್ಯದೆ ಮಾಣ್ಬನೇ ಕೂಡಲಸಂಗಮದೇವಯ್ಯ?

೨೬೧. ಒಡೆಯರಾಡುವ ಮಾತ ಕಡೆಪರಿಯಂತರ ಕೇಳಿ, ಇದಿರು
ವೋಗಿ ಕಿಂಕರನಾಗಿ ನಡುಗುತ್ತ ಬಿನ್ನಹವ ಮಾಡುವ ಸದ್ಭಕ್ತರ ತೋರಯ್ಯ
ಎನಗೆ. ಒಡೆಯರಾಡುವ ಮಾತ ಕಂಡು, ಕರದಲ್ಲಿ ಕೆಡೆಮೆಟ್ಟಿ ಬಾಯಿ
ಘನವೆಂದು ಆಡುವನ ತೋರದಿರಯ್ಯ. ಅವನ ಸಂಗದಲ್ಲಿ ಇರಿಸದಿರಯ್ಯ.
ಅವನ ಸಹಪಂಙ್ತಿಯಲ್ಲಿ ಕುಳ್ಳಿರಿಸದಿರಯ್ಯ. ಕೂಡಲಸಂಗಮದೇವಯ್ಯ ನಿಮ್ಮ
ಬೇಡುವುದಿದೊಂದೇ ವರವ.

೨೬೨. ಕಾಗೆ ವೃಷ್ಟಿಸುವ ಹೊನ್ನ ಕಳಶವಹುದರಿಂದ, ಒಡೆಯರು
ಜೋಗೈಸುವ ಚಮ್ಮಾವುಗೆಯ ಮಾಡಯ್ಯ. ಅಯ್ಯಾ ಆಯ್ಯಾ, ನಿಮ್ಮ ಶರಣರ
ಪಾದಕ್ಕೆ ಚಮ್ಮಾವುಗೆಯ ಮಾಡಯ್ಯ. ‖ಶ್ಲೋ॥ ಕರ್ಮಾವಲಂಬನಾಃ ಕೇಚಿತ್
ಜ್ಞಾನಾವಲಂಬನಾ: । ವಯಂ ತು ಶಿವಭಕ್ತಾನಾಂ ಪಾದುಕಸ್ಯಾವಲಂಬನಾಃ ।
ಎಂದುದಾಗಿ ಕೂಡಲಸಂಗಮದೇವಾ ನಿಮ್ಮ ಸೆರೆಗೊಡ್ಡಿ ಬೇಡುವುದಿದೊಂದೇ
ವರವ ಕರುಣಿಸಯ್ಯ.

೨೬೩. ಎನ್ನವರೊಲಿದು ಹೊನ್ನ ಶೂಲದಲಿಕ್ಕಿದರೆನ್ನ ಹೊಗಳಿ ಹೊಗಳಿ. ಎನ್ನ ಹೊಗಳತೆ ಎನ್ನ ಮೈಗೊಂಡಿತಲ್ಲಾ! ಅಯ್ಯೋ ನೊಂದೆನು, ಸೈರಿಸಲಾರೆನು. ನಿಮ್ಮ ಮನ್ನಣೆಯ ಮಸೆದಲಗಾಗಿ ತಾಗಿತ್ತಲ್ಲಾ! ಅಯ್ಯೋ ನೊಂದೆನು ಸೈರಿಸಲಾರೆನು. ಕೂಡಲಸಂಗಮದೇವ ನೀನೆನಗೊಳ್ಳಿದನಾದರೆ, ಎನ್ನ ಹೊಗಳತೆಗಡ್ಡ ಬಾರಾ ಧರ್ಮೀ.

೨೬೪. ಎನ್ನಲ್ಲಿ ಭಕ್ತಿ ಸಾಸವೆಯ ಷಡ್ಭಾಗದಿನಿತಿಲ್ಲ. ಎನ್ನ ಭಕ್ತನೆಂಬರು. ಎನ್ನ ಸಮಯಾಚಾರಿ ಎಂಬರು. ನಾನೇನ ಪಾಪವ ಮಾಡಿಹೆನು? ಬೆಳೆಯುದ ಮುನ್ನವೆ ಕೊಯ್ವರೇ ಹೇಳಯ್ಯ? ಇರಿಯದ ವೀರ ಇಲ್ಲದ ಸೊಬಗುವ ಎಲ್ಲಾ ಒಡೆಯರು ಏರಿಸಿ ನುಡಿವರು. ಎನಗಿದು ವಿಧಿಯೇ ಕೂಡಲಸಂಗಮದೇವಾ?

೨೬೫. ಮರದ ನೆಳಲಲ್ಲಿದ್ದು ತನ್ನ ನೆಳಲನರಸಬಹುದೇ? ನಿಮ್ಮ ಶರಣರ ಮುಂದೆ ನಾನೇತರ ಭಕ್ತನಯ್ಯ? ನಿಮ್ಮ ಶರಣರ ಮುಂದೆ ನಾನೇತರ ಯುಕ್ತನಯ್ಯ? ಆನು ಭಕ್ತನೆಂಬ ನುಡಿ ಸುಡದೇ ಕೂಡಲಸಂಗಮದೇವಾ?

೨೬೬. ಮೋಟನ ಮಾಳಿ, ಮೂಕೊರಿತೆಯ ಶೃಂಗಾರ, ಬೇಟ ಕುರುಡಂಗೆ ನಗೆಗೆಡೆಯಾಯಿತ್ತು ನಮ್ಮ ಕೂಡಲಸಂಗನ ಶರಣರ ಮುಂದೆ ಆನು ಭಕ್ತನೆಂಬ ನಾಚಿಕೆ ಸಾಲದೇ?

೨೬೭. ತಮತಮಗೆಲ್ಲ ನೊಸಲಕಣ್ಣವರು. ತಮತಮಗೆಲ್ಲ ನಂದಿವಾಹನರು. ತಮತಮಗೆಲ್ಲ ಖಟ್ವಾಂಗಕಪಾಲತ್ರಿಶೂಲಧರರು. ದೇವರಾರು, ಭಕ್ತರಾರು ಹೇಳಿರಯ್ಯ? ನಮ್ಮ ಕೂಡಲಸಂಗಮದೇವ, ನಿಮ್ಮ ಶರಣರು ಸ್ವತಂತ್ರರು. ಎನ್ನ ಬಚ್ಚ ಬರಿಯ ಬಸವನೆನಿಸಯ್ಯ.

೨೬೮. ಅತ್ತಿತ್ತ ಹೋಗದಂತೆ ಹೆಳವನ ಮಾಡಯ್ಯಾ ತಂದೆ. ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯಾ ತಂದೆ. ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯಾ ತಂದೆ. ನಿಮ್ಮ ಶರಣರ ಪಾದವಲ್ಲದೆ ಅನ್ಯ ವಿಷಯಕ್ಕೆಳಸದಂತೆ ಇರಿಸು ಕೂಡಲಸಂಗಮದೇವಾ.

೨೬೯ ಮೇಲಾಗಲೊಲ್ಲೆ, ಕೀಳಾಗಲೊಲ್ಲದೆ. ಕೀಳಿಂಗಲ್ಲದೆ ಹಯನು ಕರೆವುವೆ? ಮೇಲಾಗಿ ನರಕದಲೋಲಾಡಲಾರೆನು. ನಿಮ್ಮ ಶರಣರ ಪಾದಕ್ಕೆ ಕೀಳಾಗಿರಿಸು ಮಹಾದಾನಿ ಕೂಡಲಸಂಗಮದೇವಾ.

೨೭೦. ಮಾವಿನ ಕಾಯೊಳಗೊಂದು ಎಕ್ಕೆಯ ಕಾಯಿ ನಾನಯ್ಯ! ಆನು ಭಕ್ತನೆಂತೆಂಬೆ, ನಿಮ್ಮ ಶರಣರ ಮುಂದೆ ನಾಚಿಕೆಯಿಲ್ಲದೆ? ಕೂಡಲಸಂಗನ ಶರಣರ ಮುಂದೆ ನಾನೆಂತು ಭಕ್ತನಪ್ಪೆನಯ್ಯ?



೨೭೧. ಆ ಕರಿಯಾಕೃತಿಯು ಸೂಕರನ ಹೋಲಿಸಿದರೆ, ಆ ಕರಿಯಾಗಲರಿವುದೆ? ಭೂನಾಗನಾಕೃತಿಯನು ವ್ಯಾಳೇಶನ ಹೋಲಿಸಿದರೆ, ಅದು ವ್ಯಾಳೇಶನಾಗಲರಿವುದೆ? ನಾನು ಭಕ್ತನಾದರೇನಯ್ಯ? ನಮ್ಮ ಕೂಡಲಸಂಗಮದೇವನ ಸದ್ಭಕ್ತರ ಹೋಲಲರಿವೆನೆ?

೨೭೨. ಆನೆ ಆ ದಾರಿಯಲ್ಲಿ ಹೋಯಿತ್ತೆಂದರೆ, ಆಡು ಆ ದಾರಿಯಲ್ಲಿ ಹೋಯಿತ್ತೆನ್ನಬಹುದೇ? ಸಂಗನ ಶರಣರಿಗೆ ಆನು ಸರಿ ಎಂದು ಗಳಹಲುಬಹುದೆ? ಜಂಗಮಕ್ಕೆ ಮಾಡುವ ಭಕ್ತರಿಗೆ ಆನು ಸರಿಯೆ ಹೇಳಾ ಕೂಡಲಸಂಗಮದೇವಾ?

೨೭೩. ಆವಿಹಿಲಾಳು ಭೋಜದೇವಬಲ್ಲಾಳು. ನಾನು ಸೂಳೆ. ನಮ್ಮಕ್ಕನು ಸೂಳೆ. ಬೆಳ್ಳಿಗೆಯಾವಿನ ಕರುವೆಂದರೆ ಅದು ಬಳ್ಳಾಲು ಕರೆವುದೇ? ಕೂಡಲಸಂಗನ ಶರಣರ ಮುಂದೆ ನಾನು ಕಾದೆಹೆ ಬಾಬಿಸಿಲೆ.

---

## (೨೫) ಶರಣರನ್ನು ಮನ್ನಿಸು.

೨೭೪. ಉರಿವ ಕೊಳ್ಳಿಯ ಮಂಡೆಯಲಿಕ್ಕಿದಡುರಿವುದು ಮಾಬುದೇ? ಕಲ್ಲ ಗುಗ್ಗರಿಯ ಮೆಲಿದರೆ, ಹಲ್ಲು ಹೋಹುದು ಮಾಬುದೇ? ಶರಣರೊಡನೆ ಸರಸವಾಡಿದರೆ, ನರಕ ತಪ್ಪದು ಕಾಣಾ ಕೂಡಲಸಂಗಮದೇವ.

೨೭೫. ಹಾವಿನ ಹೆಡೆಗಳ ಕೊಂಡು ಕೆನ್ನೆಯ ತುರಿಸುವಂತೆ, ಉರಿವ ಕೊಳ್ಳಿಯ ಕೊಂಡು ಮಂಡೆಯ ಸಿಕ್ಕ ಬಿಡಿಸುವಂತೆ, ಹುಲಿಯ ಮೀಸೆಯ ಹಿಡಿದುಕೊಂಡು ಒಲೆದು ಉಯ್ಯಾಲನಾಡುವಂತೆ, ಕೂಡಲಸಂಗನ ಶರಣರೊಡನೆ ಮರೆದು ಸರಸವಾಡಿದರೆ, ಸುಣ್ಣದ ಕಲ್ಲ ಮಡಿಲಲ್ಲಿ ಕಟ್ಟಿಕೊಂಡು ಮಡುವ ಬಿದ್ದಂತೆ.

೨೭೬. ಅರಗಿನ ಪುತ್ಥಳಿಯ ಉರಿಯ ನಾಲಿಗೆ ಹೊಯಿದು ಮಾತಾಡುವ ಸರಸಬೇಡ. ಬೆಣ್ಣೆಯ ಬೆಸಕಂಗೆ ಕೆಂಡದುಂಡಲಿಗೆಯ ಮಾಡಿ, ಬೆಲ್ಲವಾಡಿದರೆ ಹಲ್ಲು ಹೋಹುದು. ಕೂಡಲಸಂಗನ ಶರಣರ ಒಡನೆ ಸರಸವಾಡಿದರೆ, ಅದು ವಿರಸ ಕಾಣಿರಯ್ಯ.

೨೭೭. ತೊತ್ತಿಂಗೆ ಲಕ್ಷಣವೇಕಯ್ಯ? ಅವರೊಕ್ಕುದನುಂಡು, ಮಿಕ್ಕುದ ಕಾಯ್ದುಕೊಂಡಿಪ್ಪುದು. ಸರಿ ಹೊರಸೇಕೆ? ಅವಳಿಗೆ ಮಾರುತ್ತರವೇಕೆ? ಕೂಡಲಸಂಗನ ಶರಣರೊಡನೆ ಇದಿರುತ್ತರವೇಕೆ ಸಿಂಬಕಂಗೆ?

೨೭೮. ಅಷ್ಟವಿಧಾರ್ಚನೆ ಷೋಡಶೋಪಚಾರವಿಲ್ಲದೆ, ನಿಮ್ಮ ಮುಟ್ಟಲರಿಯದವರ ಕಂಡಡೆ, 'ಅಯ್ಯ' ಎಂತೆಂಬೆನಯ್ಯ? ಆವ ಭಾವದಲ್ಲಿ ಆವ ಜ್ಞಾನದಲ್ಲಿ

ಆವ ಮುಖದಲ್ಲಿ ಅರಿವರದಾರಯ್ಯ ? ಏನೆಂಬೆ? ನಿಮ್ಮಲ್ಲಿ ಸಮ್ಯಕ್ಕರಾದ ಸತ್ಯ ಶರಣರ ಕಂಡು ಕೂಡಲಸಂಗಮದೇವನವರನಯ್ಯ ಎಂಬೆನು.

೨೭೯. ಸಂಗಸಹಿತ ಶರಣರು ಬಂದರೆ ನಂಬುವುದೆನ್ನ ಮನವು. ನಚ್ಚುವುದೆನ್ನ ಮನವು. ಹಾವು ನೇಣೆಂಬ ಭ್ರಾಂತುಳ್ಳನ್ನಕ್ಕ ನಾನು ಭಕ್ತ ನೆಂತಪ್ಪೆನು? ಅಂಗಲಿಂಗಸಹಿತವಾಗಿ ಬಂದರೆ ಸಂಗ ನೀನೆಂದು ಕಾಂಬೆ. ಮತ್ತೆ ಮನದಲ್ಲಿ ಸಂದೇಹ ಉಳಿದರೆ ಬೆಂದೆನಲ್ಲಾ ನಾನು ಕೂಡಲಸಂಗಮ ದೇವಾ.

೨೮೦. ಲಾಂಛನವ ಕಂಡು ನಂಬುವೆ. ಅವರಂತರಂಗವ ನೀನೇ ಬಲ್ಲೆ. ತೊತ್ತಿಂಗೆ ತೊತ್ತುಗೆಲಸವಲ್ಲದೆ ಅರಸರ ಸುದ್ದಿ ಎಮಗೇಕಯ್ಯ? ರತ್ನಪರೀಕ್ಷೆ ವಜ್ಜ ಕೂಡಲಸಂಗಮದೇವಾ ನಿಮ್ಮ ಶರಣರು.

೨೮೧. ಕೆಂಡದಲ್ಲಿಟ್ಟರೆ ಪ್ಪೆ ಬೆಂದುದೆಂಬರು. ಕೊಂಡಿಟ್ಟವನ ಕೈ ಮುನ್ನವೇ ಬೆಂದುದು. ನೊಂದೆನಯ್ಯ ನಾನು, ನೊಂದೆನಯ್ಯ. ಬೆಂದೆನಯ್ಯ ನಾನು, ಬೆಂದೆನಯ್ಯ. ಕೂಡಲಸಂಗನ ಶರಣರ ಕಂಡು ಕಾಣದಂತಪ್ಪ ಮುಖವಿಟ್ಟರೆ ಅಂದೇ ನೊಂದೆನಯ್ಯಾ.

೨೮೨. ಕುದುರೆ ಸುತ್ತಿಗೆಯುವರ ಕಂಡರೆ ಹೊರಳಿ ಬಿದ್ದು, ಕಾಲ ಹಿಡಿವರಯ್ಯ. ಬಡಭಕ್ತರು ಬಂದರೆ ಎಡೆ ಇಲ್ಲ. ಅತ್ತ ಸನ್ನಿ ಎಂಬರು. ಎನ್ನೊಡೆಯ ಕೂಡಲಸಂಗಯ್ಯನವರ ತಡೆಗೆಡಹಿ ಮೂಗ ಕೊಯ್ಯದೆ ಮಾಬನೇ?

೨೮೩. ಅಡ್ಡ ದೊಡ್ಡ ನಾನಲ್ಲಯ್ಯ. ದೊಡ್ಡ ಬಸಿರು ಎನಗಿಲ್ಲಯ್ಯ. ದೊಡ್ಡವರನಲ್ಲದೆ ನಿಮ್ಮ ಶರಣರು ಮನ್ನಿಸರಯ್ಯ. ಹಡೆದುಂಬ ಸೂಳೆಯಂತೆ ಧನವುಳ್ಳವರನರಿಸಿ ಅರಸಿ ಬೋಧಿಸಲು ಪ್ರಾರ್ಥಿಸಲು, ಮುನ್ನ ನಾನರಿಯೆ ನಯ್ಯ. ದೊಡ್ಡತನವೆನಗಿಲ್ಲಯ್ಯ. ಅಂಜುವೆ ಅಂಜುವೆ ನಿಮ್ಮ ಪ್ರಮಥರಿಗೆ. ಅನಾಥ ನಾನಯ್ಯ ಕೂಡಲಸಂಗಮದೇವಾ.

---

## (೨೬) ಭೃತ್ಯಾಚಾರವನ್ನು ಪಾಲಿಸು.

೨೮೪. ಬಸವ ಬಾರಯ್ಯ. ಮರ್ತ್ಯಲೋಕದೊಳಗಣ ಭಕ್ತರುಂಟೇ ಹೇಳಯ್ಯ? ಮತ್ತಾರೂ ಇಲ್ಲಯ್ಯ. ಮತ್ತಾರೂ ಇಲ್ಲಯ್ಯ. ನಾನೊಬ್ಬನೇ ಭಕ್ತ. ಮರ್ತ್ಯಲೋಕದೊಳಗಣ ಭಕ್ತರೆಲ್ಲರು ಜಂಗಮಲಿಂಗ ನೀನೇ ಅಯ್ಯ ಕೂಡಲ ಸಂಗಮದೇವಾ.



೨೮೫ ಭಕ್ತ ಭಕ್ತನ ಮನೆಗೆ ಬಂದರೆ, ಭೃತ್ಯಾಚಾರವ ಮಾಡಬೇಕು. ಕರ್ತನಾಗಿ ಕಾಲ ತೊಳೆಯಿಸಿಕೊಂಡರೆ ಹಿಂದೆ ಮಾಡಿದ ಭಕ್ತಿಗೆ ಹಾನಿ. ಲಕ್ಷ ಗಾವುದ ದಾರಿಯ ಹೋಗಿ, ಭಕ್ತನು ಭಕ್ತನ ಕಾಂಬುದು ಸದಾಚಾರ. ಅಲ್ಲಿ ಕೂಡಿ ದಾಸೋಹವ ಮಾಡಿದರೆ ಕೂಡಿಕೊಂಬನು ನಮ್ಮ ಕೂಡಲಸಂಗಯ್ಯ.

೨೮೬. ಇತ್ತ ಬಾರಯ್ಯ, ಇತ್ತ ಬಾರಯ್ಯ, ಎಂದು ಭಕ್ತರೆಲ್ಲರು ಕೂರ್ತು ಪತ್ತೆ ಕರೆವುತ್ತಿರಲು ಮತ್ತೆ ಕೆಲಕೆ ಹೋಗಿ ಶರಣೆಂದು ಹಸ್ತಬಾಯನೆ ಮುಚ್ಚಿ ಕಿರಿದಾಗಿ ಭೃತ್ಯಾಚಾರವ ನುಡಿದು ವಿನಯ ತದ್ಧ್ಯಾನವುಳ್ಳರೆ ಎತ್ತಿಕೊಂಬ ನಯ್ಯ ಕೂಡಲಸಂಗಮದೇವ ಪ್ರಮಥರ ಮುಂದೆ.

೨೮೭. ಚೆನ್ನ ಚಾರಮನ ಬಂಟ ನಾನಯ್ಯ. ಎನ್ನ ಚಾಂಗುಬೊಲ್ಲನ ಕಾವ ಗೋವನೆಂಬರು. ಕೂಡಲಸಂಗನ ಶರಣರೊಡೆಯರಾಗಿ, ತಮ್ಮ ತೊತ್ತಿನ ಮಗನೆಂದು ಒಲಿದಂತೆ ನುಡಿವರು.

೨೮೮. ಡಂಬಡಳುಹು ಎನ್ನದಯ್ಯ. ಡಂಭಕನೆಂಬುವ ನಾನು. ನಿಮ್ಮ ನಂಬಿದ ಶರಣರ ಡಿಂಗರಿಗ ನಾನು ಕೂಡಲಸಂಗಮದೇವಾ.

೨೮೯. ಕೆಯ್ಯ ಬೋರಿಗೆ, ಮಂಡೆಯ ಮೇಲೆ ಸಿಂಬಿ, ಸಿಂಬಕನ ಮನೆಯ ಮಗ ನಾನಯ್ಯ. ಕೂಡಲಸಂಗಮದೇವರ ಮಂಚದ ಕೂಡೇರಿ ಬಂದ ತೊತ್ತಿನ ಮಗ ನಾನಯ್ಯ.

೨೯೦. ಅಯ್ಯ ನಿಮ್ಮ ವಂಶಾವಳಿಯಲು ಒಬ್ಬ ತೊತ್ತಿನ ಮಗಗೆ ಹುಟ್ಟಿದಾತನ ತೊತ್ತಿನ ಮಗ ನಾನಯ್ಯ. ಬಳಿದೊತ್ತು, ಬಳಗದೊತ್ತು, ವಂಶ ದೊತ್ತು ನಾನಯ್ಯ. ಕೂಡಲಸಂಗಮದೇವಾ, ನಿಮ್ಮ ಒಡೆತನಕ್ಕೆ ಕೇಡಿಲ್ಲವಾಗಿ ಎನ್ನ ತೊತ್ತುತನಕ್ಕೆ ಕೇಡಿಲ್ಲ.

೨೯೧. ಅವನಾದೊಡೇನು? ಶ್ರೀ ಮಹಾದೇವನ ನೆನೆವನ ಬಾಯ ತಂಬುಲವ ಮೆಲುವೆ, ಬೀಳುಡಿಗೆಯ ಹೊದಿವೆ, ಪಾದರಕ್ಷೆಯ ಕಾಯ್ದು ಬದು ಕುವೆ, ಕೂಡಲಸಂಗಮದೇವರ ಮಾಣದೆ ನೆನೆವವನ.

೨೯೨. ಆಯತ ಸ್ವಾಯತ ಸನ್ನಿಹಿತದನುಭಾವವ ನಾನೆತ್ತ ಬಲ್ಲೆನು? ಲಿಂಗಜಂಗಮಕ್ಕೆ ಮಾಡಿ ನೀಡುವ ಅಚ್ಚ ಶರಣರ ಮನೆಯಲು ಭೃತ್ಯನಾಗಿ ಪ್ಪೆನಯ್ಯ. ಇದು ಕಾರಣ ಕೂಡಲಸಂಗಮದೇವ ಅನ್ಯವನರಿಯೆನಾಗಿ.

---

## (೨೭) ಸ್ತ್ರೀಯರನ್ನು ಮನ್ನಿಸು-ವ್ಯಭಿಚಾರಿಯಾಗದಿರು.

೧೯೩. ಗಂಡ ಶಿವಲಿಂಗದೇವರ ಭಕ್ತ- ಹೆಂಡಿತಿ ಮಾರಿ ಮಸಣಿಯ ಭಕ್ತೆ. ಗಂಡ ಕೊಂಬುದು ಪಾದೋದಕ ಪ್ರಸಾದ. ಹೆಂಡಿತಿ ಕೊಂಬುದು ಸುರೆ ಮಾಂಸ. ಭಾಂಡಭಾಜನ ಶುದ್ಧವಿಲ್ಲದವರ ಭಕ್ತಿ ಹೆಂಡದ ಮಡಿಕೆಯ ಹೊರಗೆ ತೊಳೆದಂತೆ ಕೂಡಲಸಂಗಮದೇವಾ.

೧೯೪. ಲಿಂಗ ಜಂಗಮ ಒಂದೇ ಎಂದು ನಂಬಿದ ಬಳಿಕ ಅವರಂಗನೆಯರು ಲಿಂಗದ ರಾಣಿವಾಸ. ಅಲ್ಲಿಯೂ ಮೇಳ, ಇಲ್ಲಿಯೂ ಮೇಳ, ಚೌಡೇಶ್ವರಿಯಲ್ಲಿ ಮೇಳ. ಮಾತೆ ಎಂಬ ಭಾವ ತಪ್ಪಿ ಅಪ್ಪಿದವರ ತಲೆಯ ಕೊಂಬ ಕೂಡಲಸಂಗಮದೇವ.

೧೯೫. ಎಲ್ಲಿ ನೋಡಿದಡಲ್ಲಿ ಮನವೆಳಸಿದಡೆ, ಆಣೆ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ಪರವಧುವನು ಮಹಾದೇವಿ ಎಂಬೆ ಕೂಡಲಸಂಗಮದೇವಾ.

೧೯೬. ಹೋಗಬಿಟ್ಟು, ಮರಳಿ ಹಿಂದೆ ನೋಡಿ, ಮತ್ತಾಗಬೇಕೆಂಬ ಸಂದೇಹವುಳ್ಳನ್ನಕ್ಕ, ಅದೇ ಪರದಾರ. ನಾಯಕ ನರಕ ತಪ್ಪದು. ಅನ್ಯವಧುವೆಂಬುದು ನಿಮ್ಮ ರಾಣಿವಾಸ. ಇದೇ ದಿಬ್ಯ ಕೂಡಲಸಂಗಮದೇವ

೧೯೭ ನೋಡಲಾಗದು, ನುಡಿಸಲಾಗದು. ಪರಸ್ತ್ರೀಯರ ಬೇಡ ಕಾಣಿರೋ. ತಗರ ಬೆನ್ನಲ್ಲಿ ಹರಿದ ಸೊಣಗನಂತೆ ಬೇಡ ಕಾಣಿರೋ. ಒಂದಾಸೆಗೆ ಸಾವಿರ ವರುಷ ನರಕದಲದ್ದುವ ಕೂಡಲಸಂಗಮದೇವ

೧೯೮. ಒಡೆಯರು ತಮ್ಮ ಮನೆಗೆ ಒಡಗೊಂಡು ಹೋದರೆ, ತುಡುಗುಣಿತನದಲ್ಲಿ ಪರವಧುವ ನೋಡುವ ಸರಸ ಬೇಡ ಕಾಣಿರಣ್ಣಾ. ಒಡೆಯರಸಿಯ ಸರಸ ಬೇಡ. ಕೂಳಸೊಕ್ಕು ತಲೆಗೇರಿ, ರಾಣಿವಾಸದೊಡನೆ ಸರಸ ಬೇಡ. ಕೂಡಲಸಂಗಮದೇವ ಕರಿಸಿ ತಗಸಯ್ಯಾ

೧೯೯. ಹರಿವ ಹಾವಿಗಂಜೆ. ಉರಿಯ ನಾಲಿಗೆಗಂಜೆ, ಸುರಿಗೆಯ ಮೊನೆಗಂಜೆ. ಒಂದಕ್ಕಂಜುವೆನೊಂದಕ್ಕಳುಕುವೆ. ಪರಸ್ತ್ರೀ ಪರಧನವೆಂಬ ಜೂಬಿಂಗಂಜುವೆ. ಮುನ್ನಂಜದ ರಾವಣನೇವಿಧಿಯಾದ ? ಅಂಜುವೆನಯ್ಯಾ ಕೂಡಲಸಂಗಮದೇವಾ.

---

## (೨೮) ದಯವುಳ್ಳವನಾಗಿರು.

೨೦೦. ದಯವಿಲ್ಲದ ಧರ್ಮವದಾವುದಯ್ಯ ? ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ. ದಯವೇ ಧರ್ಮದ ಮೂಲವಯ್ಯ. ಕೂಡಲಸಂಗಯ್ಯನಂತಲ್ಲದೊಲ್ಲನಯ್ಯ.



೨೦೧. ಕೊಲ್ಲೆನಯ್ಯ. ಪ್ರಾಣಿಗಳ. ಮೆಲ್ಲೆನಯ್ಯ ಬಾಯಿಚ್ಚೆಗೆ. ಒಲ್ಲೆನಯ್ಯ ಪರಸತಿಯರ ಸಂಗವ. ಬಲ್ಲೆನಯ್ಯ. ಮುಂದೆ ತೊಡಕುಂಟೆಂಬುದ. ಬಳ್ಳದ ಬ್ರಯಂತೆ ಒಂದೆ ಮನವ ಮಾಡಿ ನಿಲ್ಲೆಂದು ನಿಲಿಸಯ್ಯ. ಕೂಡಲಸಂಗಮದೇವ.

೨೦೨. ಆನೆ ಅಂಕುಶಕ್ಕೆ ಅಂಜುವುದೇ ಅಯ್ಯ, ಮಾಣದೆ ಸಿಂಹನ ನಖವೆಂದು ಅಂಜುವುದಲ್ಲದೆ? ಆನು ಬಿಜ್ಜಳಂಗಂಜುವೆನೇ ಅಯ್ಯ, ಕೂಡಲಸಂಗಮದೇವ, ನೀನು ಸರ್ವಜೀವದಯಾಪಾರಿಯಾದ ಕಾರಣ ನಿಮಗಂಜುವೆನಲ್ಲದೆ?

೨೦೩. ಅರಿದರಿದು ಸಮಗಾಣಿಸಬಾರದು. ತ್ರಾಸಿನ ಕಟ್ಟಳೆಯಂತೆ ಇನಿತು ವೆಗ್ಗಳವಾದರೆ, ಈಶ್ವರ ನೋಡಿ ಇಕ್ಕದೆ ಮಾಣ್ಬನೇ? ಪಾತ್ರಾಪಾತ್ರವೆಂದು ಕಂಡಡೆ ಶಿವನೆಂತು ಮೆಚ್ಚುವನು? ಜೀವ ಜೀವಾತ್ಮನ ಸರಿ ಎಂದು ಕಂಡರೆ, ಸಮವೇದಿಸದಿಪ್ಪನೇ ಶಿವನು ? ತನ್ನ ಮನದಲ್ಲಿ 'ಯತ್ರ ಜೀವಸ್ತತ್ರ ಶಿವ' ನೆಂದು, ಸರ್ವಜೀವದಯಾಪಾರಿಯಾದಡೆ ಕೂಡಲಸಂಗಮದೇವ ಕೈಲಾಸದಿಂದ ಬಂದು ಎತ್ತಿಕೊಳ್ಳನೇ ಅವರನು ?

---

## (೨೯) ದಾನಧರ್ಮ ಮಾಡು.

೨೦೪. ಕಾಗೆ ಒಂದಗಳ ಕಂಡರೆ, ಕರೆಯದೆ ತನ್ನ ಬಳಗವನು ? ಕೋಳಿ ಒಂದು ಕುಟುಕ ಕಂಡರೆ, ಕೂಗಿ ಕರೆಯದೆ ತನ್ನ ಕುಲವೆಲ್ಲವ ? ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ, ಆ ಕಾಗೆ ಕೋಳಿಗಿಂದ ಕರಕಷ್ಟ ಕೂಡಲಸಂಗಮದೇವಾ.

೨೦೫. ಆವನಾದರೇನು ? ಹೇಮವಿಲ್ಲದಂಗೈಸಬಹುದೇ ? ಕೊಡಲಿಲ್ಲೆಂಬುದರಿಂದ ಸಾಯಲುಬಹುದು. ಸೈರಿಸಬಾರದು. ಬೇಡುವರ ನೋಡಿ ಈಯಲಿಲ್ಲದ ಜೀವನವದೇಕೆ ಕೂಡಲಸಂಗಮದೇವಾ?

೨೦೬. ಆಯುಷ್ಯ ಉಂಟು ಪ್ರಳಯವಿಲ್ಲೆಂದು, ಅರ್ಥವ ಮಡುಗುವಿರಿ. ಆಯುಷ್ಯ ತೀರಿ, ಪ್ರಳಯ ಬಂದರೆ, ಆ ಅರ್ಥವನುಂಬುವರಿಲ್ಲ. ನೆಲನಗಿದು ಮಡುಗದಿರಾ! ನೆಲ ನುಂಗಿದಡುಗುಳುವುದೆ? ಕಣ್ಣಿನಲ್ಲಿ ನೋಡಿ ಮಣ್ಣಿನಲ್ಲಿ ನೆರಹಿ, ಉಣ್ಣದೆ ಹೋಗದಿರಾ. ನಿನ್ನ ಮಡದಿಗಿರಲೆಂದರೆ, ನಿನ್ನ ಮಡದಿಯ ಕೃತಕ ಬೇರೆ. ನಿನ್ನ ಒಡಲು ಕೆಡೆಯಲು, ಮತ್ತೊಬ್ಬನಲ್ಲಿಗೆ ಅಡಕದೆ ಮಾಬಳೇ? ಹೆರರಿಗಿಕ್ಕಿ ಹೆಗ್ಗುರಿಯಾಗಿ ಕೆಡಬೇಡ. ಕೂಡಲಸಂಗನ ಶರಣರಿಗೆ ಒಡನೆ ಸವಿಸುವುದು.

೩೦೭. ಉಂಬಾಗಳಿಲ್ಲೆನ್ನ. ಉಡುವಾಗಳಿಲ್ಲೆನ್ನ. ಬಂಧುಗಳು ಬಂದಾಗಳಿಲ್ಲೆನ್ನ. ಲಿಂಗಕ್ಕೆ ಇಲ್ಲೆಂಬ. ಜಂಗಮಕ್ಕೆ ಇಲ್ಲೆಂಬ. ಬಂದ ಪುರಾತರಿಗೆ ಇಲ್ಲೆಂಬ. ಸಾವಾಗ ದೇಹವ ದೇಗುಲಕ್ಕೆ ಒಯ್ಯೆ ಎಂಬ. ದೇವರಿಗೆ ಹೆಣ ಬಿಟ್ಟಿ ಹೇಳಿತ್ತೆ ಕೂಡಲಸಂಗಮದೇವಾ ?

೩೦೮. ಅರ್ಥಪ್ರಾಣಾಭಿಮಾನಕ್ಕೆ ಒಡೆಯರು ಸದ್ಭಕ್ತರಲ್ಲದೆ ಎನಗಾರು ಇಲ್ಲಯ್ಯ! 'ಭೃತ್ಯಾಪರಾಧೇ ಸ್ವಾಮಿನೋದ್ದಂಡ' ಕೂಡಲಸಂಗಮದೇವಾ ನೀವೇ ಪ್ರಮಾಣು.

೩೦೯. ಕಟ್ಟುವೆನುಪ್ಪರ ಗುಡಿಯ ಜಗವರಿಯೆ. ಮಾಡುವೆನೆನ್ನ ಕಾಯ ಕೆಡುವನ್ನಕ್ಕ. ಬೇಡುವುದೆನ್ನ ತನುಮನಧನವ ಬೇಡಲಾರದ ಹಂಪೆ ನೀ ಕೇಳಾ. ಈ ಬಿರಿದು ಸಂದಿತ್ತು ಕೂಡಲಸಂಗಮದೇವ.

೩೧೦ ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ, ಸತ್ಪಾತ್ರಕ್ಕೆ ಸಲ್ಲದಯ್ಯ! ನಾಯ ಹಾಲು ನಾಯಿಂಗಲ್ಲದೆ, ಪಂಚಾಮೃತಕ್ಕೆ ಸಲ್ಲದಯ್ಯ! ನಮ್ಮ ಕೂಡಲಸಂಗನ ಶರಣರಿಗಲ್ಲದೆ ಮಾಡುವ ಅರ್ಥ ವ್ಯರ್ಥ ಕಂಡಯ್ಯ.

---

## (೪೦) ಶರಣರಿಗೆ ದಾನಮಾಡು.

೩೧೧. ಆಡುವುದಳವಟ್ಟಿತ್ತು. ಹಾಡುವುದಳವಟ್ಟಿತ್ತು. ಅರ್ಚನೆ ಅಳವಟ್ಟಿತ್ತು. ಪೂಜನೆ ಅಳವಟ್ಟಿತ್ತು. ನಿತ್ಯ ಲಿಂಗಾರ್ಚನೆ ಮುನ್ನವೇ ಅಳವಟ್ಟಿತ್ತು. ಕೂಡಲಸಂಗನ ಶರಣರು ಬಂದರೆ, ಏಗೈವುದು ಬೆಸನೆಂಬುದು ಒಪ್ಪಚ್ಚಿ ಅಳವಡದು.

೩೧೨. ಆಡುತ್ತ ಹಾಡುತ್ತ ಭಕ್ತಿಯ ಮಾಡಬಹುದು ಲಿಂಗಕ್ಕೆ. ಅದು ಬೇಡದು ಬೆಸಗೊಳ್ಳದು. ತಂದೊಮ್ಮೆ ನೀಡಬಹುದು. ಕುಡುವ ಬೇಡುವ ಜಂಗಮ ಬಂದರೆ ನೀಡಲು ಬಾರದು ಕೂಡಲಸಂಗಮದೇವಾ.

೩೧೩. ಕಲ್ಲ ನಾಗರ ಕಂಡರೆ ಹಾಲನೆರೆ ಎಂಬರು. ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯ. ಉಂಬ ಜಂಗಮ ಬಂದರೆ ನಡೆ ಎಂಬರು. ಉಣ್ಣದ ಲಿಂಗಕ್ಕೆ ಬೋನವ ಹಿಡಿ ಎಂಬರಯ್ಯಾ! ನಮ್ಮ ಕೂಡಲಸಂಗನ ಶರಣರ ಕಂಡು, ಉದಾಸೀನವ ಮಾಡಿದರೆ, ಕಲ್ಲ ತಾಗಿದ ಮಿಟ್ಟೆಯಂತಪ್ಪರಯ್ಯಾ.

೩೧೪. ನಾಗಂಗೆ ಹೊಸತನಿಕ್ಕಿಹೆವೆಂಬರು. ನಾಗ ಬಂದರೆ ಕೋಲ ಕಳೆದುಕೊಂಬರಯ್ಯ. ಆಗದಯ್ಯ. ಜಂಗಮಲಿಂಗವೆಂಬ ಶಬ್ದವಾಗದಯ್ಯ. ಕೂಡಲಸಂಗಮದೇವರಲ್ಲಿ! ಸಿಂಧುಬಲ್ಲಾಳಂಗಲ್ಲದಾಗದಯ್ಯ.



೩೧೫. ಮೂಗಿಲ್ಲದ ಮುಖಕ್ಕೆ ಶೃಂಗಾರವೇ? ವಿಕೃತವೇಷಧಾರಿಯಾನು, ಭಂಡನು, ಲಜ್ಜೆಭಂಡನು. ಕೂಡಲಸಂಗನ ಶರಣರಲ್ಲಿ ಹಾವ ತೋರಿ ಹವಿಯ ಬೇಡುವಂತೆ.

೩೧೬. ಸತ್ಯವುಳ್ಳ ಭಂಡವ ತುಂಬುವುದಯ್ಯಾ! ಸುಯಿಧಾನ ಸುಯಿಧಾನವಯ್ಯ! ಮನ ಧಾರೆವಟ್ಟಲು. ಕೂಡಲಸಂಗನ ಶರಣರು ಹಿಡಿಯದ ಭಂಡವನು ಆರಾದಡಾಗಲಿ ಹೋಗಲೀಯರಯ್ಯ.

೩೧೭ ದ್ವಿಜರಿಗೆ ಕೊಟ್ಟು ಹಲಬರು ಕೆಟ್ಟರು. ಉದ್ಧರಿಸುವನೊಬ್ಬ ಶಿವಶರಣ ಸಾಲದೇ? ನಾರಾಯಣ ವೃದ್ಧ ಬ್ರಾಹ್ಮಣನಾಗಿ ಬಂದು ಬಲಿಯ ಭೂಮಿಯ ದಾನವ ಬೇಡಿದ. ಕೊಟ್ಟ ಬಲಿ. ಬಂಧನಕ್ಕೆ ಸಿಕ್ಕಿದ. ಈಶ ಜಂಗಮವಾಗಿ ಬಂದು, ದಾಸನ ವಸ್ತ್ರವ ಬೇಡಿದ. ಕೊಟ್ಟ ದಾಸ. ತಪ ನಿಧಿಯ ಪಡೆದ. ಕಪಟದಿಂದ ನಾರಾಯಣ ಹಾರುವನಾಗಿ ಬಂದು, ಕರ್ಣನ ಕವಚವ ಬೇಡಿದ. ಕೊಟ್ಟ ಕರ್ಣ. ಕಳದಲ್ಲಿ ಮಡಿದ. ಕಾಮಾರಿ ಜಂಗಮವಾಗಿ ಬಂದು, ಸಿರಿಯಾಳನ ಮಗನ ಬೇಡಿದ. ಕೊಟ್ಟ ಸಿರಿಯಾಳ. ಕಾಂಚೀಪುರವ ಕೈಲಾಸಕೊಯ್ದ. ನಾರಾಯಣ ಹಾರುವನಾಗಿ ಬಂದು, ನಾಗಾರ್ಜುನನ ಸಿರವ ಬೇಡಿದ. ಕೊಟ್ಟ ನಾಗಾರ್ಜುನನ ಸಿರ ಹೋಯಿತ್ತು. ಶಿವನು ಜಂಗಮವಾಗಿ ಬಂದು, ಸಿಂಧು ಬಲ್ಲಾಳನ ವಧುವ ಬೇಡಿದ. ಕೊಟ್ಟ ಸಿಂಧು ಬಲ್ಲಾಳ. ಸ್ವಯಲಿಂಗವಾದ. ಇದು ಕಾರಣ ಇಲ್ಲಿಯೂ ಲೇಸು. ಅಲ್ಲಿಯೂ ಲೇಸು. ಕೊಡಿರೆ ನಮ್ಮ ಕೂಡಲಸಂಗನ ಶರಣರಿಗೆ.

---

## (೪೧) ಕಳವು ಮಾಡಬೇಡ

೩೧೮. ಊರ ಮುಂದೆ ಹಾಲಹಳ್ಳ ಹರಿವುತಿರಲು, ಪಾಳಿಯಾವಿನ ಬೆನ್ನಲಿ ಹರಿಯಲೇಕಯ್ಯ? ಲಜ್ಜೆಗೆಡಲೇಕೆ? ನಾಣುಗೆಡಲೇಕೆ? ಕೂಡಲಸಂಗಮದೇವನುಳ್ಳನ್ನಕ್ಕ ಬಿಜ್ಜಳನ ಭಂಡಾರ ನಮಗೇಕಯ್ಯ!

---

## (೪೨) ಭಕ್ತರ ನೋವು ತನ್ನ ನೋವೆಂದು ಭಾವಿಸು.

೩೧೯. ತನುವ ನೋಯಿಸಿ, ಮನವ ಬಳಲಿಸಿ, ನಿಮ್ಮ ಪಾದವಿಡಿದವರೊಳರೇ ಅಯ್ಯಾ? ಈ ನುಡಿ ಸುಡದಿಹುದೇ? ಕೂಡಲಸಂಗಮದೇವಾ, ಶಿವಭಕ್ತರ ನೋವೇ ಅದು ಲಿಂಗದ ನೋವು.

೩೨೦. ನಡೆಯಲರಿಯದೆ, ನುಡಿಯಲರಿಯದೆ, ಲಿಂಗವ ಪೂಜಿಸಿ ಫಲವೇನು? ಅವರ ಸುಖ ಎನ್ನ ಸುಖ. ಅವರ ದುಃಖ ಎನ್ನ ದುಃಖ. ಕೂಡಲಸಂಗನ ಶರಣರ ಮನ ನೊಂದರೆ ಆನು ಬೆಂದೆನಯ್ಯಾ.

೩೨೧. ಬಿದಿರ ಅಂದಣವಕ್ಕು. ಬಿದಿರ ಸತ್ತಿಗೆಯಕ್ಕು. ಬಿದಿರಲ್ಲಿ ಗುಡಿಯು ಗುಡಾರವಕ್ಕು. ಬಿದಿರಲ್ಲಿ ಸಕಲ ಸಂಪದವೆಲ್ಲವು. ಬಿದಿರವವರ ಮೆಚ್ಚ ನಮ್ಮ ಕೂಡಲಸಂಗಮದೇವ.

೩೨೨. ಆತ್ಮಸ್ತುತಿ ಪರನಿಂದೆಯ ಕೇಳಿಸದಿರಯ್ಯ, ನಿಮ್ಮ ಧರ್ಮ. ಆನು ಭಕ್ತನೆನ್ನಲ್ಲಿ ಲೇಸುಂಟೆಂದು ಪರಿಣಾಮಿಸಿದರೆ, ನಿಮಗಾನು ದ್ರೋಹಿಯಯ್ಯ. ಕೂಡಲಸಂಗಮದೇವಾ ನಿಮ್ಮ ಶರಣರ ಲೇಸೇ ಎನ್ನ ಲೇಸಯ್ಯ.

---

## (೩೩) ದುರಾಶೆಯುಳ್ಳವನಾಗಬೇಡ.

೩೨೩. ಮೂಷಕನವನೊಬ್ಬ ದೇಶವ ಕೊಟ್ಟಡೆ, ಆಸೆಮಾಡಿ ಅವನ ಹೊರೆಯಲ್ಲಿರಬೇಡ. ಮಾವರ ಶಿವಭಕ್ತನಾದಡೆ, ಆತನ ಹೊರೆಯಲ್ಲಿ ಭೃತ್ಯನಾಗಿಪ್ಪುದು ಕರ ಲೇಸಯ್ಯಾ. ತೊತ್ತಾಗಿಪ್ಪುದು ಕರ ಲೇಸಯ್ಯ. ಕಾಡಸೊಪ್ಪ ತಂದು, ಓಡಿನಲ್ಲಿ ಹುರಿದಿಟ್ಟು ಕೂಡಿಕೊಂಡಿಪ್ಪುದು ನಮ್ಮ ಕೂಡಲಸಂಗನ ಶರಣರ.

೩೨೪. ಹಾವಿನ ಬಾಯ ಕಪ್ಪೆ ಹಸಿದು ಹಾರುವ ನೊಣಕ್ಕೆ ಆಸೆ ಮಾಡುವಂತೆ, ಶೂಲವನೇರುವ ಕಳ್ಳನು ಹಾಲು ತುಪ್ಪವ ಕುಡಿದು ಮೇಲೇಸುಕಾಲ ಬದುಕುವನೋ? ಕೆಡೆ ಒಡಲ ನೆಚ್ಚಿ, ಕಡು ಹುಸಿಯನೆ ಹುಸಿದು, ಒಡಲ ಹೊರೆವವರ ಕೂಡಲಸಂಗಮದೇವಯ್ಯನವರನೊಲ್ಲ ಕಾಣಿರಣ್ಣಾ.

೩೨೫. ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ ಹೇದ ಕುಳ್ಳಿರ್ದ ನಮ್ಮ ಮಹಾದೇವಸೆಟ್ಟಿ. ಒಮ್ಮನವಾದಡೆ ಒಡನೆ ನುಡಿವನು. ಇಮ್ಮನವಾದಡೆ ನುಡಿಯನು. ಕಾಣಿಯ ಸೋಲ. ಅರ್ಧಗಾಣಿಯ ಗೆಲ್ಲ. ಜಾಣ ನೋಡವ್ವಾ ನಮ್ಮ ಕೂಡಲಸಂಗಮದೇವ.

೩೨೬. ಕೂಸುಳ್ಳ ಸೂಳೆ ಧನದಾಸೆಗೆ ಒತ್ತೆಯ ಕೊಂಡರೆ, ಕೂಸಿಂಗಲ್ಲ, ಬೊಜಗಂಗಲ್ಲ. ಕೂಸಿನೊಮ್ಮೆ ಸಂತವಿಸುವಳು, ಬೊಜಗನನೊಮ್ಮೆ ನೆರೆವಳು. ಧನದಾಸೆ ಬಿಡದು ಕೂಡಲಸಂಗಮದೇವ.

೩೨೭. ಆಶೆ ಎಂಬ ಪಾಶದಲ್ಲಿ ಭವ ಬಂಧನನಾಗಿರ್ದೆನಯ್ಯಾ! ಸಕೃತು ನಿಮ್ಮ ನೆನೆಯಲು, ಎನಗೆ ತೆರಹಿಲ್ಲವಯ್ಯ! ಕರುಣಾಕರ ಅಭಯಕರ ವರದಾನಿ ಕರುಣಿಸಯ್ಯ! ಸಂಸಾರ ಬಂಧನವನು ಮಾಣಿಸಿ, ಎನಗೆ ಕೃಪೆ ಮಾಡಿ, ನಿಮ್ಮ ಶ್ರೀಪಾದಪದ್ಮದಲ್ಲಿ ಭ್ರಮರನಾಗಿರಿಸು, ಭಕ್ತಜನ ಮನೋವಲ್ಲಭ ಕೂಡಲಸಂಗಮದೇವಾ.

---



# ಪ್ರಾರ್ಥನೆಯ ವಚನಗಳು.

## (೩೪) ಪರಮಾತ್ಮನಿಗೆ ಶರಣು ಹೋಗು.

೩೨೮. ಭವರೋಗ ವೈದ್ಯನೆಂದು, ನಾ ನಿಮ್ಮ ಮರೆಹೊಕ್ಕೆ ಭಕ್ತಿದಾಯಕ ನೀನು ಕರುಣಿಸು ಲಿಂಗ ತಂದೆ. ಜಯ ಜಯ ಶ್ರೀ ಮಹಾದೇವ, ಜಯ ಜಯ ಶ್ರೀ ಮಹಾದೇವ, ಜಯ ಜಯ ಶ್ರೀ ಮಹಾದೇವ ಎನುತಿದ್ದಿತೆನ್ನ ಮನವು. ಕೂಡಲಸಂಗಮದೇವಂಗೆ ಶರಣೆಂದಿತ್ತೆನ್ನ ಮನವು.

೩೨೯. ಎನ್ನ ವಾಮ ಕ್ಷೇಮ ನಿಮ್ಮದಯ್ಯಾ! ಎನ್ನ ಹಾನಿವೃದ್ಧಿ ನಿಮ್ಮದಯ್ಯಾ! ಎನ್ನ ಮಾನಾಪಮಾನವು ನಿಮ್ಮದಯ್ಯಾ! ಬಳ್ಳಿಗೆ ಕಾಯಿ ದಿಮ್ಮಿತ್ತೆ ಕೂಡಲಸಂಗಮದೇವ?

೩೩೦. ಎನ್ನ ಆಪತ್ತು ಸುಖ ದುಃಖ ನೀವೇ ಕಂಡಯ್ಯ! ಮತ್ತಾರೂ ಇಲ್ಲ. ಹರಹರಾ ನೀವೇ ಕಂಡಯ್ಯ! ಎನ್ನ ಮಾತಾಪಿತನು ನೀವೇ ಕಂಡಯ್ಯ ಕೂಡಲಸಂಗಮದೇವಾ.

೩೩೧. ಹೊತ್ತಾರೆ ಎದ್ದು ಲಿಂಗದೇವನ ದೃಷ್ಟಿಯಾರೆ ನೋಡದವನ ಸಂಸಾರವೇನವನ, ಬಾಳುವೇನವನ, ಬೀಳುವೇನವನ, ಸಂಸಾರವೇನವನ, ನಡೆಯೇನವನ, ನುಡಿಯೇನವನ, ಸಂಸಾರವೇನವನ? ಕರ್ತ ಕೂಡಲಸಂಗಮದೇವ, ನಿಮ್ಮ ತೊತ್ತುಗೆಲಸವ ಮಾಡದವನ ಸಂಸಾರವೇನವನ?

೩೩೨. ಎಚ್ಚ ವಾಲಿಯ ಕೊಂದ. ಕಟ್ಟಿದ ಶರಧಿಯ. ಹತ್ತು ತಲೆಯ ರಾವಣನ ಒಂದೇ ಅಂಬಿನಲ್ಲಿ ಮಡುಹಿದ, ಛಲದಿ ಲಂಕಾದ್ವೀಪವ ನೆಲವಣ್ಣ ಮಾಡಿದ, ಕಲಿ ವಿಭೀಷಣಂಗೆ ಪಟ್ಟವ ಕಟ್ಟಿದ, ರಾಮನ ತೋರಾ. ಮಾಯದ ಸಂಸಾರವ ನೆಚ್ಚಿ ಕೆಟ್ಟು, ಬರುದೊರೆವೋಗಬೇಡ. ಕರ್ತ ಕೂಡಲಸಂಗಂಗೆ ಶರಣೆನ್ನಿರಯ್ಯಾ.

೩೩೩. ಅಳಿಗೊಂಡಿಹರೆಂದು ಅಂಜಲದೇಕೆ? ನಾಸ್ತಿಕವಾಡಿಹರೆಂದು ನಾಚಲದೇಕೆ? ಆರಾದಡಾಗಲಿ, ಶ್ರೀ ಮಹಾದೇವಂಗೆ ಶರಣೆನ್ನಿ. ಏನೂ ಅರಿಯೆನೆಂದು ಮಾನಗೊಂಡಿರಬೇಡ. ಕೂಡಲಸಂಗಮದೇವರ ಮುಂದೆ ದಂದಣ, ದತ್ತಣ ಎನ್ನಿ.

೩೩೪. ಎಂತಕ್ಕೆ? ಎಂತಕ್ಕೆ? ಹಡೆದ ಕಾಯ ಬೀಯ್ಯವಾಗದ ಮುನ್ನ, ಅಟ್ಟುಣ್ಣುವೋ. ಬೆರಣಿಯುಳ್ಳಲ್ಲಿ ಹೊತ್ತು ಹೋಗದ ಮುನ್ನ ಅಟ್ಟುಣ್ಣುವೋ. ಮರಳಿ ಭವಕ್ಕೆ ಬಹೆ, ಬಾರದಿಹೆ. ಕರ್ತ ಕೂಡಲಸಂಗಂಗೆ ಶರಣೆನ್ನುವೋ.

೩೩೫. ತನುಮನಧನವೆಂಬ ಕನ್ನಡಿ ನೋಡಯ್ಯ. ಎನ್ನದೂ ಅಲ್ಲ, ನಿನ್ನದೂ ಅಲ್ಲ. ಬರಿಯ ಭ್ರಮೆಯ ಮಾತು. ಆ ಭ್ರಮೆಗೊಳಗಾಗದೆ, ನಿಮ್ಮ ಶ್ರೀಚರಣವ ಬಿಡೆ ಕೂಡಲಸಂಗಮದೇವಾ.

೩೩೬. ಅಂಗದ ನೋಟವು ಸಿಂಗರದ ಗಾತ್ರವು ಹಿಂಗದು ಮನದಲ್ಲಿ. ನಾನಾ ವಿಕಾರದಿ ಬೆಂದಿಹೆನೆಂದರಿಯಲಿಕ್ಕಿಲ್ಲಾಗಿ ಸಂದೇಹ ಬಿಡದು. ಮುಂದು ಗಾಣದು ಲೋಕ. ಬೆಂದ ಮಾಯೆಗಂಜಿ ನಿಮ್ಮ ಮರೆವೊಕ್ಕೆ ಕೂಡಲಸಂಗಮದೇವಾ.

## (೩೫) ಪರಮಾತ್ಮನ ಕಾರುಣ್ಯವನ್ನು ಬೇಡು.

೩೩೭. ಸಮುದ್ರದೊಳಗಣ ಸಿಂಪಿನಂತೆ, ಬಾಯ ಬಿಡುತಿದ್ದೆನಯ್ಯಾ. ನೀವಲ್ಲದೆ ಮತ್ತಾರೂ ಎನ್ನನರಿವರಿಲ್ಲ ನೋಡಯ್ಯ. ಕೂಡಲಸಂಗಮದೇವ, ನೀನಲ್ಲದೊಳಕೊಂಬುವರಿಲ್ಲವಯ್ಯ.

೩೩೮. ಹರನೀವ ಕಾಲಕ್ಕೆ ಸಿರಿಯು ಬೆನ್ನಲಿ ಬಕ್ಕು. ಹರಿದು ಹೆದ್ದೊರೆಯ ಕೆರೆ ತುಂಬಿದಂತಯ್ಯಾ. ನೆರೆಯದ ವಸ್ತು ನೆರೆವುದು ನೋಡಯ್ಯ. ಅರಸು ಪರಿವಾರ ಕೈವಾರ ನೋಡಯ್ಯ. ಪರಮ ನಿರಂಜನ ಮರೆದ ಕಾಲಕ್ಕೆ ತುಂಬಿದ ಹರವಿಯು ಕಲ್ಲು ಕೊಂಡಂತೆ ಕೂಡಲಸಂಗಮದೇವಾ.

೩೩೯. ದಾಸಿದೇವ ತನ್ನ ವಸ್ತ್ರವನಿತ್ತು ತವನಿಧಿಯ ಪ್ರಸಾದ ಪಡೆದ. ಸಿರಿಯಾಳ ತನ್ನ ಮಗನನಿತ್ತು ಪ್ರಾಣಪ್ರಸಾದವ ಪಡೆದ. ಬಲ್ಲಾಳ ತನ್ನ ವಧುವನಿತ್ತು ಸಮತೆಪ್ರಸಾದವ ಪಡೆದ. ಇವರೆಲ್ಲರು ತಮತಮಗೆ ಮಾಡಿ ಹಡೆದರು ಸಮ್ಯಕ್ ಪದವಿಯನು. ನಾನೇನು ಅರಿಯದ ಭಕ್ತಿಯ ಬಡವಂಗೆ ಕರುಣಿಸು ಕೂಡಲಸಂಗಮದೇವಾ.

೩೪೦. 'ಅಯ್ಯಾ, ಅಯ್ಯಾ' ಎಂದು ಕರೆವುತ್ತಲಿದೇನೆ. 'ಅಯ್ಯಾ ಅಯ್ಯಾ' ಎಂದು ಒರಲುತ್ತಲಿದೇನೆ. 'ಓ' ಎನ್ನಲಾಗದೇ ಅಯ್ಯಾ? ಆವಾಗಳೂ ನಿಮ್ಮ ಕರೆವುತ್ತಲಿದೇನೆ. ಮೌನವೇ ಕೂಡಲಸಂಗಮದೇವಾ?

೩೪೧. ಲೇಸ ಕಂಡು, ಮನಬಯಸಿ, ಆಸೆ ಮಾಡಿದಡಿಲ್ಲ ಕಂಡಯ್ಯಾ. ತಾಳ ಮರಕ್ಕೆ ಕೈಯ್ಯ ನೀಡಿ, ಮೇಲೆ ನೋಡಿ, ಗೋಣು ನೊಂದುದಯ್ಯ. ಕೂಡಲಸಂಗಮದೇವ ಕೇಳಯ್ಯಾ. ನೀನೀವ ಕಾಲಕ್ಕಲ್ಲದಿಲ್ಲ ಕಂಡಯ್ಯಾ.

೩೪೨. ಕೆಸರಲ್ಲಿ ಬಿದ್ದ ಪಶುವಿನಂತೆ, ಆನು ಬೆಸೆಬೆಸೆಗೆ ಬಾಯ ಬಿಡುತಿದ್ದೆನೆಯ್ಯಾ! ಆರೈವರಿಲ್ಲ, ಅಕಟಕಟಾ, ಪಸುವೆಂಬೆನ್ನ ಕೂಡಲ ಸಂಗಮದೇವ ಕೊಂಬ ಹಿಡಿದೆತ್ತುವನ್ನಕ್ಕ.



೩೪೩. ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ, 'ಅಂಬೆ, ಅಂಬೆ' ಎಂದು ಕರೆಯುತ್ತಲಿದೇನೆ. 'ಅಂಬೆ, ಅಂಬೆ' ಎಂದು ಒರಲುತ್ತಲಿದೇನೆ, ಕೂಡಲಸಂಗಮದೇವ ಬಾಳು ಬಾಳೆಂಬನ್ನಕ್ಕ.

೩೪೪. ಅಕಟಕಟಾ, ಶಿವ ನಿನಗಿನಿತು ಕರುಣವಿಲ್ಲ. ಅಕಟಕಟಾ ಶಿವ ನಿನಗಿನಿತು ಕೃಪೆ ಇಲ್ಲ. ಏಕೆ ಹುಟ್ಟಿಸಿದೆ ಇಹಲೋಕ ದುಃಖಿಯ, ಪರಲೋಕ ದೂರನ? ಏಕೆ ಹುಟ್ಟಿಸಿದೆ? ಕೂಡಲಸಂಗಮದೇವ ಕೇಳಯ್ಯಾ, ಎನಗಾಗಿ ಮತ್ತೊಂದು ತರುಮರಾದಿಗಳಿದ್ದಿಲ್ಲವೇ?

೩೪೫. ನೀನೊಲಿದರೆ, ಕೊರಡು ಕೊನರುವವಯ್ಯಾ! ನೀನೊಲಿದರೆ ಬರಡು ಹಯನಹುದಯ್ಯಾ! ನೀನೊಲಿದರೆ ವಿಷವೆಲ್ಲ ಅಮೃತವಹುದಯ್ಯ! ನೀನೊಲಿದರೆ, ಸಕಲ ಪಡಿಪದಾರ್ಥ ಇದಿರಲಿಪ್ಪುವು ಕೂಡಲಸಂಗಮದೇವಾ.

೩೪೬. ನೀ ಹುಟ್ಟಿಸಿದಲ್ಲಿ ಹುಟ್ಟಿ, ನೀ ಕೊಂದಲ್ಲಿ ಸಾಯದೆ, ಎನ್ನ ವಶವೇ ಅಯ್ಯ? ನೀನಿರಿಸಿದಲ್ಲಿ ಇರದೆ ಎನ್ನ ವಶವೇ ಅಯ್ಯ? ಅಕಟಕಟಾ ಎನ್ನವನೆನ್ನವನೆನ್ನಯ್ಯಾ ಕೂಡಲಸಂಗಮದೇವಯ್ಯ.

೩೪೭. ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯಾ! ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯಾ! ಕೂಡಲಸಂಗಮದೇವಾ ನಿಮ್ಮ ಮನೆಯ ಮಗನೆಂದೆನಿಸಯ್ಯಾ

೩೪೮. ಮುನಿದೆಯಾದೊಡೆ ಒಮ್ಮೆ ಜರಿವಡೆ ಸಾಲದೇ? ಅಕಟಕಟಾ ಮದನಂಗೆ ಮಾರುಗುಡುವರೆ? ಹಗೆಗೆ ಮಾರುಗೊಟ್ಟು, ನಿನ್ನವರನೊಪ್ಪಿಸುವರೇ ಕೂಡಲಸಂಗಮದೇವಾ?

೩೪೯. ನರ ಕೂರಂಬಿನಲೆಚ್ಚವಂಗೊಲಿದೆಯಯ್ಯ. ಅರಳಂಬಿನಲೆಚ್ಚ ಕಾಮನನುರುಹಿದೆ. ಇರುಳು ಹಗಲೆನ್ನದೆ ಘಾತಕಮಾಡುವ ಬೇಡನ ಕೈಲಾಸಕ್ಕೊಯ್ದೆಯಯ್ಯಾ. ಎನ್ನನೇತಕ್ಕೊಲ್ಲೆ ಕೂಡಲಸಂಗಮದೇವಾ?

೩೫೦. ಒಲೆ ಹತ್ತಿ ಉರಿದಡೆ, ನಿಲಬಹುದಲ್ಲದೆ, ಧರೆ ಹತ್ತಿ ಉರಿದಡೆ ನಿಲಬಹುದೆ? ಏರಿ ನೀರುಂಬಡೆ, ಬೇಲಿ ಕೆಯ್ಯ ಮೇವಡೆ, ನಾರಿ ತನ್ನ ಮನೆಯಲ್ಲಿ ಕಳುವಡೆ, ತಾಯಿ ಮೊಲೆವಾಲು ನಂಜಾಗಿ ಕೊಲುವಡೆ, ಇನ್ನಾರಿಗೆ ದೂರುವೆ ಕೂಡಲಸಂಗಮದೇವಾ?

೩೫೧. ಎನ್ನ ಕಾಯವ ದಂಡಿಗೆಯ ಮಾಡಯ್ಯ! ಎನ್ನ ಶಿರವ ಸೋರೆಯ ಮಾಡಯ್ಯ! ಎನ್ನ ನರವ ತಂತಿಯ ಮಾಡಯ್ಯ! ಎನ್ನ ಬೆರಳ ಕಡ್ಡಿಯ ಮಾಡಯ್ಯ! ಬತ್ತೀಸ ರಾಗವ ಹಾಡಯ್ಯ! ಉರವಲೊತ್ತಿ ಬಾರಿಸು ಕೂಡಲಸಂಗಮದೇವಾ.

೩೫೨. ಕಾಳಿದಾಸಂಗೆ ಕಣ್ಣನಿತ್ತೆ. ಓಹಿಲಯ್ಯನ ನಿಜಪುರಕೊಯ್ದೆ. ನಂಬಿ ಕರೆದಡೋ ಎಂದೆ. ತೆಲುಗು ಜೊಮ್ಮಯ್ಯಂಗೆ ಒಲಿದೆ ದೇವಾ! ಕೂಡಲಸಂಗಮದೇವಾ ಎನ್ನನೇಕೊಲ್ಲೆಯಯ್ಯಾ?

೩೫೩. ಪರುಷದ ಹೊರೆಯಲ್ಲಿ ಕಬ್ಬುನವಿದ್ದು ಹೊನ್ನಾಯಿತ್ತು ನೋಡಿರೇ. ಅವ್ವೆ ಚಂಗಳೆ, ನೀನಿದ್ದೇಳು ಕೇರಿಯವರು ಲಿಂಗದ ನೋಂಪಿಯ ನೋಂತರೇ ಹೇಳಾ? ಕೂಡಲಸಂಗಮದೇವಂಗೆ ಚಿಲಾಳನೆಂಬ ಬಾಯಿನವನಿಕ್ಕಿದರೇ ಹೇಳಾ?

೩೫೪. ಉದಯಾಸ್ತಮಾನವೆನ್ನ ಬೆಂದ ಬಸುರಿಂಗೆ ಕುದಿವೆನಲ್ಲದೆ ನಿಮ್ಮ ನೆನೆಯಲು ತೆರಹಿಲ್ಲನಯ್ಯಾ! ಎಂತೋ ಲಿಂಗ ತಂದೆ ಎಂತಯ್ಯ! ಎನ್ನ ಪೂರ್ವಲಿಖಿತ ಬೆರಣೆಯನಾಯಲಲ್ಲದೆ, ಆಟ್ಟುಣ್ಣ ತೆರಹಿಲ್ಲೆನಗೆ. ನೀ ಕರುಣಿಸು ಕೂಡಲಸಂಗಮದೇವಾ.

೩೫೫. ಮುನ್ನ ಮಾಡಿದ ಪಾಪ ಬೆನ್ನ ಬಿಡದನ್ನಕ್ಕ, ಇನ್ನು ಬಯುಸಿದರುಂಟೇ? ಭಕ್ತಿಯುಳ್ಳವರ ನೋಡಿ ನೋಡಿ ಬಯುಸಿದರುಂಟೇ, ಕೂಡಲಸಂಗಮದೇವರಲ್ಲಿ ಮುನ್ನ ವರವ ಹಡೆಯದನ್ನಕ್ಕ?

೩೫೬. ಮಾಡುವಾತ ನಾನಲ್ಲಯ್ಯ. ನೀಡುವಾತ ನಾನಲ್ಲಯ್ಯ. ಬೇಡುವಾತ ನಾನಲ್ಲಯ್ಯ ನಿಮ್ಮ ಕಾರುಣ್ಯವಲ್ಲದೆ. ಎಲೆ ದೇವಾ, ಮನೆಯ ತೊತ್ತಲಸಿದರೆ ಒಡತಿ ಮಾಡಿಕೊಂಬಂತೆ, ನಿನಗೆ ನೀ ಮಾಡಿಕೋ ಕೂಡಲಸಂಗಮದೇವಾ.

೩೫೭. ಸಕ್ಕರೆಯ ಕೊಡನ ತುಂಬಿ ಹೊರಗೆ ಸವಿದರೆ ರುಚಿಯುಂಟೇ? ತರ್ಕೈಸಿ ಭುಜ ತುಂಬಿ ಲಿಂಗಸ್ಪರ್ಶನವ ಮಾಡದೆ, ಅಕಟಕಟಾ, ಸಂಸಾರ ವೃಥಾ ಹೋಯಿತ್ತಲ್ಲಾ! ಆದೇತರ ಭಕ್ತಿ, ಆದೇತರ ಯುಕ್ತಿ? ಕೂಡಿಕೋ ಕೂಡಲಸಂಗಮದೇವಾ.

೩೫೮. ಏನನಾದರೆಯೂ ಸಾಧಿಸಬಹುದು. ಮತ್ತೇನನಾದರೆಯೂ ಸಾಧಿಸಬಹುದಯ್ಯ. ತಾನಾರೆಂಬುದ ಸಾಧಿಸಬಾರದಯ್ಯ. ಕೂಡಲಸಂಗಮದೇವರ ಕರುಣವುಳ್ಳವಂಗಲ್ಲದೆ.

೩೫೯. ಎನ್ನ ಜನ್ಮವ ತೊಡೆದ ನೀ ಧರ್ಮಿ, ಎನ್ನ ಜನ್ಮವನತಿಗಳೆದ ನೀ ಧರ್ಮಿ, ಎನ್ನ ಭವಬಂಧನವ ನಿಃಕರಿಸಿದೆಯಾಗಿ, ಶಿವನೇ ಗತಿ ಎಂದು ನಂಬಿದೆನಯ್ಯಾ! ಎನ್ನ ಅಷ್ಟ ಮದಂಗಳ ಸುಟ್ಟುರುಹಿದೆಯಾಗಿ ಕಟ್ಟುಗ್ರದಿಂದ ನಿಮ್ಮ ಶ್ರೀ ಚರಣವ ಕಂಡೆ. ಸೃಷ್ಟಿಪ್ರತಿಪಾಲಕಾ ನಿಮ್ಮ ನಂಬಿದೆ ಕರುಣಿಸು ಕೂಡಲಸಂಗಮದೇವಾ.

---



## (೩೬) ಪರಮಾತ್ಮನ ರಕ್ಷಣೆಯನ್ನು ಬೇಡು.

೩೬೦. ತಂದೆ ನೀನು, ತಾಯಿ ನೀನು, ಬಂಧು ನೀನು, ಬಳಗ ನೀನು. ನೀನಲ್ಲದೆ ಮತ್ತಾರು ಇಲ್ಲವಯ್ಯಾ. ಕೂಡಲಸಂಗಮದೇವಾ, ಹಾಲಲದ್ದು ನೀರಲದ್ದು.

೩೬೧. ಆನು ಒಬ್ಬನು ಸುಡುವರೈವರು. ಮೇಲೆ ಕಿಚ್ಚು ಘನ. ನಿಲಲು ಬಾರದು. ಕಾಡ ಬಸವನ ಹುಲಿ ಕೊಂಡೊಯ್ದರೆ, ಆರೈಯ್ಯಲಾಗದೇ ಕೂಡಲಸಂಗಮದೇವಾ?

೩೬೨. ಕಪ್ಪೆ ಸರ್ಪನ ನೆಳಲಲ್ಲಿ ಇಪ್ಪಂತೆ ಎನಗಾಯಿತ್ತಯ್ಯಾ! ಅಕಟಕಟಾ, ಸಂಸಾರ ವೃಥಾ ಹೋಯಿತ್ತಲ್ಲಾ! ಕರ್ತುವೇ ಕೂಡಲಸಂಗಮದೇವಾ, ಇವ ತಪ್ಪಿಸಿ ಎನ್ನುವ ರಕ್ಷಿಸಯ್ಯಾ.

೩೯೩. ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವುದಯ್ಯಾ! ಚಂದ್ರ ಕುಂದೆ ಕುಂದುವುದಯ್ಯಾ! ಚಂದ್ರಂಗೆ ರಾಹು ಅಡ್ಡ ಬಂದಲ್ಲಿ, ಅಂಬುಧಿ ಬೊಬ್ಬಿಟ್ಟತ್ತೆ? ಅಂಬುಧಿಯ ಮುನಿ ಆಪೋಷಣವ ಕೊಂಬಲ್ಲಿ ಚಂದ್ರಮನಡ್ಡ ಬಂದನೇ? ಆರಿಗಾರು ಇಲ್ಲ. ಕೆಟ್ಟವಂಗೆ ಕೆಳೆ ಇಲ್ಲ. ಜಗದ ನಂಟ ನೀನೇ ಅಯ್ಯಾ ಕೂಡಲಸಂಗಮದೇವಾ.

೩೬೪. ಹರಿಯಜ ಮನುಮುನಿಗಳೆಲ್ಲರು ನಿಮ್ಮ ಬಾಗಿಲ ಕಾಯ್ದಿಪ್ಪರು. ಏನು ಕಾರಣ ನೀವು ಬಾಣನ ಬಾಗಿಲ ಕಾಯ್ದಿರಿ? ಡಿಂಗರಿಗನ ಮನೆಗೆ ಅಂಗಜಾಹವಕ್ಕೆ ಹೋಗಿ ಇದ್ದವರೊಳರೇ ಕೂಡಲಸಂಗಮದೇವಾ?

೩೬೫. ಸುಡಲೀ ಮನವೆನ್ನನುಡುಹುನ ಮಾಡಿತ್ತು. ನಡೆವಲ್ಲಿ ನುಡಿವಲ್ಲಿ ಅಧಿಕನೆಂದೆನಿಸಿತ್ತು. ಬೆಡಗಿನ ಕೀಲ ಕಳೆದು ಕೆಡೆದ ಬಳಿಕ, ಕಡುಗೂಪ ಮಡದಿ ತಾ ಮುಟ್ಟಲಮ್ಮಳು. ಒಡಲನುರಿ ಕೊಂಬುದು. ಒಡವೆಯನರಸು ಕೊಂಬ. ಕಡುಗೂಪ ಮಡದಿಯ ಮತ್ತೊಬ್ಬ ಚೆನ್ನಿಗ ಕೊಂಬ. ಮುನ್ನ ಮಾಡಿದರೊಳವೇ ಕೂಡಲಸಂಗಮದೇವಾ?

---

## (೩೭) ನನ್ನ ತಪ್ಪುಗಳನ್ನು ಕ್ಷಮಿಸು

೩೬೬. ಎನ್ನ ತಪ್ಪು ಅನಂತಕೋಟಿ. ನಿಮ್ಮ ಸೈರಣೆಗೆ ಲೆಕ್ಕವಿಲ್ಲ. ಇನ್ನು ತಪ್ಪಿದೆನಾದರೆ, ನಿಮ್ಮ ಪಾದವೇ ದಿಬ್ಯ. ಕೂಡಲಸಂಗಮದೇವಯ್ಯ ನಿಮ್ಮ ಪ್ರಮಥರ ಮುಂದೆ ಕಿನ್ನರೀ ಬೊಮ್ಮಣ್ಣನೇ ಸಾಕ್ಷಿ.

೩೬೭. ತ್ರಿವಿಧ ತ್ರಿವಿಧದಲ್ಲಿ ತಪ್ಪಿದ ತಪ್ಪುಕ ನಾನಯ್ಯ! ಒಮ್ಮಿಂಗೆ ಕರುಣಿಸಯ್ಯ! ಒಮ್ಮಿಂಗೆ ಕರುಣಿಸಯ್ಯ! ಇದನರಿದು ಇನ್ನು ತಪ್ಪಿದೆನಾದರೆ ನೀವು ಮಾಡಿತ್ತ ಸಲುವುದು ಕೂಡಲಸಂಗಮದೇವಾ.

೩೬೮. ಮೇರು ಗುಣವನರಸುವುದೇ ಕಾಗೆಯಲ್ಲಿ? ಪರುಷ ಗುಣವನರಸುವುದೇ ಕಬ್ಬುನದಲ್ಲಿ ? ಸಾದು ಗುಣವನರಸುವುದೇ ಅವಗುಣಿಯಲ್ಲಿ? ಚಂದನ ಗುಣವನರಸುವುದೇ ತರುಗಳಲ್ಲಿ? ಸರ್ವಗುಣಸಂಪನ್ನ ಲಿಂಗವೇ. ನೀನೆನ್ನಲ್ಲಿ ಅವಗುಣವನರಸುವರೇ, ಕೂಡಲಸಂಗಮದೇವಾ?

೩೬೯. ಶೂಲದ ಮೇಲಣ ವಿಭೋಗವೇನಾದರೇನೊ? ನಾನಾ ವರ್ಣದ ಸಂಸಾರ ಹಾವಹಾವಾಡಿಗನ ಸ್ನೇಹದಂತೆ. ತನ್ನಾತ್ಮ ತನಗೆ ಹಗೆಯಾದ ಬಳಿಕ, ಬಿನ್ನಾಣ ಉಂಟೇ ಮಹಾದಾನಿ ಕೂಡಲಸಂಗಮದೇವಾ?

೩೭೦. ಮೂಗ ಕಂಡ ಕನಸಿನಂತಾಯಿತ್ತಯ್ಯ ಎನ್ನ ಭಕ್ತಿ. ಗುಣವ ಹೇಳಬಾರದಾರಿಗೆಯೂ. ಕೇಳಲೆಂತೂ ಬಾರದು. ಎನ್ನ ಎಗ್ಗತನವ ಮಾಣಿಸು ಕೂಡಲಸಂಗಮದೇವಾ.

೩೭೧. ಬಸಿರ ಬಾಳುವೆಗೆ ನಿಮ್ಮಲ್ಲಿ ಮಸಿಯ ಹೂಸಿ, ನೇರಿಲ ಹಣ್ಣು ಮಾರುವಂತೆ, ಕಾಲಸಾಲ ದಾರಿದ್ರ್ಯಕ್ಕಂಜಿ ನಿಮ್ಮ ಮರೆವೊಕ್ಕೆನಯ್ಯಾ! ಆವುದು ಹುಸಿ ಎಂಬೆ? ಆವುದು ಕಿರಿವೆಂಬೆ? ಇವ ನೀನೇ ಬಲ್ಲೆಯಯ್ಯಾ, ಕೂಡಲ ಸಂಗಮದೇವ ನಾನು ಉದರ ಪೋಷಕನಯ್ಯಾ.

೩೭೨. ದಾಸನ ವಸ್ತ್ರವ ಬೇಡದ ಮುನ್ನ ತವನಿಧಿಯನಿತ್ತಡೆ, ನಿಮ್ಮ ದೇವರೆಂಬೆ. ಸಿರಿಯಾಳನ ಮಗನ ಬೇಡದ ಮುನ್ನ ಕಾಂಚಿಯ ಪುರವ ಕೈಲಾಸಕೊಯ್ದರೆ, ನಿಮ್ಮ ದೇವರೆಂಬೆ. ಬಲ್ಲಾಳನ ವಧುವ ಬೇಡದ ಮುನ್ನ ಸ್ವಯಲಿಂಗವ ಮಾಡಿದರೆ, ನಿಮ್ಮ ದೇವರೆಂಬೆ. ದೇಹಿ ನೀನು, ವ್ಯಾಪಾರಿಗಳು ನಮ್ಮವರು. ಬೇಡು ಕೂಡಲಸಂಗಮದೇವಾ, ಎಮ್ಮವರ ಕೆಯ್ಯಲು.

೩೭೩. ಹುಟ್ಟೆಂದು ಲೋಕದಲ್ಲಿ ಹುಟ್ಟಿಸಿ ಇಳಿಯ ಬಿಟ್ಟರೆ, ನಿಮ್ಮ ನಗುವರಯ್ಯಾ. ಶಿವಬಟ್ಟೆಯಲೆನ್ನನು ಇರಿಸಯ್ಯಾ. ಹರನೇ, ಹೊಲಬುಗೆಟ್ಟೆನು. ಬಟ್ಟೆಯ ತೋರಯ್ಯ. ಹುಯ್ಯಲಿಟ್ಟೆನು. ಗಣಂಗಳು ಕೇಳಿರಯ್ಯ. ಕೂಡಲಸಂಗಮದೇವನೆನ್ನ ಕಾಡಿಹನಯ್ಯ.

---



## (೩೪) ನನ್ನ ಅವಗುಣಗಳನ್ನು ದೂರಮಾಡು.

೩೭೪. ಬೆಳೆಯ ಭೂಮಿಯಲೊಂದು ಪ್ರಳಯದ ಕಸ ಹುಟ್ಟಿ, ತಿಳಿಯಲೀಯ್ಯದು ಎಚ್ಚರಲೀಯ್ಯದು. ಎನ್ನವಗುಣವೆಂಬ ಕಸವ ಕಿತ್ತು, ಸಲಹಯ್ಯ ಲಿಂಗ ತಂದೆ. ಸುಳಿದೆಗೆದು ಬೆಳೆವೆನು ಕೂಡಲಸಂಗಮದೇವಾ.

೩೭೫. ಕಾಯ ವಿಕಾರ ಕಾಡಿಹುದಯ್ಯಾ! ಮನವಿಕಾರ ಕೂಡಿಹುದಯ್ಯಾ! ಇಂದ್ರಿಯ ವಿಕಾರ ಸುಳಿವುದಯ್ಯಾ! ಸುಳಿವಿನೊಳಗೆ ಸುಳಿವುತಲಿದೇನೆ. ಸಿಲುಕಿಸದಿರಯ್ಯಾ. ಅನ್ಯ ಚಿತ್ತದಲ್ಲಿರಿಸದಿರಯ್ಯ. ನಿಮ್ಮ ಚಿತ್ತವಿರಿಸಯ್ಯ. ಅನುಪಮ ಸುಖಸಾರಾಯ ಶರಣರಲ್ಲಿ ಕೂಡಲಸಂಗಮದೇವಯ್ಯ ಇದನೆ ಬೇಡುವೆನಯ್ಯಾ.

೩೭೬. ಬಡ ಪಶು ಪಂಕದಲ್ಲಿ ಬಿದ್ದರೆ, ಕಾಲ ಬಡಿವುದಲ್ಲದೆ, ಬೇರೆ ಗತಿಯುಂಟೇ ? ಶಿವ, ಶಿವಾ! ಹೋದೆಹೆ, ಹೋದೆಹೆನಯ್ಯಾ. ನಿಮ್ಮ ಮನವತ್ತಲೆನ್ನ ತೆಗೆಯಯ್ಯ. ಪಶು ನಾನು, ಪಶುಪತಿ ನೀನು. ತುಡುಗುಣಿ ಎಂದು ಎನ್ನ ಹಿಡಿದು ಬಡಿಯದ ಮುನ್ನ, ಒಡೆಯ ನಿಮ್ಮ ಬಯ್ಯದಂತೆ ಮಾಡು ಕೂಡಲಸಂಗಮದೇವಾ.

೩೭೭. ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸಿದೆಯಯ್ಯ! ಪಶುವೇನ ಬಲ್ಲುದು? ಹಸುರೆಂದೆಳಿಸುವುದು. ವಿಷಯರಹಿತನ ಮಾಡಿ, ಭಕ್ತಿರಸವ ದಣಿಯ ಮೇಯಿಸಿ, ಸುಬುದ್ಧಿ ಎಂಬ ಉದಕವನೆರೆದು, ನೋಡಿ ಸಲಹಯ್ಯ ಕೂಡಲಸಂಗಮದೇವಾ.

೩೭೮. ವಚನದ ಹುಸಿ ನುಸುಳೆಂತು ಮಾಬುದೆನ್ನ? ಮನದ ಮರ್ಕಟತನವೆಂತು ಮಾಬುದೆನ್ನ? ಹೃದಯ ಕಿಲ್ಬಿಷವೆಂತು ಮಾಬುದೆನ್ನ? ಕಾಯ ವಿಕಾರಕ್ಕೆ ತೋರಿ ಸಲುವೋದೆನು. ಎನಗಿದು ವಿಧಿಯೇ ಕೂಡಲಸಂಗಮದೇವಾ?

೩೭೯. ಆಶನ ಕುಂದದು, ವ್ಯಸನ ಮಾಣದು, ಆರತವಡಗದು. ವ್ಯವಹಾರ ಮಾಣದು. ಮಜ್ಜನಕ್ಕೆರೆವೆನಯ್ಯಾ! ಶರಣನಲ್ಲ, ಲಿಂಗೈಕ್ಯನಲ್ಲ. ಕೂಡಲ ಸಂಗಮದೇವರಲ್ಲಿ ಅಂತರ ಬೆಂತರ ನಾನಯ್ಯಾ

೩೮೦. ಎಂತು ಶಿವಭಕ್ತಿಯ ನಾನುಪಮಿಸುವೆನಯ್ಯಾ! ಎಂತೋ ಶಿವಾಚಾರವೆನಗೆ ಸಾಧ್ಯವಪ್ಪುದಯ್ಯ! ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಂಗಳಿಂದ ಕಟ್ಟುವಡೆದೆನು. ಹಸಿವು, ತೃಷೆ, ವ್ಯಸನದಿಂದ ಕುದಿವುತ್ತಿದೇನೆ. ಪಂಚೇಂದ್ರಿಯ ಸಪ್ತಧಾತು ಹಂಚುಹರಿ ಮಾಡಿ ಕಾಡಿಹ

ವಯ್ಯ. ಅಯ್ಯಾ ಅಯ್ಯಾ, ಎನ್ನ ಹುಯ್ಯಲ ಕೇಳಯ್ಯ. ಕೂಡಲಸಂಗಮದೇವ ನಾನೇವೆನಯ್ಯ?

೩೮೧. ಆಸೆಯಾಮಿಷ, ತಾಮಸ, ಹುಸಿ, ವಿಷಯ, ಕುಟಿಲ, ಕುಹಕ, ಕ್ರೋಧ, ಕ್ಷುದ್ರ, ಮಿಥ್ಯೆ ಇವನೆನ್ನ ನಾಲಿಗೆಯ ಮೇಲಿಂದತ್ತ ತೆಗೆದು ಕಳೆಯಯ್ಯಾ. ಅದೆಂತೆಂದೊಡೆ, ನಿಮ್ಮತ್ತಲೆನ್ನ ಬರಲೀಯವು. ಇದು ಕಾರಣ ಇವೆಲ್ಲವ ಕಳೆದು ಎನ್ನ ಪಂಚೈವರ ಭಕ್ತರ ಮಾಡು ಕೂಡಲಸಂಗಮದೇವಾ.

---

## (೩೯) ಶರಣರನ್ನು ಅವಲಂಬಿಸು.

೩೮೨. ಲಿಂಗವ ನೆಚ್ಚದೀ ಮನವು. ಜಂಗಮವ ನಂಬದೀ ಮನವು. ಕೂಪರ ಕಂಡರೆ, ಒಲ್ಲದೀ ಮನವು. ಈ ಮನದ ಭ್ರಮೆಯನೆಲ್ಲವ ಮರಿಸಿ ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು ಕೂಡಲಸಂಗಮದೇವಾ.

೩೮೩. ಮತ್ತೊಂದ ಕಾಣದಂತೆ, ಮತ್ತೊಂದ ಕೇಳದಂತೆ, ನಿಮ್ಮ ಶರಣರ ಪಾದವಲ್ಲದೆ ಅನ್ಯ ವಿಷಯಕ್ಕೆಳಿಸದಂತೆ ಇರಿಸಯ್ಯಾ ಕೂಡಲಸಂಗಮದೇವಾ.

೩೮೪. ಆನು ನಿಮ್ಮ ಶರಣರಿಗೆ ಮಂಡೆಯ ಬೋಳಿಸಿಕೊಂಡು ಗಂಡುದೊತ್ತಾದೆನಯ್ಯಾ. ಕೂಡಲಸಂಗಮದೇವ ನಿಮ್ಮ ಶರಣರ ಮನೆಯ ಮಗ ನಾನಯ್ಯ.

೩೮೫. ಕಾಮಧೇನು ನಿಮ್ಮ ಸಾರಿರಲು ಪರರ ಬೇಡಲಾರೆನಯ್ಯ! ನಿಮ್ಮುವ ಪೂಜಿಸಿ ಭವಬಂಧನ ಬಿಡದೇಕಯ್ಯಾ? ಹಿಂದಣ ಜನ್ಮದ ಚಿಸ್ಪ ಬಿಡದನ್ನಕ್ಕ, ನಿಮ್ಮ ಪೂಜಿಸಿ ಏವೆನಯ್ಯಾ! ಎನ್ನ ಮನದ ಅವಗುಣವ ಕಳೆದು ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು ಕೂಡಲಸಂಗಮದೇವಾ.

## ಸತಿ ಪತಿ ಭಾವದ ವಚನಗಳು.

೩೮೬. ಇಂದೆನ್ನ ಮನೆಗೆ ಪ್ರಮಥರು ಬಂದಿಹರೆಂದು, ಗುಡಿಯ ತೋರಣವ ಕಟ್ಟಿ, ಷಡುಸಮ್ಮಾರ್ಜನೆಯ ಮಾಡಿ, ರಂಗವಲಿಯನಿಕ್ಕಿ, ಉಘೇ, ಚಾಂಗು, ಭಲಾ, ಎಂಬೆ, ಕೂಡಲಸಂಗನ ಶರಣರು ತಮ್ಮ ಒಕ್ಕುದನಿಕ್ಕಿ ಸಲಹುವರಾಗಿ.

೩೮೭. ಬಂದಿಹನೆಂದು, ಬಾರದಿದ್ದರೆ ಬಟ್ಟೆಗಳ ನೋಡುತ್ತ ಇದ್ದೆನಯ್ಯ. ಇನ್ನಾರನಟ್ಟುವೆ? ಇನ್ನಾರನಟ್ಟುವೆ? ಇನ್ನಾರ ಪಾದವ ಹಿಡಿವೆನಯ್ಯ? ಕೂಡಲಸಂಗನ ಶರಣರು ಬಾರದಿದ್ದರೆ, ಅಟ್ಟುವೆನೆನ್ನ ಪ್ರಾಣವನು.



೩೮೮. ಗಿಳಿಯ ಹಂಜರವಿಕ್ಕಿ, ಸೊಡರಿಂಗೆಣ್ಣೆಯನೆರೆದು, ಬತ್ತಿಯನಿಕ್ಕಿ, ಬರವ ಹಾರುತ್ತಿರ್ದೆನೆಲೆಗವ್ವಾ. ತರಗೆಲೆ ಗಿರಿಕೆಂದಡೆ, ಹೊರಗನಾಲಿಸುವೆ. ಆಗಲಿದೆನೆಂದೆನ್ನ ಮನ ಧಿಗಿಲೆಂದಿತ್ತೆಲೆಗವ್ವ. ಕೂಡಲಸಂಗನ ಶರಣರು ಬಂದು ಬಾಗಿಲ ಮುಂದೆ ನಿಂದು, 'ಶಿವಾ' ಎಂದೊಡೆ, ಸಂತೋಷಬಟ್ಟೆನೆಲೆಗವ್ವ.

೩೮೯. ಭಕ್ತಿರತಿಯ ವಿಕಳತೆಯ ಯುಕುತಿಯ ಎನ ಬೆಸಗೊಂಬರಯ್ಯ? ಕಾಮಿಗೆ ಉಂಟೇ ಲಜ್ಜೆ ನಾಚಿಕೆ ? ಕಾಮಿಗೆ ಉಂಟೇ ಮಾನಾಪಮಾನವು? ಕೂಡಲಸಂಗನ ಶರಣರಿಗೊಲಿದ ಮರುಳನನೇನ ಬೆಸಗೊಂಬರಯ್ಯಾ?

೩೯೦. ಕಂಡರೆ ಮನೋಹರವಯ್ಯ. ಕಾಣದಿದ್ದರೆ ಅವಸ್ತೆ ನೋಡಯ್ಯ. ಹಗಲಿರುಳಹುದು, ಇರುಳು ಹಗಲಹುದು. ಎಂತಯ್ಯ? ಅಳವಾಡಿ ಕಳಿವೆನು. ಒಂದು ಜುಗ ಮೇಲೆ ಕೆಡೆದಂತೆ. ಕೂಡಲಸಂಗನ ಶರಣರನಗಲುವ ಧಾವತಿಯಿಂದ ಮರಣವೇ ಲೇಸು ಕಂಡಯ್ಯ.

---

# ಮಹೇಶ್ವರಸ್ಥಲ

## (೪೦) ಹಿಡಿದ ಕ್ರಿಯೆಗಳನ್ನು ಬಿಡಬೇಡ.

೩೯೧. ಕಟ್ಟಿ ಬಿಡುವನೇ ಶರಣನು? ಬಿಟ್ಟು ಹಿಡಿವನೇ ಶರಣನು? ನಡೆದು ತಪ್ಪುವನೇ ಶರಣನು? ನುಡಿದು ಹುಸಿವನೇ ಶರಣನು? ಸಜ್ಜನಿಕೆ ತಪ್ಪಿದರೆ, ಕೂಡಲಸಂಗಯ್ಯ ಮೂಗಹಲ್ಲದೋರ ಕೊಯ್ವ

೩೯೨. ಮೊನೆ ತಪ್ಪಿದ ಬಳಿಕ ಅಲಗೇನ ಮಾಡುವುದು? ವಿಷ ತಪ್ಪಿದ ಬಳಿಕ ಹಾವೇನು ಮಾಡುವುದು? ಭಾಷೆ ತಪ್ಪಿದ ಬಳಿಕ ಪ್ರಾಣದಾಸೆಯನು ಹಾರಿದರೆ, ವಿಾಸಲನು ಸೊಣಗ ಮುಟ್ಟಿದಂತೆ ಕೂಡಲಸಂಗಮದೇವಾ.

೩೯೩. ಹಲ್ಲು ಹತ್ತಿ ನಾಲಿಗೆ ಹೊರಳದಿದ್ದಲ್ಲಿ, ಮನವೆರಡಾದರೆ ಆಣೆ ನಿಮ್ಮಾಣೆ. ಮಾಡುವ ನೇಮಕ್ಕೆ ಛಲವಿಲ್ಲದಿದ್ದರೆ ಆಣೆ ನಿಮ್ಮಾಣೆ. ಕೂಡಲ ಸಂಗಮದೇವ ಎನ್ನ ಮನವ ನೋಡಲೆಂದಟ್ಟಿದರೆ, ಪ್ರಸಾದವಲ್ಲದೆ ಕೊಂಡದರೆ ಆಣೆ ನಿಮ್ಮಾಣೆ.

೩೯೪. ಎನಿಸು ಕಾಲ ಕಲ್ಲು ನೀರೊಳಗಿದ್ದರೇನು? ನೆನೆದು ಮೃದುವಾಗಬಲ್ಲುದೇ? ಎನಿಸು ಕಾಲ ನಿಮ್ಮ ಪೂಜಿಸಿ ಏವೆನಯ್ಯಾ, ಮನದಲ್ಲಿ ದೃಢವಿಲ್ಲದನ್ನಕ್ಕ? ನಿಧಾನವ ಕಾಯ್ದಿದ್ದ ಬೆಂತರನಂತೆ, ಅದರ ವಿಧಿ ಎನಗಾಯಿತ್ತು ಕೂಡಲಸಂಗಮದೇವಾ.

೩೯೫. ಛಲ ಬೇಕು ಶರಣಂಗೆ ಪರಧನವನೊಲ್ಲೆನೆಂಬ. ಛಲ ಬೇಕು ಶರಣಂಗೆ ಪರಸತಿಯನೊಲ್ಲೆನೆಂಬ. ಛಲ ಬೇಕು ಶರಣಂಗೆ ಪರದೈವವನೊಲ್ಲೆನೆಂಬ. ಛಲ ಬೇಕು ಶರಣಂಗೆ ಲಿಂಗಜಂಗಮ ಒಂದೆಂಬ. ಛಲ ಬೇಕು ಶರಣಂಗೆ ಪರವಾದಿನಿಗ್ರಹದಲ್ಲಿ. ಛಲ ಬೇಕು ಶರಣಂಗೆ ಪ್ರಸಾದ ದಿಟವೆಂಬ. ಛಲವಿಲ್ಲದವರ ಮೆಚ್ಚ ಕೂಡಲಸಂಗಮದೇವ.

೩೯೬. ಪರಮ ಪ್ರಭುವೇ, ನೀ ಮುನಿದೆನ್ನ ಮರ್ತ್ಯಲೋಕದೊಳಗಿರಿಸಿದರೆ ಆನು ಸೈರಿಸಿವೆನಯ್ಯ. ಕುಲಮದ ಛಲ ಮದವಿದೇನಯ್ಯ? ದರುಶನ ಭ್ರಾಂತಿ ಇದೇನಯ್ಯ? ಕ್ರಿಯಾಕರ್ಮಸೂತಕವಿದೇನಯ್ಯ? 'ಯದ್ಯಪಿ ಸ್ಯಾತ್ ತ್ರಿಕಾಲಜ್ಞಃ । ತ್ರೈಲೋಕ್ಯಾಕರ್ಷಣಕ್ಷಮಃ ॥ ತಥಾಪಿ ಲೌಕಿಕಾಚಾರಂ । ಮನಸಾಪಿ ನ ಲಂಘಯೇತ್ ॥ ' ಇಂತೆಂಬುದ ವಿಾರಿದೆನಾಗಿ, ಲಿಂಗಯ್ಯ ನಿಮ್ಮ ನಂಬಿವೆನಯ್ಯ. ಇನ್ನು ಕಲಿಯುಗದಲ್ಲಿ ಬಳಸಿದರೆ, ಕೂಡಲಸಂಗಮದೇವ ನಿಮ್ಮ ರಾಣಿವಾಸದಾಣೆ.

೩೯೭. ಶಿವಾಚಾರವೆಂಬುದೊಂದು ಬಾಳಬಾಯಿಧಾರೆ. ಲಿಂಗ ಮೆಚ್ಚಬೇಕು. ಜಂಗಮ ಮೆಚ್ಚಬೇಕು. ಪ್ರಸಾದ ಮೆಚ್ಚಿ ತನ್ನಲ್ಲಿ ಸ್ವಾಯತವಾಗಿರಬೇಕು. ಬಿಚ್ಚಿ ಬೇರಾದರೆ, ಮೆಚ್ಚ ನಮ್ಮ ಕೂಡಲಸಂಗಮದೇವ.

೩೯೮. ಕಬ್ಬಿನ ಹಣಿದವನಾಡುವರಲ್ಲದೆ ಕಾಯುವ ಹಣಿದವನಾಡುವರೇ ನೋಲೊಡ್ಡವಾಯಿತ್ತೆಂದು? ಕೂಡಲಸಂಗಮದೇವ ನೀನಿಕ್ಕಿದ ಜೂಜಿಂಗೆ ಹೊಯ್ದು ಗೆದ್ದ ಸಿರಿಯಾಳನು.

೩೯೯. ಕುಲಗೆಟ್ಟಡೆ, ಕೆಡಬಹುದಲ್ಲದೆ, ಛಲಗೆಡಬಾರದಯ್ಯ. ಛಲಗೆಟ್ಟರೆ ಕೆಡಬಹುದಲ್ಲದೆ ಭಕ್ತಿಯ ಅನು ಕೆಡಬಾರದಯ್ಯ. ಭಕ್ತಿಯ ಅನು ಕೆಟ್ಟರೆ, ಕೆಡಬಹುದಲ್ಲದೆ ಆಯತ ಕೆಡಬಾರದಯ್ಯ. ಆಯತ ಕೆಟ್ಟರೆ ಕೆಡಬಹುದಲ್ಲದೆ, ಸ್ವಾಯತ ಕೆಡಬಾರದಯ್ಯ. ಎಲೆ ಕೂಡಲಸಂಗಮದೇವಯ್ಯ, ಮುನ್ನ ಮುಟ್ಟಿತ್ತೆ ಮುಟ್ಟಿತ್ತು. ಇನ್ನು ಮುಟ್ಟಿದೆನಾದರೆ ನಿಮ್ಮ ರಾಣಿವಾಸದಾಣೆ.

೪೦೦. ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣೈಕ್ಯನು ಮೆಲ್ಲಮೆಲ್ಲನೆ ಆದೆನೆಂಬನ್ನಬರ ನಾನು ವಜ್ರದೇಹಿಯೇ? ನಾನೇನು ಅಮೃತವ ಸೇವಿಸಿದೆನೇ? ಆನು ಮರಜೀವಣಿಯ ಕೊಂಡೆನೇ? ನುಡಿದ ನುಡಿಯೊಳಗೆ ಷಟ್‌ಸ್ಥಲ ಬಂದು, ಎನ್ನ ಮನವನಿಂಬುಗೊಳ್ಳದಿದ್ದರೆ ಸುಡುವೆನೀ ತನುವ ಕೂಡಲಸಂಗಮದೇವಾ.

೪೦೧. ಆಲುತ್ತಲು ಹರೆಯ ಹೊಯಿಸಿ, ಅಂಕವ ಮಾಡಿದೆನೆಲ್ಲರ ಕಂಡು. ಆನು ಬೇಡೆಂದರೆ ಮಾಣೆ. ಕಲಿತನವ ಮಾಡಿದೆನೆಲ್ಲರ ಕಂಡು. ಅಲ್ಲಿ ಹೋಯಿತ್ತಾಗಳೆ ಎಂದಡೆ ಆಸೆ ಮಾಡೆನು ಕೂಡಲಸಂಗಮದೇವಾ.

---

## (೪೧) ಕ್ರಿಯೆಯಲ್ಲಿ ಧೈರ್ಯವುಳ್ಳವನಾಗಿರು.

೪೦೨. ನ್ಯಾಯ ನಿಷ್ಠುರಿ. ದಾಕ್ಷಿಣ್ಯಪರ ನಾನಲ್ಲ. ಲೋಕವಿರೋಧಿ. ಶರಣನಾರಿಗಂಜುವನಲ್ಲ, ಕೂಡಲಸಂಗಮದೇವರ ರಾಜತೇಜದಲಿಪ್ಪನಾಗಿ.

೪೦೩. ಓಡುವಾತ ಲೆಂಕನಲ್ಲ. ಬೇಡುವಾತ ಭಕ್ತನಲ್ಲ. ಓಡಲಾಗದು ಲೆಂಕನು. ಬೇಡಲಾಗದು ಭಕ್ತನು. ಓಡೆನಯ್ಯಾ ಬೇಡೆನಯ್ಯಾ ಕೂಡಲಸಂಗಮದೇವಾ.

೪೦೪. ಎಲ್ಲರು ವೀರರು. ಎಲ್ಲರು ಧೀರರು. ಎಲ್ಲರು ಮಹಿಮರು. ಎಲ್ಲರು ಪ್ರಮಥರು. ಕಾಳಗದ ಮುಖದಲ್ಲಿ ಕಾಣಬಹುದು. ಓಡುವ ಮುಖ

ವಲ್ಲಿ ಕಾಣಬಾರದು. ನಮ್ಮ ಕೂಡಲಸಂಗನ ಶರಣರು ಧೀರರು. ಉಳಿದವರೆಲ್ಲ ಅಧೀರರು.

೪೦೫. ಮನೆ ನೋಡಾ ಬಡವರು. ಮನ ನೋಡಾ ಘನ. ಸೋಂಕಿನಲ್ಲಿ ಸುಖಿ. ಸರ್ವಾಂಗ ಕಲಿ. ಪಸಾರಕ್ಕಸುವಿಲ್ಲ. ಬಂದ ತತ್ಕಾಲಕ್ಕುಂಟು. ಕೂಡಲಸಂಗನ ಶರಣರು ಸ್ವತಂತ್ರರು, ಧೀರರು.

೪೦೬. ಆಯುಷ್ಯ ತೀರಿದಲ್ಲದೆ ಮರಣವಿಲ್ಲ. ಭಾಷೆ ತೀರಿದಲ್ಲದೆ ದಾರಿದ್ರ್ಯವಿಲ್ಲ. ಅಂಜಲೇಕೋ ಲೋಕ ವಿಗುರ್ಭಣೆಗೆ? ಅಂಜಲೇಕೊ ಕೂಡಲಸಂಗಮದೇವ, ನಿಮ್ಮಾಳಾಗಿ?

೪೦೭. ನೀನಿರಿಸಿದ ಮನದಲ್ಲಿ ನಾನಂಜೆನಯ್ಯ, ಮನವು ಮಹಾಘನಕ್ಕೆ ಶರಣುಗತಿವೊಕ್ಕುದಾಗಿ. ನೀನಿರಿಸಿದ ಧನದಲ್ಲಿ ನಾನಂಜೆನಯ್ಯ ಧನವು ಸತಿಸುತಮಾತಾಪಿತರಿಗೆ ಹೋಗದಾಗಿ. ನೀನಿರಿಸಿದ ತನುವಿನಲ್ಲಿ ನಾನಂಜೆನಯ್ಯಾ, ತನುವು ಸರ್ವಾರ್ಪಿತವಲ್ಲಿ ನಿಯತಪ್ರಸಾದ ಭೋಗಿಯಾಗಿ. ಇದು ಕಾರಣ ವೀರಧೀರ ಸಮಗ್ರನಾಗಿ ನಿಮಗಾನಂಜೆ ಕೂಡಲಸಂಗಮದೇವ.

೪೦೮. ಅಂಜಿದಡೆ ಮಾಣದು. ಅಳುಕಿದೊಡೆ ಮಾಣದು. ವಜ್ರಪಂಜರದೊಳಗಿದ್ದಡೂ ಮಾಣದು. ತಪ್ಪದು ಲಲಾಟಲಿಖಿತ. ಕಕ್ಕುಲಿತೆ ಬಟ್ಟಡಾಗದು ನೋಡಾ. ಧೃತಿಗೆಟ್ಟು ಮನ ಧಾತುಗೆಟ್ಟರೆ, ಬಪ್ಪುದು ತಪ್ಪದು ಕೂಡಲಸಂಗಮದೇವಾ.

೪೦೯. ಕಟ್ಟಿದೆನೊರೆಯ. ಬಿಟ್ಟೆ ಜನ್ನಿಗೆಯುರ. ಮುಟ್ಟಿ ಬಂದಿರಿದಡೆ ಓಸರಿಸುವನಲ್ಲ. ಓಡದಿರು, ಓಡದಿರು, ನಿಮ್ಮ ಶರಣರ ಮನೆಯ ಬಿರುದಿನ ಅಂಕಕಾರ ಓಡದಿರು, ಓಡದಿರು. ಎಲೆ ಎಲೆ ದೇವಾ, ಎಲೆ ಎಲೆ ಸ್ವಾಮಿ, ಎಲೆ ಎಲೆ ಹಂದೆ, ಕೂಡಲಸಂಗಮದೇವಾ.

೪೧೦. ಜೊಳ್ಳು ಆಳು ನಾನಲ್ಲಯ್ಯ. ನಿಮ್ಮ ವೇಳೆಯಾಳಾನಯ್ಯ. ಹಾಳುಗೆಟ್ಟೋಡುವ ಆಳು ನಾನಲ್ಲಯ್ಯ. ಕೇಳು ಕೂಡಲಸಂಗಮದೇವಾ, ಮರಣವೇ ಮಹಾರ್ನವಮಿ ಎನಗೆ.

೪೧೧. ಮನಕ್ಕೆ ಮನ ಒಂದಾಗಿ, ಧನಕ್ಕೆ ಧನ ಒಂದಾಗಿ, ನಚ್ಚಿದ ಮಚ್ಚು ಅಚ್ಚೊತ್ತಿದಂತೆ ಇರಬೇಕು. ಪ್ರಾಣಕ್ಕೆ ಪ್ರಾಣ ಒಂದಾಗಿ ಶುಭಸೂಚನೆ ಒಂದಾಗಿರದ ನಚ್ಚು ಮಚ್ಚು ಪಾರವೈದುದೇ? ಸಿರ ಹರಿದರೇನು? ಕರುಳು ಕುಪ್ಪಳಿಸಿದರೇನು? ಇಂತಪ್ಪ ಸಮಸ್ತ ವಸ್ತುವೆಲ್ಲವೂ ಹೋದರೇನು? ಚಿತ್ತಮನಬುದ್ಧಿಯೊಂದಾದ ಮಚ್ಚು ಬಿಚ್ಚಿ ಬೇರಾಗದಿದ್ದರೆ ಮೆಚ್ಚುವ ನಮ್ಮ ಕೂಡಲಸಂಗಮದೇವ.



೪೧೨. ಧೃತಿಗೆಟ್ಟು ಅನ್ಯರ ಬೇಡದಂತೆ, ಮತಿಗೆಟ್ಟು ಪರರ ಹೊಗಳದಂತೆ, ಪರಸತಿಯ ರತಿಗೆ ಮನವೆಳಸಿದಂತೆ, ಶಿವಪಥವಿಲ್ಲದವರೊಡನಾಡದಂತೆ, ಅನ್ಯಜಾತಿಯ ಸಂಗವ ಮಾಡದಂತೆ, ಎನ್ನ ಪ್ರತಿಪಾಲಿಸು ಕೂಡಲಸಂಗಮದೇವಾ.

೪೧೩. ಮಧ್ಯ ಪಿಂಡಂಗಳೆಲ್ಲವು ಶಿವನಿದ್ದೆಡೆಯನರಿಯವು. ಪೂರ್ವ ಪಿಂಡಂಗಳೆಲ್ಲವು ಶಿವನಾದ್ಯಂತವನರಿಯವು. ಕಾಲ ಪಿಂಡಂಗಳೆಲ್ಲವು ಶಿವನ ನಿಲುಕಡೆಯನರಿಯದೆ ಕಾಲಚಕ್ರದೊಳಗಾದವು. ಸಂಶಯ ಪಿಂಡಂಗಳೆಲ್ಲವ ಮರೆದು ನಿಮ್ಮ ಶರಣರ ಸೇವೆಯಲ್ಲಿರಿಸಯ್ಯ ಕೂಡಲಸಂಗಮದೇವಾ.

೪೧೪. ಗರುಡಿಯ ಕಟ್ಟಿ, ಅರವತ್ತುನಾಲ್ಕು ಕೋಲು ಅಭ್ಯಾಸವ ಮಾಡಿದೆನಯ್ಯ. ಇರಿವ ಗಾಯ ಖಂಡೆಯ ಭೇದವಿನ್ನು ತಿಳಿಯದು. ಪ್ರತಿ ಗರುಡಿಕಾರ ಬಿರಿದ ಪಾಡಿಂಗೆ ಒದಗಲು, ವೀರಪಟ್ಟಿಯ ಕಟ್ಟಿ, ತಿಗುರಿಯ ನೇರಿಸಿಕೊಂಬೆ. ಗುರು ಕಳನನೇರಿ ಕಠಾರಿಯ ಕೊಂಡಲ್ಲಿ ಹೋಯಿತ್ತಾಗಳೆ ಎಂದಡೆ, ಎನ್ನ ನಿಮ್ಮಲ್ಲಿ ನೋಡು ಕೂಡಲಸಂಗಮದೇವ.

೪೧೫. ಅಂಕ ಓಡಿದರೆ, ತೆತ್ತಿಗಂಗೆ ಭಂಗವಯ್ಯ. ಕಾದಿ ಗೆಲಿಸಯ್ಯ ಎನ್ನನು. ಕಾದಿ ಗೆಲಿಸಯ್ಯ ಕೂಡಲಸಂಗಮದೇವಯ್ಯ ಎನ್ನ ತನು ಮನ ಧನದಲ್ಲಿ ವಂಚನೆ ಇಲ್ಲದೆ.

೪೧೬. ಕಳಹೋದರೆ ಕನ್ನದುಳಿಯ ಹಿಡಿವೆ. ಬಂದಿವಿಡಿದರೆ ನಿಮ್ಮಿಂದ ಮುಂದೆ ನಡೆವೆ. ಮನ ಭೀತಿ ಮನ ಶಂಕೆಗೊಂಡೆನಾದರೆ ನಿಮ್ಮಾಣೆ, ನಿಮ್ಮ ಪುರಾತರಾಣೆ. ಆಳ್ದರ ನಡೆ ಸದಾಚಾರವೆನ್ನದಿದ್ದರೆ ಕಟ್ಟಾಳು ಶಿಷ್ಟತನಕ್ಕೆ ಹೋಹ ಕಷ್ಟವ ನೋಡಾ ಕೂಡಲಸಂಗಮದೇವ.

೪೧೭. ಅರಸರು ಎನ್ನ ಮಂಚಕ್ಕೆ ಬರಿಸಿ ಎನ್ನ ಬೆರಿಸಿದ ಬಳಿಕ ಆನಂಜುವಳೇ? ಆನು ಸಿರಿಯಕ್ಕನೆ. ಪರುಷ ಮುಟ್ಟಿದ ಬಳಿಕ ಲೋಹವೇ? ಕೂಡಲಸಂಗಮದೇವ ಎನ್ನನೊಲ್ಲದಡಾನು ಬದುಕುವೆನೆ?

೪೧೮. ಮುನ್ನೂರರುವತ್ತು ದಿನ ಪ್ರಸವ ಮಾಡಿ, ಕಳನೇರಿ ಕೈಮರೆದಂತಾಯಿತ್ತೆನ್ನ ಭಕ್ತಿ. ಎನಿಸು ಕಾಲ ಲಿಂಗಾರ್ಚನೆಯ ಮಾಡಿ ಏವೆನಯ್ಯ, ಮನದಲ್ಲಿ ದೃಢವಿಲ್ಲದನ್ನಕ್ಕ? ಕೊಡನ ತುಂಬಿದ ಹಾಲನೆಡಹಿ, ಉಡುಗಲಿನ್ನಳವೇ ಕೂಡಲಸಂಗಮದೇವಾ?

೪೧೯. ಗರಿದೋರೆ ಗಂಡರೆಂಬವರ ಕಾಣೆ. ನಿರಿ ಸೋಂಕಲು, ಮುನಿ ಇಲ್ಲ, ನೋಡಯ್ಯ! ನಂಟುತನವೇನವನ ಬಂಟತನವೇನವನ? ಹುಲ್ಲುಗಿಚ್ಚು ಹೊಲೆಯರ ಮೇಳಾಪ ಅಲ್ಲಿ ಹುರುಳಿಲ್ಲ, ಹುರುಳಿಲ್ಲ ಕೂಡಲಸಂಗಮದೇವಾ.

೪೨೦. ಎಲೆ ಗಂಡುಗೂಸೇ ನೀ ಕೇಳಾ. ನಿನಗೊಬ್ಬಗೆಂದುಟ್ಟಿ ಗಂಡಿಗೆಯನು. ಮತ್ತೊಮ್ಮೆ ಆನು ಗಂಡಪ್ಪೆನಯ್ಯ. ಮತ್ತೊಮ್ಮೆ ಆನು ಹೆಣ್ಣಪ್ಪೆನಯ್ಯ. ಕೂಡಲಸಂಗಮದೇವ ನಿನಗೆ ವೀರನಪ್ಪೆ. ನಿಮ್ಮ ಶರಣರಿಗೆ ವಧುವಪ್ಪೆ.

---

## (೪೨) ನಿಷ್ಠೆಯುಳ್ಳವನಾಗಿರು

೪೨೧. ಶಿವಭಕ್ತನಾಗಿ ತನ್ನ ಹಿಡಿದಿಹೆನೆಂದು ಹೋದರೆ, ನುಗ್ಗುಮಾಡುವ, ನುಸಿಯ ಮಾಡುವ, ಮಣ್ಣ ಮಾಡುವ, ಮಸಿಯ ಮಾಡುವ. ಕೂಡಲಸಂಗಮದೇವರ ನೆರೆ ನಂಬಿದನಾದರೆ, ಕಡೆಗೆ ತನ್ನಂತೆ ಮಾಡುವ.

೪೨೨. ಇರಿಸಿಕೊಂಡು ಭಕ್ತರಾದರೆಮ್ಮವರು. ತರಿಸಿಕೊಂಡು ಭಕ್ತರಾದರೆಮ್ಮವರು. ಜರಿಸಿಕೊಂಡು ಭಕ್ತರಾದರೆಮ್ಮವರು. ಕೊರಿಸಿಕೊಂಡು ಭಕ್ತರಾದರೆಮ್ಮವರು. ಕೂಡಲಸಂಗನ ಶರಣರಿಗೆ ಮುನಿಸ ತಾಳಿ ಎನ್ನ ಭಕ್ತಿ ಅರೆಯಾಯಿತ್ತು.

೪೨೩. ನೆಚ್ಚಿದೆನೆಂದರೆ, ಮೆಚ್ಚಿದೆನೆಂದರೆ, ಸಲೆ ಮಾರುವೋದೆನೆಂದರೆ, ತನುವನಲ್ಲಾಡಿಸಿ ನೋಡುವೆ ನೀನು. ಮನವನಲ್ಲಾಡಿಸಿ ನೋಡುವೆ ನೀನು. ಧನವನಲ್ಲಾಡಿಸಿ ನೋಡುವೆ ನೀನು. ಇವಕ್ಕೆಲ್ಲಕ್ಕಂಜದಿದ್ದರೆ, ಭಕ್ತಿಕಂಪಿತ ನಮ್ಮ ಕೂಡಲಸಂಗಮದೇವ.

೪೨೪. ಭಕ್ತಿ ಎಂಬುದ ಮಾಡಬಾರದು. ಕರಗಸದಂತೆ ಹೋಗುತ್ತ ಕೊಯ್ವುದು. ಬರುತ್ತ ಕೊಯ್ವುದು. ಘಟಸರ್ಪನಲ್ಲಿ ಕೈದುಡುಕಿದರೆ, ಹಿಡಿವುದು ಮಾಬುದೇ ಕೂಡಲಸಂಗಮದೇವಾ?

೪೨೫. ಮಾತಿನ ಮಾತಿನಲಿಪ್ಪುದೇ ಭಕ್ತಿ? ಮಾಡಿ ತನು ಸವೆಯದನ್ನಕ್ಕ, ಮನ ಸವೆಯದನ್ನಕ್ಕ, ಧನ ಸವೆಯದನ್ನಕ್ಕ, ಅಪ್ಪುದೇ ಭಕ್ತಿ? ಕೂಡಲಸಂಗಮದೇವನೆಲುದೋರಿ ಸರಸವಾಡುವನು. ಸೈರಿಸದನ್ನಕ್ಕ ಅಪ್ಪುದೇ ಭಕ್ತಿ?

೪೨೬. ಬರಬರ ಭಕ್ತಿಯರೆಯಾಯಿತ್ತು ಕಾಣೆರಣ್ಣಾ! ಮೊದಲ ದಿನ ಹಣೆ ಮುಟ್ಟೆ, ಮರುದಿನ ಕೈಮುಟ್ಟೆ, ಮೂರೆಂಬ ದಿನಕ್ಕೆ ತೂಕಡಿಕೆ ಕಾಣಿರಣ್ಣಾ. ಹಿಡಿದುದ ಬಿಡದಿದ್ದರೆ, ಕಡೆಗೆ ಚಾಚುವ. ಅಲ್ಲದಿದ್ದರೆ ನಡುನೀರಲದ್ದುವ ನಮ್ಮ ಕೂಡಲಸಂಗಮದೇವ.

೪೨೭ ಭಕ್ತಿ ಎಂತಹದಯ್ಯ? ದಾಸಯ್ಯ ಮಾಡಿದಂತಹದಯ್ಯ! ಭಕ್ತಿ ಎಂತಹದಯ್ಯ? ಸಿರಿಯಾಳ ಮಾಡಿದಂತಹದಯ್ಯ! ಭಕ್ತಿ ಎಂತಹದಯ್ಯ? ಸಿಂಧು ಬಲ್ಲಾಳ ಮಾಡಿದಂತಹದಯ್ಯ! ಭಕ್ತಿ ಎಂತಹದಯ್ಯ? ಕೂಡಲಸಂಗಮದೇವಾ, ನೀ ಬಾಣನ ಬಾಗಿಲ ಕಾಯ್ದಂತಹದಯ್ಯ.



೪೨೮. ಹೊರಿಸಿಕೊಂಡು ಹೋದ ನಾಯಿ ಮೊಲನೇನ ಹಿಡಿವುದಯ್ಯ? ಇರಿಯದ ವೀರ, ಇಲ್ಲದ ಸೊಬಗುವ ಹೇಳುವುದೇ ನಾಚಿಕೆ. ಆನು ಭಕ್ತನೆಂತೆಂಬೆನಯ್ಯ, ಕೂಡಲಸಂಗಮದೇವಾ?

೪೨೯. ಹಾವಸೆಗಲ್ಲ ಮೆಟ್ಟಿ ಹರಿದು ಗೊತ್ತ ಮುಟ್ಟಬಾರದಯ್ಯ! ನುಡಿದಂತೆ ನಡೆಯಬಾರದಯ್ಯ! ಕೂಡಲಸಂಗನ ಶರಣರ ಭಕ್ತಿ ಬಾಳಬಾಯಿ ಧಾರೆ.

೪೩೦. ಅಲಗಲಗು ಮೋಹಿಸಿದಲ್ಲದೆ, ಕಲಿತನವ ಕಾಣಬಾರದು. ನುಡಿದ ನುಡಿ ಜಾರಿದಡೆ ಮನಕ್ಕೆ ಮನ ನಾಚಬೇಕು. ಶಬ್ದಗಟ್ಟಿತನದಲ್ಲಿ ಎಂತಪ್ಪುದಯ್ಯ ಭಕ್ತಿ? ಪಾಪಿಯ ಕೂಸನೆತ್ತಿದಂತೆ. ಕೂಡಲಸಂಗಮದೇವರ ಭಕ್ತಿ ಅಳಿಮನದವಂಗೆ ಅಳವಡದಯ್ಯ.

೪೩೧. ಹರಬೀಜವಪ್ಪರೆ ಹಂದೆ ತಾನಪ್ಪನೇ? ಒರೆಗಟ್ಟಿ ಇರಿಯದವರ ಲೋಕ ಮೆಚ್ಚುವುದೇ? ಉಟ್ಟ ಚೆಲ್ಲಣ ಕೈಯ್ಯ ಪಟ್ಟೆವಿಡಿದು ಗರುಡಿಯ ಕಟ್ಟಿ, ಶ್ರವವ ಮಾಡುವಂತೆ ತನ್ನ ತಪ್ಪಿಸಿಕೊಂಡರೆ, ಶಿವ ಮೆಚ್ಚುವನೇ? ಅರಿಯದವರಿಗೆ ಒಳ್ಳೆ ಹೆಡೆ ಎತ್ತಾಡುವಂತೆ ಬೊಳ್ಳೆಗನ ಭಕ್ತಿ ಕೂಡಲಸಂಗಮದೇವ.

೪೩೨. ಅರ್ಥವನರ್ಥವ ಮಾಡಿ ಕೋಳಾಹಳಂಗೈವುತ್ತಿರಲಿ. ಹುಟ್ಟಿದ ಮಕ್ಕಳ ನವಖಂಡವ ಮಾಡಿ ಕಡಿವುತ್ತಿರಲಿ. ಮುಟ್ಟಿದ ಸ್ತ್ರೀಯ ಕಣ್ಣ ಮುಂದೆ ಅಭಿಮಾನಂಗೊಂಡು ನೆರೆವುತ್ತಿರಲಿ. ಇಂತೀ ತ್ರಿವಿಧವು ಹೊರಗಣವು. ಇನ್ನೆನ್ನಂಗದ ಮೇಲೆ ಬರಲಿ. ಹಿಡಿಖಂಡವ ಕೊಯ್ಯಲಿ. ಇಕ್ಕುವ ಶೂಲ ಪ್ರಾಪ್ತಿಸಲಿ. ಹಾಕೊಂದೆಸೆ ಹನ್ನೊಂದೆಸೆಯಾಗಿ ಮಾಡುತಿರಲಿ. ಮತ್ತೆಯೂ ಲಿಂಗಾರಾಧನೆಯ ಮಾಡುವೆ. ಜಂಗಮಾರಾಧನೆಯ ಮಾಡುವೆ. ಪ್ರಸಾದಕ್ಕೆ ತಪ್ಪೆ. ಇಂತಪ್ಪ ಭಾಷೆ ಕಿಂಚಿತ್ತು ಹುಸಿಯಾದರೆ ನೀನಂದೇ ಮೂಗ ಕೊಯ್ಯೆ ಕೂಡಲಸಂಗಮದೇವ.

೪೩೩. ವೀರವ್ರತಿ ಭಕ್ತನೆಂದು ಹೊಗಳಿಕೊಂಬಿರಿ ಹೇಳಿರಯ್ಯ. ವೀರನಾದರೆ ವೈರಿಗಳು ಮೆಚ್ಚಬೇಕು. ವ್ರತಿಯಾದರೆ ಅಂಗನೆಯರು ಮೆಚ್ಚಬೇಕು. ಭಕ್ತನಾದರೆ ಜಂಗಮ ಮೆಚ್ಚಬೇಕು. ಈ ನುಡಿಯೊಳಗೆ ತನ್ನ ಬಗೆ ಇರೆ ಬೇಡಿದ ಪದವಿಯನೀವ ಕೂಡಲಸಂಗಮದೇವ.

೪೩೪. ಸಮಚಿತ್ತವೆಂಬ ನೇಮದ ಹಲಿಗೆಯ ಹಿಡಿದು ಶಿವಚಿತ್ತವೆಂಬ ಕೂರಲಗ ಕೊಂಡು ಶರಣಾರ್ಥಿಯೆಂಬ ಶ್ರವಗಲಿತಡೆ, ಆಳುತನಕ್ಕೆ ದೆಸೆ

ಯಪ್ಪೆ ನೋಡಾ. ಮಾರಾಂಕ ಜಂಗಮ ಮನೆಗೆ ಬಂದಲ್ಲಿ ಇದಿರೆದ್ದು ನಡೆವುದು. ಕೂಡಲಸಂಗಮದೇವನನೊಲಿಸುವೊಡಿದು ಚಿನ್ಹ.

೪೩೫. ವೇದವನೋದಿದರೇನು? ಶಾಸ್ತ್ರವ ಕೇಳಿದರೇನಯ್ಯ? ಜಪವ ಮಾಡಿದರೇನು? ತಪವ ಮಾಡಿದರೇನಯ್ಯ? ಏನ ಮಾಡಿದರೇನು, ನಮ್ಮ ಕೂಡಲಸಂಗಯ್ಯನ ಮನ ಮುಟ್ಟದನ್ನಕ್ಕ?

೪೩೬. ನೀನಿಕ್ಕಿದ ಬಿಯ್ಯದಲ್ಲಿ ವಂಚನೆಯುಳ್ಳರೆ, ಸಂಗ ನಿಮ್ಮ ತೊತ್ತುತನಕ್ಕೆ ದೂರವಯ್ಯ. ಕದ್ದು ತಿಂದರೆ ಕೈಯ್ಯ ಹಿಡಿದೊಮ್ಮೆ ಬಡಿದು ತುಡುಗುಣಿತನವ ಬಿಡಿಸಯ್ಯ. ಜಂಗಮ ಮನೆಗೆ ಬಂದಲ್ಲಿ ಓಸರಿಸಿದರೆ ಜಡಿದು ಮೂಗ ಕೊಯಿಯಯ್ಯ ಕೂಡಲಸಂಗಮದೇವ.

೪೩೭. ಆಯುಧವಿಕ್ಕಿದವಂಗೆ ವೀರದ ಮಾತೇಕೆ? ಲಿಂಗವು ಅಂತರಿಸಿದವಂಗೆ ಒಳನುಡಿ ಏಕೆ? ಐದೆ ಅಣಚಿ ಇಲ್ಲದವಳಿಗೆ ಸೌಭಾಗ್ಯದ ಹೂವಿನ ಬೊಟ್ಟೇಕೆ? ಸತ್ಯನಲ್ಲದವಂತೆ ನಿತ್ಯ ನೇಮವೇಕೆ? ಕರ್ತಾರ ನಿನ್ನ ಒಲವಿಲ್ಲದವಂಗೆ ಶಂಭುವಿನ ಬಂಧುಗಳೇಕೆ? ಕೂಡಲಸಂಗಮದೇವಯ್ಯ ನೀವಿಲ್ಲದವಂಗೆ ಶಿವಾಚಾರದ ಮಾತೇಕೆ?

೩೩೮. ತನುವ ಬೇಡಿದಡೀವೆ. ಮನವ ಬೇಡಿದಡೀವೆ. ಧನವ ಬೇಡಿದಡೀವೆ. ಬೇಡು ಬೇಡಲಾರದ ಹಂದೆ. ಕಣ್ಣ ಬೇಡಿದಡೀವೆ, ತಲೆಯ ಬೇಡಿದಡೀವೆ. ಕೂಡಲಸಂಗಮದೇವ ನಿಮಗಿತ್ತು ಶುದ್ಧನಾಗಿಪ್ಪೆ ನಿಮ್ಮ ಪುರಾತರ ಮನೆಯಲ್ಲಿ.

---

## (೪೩) ಎಂಥ ಕಷ್ಟಗಳು ಬಂದರೂ ನಿನ್ನ ಕ್ರಿಯೆಗಳನ್ನು ಬಿಡಬೇಡ.

೪೩೯. ದೇವನೊಳ್ಳಿದನೆಂದು ಮುಯ್ಯನಲು ಬೇಡ. ತರಕಟ ಕಾಡಿದನೊಳ್ಳಿದನೇ? ಅಳಿಸುವ ನಗಿಸುವನೊಳ್ಳಿದನೇ? ಬೆಚ್ಚದೆ ಬೆದರದೆ ತೊತ್ತುತನವ ಮಾಡಲು, ತನ್ನನೀವ ಕೂಡಲಸಂಗಮದೇವ.

೪೪೦. ಅರೆವನಯ್ಯ ಸಣ್ಣನಹನ್ನಕ್ಕ. ಒರೆವನಯ್ಯ ಬಣ್ಣ ಗಾಬನ್ನಕ್ಕ. ಅರೆದರೆ ಸಣ್ಣನಾಗಿ, ಒರೆದರೆ ಬಣ್ಣವಾದರೆ, ಕೂಡಲಸಂಗಮದೇವನೊಲಿದು ಸಲಹುವನು.

೪೪೧. ನಾಳೆ ಬಪ್ಪುದು ನಮಗಿಂದೇ ಬರಲಿ. ಇಂದು ಬಪ್ಪುದು ನಮಗೀಗಲೇ ಬರಲಿ. ಇದಕಾರಂಜುವರು? ಇದಕಾರಳುಕುವರು? 'ಜಾತಸ್ಯ ಮರಣಂ ಧ್ರುವಂ' ಎಂದುದಾಗಿ ನಮ್ಮ ಕೂಡಲಸಂಗಮದೇವರು ಬರೆದ ಬರಹವ ತಪ್ಪಿಸುವರೆ ಹರಿಬ್ರಹ್ಮಾದಿಗಳವಲ್ಲ.



೪೪೨. ಒಡೆದೋಡು, ಎನ್ನ ಮನೆಯಲಿಲ್ಲದಂತೆ ಮಾಡಯ್ಯ. ಕೊಡು ದೇವ ಎನ್ನ ಕೈಯ್ಯಲೊಂದು ಕರಿಕೆಯನು. ಮೃಡದೇವ ಶರಣೆಂದು ಭಿಕ್ಷಕ್ಕೆ ಹೋದರೆ, ಅಲ್ಲಿ ನಡೆ ದೇವ ಎಂದೆನಿಸು ಕೂಡಲಸಂಗಮದೇವಾ.

೪೪೩. ಕಲಿಯ ಕೈಯ್ಯ ಕೈದುವಿನಂತಿರಬೇಕಯ್ಯ. ಎಲುದೋರ ಸರಸವಾಡಿದರೆ ಸೈರಿಸಬೇಕಯ್ಯ. ರಣದಲ್ಲಿ ತಲೆ ಹರಿದು ನೆಲಕ್ಕೆ ಬಿದ್ದು ಬೊಬ್ಬಿಡಲದಕ್ಕೆ ಒಲಿವ ಕೂಡಲಸಂಗಮದೇವ.

೪೪೪. ಆರು ಮುನಿದು ನಮ್ಮನೇನ ಮಾಡುವರು? ಊರು ಮುನಿದು ನಮ್ಮನೆಂತು ಮಾಡುವರು? ನಮ್ಮ ಕುನ್ನಿಗೆ ಕೂಸ ಕೊಡಬೇಡ. ನಮ್ಮ ಸೊಣಗಂಗೆ ತಳಿಗೆಯಲಿಕ್ಕ ಬೇಡ. ಆನೆಯ ಮೇಲೆ ಹೋಹವನ ಶ್ವಾನ ಕಚ್ಚಬಲ್ಲುದೇ, ನಮಗೆ ನಮ್ಮ ಕೂಡಲಸಂಗಯ್ಯನುಳ್ಳನ್ನಕ್ಕರ?

೪೪೫. ಎನಿಸೆನಿಸೆಂದರೆ ನಾ ಧೃತಿಗೆಡೆನಯ್ಯ. ಎಲುದೋರಿದರೆ ನರಹರಿದರೆ ಕರುಳು ಕುಪ್ಪಳಿಸಿದರೆ ನಾ ಧೃತಿಗೆಡೆನಯ್ಯ. ಸಿರಹರಿದು ಅಟ್ಟೆ ನೆಲಕ್ಕೆ ಬಿದ್ದರೆ ನಾಲಿಗೆ ಕೂಡಲಸಂಗ ಶರಣೆನುತಿದ್ದಿತಯ್ಯ.

೪೪೬. ದೇವನಿಂತವನೆಂದು ತೋರಿ ಕೊಡುವೆನು ಗಣಗಳಿಂಗೆ. ಬಲ್ಲಾಳನ ವಧುವ ಬೇಡಿದಾತ ನೀ ದೇವಾ! ದೇವನಿಂತವನೆಂದು ತೋರಿಯೆ ಕೊಡುವೆನು ಗಣಂಗಳಿಗೆ. ದಾಸನ ವಸ್ತ್ರವ ಬೇಡಿದಾತ ನೀ ದೇವಾ! ದೇವನಿಂತವನೆಂದು ತೋರಿಕೊಡುವೆನು ಗಣಂಗಳಿಗೆ. ಸಿರಿಯಾಳನ ಮಗನ ಬೇಡಿದಾತ ನೀ ದೇವಾ. ಕೂಡಲಸಂಗಮದೇವ ಜಂಗಮ ಮುಖ ಲಿಂಗವಾಗಿ ಕಾಡಿ ನೋಡುವ ಬೇಡಿ ನೋಡುವ.

೪೪೭. ಹುಟ್ಟುತ್ತ ದ್ರವ್ಯವನರಿಯದವಂಗೆ ಐಶ್ವರ್ಯವಂತ ಮಗನಾದರೆ, ಲಕ್ಷ ಸಂಖ್ಯೆಯ ಹಿರಣ್ಯವ ತಂದು ಸಂತೋಷಬಡಿಸುವಂತೆ, ಕಾಳಗದ ಮುಖವಾವುದೆಂದರಿಯದ ಹಂದೆ ನೃಪಂಗೆ ಒಬ್ಬ ಕ್ಷತ್ರಿಯನಹ ಕುಮಾರ ಹುಟ್ಟಿ ಕಿಗ್ಗಡಲ ರಕ್ತದ ಹೊನಲಲ್ಲಿ ಕಡಿದು ಮುಳುಗಾಡುವ ಕೊಳಗುಳವ ಕಂಡು ಪರಿಣಾಮಿಸುವಂತೆ, ಆನು ಪರಿಣಾಮಿಸುವೆನಯ್ಯ ಕೂಡಲಸಂಗಮದೇವಾ ನೀವು ಬಂದೆನ್ನ ಬೇಡಿದರೆ.

೪೪೮. ಅಂಕ ಕಂಡಾ ಕೋಲಿನಾಸೆ ಮತ್ತೇಕಯ್ಯ? ಭಕ್ತ ಕಂಡಾ ಪ್ರಾಣದಾಸೆ ಮತ್ತೇಕಯ್ಯ? ಭಕ್ತ ಕಂಡಾ ತನುಮನದಾಸೆ ಮತ್ತೇಕಯ್ಯ? ನಿಮ್ಮಂಕೆಗೆ ಝುಂಕೆಗೆ ಶಂಕಿಸಿದೆನಾದರೆ ಎನ್ನ ಲೆಂಕತನಕ್ಕೆ ಹಾನಿ ಕೂಡಲಸಂಗಮದೇವ.

೪೪೯. ಅಟ್ಟಾಟಿಕೆಯ ಮಾತನಾಡಲದೇಕೋ? ಮುಟ್ಟಿ ಬಂದುದಕ್ಕಂಜಲದೇಕೋ? ಕಾದಿದಲ್ಲದೆ ಮಾಣೆನು. ಓಡಿದರೆ ಭಂಗ ಹಿಂಗದಾಗಿ ಕೂಡಲಸಂಗಮದೇವ ಎನ್ನ ಭಂಗ ನಿಮ್ಮದಾಗಿ.

೪೫೦. ಮುನ್ನಿನವರು ಹೋದ ದಾರಿ ಭಯ ಕಾಣಿರಣ್ಣಾ. ಬಲ್ಲಾಳನ ವಧುವಿನೊಡನೆ ಸರಸವಾಡಿದಂದಿಂದ ಭಯ ಕಾಣಿರಣ್ಣಾ. ಸಿರಿಯಾಳನ ಮಗನ ಬೇಡಿದಂದಿಂದ ಭಯ ಕಾಣಿರಣ್ಣಾ. ದಾಸನ ವಸ್ತ್ರವ ಸೀಳಿದಂದಿಂದ ಭಯ ಕಾಣಿರಣ್ಣಾ. ಅಘಟಿತ ಘಟಿತರು, ವಿಪರೀತ ಚರಿತರು. ಕೂಡಲಸಂಗನ ಶರಣರು ಹೋದ ದಾರಿ ಭಯ ಕಾಣಿರಣ್ಣಾ.

೪೫೧. ಒಣಗಿಸಿ ಎನ್ನ ಗಣಗಣನೆ ಮಾಡಿದರೆಯೂ, ಹರಣವುಳ್ಳನ್ನಕ್ಕ ನಿಮ್ಮ ಚರಣವ ನೆನೆವುದ ಮಾಣೆ ಮಾಣೆ. ಶರಣೆಂಬುದ ಮಾಣೆ ಮಾಣೆ. ಕೂಡಲಸಂಗಮದೇವಯ್ಯ ಎನ್ನ ಹೆಣನ ಮೇಲೆ ಕಂಚಿಟ್ಟುಂಡಡೆಯೂ ಮಾಣೆ ಮಾಣೆ.

೪೫೨. ಬಲ್ಲಿದರೊಡನೆ ಬವರವಾದೊಡೆ ಗೆಲ್ಲಲುಂಟೇ? ಸೋಲಲುಂಟು. ಕಳ್ಳನೊಡನೆ ಭಾಷೆ ಪೂರಾಯವೇ ಅಯ್ಯ? ನಮ್ಮ ಕೂಡಲಸಂಗನ ಶರಣರಿಗೆ ಮಾಡಿ ಮಾಡಿ, ಧನವ ಸವೆದು ಬಡವಾದರೆ ಆ ಭಕ್ತನು ಆ ಲಿಂಗಕ್ಕೆ ಪೂಜೆಯಹನು.

೪೫೩. ವೇದದಂತುಟಲ್ಲ. ಶಾಸ್ತ್ರದಂತುಟಲ್ಲ. ಗೀತಮಾತಿನಂತುಟಲ್ಲ ಕೇಳಯ್ಯ. ಮಾತಿನ ಮಾತಿನ ಕಾಳುಗೋಲ ಶ್ರವದಲ್ಲಿ ಸತ್ತವರೊಳರೇ? ಅಯ್ಯಾ, ದಿಟದಲಗಿನ ಕಾಳಗವಿತ್ತದಲಿದ್ದುದೇ ಕೂಡಲಸಂಗನ ಶರಣರು ಬಂದಲ್ಲಿ.

೪೫೪. ತನುವ ಬಂದು ಅಲಿವರಯ್ಯ, ಎನ್ನ ಮನವ ಬಂದು ನೋಡುವರಯ್ಯ, ಎನ್ನ ಧನವ ಬಂದು ಸೂರೆಗೊಂಬರಯ್ಯ, ಜಂಗಮ ಅನವರತ. ಕೂಡಲಸಂಗಮದೇವ. ನಿಮ್ಮ ಬಯಕೆಯ ಭಂಡಾರಕ್ಕೆ ನಾನು ಶುದ್ಧನಯ್ಯ.

೪೫೫. ಬಾಲಭ್ಯಾಸವ ಮಾಡಹೋದರೆ, ಎನ್ನ ಸುರಿಗಿ ಎನ್ನ ನಟ್ಟಿತ್ತು. ಎಂತಯ್ಯ? ಕಲಿಯೊಡನೆ ಶ್ರವವ ಮಾಡುವೆನು. ರಾಯ ರಾಜಗುರು ಜಗದ ಬಿನ್ನಾಣಿಯ ತೊಡಕ ಬಿಡಿಸಬಾರದು. ಸರಸದ ಮೇಲೆ ಹಿಡಿಯಹೋದರೆ ಚತುರಂಗದ ಮೇಲೆ ಮಸಿಯ ತೋರಿದ ಕೂಡಲಸಂಗಮದೇವ.

೪೫೬. ಒಡೆಯರೊಡವೆಯ ಕೊಂಡರೆ ಕಳ್ಳಂಗಳಲಾಯಿತ್ತೆಂಬ ಗಾದೆ ಎನಗಾಯಿತ್ತಯ್ಯ. ಇಂದೆನ್ನ ವಧುವ, ನಾಳೆನ್ನ ಧನವ, ನಾಡಿಂದೆನ್ನ ತನುವ, ಬೇಡಿರೇಕಯ್ಯ? ಕೂಡಲಸಂಗಮದೇವ ಆನು ಮಾಡಿದುದಲ್ಲದೆ ಬಯಸಿದ ಬಯಕೆ ಸಲುವುದೇ ಅಯ್ಯ?

೪೫೭. ಶರಣರೊಡನೆ ಶ್ರವವ ಮಾಡಿ ಮೂರು ಕೋಲ ಬಿಡುವೆನಯ್ಯ. ತಾಗಲಿ, ತಪ್ಪಲಿ. ಗೆಲವೆನ್ನದೆಂಬೆನಯ್ಯ. ಕಳನಿಂದ ಕಡೆಗಳಕ್ಕೆ ಓಡಿಸುವೆ ಕೂಡಲಸಂಗಯ್ಯ.



೪೫೮. ಗುಮ್ಮಡಿಯಂತಪ್ಪ ತಾಯಿ ನೋಡೆನಗೆ. ಕಲಕೇತನಂತಪ್ಪ ತಂದೆ ನೋಡೆನಗೆ. ಮೋಟನಂತಪ್ಪ ಗಂಡ ನೋಡೆನಗೆ. ಮರಗಾಲಿಲಟ್ಟಟ್ಟ ಸವೆದು ನೋಡಯ್ಯ. ಇಂದೆನ್ನ ಒಗತನ ಹೋದಡೆ ಹೋಗಲಿ. ಮರಗಾಲ ಬಿಟ್ಟೆನಾದಡೆ, ಕೂಡಲಸಂಗಮದೇವ ನಿಮ್ಮಾಣೆ.

೪೫೯. ವೇಷ ಅವಿಚಾರದಲ್ಲಿ ನಡೆಯಿತ್ತೆಂದು ಆಸುರದಲ್ಲಿ ಬೊಗಳುವ ಕುನ್ನಿ ನೀ ಕೇಳಾ! ಹರಿಯನೇ ದಾಸನ ವಸ್ತ್ರವ ? ಉಣ್ಣನೇ ಚನ್ನಯ್ಯನ ಸಂಗಾತ ? ಪರವಧುವ ಕೊಳ್ಳನೇ ಸಿಂಧುಬಲ್ಲಾಳನ ? ಬೇಡನೇ ಸಿರಿಯಾಳನ ಮಗನ? ನಡೆವುದು ನುಡಿವುದು ಅವಿಚಾರವೆಂದು, ಭಾವ ವಿಭಾವವೆಂದು ಕಂಡೆನಾದಡೆ, ತಪ್ಪೆನ್ನದು. ಮೂಗ ಕೊಯ್ಯಿ ಕೂಡಲಸಂಗಮದೇವಾ.

೪೬೦ ಕಂದಿದೆನಯ್ಯ ಎನ್ನ ನೋಡುವರಿಲ್ಲದೆ. ಕುಂದಿದೆನಯ್ಯ ಎನ್ನ ನುಡಿಸುವರಿಲ್ಲದೆ. ಬಡವಾದೆನಯ್ಯ ಎನ್ನ ತನುಮನಧನವ ಬೇಡುವರಿಲ್ಲದೆ. ಕಾಡುವ ಬೇಡುವ ಶರಣರ ತಂದು ಕಾಡಿಸು ಬೇಡಿಸಯ್ಯ ಕೂಡಲಸಂಗಮದೇವಾ.

೪೬೧. ಎಂಬತ್ತುನಾಲ್ಕು ಲಕ್ಷ ಮುಖದೊಳಗೊಂದೆ ಮುಖವಾಗಿ ಕಾಡಿ ನೋಡೆನ್ನನು. ಬೇಡಿ ನೋಡೆನ್ನನು. ಬೇಡದಿದ್ದರೆ, ಅಯ್ಯ ನಿಮಗೆ ಪ್ರಮಥರಾಣೆ. ನೀನಾವ ಮುಖದಲ್ಲಿ ಬಂದು ಬೇಡಿದೊಡೀವೆನು ಕೂಡಲಸಂಗಮದೇವಾ.

೪೬೨. ಹಗೆಯಲ್ಲಿ ಬಿದ್ದವರ ಮೇಲೆ ಒರಳ ನೂಂಕುವರೇ? ಕೊಳದ ಮೇಲೆ ಸಂಕೊಲೆಯನಿಕ್ಕುವರೇ? ಬೆಂದ ಹುಣ್ಣ ಕಂಬಿಯಲ್ಲಿ ಕೀಸುವರೇ? ಕೂಡಲಸಂಗಯ್ಯ ಕಾಡುವ ಕಾಟ ಸಿರಿಯಾಳಂಗಲ್ಲದೆ ಸೈರಿಸಬಹುದೇ ?

೪೬೩. ಕಲಿ ಕರುಳ ತಕ್ಕೈಸಿ ಹರಿಯಬಲ್ಲನಲ್ಲದೆ, ಸಾಯಕಾದಿಸುವರೇ ? ಎಡೆಗೋಲನಿಕ್ಕುವರೆ ದಾತಾರನಧೀನವಲ್ಲದೆ ಕೂಡಲಸಂಗಮದೇವ, ನೀ ಮಾಡಿದಂತಹುದಯ್ಯ. ತನುಮನಧನದಲ್ಲಿ ವಂಚನೆಯನು ಬಯಿಸಿದರೆಂತಹುದಯ್ಯ?

೪೬೪. ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯ! ಒರೆಗೆ ಬಣ್ಣಕ್ಕೆ ತಂದೆನ್ನ ಪುಟವಿಕ್ಕಿ ನೋಡಯ್ಯ! ಕಡಿಹಕ್ಕೆ ಬಡಿಹಕ್ಕ ತಂದೆನ್ನ ಕಡೆಯಾಣಿಯ ಮಾಡಿ, ನಿಮ್ಮ ಶರಣರ ಪಾದಕ್ಕೆ ತೊಡಿಗೆಯ ಮಾಡಿ ಸಲುಹು ಕೂಡಲಸಂಗಮದೇವಾ.

## (೪೪) ದೇವರು ಒಬ್ಬನೇ ಇದ್ದಾನೆ.

೪೬೫. ಸ್ವಾಮಿ ನೀನು. ಶಾಶ್ವತ ನೀನು. ಎತ್ತಿದೆ ಬಿರಿವ ಜಗವೆಲ್ಲರಿಯಲು. ಮಹಾದೇವ ಮಹಾದೇವ ಇಲ್ಲಿಂದ ಮೇಲೆ ಶಬ್ದವಿಲ್ಲ. ಪಶುಪತಿ ಜಗಕ್ಕೆ ಏಕೋದೇವ. ಸ್ವರ್ಗ ಮರ್ತ್ಯ ಪಾತಾಳದೊಳಗೆ ಒಬ್ಬನೇ ದೇವ ಕೂಡಲಸಂಗಮದೇವಾ.

೪೬೬. ಇಬ್ಬರು ಮೂವರು ದೇವರೆಂದು ಉಬ್ಬಿ ಮಾತನಾಡಬೇಡವೋ: ದೇವ ಒಬ್ಬನೇ ಕಾಣಿರೋ. ಇಬ್ಬರೆಂಬುದು ಹುಸಿ ನೋಡಾ. ಕೂಡಲಸಂಗಮದೇವನಲ್ಲದಿಲ್ಲೆಂದಿತ್ತು ವೇದ.

೪೬೭. ಜಾಗ್ರತ್ ಸ್ವಪ್ನ ಸುಷುಪ್ತಿಯಲ್ಲಿ ಮತ್ತೊಂದ ನೆನೆದರೆ ತಲೆದಂಡ. ಹುಸಿಯಾದರೆ ದೇವಾ ತಲೆದಂಡ. ಕೂಡಲಸಂಗಮದೇವ, ನೀವಲ್ಲದೆ ಅನ್ಯವ ನೆನೆದರೆ ತಲೆದಂಡ ತಲೆದಂಡ.

೪೬೮. ಗುಡಿಯೊಳಗಿರ್ದು ಗುಡಿಯ ನೇಣ ಕೊಯ್ದರೆ ಗುಡಿಯ ಮಡಿಬಿದ್ದು ಹಲ್ಲು ಹೋಹುದು ನೋಡಾ. ಮೊಡವಿಗೀಶ್ವರನ ಗರ್ಭವಾಸದೊಳಗಿರ್ದು ನುಡಿವರು ಮತ್ತೊಂದು ದೈವವುಂಟೆಂದು. ತುಡುಗುಣಿ ನಾಯ ಹಿಡಿತಂದು ಸಾಕಿದರೆ, ತನ್ನೊಡೆಯಂಗೆ ಬೊಗಳುವಂತೆ ಕಾಣಾ ಕೂಡಲಸಂಗಮದೇವ.

೪೬೯. ಹಲವು ಕೊಂಬೆಗೆ ಹಾಯಲು ಬೇಡ. ಬರು ಕಾಯಕ್ಕೆ ನೀಡಲು ಬೇಡ. ಲೋಗರಿಗೆ ಕೊಟ್ಟು, ಭ್ರಮಿತನಾಗಬೇಡ. ಆಚಾರವೆಂಬುದು ಹಾವಸೆಗಲ್ಲು. ಭಾವ ತಪ್ಪಿದ ಬಳಿಕ ಏಗ್ಗೈದಡಾಗದು. ಅಂಜದಿರು, ಅಳುಕದಿರು. ಪರದೈವಕ್ಕೆರಗದಿರು. ಕೂಡಲಸಂಗನ ಕೆಯ್ಯಲು ಈಸುವುದೆನ್ನ ಭಾರ.

೪೭೦. ನೀನಲ್ಲದೆ ಅನ್ಯದೈವ ಉಂಟೆಂಬುವನ ಬಾಯ ಕೆನ್ನೆವಾರೆ ಸೀಳದಲ್ಲದೆ, ಎನ್ನ ಮುನಿಸು ಹೋಗದಯ್ಯ, ಎನ್ನ ಕೋಪವಡಗದಯ್ಯ. ಎನ್ನ ಬಿನ್ನಪವನವಧರಿಸು ಕೂಡಲಸಂಗಮದೇವ.

೪೭೧. ಶಿವಲೋಕಕ್ಕೆ ಸರಿ ಬೇರೆ ಲೋಕವಿಲ್ಲ. ಶಿವಮಂತ್ರಕ್ಕೆ ಸರಿ ಬೇರೆ ಮಂತ್ರವಿಲ್ಲ. ಜಗಕ್ಕೆ ಇಕ್ಕಿದೆ ಮುಂಡಿಗೆಯನೆತ್ತಿಕೊಳ್ಳಿ, ಕೂಡಲಸಂಗಯ್ಯನೊಬ್ಬನೇ ದೈವವೆಂದು.

೪೭೨. ಕಿವಿಯ ಸೂತಕ ಹೋಯಿತ್ತು, ಸದ್ಗುರುವಿನ ವಚನದಿಂದ. ಕಂಗಳ ಸೂತಕ ಹೋಯಿತ್ತು, ಸದ್ಭಕ್ತರ ಕಂಡೆನಾಗಿ. ಕೆಯ್ಯ ಸೂತಕ ಹೊಯಿತ್ತು, ನಿಮ್ಮ ಚರಣವ ಮುಟ್ಟಿದೆನಾಗಿ. ಬಾಯಸೂತಕ ಹೋಯಿತ್ತು ನಿಮ್ಮ ಒಕ್ಕುದ ಕೊಂಡೆನಾಗಿ. ನಾನಾ ಸೂತಕ ಹೋಯಿತ್ತು. ನಿಮ್ಮ ಶರಣರನುಭಾವಿಯಾಗಿ. ಕೂಡಲಸಂಗಮದೇವ ಕೇಳಯ್ಯ, ಎನ್ನ ಮನದ ಸೂತಕ ಹೋಯಿತ್ತು ನೀವಲ್ಲದಿಲ್ಲೆಂದರಿದೆನಾಗಿ.



೪೭೩. ಬಿದಿರೆಲೆಯ ಮೆಲಿದರೆ ಮೆಲಿದಂತಲ್ಲದೆ, ರಸವನು ಹಡೆಯಲು ಬಾರದು. ನೀರ ಕಡೆದರೆ ಕಡೆದಂತಲ್ಲದೆ, ಬೆಣ್ಣೆಯ ಹಡೆಯಲು ಬಾರದು. ಮಳಲ ಹೊಸೆದರೆ ಹೊಸೆದಂತಲ್ಲದೆ, ಸರವೆಯ ಹಡೆಯಲು ಬಾರದು. ನಮ್ಮ ಕೂಡಲಸಂಗಮದೇವನಲ್ಲದೆ ಅನ್ಯ ದೇವಕ್ಕೆರಗಿದರೆ, ಹೊಳ್ಳ ಕುಟ್ಟಿ ಕೈ ಹೊಟ್ಟಾದಂತಾಯಿತ್ತಯ್ಯ.

೪೭೪. ಸುನಾದ ಬಿಂದು ಮಂತ್ರದಗ್ರದ ಕೊನೆಯಲ್ಲೈದುದೇ ಸೋಹಂ ಸೋಹಂಮೆಂದೆನುತಿದ್ದಿತು, ಕೋಹಂ ಬ್ರಹ್ಮರಂಧ್ರದಲ್ಲಿ. “ಯತೋ ವಾಚೋ ನಿವರ್ತಂತೆ ಅಪ್ರಾಪ್ಯ ಮನಸಾ ಸಹ ಆನಂದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕುತಶ್ಚನ” ಇಂತೆಂದುದಾಗಿ ಅಗಮ್ಯ ಕೂಡಲಸಂಗಮದೇವನಲ್ಲದೆ ಮತ್ತಾರೂ ಇಲ್ಲ.

೪೭೫. ಉಪ್ಪರ ಗುಡಿ, ನಂದಿವಾಹನ, ಸದ್ಯೋಜಾತನ ಬಾಗಿಲ ಮುಂದೆ ಸಾರುತಿದ್ದಾವೆ ನೋಡಾ ಶ್ರುತಿಗಳು, ನಾಲ್ಕು ವೇದವು ಹುಸಿಯದೆ. ‘ಭರ್ಗೋ ದೇವಸ್ಯ ಧೀಮಹಿ’ ಎಂದುದಾಗಿ ಕೂಡಲಸಂಗನಲ್ಲದಿಲ್ಲೆಂದುದು ವೇದ.

೪೭೬. ಹಾರುವರೆಲ್ಲರೂ ನೆರೆದು ಶೂದ್ರನ ಹಾರುವನ ಮಾಡುವಲ್ಲಿ, ನಂದಿಮುಖವಿಲ್ಲದೆ ಮಾಡಲಾಗದು. ವಿಭೂತಿ ಇಲ್ಲದೆ ಮತ್ತೇನನೂ ಮಾಡಲಾಗದು. ‘ಭರ್ಗೋದೇವ’ ಎಂಬ ಮಂತ್ರವಲ್ಲದೆ, ಮತ್ತೇನನೂ ಮಾಡಲಾಗದು. ನಿಮ್ಮಿಂದ ಕುಲಜರಾಗಿ ಮತ್ತನ್ಯದೈವಕ್ಕೆರಗುವ ಜಗದನ್ಯಾಯಿಗಳನೇನೆಂಬೆ ಕೂಡಲಸಂಗಮದೇವಾ?

೪೭೭. ಲಿಂಗ ಶಿವಾಲಯದ ಮುಂದೆ ಸಿಂಹಶೂದ್ರಿಕನಲ್ಲದಿಲ್ಲ. ನಂದಿಕೇಶ್ವರ ಭೃಂಗಿ ನಾಂಟ್ಯ ನಮ್ಮ ಲಿಂಗನ ಮುಂದೆ. ಇವಕ್ಕೆ ದಿಟ ದೀವುಗೆ ನಮ್ಮ ಲಿಂಗನ ಮುಂದೆ. ಅನ್ಯ ದೈವವೆಂಬುದು ತೋರಿಯೂ ಕಾಣಬಾರದು. ನೊಸಲಗಣ್ಣ ಅಭವನೊಬ್ಬನೇ ಕೂಡಲಸಂಗಮದೇವ.

೪೭೮. ನಂಬಿದ ಹೆಂಡತಿಗೆ ಗಂಡನೊಬ್ಬ ಕಾಣಿರೋ. ನಂಬಬಲ್ಲ ಭಕ್ತಂಗೆ ದೇವನೊಬ್ಬ ಕಾಣಿರೋ. ಬೇಡ, ಬೇಡ. ಅನ್ಯದೈವದ ಸಂಗ ಬೇಡ ಹೊಲ್ಲ. ಬೇಡ, ಬೇಡ. ಅನ್ಯದೈವವೆಂಬುದು ಹಾದರ ಕಾಣಿರೋ. ಕೂಡಲಸಂಗಮದೇವ ಕಂಡರೆ, ಮೂಗ ಕೊಯ್ವ ಕಾಣಿರೋ.

೪೭೯. ಕಂಡಕಂಡವರನೆಲ್ಲ ಗಂಡರೆಂಬ ದಿಂಡೆಯನವಳ ಸಜ್ಜನೆ ಎನಬಹುದೇ? ಲಿಂಗಪ್ರಸಾದವನುಂಡು ಅನ್ಯ ದೈವಂಗಳ ಕೊಂಡಾಡುವವರ ನಮ್ಮ ಕೂಡಲಸಂಗಮದೇವನು ಆ ಭಂಡರಿಗೆ ಮಾಡಿದ ಹುಳುಗೊಂಡವನು.

೪೮೦. ದೇವನೊಬ್ಬನೇ, ನಾಮ ಹಲವು. ಪರಮ ಪತಿವ್ರತೆಗೆ ಗಂಡನೊಬ್ಬ. ಮತ್ತೊಂದಕ್ಕೆರಗಿದರೆ ಕಿವಿ ಮೂಗ ಕೊಯ್ವನು. ಹಲವು ದೈವದ ಎಂಜಲ ತಿಂಬುವರನೇನೆಂಬೆ ಕೂಡಲಸಂಗಮದೇವಾ?

೪೮೧. ಉಣಿಸುವ ಉಡಿಸುವ ಗಂಡನಿದ್ದಂತೆ ಜೋಡೆ ಮಿಂಡಂಗೆ ಕಣ್ಣ ಚೆಲ್ಲುವಳ ಕೇಡಿಂಗೆ ಬೆರಗಾದೆ ನಾನು. ಕೂಡಲಸಂಗಮದೇವ ಸಿಂಗಾರದ ಮೂಗನು ಬಣ್ಣಿಸಿ ಹಲುದೋರಿ ಕೊಯ್ವ.

೪೮೨. ಸಂತವಿದ್ದ ಮನೆಗೆ ಕೊಂತವ ತಂದಂತೆ, ಇದನೆಂತು ಸಂತೈಸುವೆನು? ಸಂತೆಯ ಗುಡಿಸಲ ಸೂಳೆಗೆ ಕೊಂತವಳವಡುವುದೇ? ಕೂಡಲಸಂಗಮದೇವರ ಮಹತ್ವ ಆರಿಗೆಯೂ ಅಳವಡದು.

---

## (೪೫) ಬ್ರಹ್ಮ, ವಿಷ್ಣು, ರುದ್ರರಲ್ಲಾರೂ ಪರಮಾತ್ಮನಲ್ಲ.

೪೮೩. ಉಮಾದಿನಾಥರು ಕೋಟಿ. ಪಂಚವಕ್ತ್ರರು ಕೋಟಿ. ನಂದಿವಾಹನರೊಂದು ಕೋಟಿ ನೋಡಯ್ಯಾ. ಸದಾಶಿವರೊಂದು ಕೋಟಿ. ಗಂಗೆವಾಳುಕ ಸಮರುದ್ರರು. ಇವರೆಲ್ಲರೂ ಕೂಡಲಸಂಗನ ಸಾನ್ನಿಧ್ಯರಲ್ಲದೆ, ಸಮರಸವೇದ್ಯರೊಬ್ಬರೂ ಇಲ್ಲ.

೪೮೪. ಆರು ಕೋಟಿ ಬ್ರಹ್ಮರು ಮಡಿವಲ್ಲಿ ನಾರಾಯಣಂಗೆ ಒಂದು ದಿನವಾಯಿತ್ತು. ನಾರಾಯಣರೊಂದು ಕೋಟಿ ಮಡಿವಲ್ಲಿ ರುದ್ರನ ಕಣ್ಣೆವೆ ಹಳಚಿತು. ರುದ್ರಾವತಾರ ಹಲವಳಿಯಲ್ಲಿ ನಮ್ಮ ಕೂಡಲಸಂಗಮದೇವನೇನೆಂದು ಅರಿಯ.

---

## (೪೬) ಬ್ರಹ್ಮ ವಿಷ್ಣುಗಳಲ್ಲಾರೂ ಪರಮಾತ್ಮನಲ್ಲ

೪೮೫. ಒಬ್ಬ ಕೆಂಚ, ಒಬ್ಬ ಕರಿಕ, ಒಬ್ಬ ಶುದ್ಧ ಧವಳಿತನೆಂತಯ್ಯ ಲಿಂಗವೇ? ಒಬ್ಬರಿಗೊಬ್ಬರು ಘನವೆಂಬರು. ಅದೆಂತಯ್ಯ? ಒಬ್ಬರಿಗೊಬ್ಬರು ಕಿರಿದೆಂಬರು. ಎಂತಯ್ಯ? ಬ್ರಹ್ಮಂಗೆ ಪ್ರಳಯ, ವಿಷ್ಣುವಿಂಗೆ ಮರಣ ಉಂಟು. ಕೂಡಲಸಂಗಮದೇವಂಗಿಲ್ಲ.

೪೮೬. ಹುಟ್ಟಿಸುವಾತ ಬ್ರಹ್ಮನೆಂಬರು, ರಕ್ಷಿಸುವಾತ ವಿಷ್ಣುವೆಂಬರು ನೋಡಾ. ಬ್ರಹ್ಮ ತನ್ನ ಸಿರವನೇಕೆ ಹುಟ್ಟಿಸಲಾರ? ವಿಷ್ಣು ತನ್ನ ಮಗನನ್ನೇಕೆ ರಕ್ಷಿಸಲಾರ? ದುಷ್ಟನಿಗ್ರಹ ಶಿಷ್ಟಪರಿಪಾಲಕ ನಮ್ಮ ಕೂಡಲಸಂಗಮದೇವ.



೪೮೭. ವಿಷ್ಣು ಬಲ್ಲಿದನೆಂಬೆನೆ? ದಶಾವತಾರದಲ್ಲಿ ಭಂಗಬಟ್ಟುದಕೆ ಕಡೆ ಇಲ್ಲ. ಬ್ರಹ್ಮ ಬಲ್ಲಿದನೆಂಬೆನೆ? ಶಿರವ ಹೋಗಾಡಿ ನಾನಾ ವಿಧಿಗೊಳಗಾದ. ವೇದ ಬಲ್ಲಿತ್ತೆಂಬೆನೆ? ನಾನಾ ಮುಖದಲ್ಲಿ ಸ್ತುತಿಸಿತಲ್ಲದೆ, ಲಿಂಗದ ನಿಲುಕಡೆಯ ಕಾಣದು. ಶಾಸ್ತ್ರ ಬಲ್ಲಿತ್ತೆಂಬೆನೆ? ಶಬ್ದಕ್ರಿ. ಪುರಾಣ ಬಲ್ಲಿತ್ತೆಂಬೆನೆ? ಪೂರ್ವಕ್ರಿ. ಆಗಮ ಬಲ್ಲಿತ್ತೆಂಬೆನೆ? ವಾಯುವ ಹೊಂದಿತ್ತು. ಇದು ಕಾರಣ ಕೂಡಲಸಂಗಮದೇವನೇ ನಿತ್ಯ. ಉಳಿದ ದೈವವೆಲ್ಲ ಅನಿತ್ಯ ಕಾಣಿರೋ.

೪೮೮. ಮರೆಯಲಾಗದೆ ಹರಿಯ? ಮರೆಯಲಾಗದೆ ಬ್ರಹ್ಮನ? ಮರೆಯಲಾಗದೆ ತೆತ್ತೀಸ ಕೋಟಿ ದೇವರ್ಕಳ? ನಮ್ಮ ಕೂಡಲಸಂಗಮದೇವರ ಮರೆಯಲಹುದೇ?

೪೮೯. ಹರಿಹರನೊಂದೇ ಎಂದರೆ ಸುರಿಯವೇ ಬಾಯಲ್ಲಿ ಬಾಲಹುಳುಗಳು? ಹರಿಗೆ ಹತ್ತು ಪ್ರಳಯ, ಬ್ರಹ್ಮಂಗನಂತ ಪ್ರಳಯ. ಹರಂಗೆ ಪ್ರಳಯವುಂಟೆಂಬುದ ಬಲ್ಲರೆ, ನೀವು ಹೇಳಿರೋ? ಪ್ರಳಯ ಆದಂದಿಂಗೆ ಹಳೆಯ ನಮ್ಮ ಕೂಡಲಸಂಗಮದೇವ.

೪೯೦. ನಾರಾಯಣನೆಂಬುವನ ಕಾಣೆ, ಗಿರಾಯಣನೆಂಬುವನ ಕಾಣೆ, ಬೊಮ್ಮನೆಂಬುವನ ಕಾಣೆ, ಬೊಮ್ಮಗನೆಂಬುವನ ಕಾಣೆ. ವಿಷವಟ್ಟೆ ಸುಡುವಲ್ಲಿ, ವೀರಭದ್ರ ಬಡಿವಲ್ಲಿ, ಕೂಡಲಸಂಗಯ್ಯಂಗೆ ಶರಣೆಂದು ಮೊರೆಯಿಟ್ಟರಿಲ್ಲರು.

೪೯೧. ವಿಷ್ಣು ಕರ್ಮಿ, ರುದ್ರ ನಿಃಕರ್ಮಿ. ಕ್ರಮವನರಿಯದೆ ನುಡಿವಿರಿ ಭೋ. ವೇದ ಶ್ರುತಿಗಳ ತಿಳಿಯಲರಿಯದೆ, ವಾದವ ಮಾಡುವರಲ್ಲಾ! ವಿಷ್ಣು ನಾನಾ ಯೋನಿಯಲ್ಲಿ ಬಾರದ ಭವಂಗಳ ಬರುತಿಪ್ಪ. ರುದ್ರನಾವ ಯೋನಿಯಲ್ಲಿ ಬಂದನೆಂಬುದ ನೀವು ಹೇಳಿರೋ. ಶ್ರುತಿಃ— 'ಓಂ ವಿಷ್ಣು ಕರ್ಮಾಣಿ ಪಶ್ಯತೆ ಯತೋ ವ್ರತಾನಿ ಪಶ್ಯತೇ ಇಂದ್ರಸಾಯುಜ್ಯಃ ಸಂಖ್ಯಾ ಸ್ತ್ರೀಣಿ ಪದವಿಚಕ್ರಮೆ । ವಿಷ್ಣೋರ್ಗೋಪಾಲತಾಭ್ಯಃ ॥ ಅತೋ ಕರ್ಮಾಣಿ ಧಾರಯೇತ್ ತದ್ವಿಪ್ರಾಸೋ ವಿಪನ್ಯಾವೋಜಾಂ ಗೃಹವಾಸಃ ಸಮಿಂಧತೆ ವಿಷ್ಣೋರ್ಯತ್ಪರಮಂ ಪದಂ ॥' ಎಂಬ ಶ್ರುತಿ ವಚನವ ತಿಳಿಯಿ, ಭೋ. ಮರ್ಮವನೆತ್ತಿ ನುಡಿದಲ್ಲದೆ ನಿಲ್ಲಿರಿ. ನಿಮ್ಮ ಕರ್ಮವು ಅತ್ಯತಿಷ್ಠದ್ದಶಾಂಗುಲದಿಂದತ್ತತ್ತಲೆ ಕೂಡಲಸಂಗಮದೇವಾ.

೪೯೨. ವಿಶ್ವಾಧಿಕೋ ರುದ್ರನ ಹೊಗಳುವ ಶ್ರುತಿಗಳು, ವಿಶ್ವರೂಪಾಯ ವೈ ನಮಃ, ಪರಮ ರೂಪಿಣೇ ನಮಃ, ಪರತತ್ವಾಯ ನಮಃ, ಆದಿಜಾ

ರೂಢ ಭಯಂಕರಾಯ ನಮಃ. ಹರಿಯನು ಹರಿಸಿವನೆಂದು ಶ್ರುತಿ ಸಾರುತಿರಲು ಸಂಹಾರ ಕಾರಣಾಯ ನಮಃ, ನಮ್ಮ ಕೂಡಲಸಂಗಮದೇವರ ಮಹಾಮಹದ್ಭ್ಯೋ ನಮಃ.

೪೯೩. ಶಿವಮಯ ವಿಷ್ಣುವಲ್ಲ. ವಿಷ್ಣುಮಯ ಶಿವನಲ್ಲ. ನುಡಿಯದಿರಿಂಭೋ. ನಾರಾಯಣ ಹರನಲ್ಲ. ನುಡಿಯದಿರಿಂಭೋ. ಶಿವನು ವಿಷ್ಣುವಲ್ಲ ನುಡಿಯದಿರಿಂಭೋ. ನಮ್ಮ ಕೂಡಲಸಂಗಮದೇವಯ್ಯನನರಿಯದ ಸೂಸೆಗಾರರೆಲ್ಲ ನುಡಿಯದಿರಿಂಭೋ

೪೯೪ ಕೇಶವನಲ್ಲದೆ ಅತಃಪರ ದೈವವಿಲ್ಲೆಂದು ವೇದವ್ಯಾಸಮುನಿ ಭಂಗವಾದುದನರಿಯಿರೇ? 'ಅಹಂ ಸರ್ವಜಗತ್ಕರ್ತಾ ಮಮ ಕರ್ತಾ ಮಹೇಶ್ವರಃ' ಎಂದು ವಿಷ್ಣು ಹೇಳಿದ ವಚನವನರಿಯಿರಲ್ಲಾ! ಕೂಡಲಸಂಗಮದೇವನು ದಕ್ಷನ ಯಜ್ಞವ ಕೆಡಿಸಿದುದ ಮರೆದಿರಲ್ಲಾ!

೪೯೫ ಅಮೃತವ ಕಡೆವಲ್ಲಿ, ವಿಷವಟ್ಟೆ ಸುಡುವಲ್ಲಿ, ದೇವರೆಂಬುವರೆತ್ತ ಹೋದರೇನಿಂಭೋ. ಅಂದೊಮ್ಮೆ ಓಡಿಹೋಗಿ, ಆ ಶಿವನ ಮೊರೆಹೊಗುವಂದು, ದೇವರೆಂಬುವರೆತ್ತ ಹೋದರೇನಿಂಭೋ. ಕೂಡಲಸಂಗಮದೇವರಿಗೆ ದೇವನು, ನೀವೆಲ್ಲ ಆಳೆಂಬುದನರಿಯಿಂಭೋ.

೪೯೬ ಶ್ರುತಿಗಗಮ್ಯ ದ್ವಾದಶಾದಿತ್ಯನಪ್ರತಿಮ ಮಹಿಮಂಗೆ ಪ್ರತಿಯುಂಟೇ? 'ಸೋಮಃ ಪವತೆ' ಎಂಬ ಶ್ರುತಿಯನರಿದು, ಶಿವನೇಕೋದೇವ ರುದ್ರ ನ ದ್ವಿತೀಯನೆಂದು ನಂಬುವುದು ಕಾಣಿರಣ್ಣಾ. ಕೂಡಲಸಂಗಮದೇವನೇ ದೇವನಲ್ಲದೆ ಇಲ್ಲವೆಂದು ಎತ್ತಿದೆ ಬಿರಿದ ಜಗವೆಲ್ಲರಿಯಲು.

---

## (೪೭) ಕಿರುಕುಳ ದೈವಗಳಲ್ಲಾವುದೂ ಪರಮಾತ್ಮನಲ್ಲ.

೪೯೭. ಕರ್ತನ ಪೂಜಿಸಿ, ಕುಚಿತ ದೈವಕ್ಕೆರಗುವವರು ಕತ್ತೆ ಕುದುರೆಗೆ ಹುಟ್ಟಿದ ಹೇಸರಿನಂತೆ. ಅವರ ಭಕ್ತರೆಂತೆಂಬೆ? ಅವರ ಭೃತ್ಯರೆಂತೆಂಬೆ? ಅವರ ಶರಣರೆಂತೆಂಬೆ? ಎರಡುಳ್ಳ ಪ್ರಪಂಚಿಗಳ ಮೆಚ್ಚ ಕೂಡಲಸಂಗಮದೇವ.

೪೯೮. ಯುಗಜುಗಪ್ರಳಯವಾಹಂದು ಕಾಣೆನಿಂದೂ ಕಾಣೆ. ಧಿಗಿಲು ಭುಗಿಲೆಂದುರಿವಂದು ಕಾಣೆನಿಂದೂ ಕಾಣೆ. ನಮ್ಮ ಕೂಡಲಸಂಗಮದೇವನಲ್ಲದೆ ತಲೆದೋರುವ ದೈವಂಗಳನಂದೂ ಕಾಣೆನಿಂದೂ ಕಾಣೆ.

೪೯೯. ಋಣ ತಪ್ಪಿದ ಹೆಂಡಿತಿಯಲ್ಲಿ, ಗುಣ ತಪ್ಪಿದ ನೆಂಟನಲ್ಲಿ, ಜೀವವಿಲ್ಲದ ದೇಹದಲ್ಲಿ ಫಲವೇನೋ? ಆಳ್ದನೊಲ್ಲದಾಳಿನಲ್ಲಿ, ಸಿರಿ ತೊಲಗಿದರಸಿನಲ್ಲಿ, ವರವಿಲ್ಲದ ದೈವದಲ್ಲಿ, ಫಲವೇನೋ? ಕಳಿತ ಹೂವಿನಲ್ಲಿ ಕಂಪ, ಕುಪ್ಪಸನುಳಿದ ಸೂಳೆಯಲ್ಲಿ ಪೆಂಪ, ಕೊಳಚಿ ನೀರಿನಲ್ಲಿ ಗುಂಪನರಸುವಿರಿ ಮರುಳೇ. ವರಗುರು ವಿಶ್ವಕ್ಕೆಲ್ಲ ಗಿರಿಜಾಮನೋವಲ್ಲಭ ಪರಮಕಾರಣಿಕ ನಮ್ಮ ಕೂಡಲಸಂಗಮದೇವ.



೫೦೦. ಹರನ ಕೊರಳಲ್ಲಿಹ ಕರೋಟಿ ಮಾಲೆಯ ಶಿರದ ಲಿಖಿತವ ಕಂಡು ಮರುಳು ತಾಂಡಗಳೋದಿ ನೋಡಲು, ಇವನಜ ಇವ ಹರಿ ಇವ ಸುರಪತಿ ಇವ ಧರಣೇಂದ್ರನಿವನಂತಕನೆಂದು ಹರುಷದಿಂದ ಸರಸವಾಡಿತ್ತ ಕಂಡು ಹರ ಮುಕುಳಿತನಾಗಿ ನಕ್ಕ ನಮ್ಮ ಕೂಡಲಸಂಗಮದೇವ.

೫೦೧. ಐವದೇ ಬ್ರಹ್ಮನ ಕಪಾಲ ಕರದಲ್ಲಿ? ಐದದೇ ವಿಷ್ಣುವಿನ ನಯನ ಪಾದದಲ್ಲಿ? ಐದದೇ ಕಾಮನ ಸುಟ್ಟ ಭಸ್ಮ ಮೈಯಲ್ಲಿ? ಮುಖ ಮೂದಲೆ ಏಕಯ್ಯಾ ಕೂಡಲಸಂಗಮದೇವಾ?

೫೦೨. ವಿಷ್ಣುವ ಪೂಜಿಸಿ ಮುಡುಹ ಸುಡಿಸಿಕೊಂಬುದ ಕಂಡೆ. ಜಿನ್ನನ ಪೂಜಿಸಿ ಬತ್ತಲೆ ಇಪ್ಪುದ ಕಂಡೆ. ಮೈಲಾರನ ಪೂಜಿಸಿ ನಾಯಾಗಿ ಬೊಗಳುವುದ ಕಂಡೆ. ನಮ್ಮ ಕೂಡಲಸಂಗನ ಶರಣರ ಪೂಜಿಸಿ ದೇವಭಕ್ತನೆನಿಸಿಕೊಂಬುದ ಕಂಡೆ.

೫೦೩. ಅಮೃತಮತಿ ಸೋಮಶಂಭುವಿಂಗೆ ಹುಟ್ಟಿದಾತ ಇಂದ್ರ. ಸತ್ಯಋಷಿ ಜ್ಯೇಷ್ಠಾದೇವಿಗೆ ಹುಟ್ಟಿದಾತ ಬ್ರಹ್ಮ. ವಸುದೇವ ದೇವಕಿಗೆ ಹುಟ್ಟಿದಾತ ವಿಷ್ಣು. ನಾಭಿರಾಜ ಮರುತಾದೇವಿಗೆ ಹುಟ್ಟಿದಾತನರುಹ. ಇವರೆಲ್ಲರೂ ಯೋನಿಜರೆಂಬುದ ತ್ರಿಜಗ ಬಲ್ಲುದು. ಉತ್ಪತ್ತಿ ಸ್ಥಿತಿಪ್ರಳಯಕ್ಕೆ ಹೊರಗಾದ ಕೂಡಲಸಂಗಮದೇವಂಗೆ ಮಾತಾಪಿತರುಗಳುಳ್ಳರೆ ಹೇಳಿರೋ.

೫೦೪. ಅವಾಗಳೂ ಲೋಗರ ಮನೆಯ ಬಾಗಿಲ ಕಾಯ್ದುಕೊಂಡಿಪ್ಪವು ಕೆಲವು ದೈವಂಗಳು. ಹೋಗೆಂದರೆ ಹೋಗವು. ನಾಯಿಂದ ಕರಕಷ್ಟ, ಕೆಲವು ದೈವಂಗಳು. ಲೋಗರ ಬೇಡಿಕೊಂಡುಂಬ ದೈವಂಗಳು ತಾವೇನ ಕೊಡುವವೋ ಕೂಡಲಸಂಗಮದೇವಾ?

೫೦೫ ಹಾಳು ಮೊರಡಿಗಳಲ್ಲಿ, ಊರ ದಾರಿಯಲ್ಲಿ, ಕೆರೆ ಭಾವಿ ಹೂಗಿಡುಮರಂಗಳಲ್ಲಿ, ಗ್ರಾಮ ಮಧ್ಯದಲ್ಲಿ, ಚೌಪಥ ಪಟ್ಟಣ ಪ್ರವೇಶದಲ್ಲಿ, ಹಿರಿಯಾಲದ ಮರದಲ್ಲಿ, ಮನೆಯ ಮಾಡಿ ಕರೆವೆಮ್ಮೆಯ, ಹಸುಗೂಸು, ಬಸಿರೆ, ಬಾಣಿತಿ, ಕುಮಾರಿ, ಕೊಡಗೂಸೆಂಬವರ ಹಿಡಿದುಂಬ ತಿರಿದುಂಬ ಮಾರಯ್ಯ, ಬೀರಯ್ಯ, ಖೇಚರ, ಗಾವಿಲಿ, ಅಂತರ, ಬೆಂತರ, ಕಾಳಯ್ಯ, ಮಾಳಯ್ಯ, ಕೇತಯ್ಯ, ಧೂಳಯ್ಯಗಳೆಂಬ ನೂರು ಮಡಿಕೆಗೆ ನಮ್ಮ ಕೂಡಲಸಂಗಮದೇವರಿಗೆ ಶರಣೆಂಬುದೊಂದು ಟೊಣ್ಣೆ ಸಾಲದೇ?

೫೦೬. ಗಾಡಿಗ ಡಿಂಬು ಗಂಗೆ ಚಿಕ್ಕು ಮುಟ್ಟಿಗೆ ಹಸುರಂಬಿಲಿ ಮುಟ್ಟಿಗೆ ಹುರಿಬುತ್ತಿಯ ಬೇಡಿ, ಮನುಷ್ಯರ ಪಿಡಿದು ಪೀಡಿಸಿ, ತಮ್ಮ ಬಸುರ್ಗೆ ಕೂಳ ಕಾಣವೆ, ಈಡಾಡಿದ ಕೂಳಂಬಲಿಯನಾಯ್ದು, ಕುರುಕುವ ಹೇಸಿ ದೈವಂಗಳ ಬೇಡಿ ಬೇಡಿ, ನಿರರ್ಥ ಕೆಡಬೇಡೆಲವೋ. ಕೂಡಲಸಂಗಮದೇವರ ಸೆರೆ ನಂಬುದೆಲವೋ.

೫೦೭. ಬನ್ನಿರೇ ಅಕ್ಕಗಳು ಹೋಗಿರೇ ಹಿರಿಯಾಲವ ಮರಕ್ಕೆ. ಕಚ್ಚುವವೇ ನಿಮ್ಮ ಚಿಪ್ಪಿನ ಹಲ್ಲುಗಳು? ಬೆಚ್ಚಿಸುವವೇ ನಿಮ್ಮ ಒಚ್ಚಣಿಯ ರೂಹುಗಳು? ನಮ್ಮ ಕೂಡಲಸಂಗಮದೇವನಲ್ಲದೆ ಪರದೈವಂಗಳು ಮನಕ್ಕೆ ಬಂದವೇ ಬಿಕ್ಕನೆ ಬಿರಿವ ದೈವಂಗಳು?

೫೦೮. ಅರಗು ತಿಂದು ಕರಗುವ ದೈವವ, ಉರಿಯ ಕಂಡರೆ ಮುರುಟುವ ದೈವವನೆಂತು ಸರಿ ಎಂಬೆನಯ್ಯ? ಅವಸರ ಬಂದರೆ ಮಾರುವ ದೈವವನೆಂತು ಸರಿ ಎಂಬೆನಯ್ಯ? ಅಂಜಿಕೆ ಬಂದರೆ ಹೂಳುವ ದೈವವನೆಂತು ಸರಿ ಎಂಬೆನಯ್ಯ? ಸಹಜ ಭಾವ ನಿಜೈಕ್ಯ ಕೂಡಲಸಂಗಮದೇವನೊಬ್ಬನೇ ದೇವ.

೫೦೯. ಮಡಕೆ ದೈವ, ಮೊರ ದೈವ, ಬೀದಿಯ ಕಲ್ಲು ದೈವ, ಹಣಿಗೆ ದೈವ, ಬಿಲ್ಲು ನಾರಿ ದೈವ ಕಾಣಿರೋ. ಕೊಳಗ ದೈವ, ಗಿಣಿಲು ದೈವ ಕಾಣಿರೋ. ದೈವದೈವವೆಂದು ಕಾಲಿಡಲಿಂಬಿಲ್ಲ. ದೇವನೊಬ್ಬನೇ ಕೂಡಲಸಂಗಮದೇವ.

೫೧೦. ಮಾರಿ ಮಸಣಿ ಎಂಬವು ಬೇರಿಲ್ಲ ಕಾಣಿರೋ ಮಾರಿ ಎಂಬುದೇನು? ಕಂಗಳು ತಪ್ಪಿ ನೋಡಿದರೆ ಮಾರಿ. ನಾಲಿಗೆ ತಪ್ಪಿ ನುಡಿದರೆ ಮಾರಿ. ನಮ್ಮ ಕೂಡಲಸಂಗಯ್ಯನ ನೆನಹ ಮರೆವರೆ ಮಾರಿ.

೫೧೧. ಮಾರಿಕವ್ವೆಯ ನೋಂತು ಕೊರಳಲ್ಲಿ ಕಟ್ಟಿಕೊಂಬರು! ಸಾಲಬಟ್ಟರೆ ಮಾರಿಕೊಂಬರಯ್ಯ. ಸಾಲಬಟ್ಟರೆ ಅವರನೊತ್ತೆಯಿಟ್ಟುಕೊಂಡುಂಬರಯ್ಯ. ಮಾರು ಹೋಗ, ಒತ್ತೆ ಹೋಗ ಕೂಡಲಸಂಗಮದೇವ.

೫೧೨. ಉಣಲುಡಲು ಮಾರಿಯಲ್ಲದೆ ಕೊಲಲು ಕಾಯಲು ಮಾರಿಯೇ? ತನ್ನ ಮಗನ ಜವನೊಯ್ದಲ್ಲಿ, ಅದೆತ್ತ ಹೋದಳು ಮಾರಿಕವ್ವೆ? ಈವರೆ ಕಾಯ್ವರೆ, ನಮ್ಮ ಕೂಡಲಸಂಗಯ್ಯನಲ್ಲದೆ ಮತ್ತೊಂದು ದೈವವಿಲ್ಲ.

೫೧೩. ಚಿಕ್ಕದೊಂದು ಹೊತ್ತಿಗೆ, ಬೆನಕನ ಕರಡಿಗೆಯಯ್ಯ, ನೀಡುಂಡುಟ್ಟ ಗೊರವನಯ್ಯ! ಪುಣ್ಯವೇನಾದರಾಗಲಿ, ಥಕ್ಕೆಯ ಮೇಲೆ ಅಕ್ಕಿಯ ತಳಿದೆನು. ನಮ್ಮ ಕೂಡಲಸಂಗಮದೇವನಲ್ಲದೆ ಅನ್ಯ ದೈವ ಉಂಟೆನ್ನದಿರು ಕಂಡೆಯಾ.



೫೧೪. ಅಸಮಾಕ್ಷ ಲಿಂಗಕ್ಕೆ ಅನ್ಯ ದೈವ ಸರಿ ಎಂಬ ಪಾತಕರ ಬಾಯಲ್ಲಿ ಮಸೆದ ಕೂರಲಗನಿಕ್ಕದೆ ಮಾಣ್ಬನೇ? ಹುಸಿಯಾಗಿ ನುಡಿವರ ನಾಯಾಗಿ ಬೊಗಳಿಸನೇ? ಹಿರಿಯರುತ್ತಮರೆನ್ನದವರ ಕುದುರೆಯಾಗಿ ಕಟ್ಟಿಸನೇ? ಗುರು ಲಘುವೆಂದವರ ಬಾಯಲಿ ಮೆಟ್ಟಿ ಹುಡಿಯ ಹೊಯ್ಯದೆ ಮಾಣ್ಬನೇ? ಪರಸ್ತ್ರೀಗಳುಪಿದವರ ಗಾಣದಲಿಕ್ಕಿ ಹಿಳಿಯನೇ? ಪರಧನಕ್ಕಳುಪಿದವರ ಹಿಡಿಖಂಡವ ಕೊಯ್ಯನೇ? ಎಲೆ ಕೂಡಲಸಂಗಮದೇವ, ನೀವು ಹೇಳಿದ ಹೇಳಿಕೆಯಿಂದ ಪಿಂಬೆರ ವೈಲಗೆ ಮೇಳವಾಡುತಿರ್ದ ಕಾಣಾ ತ್ರಿಜಗದೊಳಗೆ.

೫೧೫. ವೇದ ಸ್ವಯಂಭುವೆಂಬ ವಾದಿ ನೀ ಕೇಳೆಲವೋ. ಏಕೋ ದೇವ ರುದ್ರ ನ ದ್ವಿತೀಯನೆಂದು ನಂಬುವುದು ಕಾಣಿರಣ್ಣಾ. ‘ಓಂ ದ್ಯಾವಾಭೂಮೀ ಜನಯನ್ ದೇವ ಏಕೋ ಏವ ರುದ್ರೋ ನ ದ್ವಿತಿಯ’ ನೆಂದು ನಂಬುವುದು ಕಾಣಿರಣ್ಣಾ. ‘ಚಕಿತಮಭಿಧತ್ತೇ’ ಎಂದು ಶ್ರುತಿ ಸಾರುತಿದ್ದಾವೆ. ಜಗದ ಕರ್ತ ಕೂಡಲಸಂಗಮದೇವನೊಬ್ಬನೇ ಕಾಣಿರಣ್ಣಾ.

೫೧೬. ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ ಗೌತಮ ಮುನಿಗೆ ಗೋವಧೆಯಾಯಿತ್ತು. ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ ಬಲಿಗೆ ಬಂಧನವಾಯಿತ್ತು. ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ ಕರ್ಣನ ಕವಚ ಹೋಯಿತ್ತು. ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ ದಕ್ಷಂಗೆ ಕುರಿದಲೆಯಾಯಿತ್ತು. ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ ಪರಶುರಾಮ ಸಮುದ್ರಕ್ಕೆ ಗುರಿಯಾದ. ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ ನಾಗಾರ್ಜುನನ ತಲೆ ಹೋಯಿತ್ತು. ದೇವಭಕ್ತರೆಂದು ನಂಬಿದ ಕಾರಣ ನಮ್ಮ ಕೂಡಲಸಂಗನ ಶರಣರು ಕೈಲಾಸವಾಸಿಗಳಾದರು.

೫೧೭. ಭಕ್ತರ ಕಂಡರೆ ಬೋಳರಪ್ಪಿರಯ್ಯ! ಸವಣರ ಕಂಡರೆ, ಬತ್ತಲೆಯಪ್ಪಿರಯ್ಯ! ಹಾರುವರ ಕಂಡರೆ, ಹರಿನಾಮವೆಂಬಿರಯ್ಯ! ಅವರವರ ಕಂಡರೆ, ಅವರವರಂತೆ. ಸೂಳೆಗೆ ಹುಟ್ಟಿದವರ ತೋರದಿರಯ್ಯ! ಕೂಡಲಸಂಗಮದೇವರ ಪೂಜಿಸಿ ಅನ್ಯದೈವಂಗಳಿಗೆರಗಿ ಭಕ್ತರೆನಿಸಿಕೊಂಬ ಅಜ್ಞಾನಿಗಳನೇನೆಂಬೆನಯ್ಯ?

---

## (೪೮) ಯಜ್ಞಗಳನ್ನು ಮಾಡದಿರು ಬಲಿ ಕೊಡಬೇಡ.

೫೧೮. ದಕ್ಷ ಯಾಗವ ಮಾಡಲೆಂದು ಅಜಮುಖ್ಯರಾದ ಸುರರೆಲ್ಲ ನೆರೆದು ಬಂದು ಉಂಬುವ ಬಾಯ ನೋಡಾ! ಬಾಯ ತಪ್ಪಿಸಿ ಉಣಬಂದ ದೈವದ ಬೆಂದ ಬಾಯ ನೋಡಾ! ಉಣದೆ ಉಡದೆ ಹೊಗೆಯ ಕೆಯ್ಯಲ್ಲಿ ಸತ್ತ ಅಣ್ಣಗಳ ಕೇಡು ನೋಡಾ ಕೂಡಲಸಂಗಮದೇವಾ!

೫೧೯. ಕಿಚ್ಚು ದೈವವೆಂದು ಹವಿಯನಿಕ್ಕುವ ಹಾರುವರ ಮನೆಯಲ್ಲು ಕಿಚ್ಚೆದ್ದು ಸುಡುವಾಗ ಬಚ್ಚಲನೀರ ಬೀದಿಯ ದೂಳವ ಹೊಯ್ದು ಬೊಬ್ಬಿಟ್ಟೆಲ್ಲರ ಕರೆವರಯ್ಯಾ! ಕೂಡಲಸಂಗಮದೇವ ವಂದನೆಯ ಮರೆದು ನಿಂದಿಸುತಿರ್ದರಯ್ಯಾ!

೫೨೦. ಇಟ್ಟಿಯ ಹಣ್ಣ ನರಿ ತಿಂದು ಸೃಷ್ಟಿ ತಿರುಗಿತೆಂಬಂತೆ, ಮುಟ್ಟಿಯನಿಟ್ಟ ದ್ವಿಜರ ಮಾತದೇಕೆ? ಹಗಲುಗಾಣದ ಗೂಗೆ ಇರುಳಾಯಿತೆಂದರೆ, ಜಗಕ್ಕೆ ಇರುಳಪ್ಪುದೇ ಮರುಳೆ? ಹೋಮದ ನೆವದಿಂದ ಹೋತನ ಕೊಂದು ತಿಂಬ ಅನಾಮಿಕರೊಡನಾಡಿ ಗೆಲವುದೇನು ಕೂಡಲಸಂಗಮದೇವ?

೫೨೧. ನಿಮ್ಮ ವಚನವೆನ್ನ ಪುಣ್ಯವೆಂಬುದು ಹುಸಿಯಾಯಿತ್ತು ನೋಡಾ. ಶಾಸ್ತ್ರದ ವಚನ ಹೋತಿಂಗೆ ಮಾರಿ. ಎಂತು ನಂಬುವೆನಯ್ಯಾ? ನಾನು ಕೊಲ್ಲೆನು, ನೇಣು ಕೊಂದಿತೆಂಬ ಸೂನೆಗಾರರನೇನೆಂಬೆನಯ್ಯಾ ಕೂಡಲಸಂಗಮದೇವಾ?

೫೨೨. ಮಾತಿನ ಮಾತಿಂಗೆ ನಿನ್ನ ಕೊಂದಿಹರೆಂದು ಎಲೆ ಹೋತೇ ಅಳು ಕಂಡಾ. ವೇದವನೋದಿದವರ ಮುಂದೆ ಅಳು ಕಂಡಾ. ಶಾಸ್ತ್ರವ ಕೇಳಿದವರ ಮುಂದೆ ಅಳು ಕಂಡಾ. ನೀನತ್ತುದಕ್ಕೆ ತಕ್ಕುದ ಮಾಡುವ ಕೂಡಲಸಂಗಮದೇವ.

೫೨೩. ಮೊರನ ಗೊಟ್ಟಿಗೆ ಬಪ್ಪ ಕಿರುಕುಳ ದೈವಕ್ಕೆ ಕುರಿಯನಿಕ್ಕಿಹೆನೆಂದು ನಲಿನಲಿದಾಡುವರು! ಕುರಿ ಸತ್ತು ಕಾಯ್ವುದೇ, ಹರ ಮುಳಿದವರ? ಕುರಿ ಬೇಡ, ಮರಿ ಬೇಡ. ಬರಿಯ ಪತ್ರಿಯ ತಂದು ಮರೆಯದೆ ಪೂಜಿಸು ನಮ್ಮ ಕೂಡಲಸಂಗಮದೇವನ.

೫೨೪. ನರಜನ್ಮದಲ್ಲಿ ಹುಟ್ಟಿ, ಲಿಂಗಮುಖವನರಿಯದೆ ಉನ್ಮದ ಸೊಕ್ಕಿ ತಲೆಗೇರಿತಯ್ಯಾ? "ಜೀವಂ ಜೀವೇನ ಭಕ್ಷಯೇತ್", ಕರ್ಮ ಕರ್ಮದಲಿಪ್ಪೆಯಯ್ಯಾ! ಅಂದೊಮ್ಮೆ ದಕ್ಷನು ಹೋತನ ಕೊಂದಲ್ಲಿ ಗೋಳಿಡಲು, ತಂದಿಕ್ಕ ಹೇಳಿತ್ತೇ ವೇದ ಶಾಸ್ತ್ರಂಗಳು? ಮೂರ್ತಗೊಂಡಲ್ಲಿ ಚತುರ್ವೇದಿಗಳಿಗೊಮ್ಮೆ ಅಕ್ಕಿತೇ ಅಯ್ಯಾ? ನಮ್ಮ ಕೂಡಲಸಂಗಮದೇವನನರಿಯದ ಕಾರಣ ನಾಯಕ ನರಕದಲಿಕ್ಕಿತಯ್ಯಾ.

೫೨೫. ಏನಯ್ಯಾ, ವಿಪ್ರರು ನುಡಿದಂತೆ ನಡೆಯರು! ಇದೆಂತಯ್ಯಾ? ತಮಗೊಂದು ಬಟ್ಟೆ, ಶಾಸ್ತ್ರಕೊಂದು ಬಟ್ಟೆ. ಕೂಡಲಸಂಗಮದೇವಯ್ಯಾ ಹೊಲೆಯರ ಬಸಿರಲ್ಲಿ ವಿಪ್ರರು ಹುಟ್ಟಿ ಗೋಮಾಂಸವ ತಿಂಬರೆಂಬುದಕ್ಕೆ, ಇದೇ ದೃಷ್ಟ.



೫೨೬. ಬ್ರಹ್ಮಸಭೆ ನೆರೆದಲ್ಲಿ, ಬ್ರಹ್ಮವಿತ್ತುಗಳು ಬ್ರಹ್ಮತ್ವಪಡೆದು ತಮ್ಮ ವಚನಬ್ರಹ್ಮರೆನಿಸಿಕೊಂಡು ನೆಮ್ಮುವರು ವಿಷ್ಣುವನು! ತಮ್ಮ ದೈವವ ಬಿಡುವುದಾವುದುಚಿತ? ವಿಷ್ಣು ಶಿವಭಕ್ತನಾಗಿ ನಿಷ್ಠೆಯಿಂದ ಕಣ್ಣನಿತ್ತು ಪಡೆದನು ಶಿವಭಕ್ತಿಯಿಂದ. ಕಷ್ಟಜಾತಿ ಜೀವಿಗಳಿಗೆ ಮುಟ್ಟ ಎಂತು ಬಂದಿತ್ತು? ಮುಟ್ಟರೊಂದುವನು. ಮೂವಿಧಿಬಟ್ಟರು. ಹುಸಿವನೇ ಹೊಲೆಯನೆಂದು ವಚನ ಉಂಟು ಲೋಕದಲ್ಲಿ. ಹುಸಿದಜನ ಸಿರ ಹೋಯಿತ್ತಾದಿಯಲ್ಲಿ. ಎಸೆವ ಕಿರು ಪಶುವನುಸುರಲೀಯದೆ ವಿಧಾವಿಸಿ ತಿಂಬ ಜನ್ಮ ಅದಾವ ಫಲವು? ದಕ್ಷ ಯಾಗವ ಮಾಡಿ ನಿಕ್ಷೇತ್ರನೆರೆದ. 'ಅಕಟಕಟಾ, ಕೇಳಿಯಿಂ, ಏಕೆ ಮಾಣಿರೋ? ಮಮ ಕರ್ತ ಕೂಡಲಸಂಗನ ಶರಣರು ಅಕ್ಷಯರಧಿಕರು, ವಿಪ್ರರು ಕೀಳು, ಜಗವೆಲ್ಲರಿಯಲು.

---

## (೪೯) ಜ್ಯೋತಿಷ್ಯವನ್ನು ನಂಬಬೇಡ.

೫೨೭. ಅಂದು, ಇಂದು, ಮತ್ತೊಂದೆನಬೇಡ. ದಿನ ಒಂದೇ ಶಿವಶರಣೆಂಬುವಂಗೆ. ದಿನ ಒಂದೇ ಹರ ಶರಣೆಂಬುವಂಗೆ. ದಿನ ಒಂದೇ ನಮ್ಮ ಕೂಡಲಸಂಗನ ಮಾಣದೆ ನೆನೆವಂಗೆ.

೫೨೮. ಲಗ್ನವೆಲ್ಲಿಯದೋ, ವಿಘ್ನವೆಲ್ಲಿಯದೋ ಸಂಗಯ್ಯಾ? ದೋಷವೆಲ್ಲಿಯದೋ, ದುರಿತವೆಲ್ಲಿಯದೋ ಸಂಗಯ್ಯಾ? ನಿಮ್ಮ ಮಾಣದೆ ನೆನೆವಂಗೆ ಭವಕರ್ಮವೆಲ್ಲಿಯದೋ ಕೂಡಲಸಂಗಮದೇವಯ್ಯಾ?

೫೨೯. ಅಷ್ಟಮೀ ನವಮೀ ಎಂಬ ಕಲ್ಪಿತವೇಕೋ ಶರಣಂಗೆ? ತಪ್ಪಿತ್ತು ಗಣಪದವಿ. ಲಿಂಗಕ್ಕೆ ದೂರ. ಒಬ್ಬರಿಗಾಳಾಗಿ ಒಬ್ಬರನೋಲೈಸುವ ನಿರ್ಬುದ್ಧಿ ಮನುಜರನೇನೆಂಬೆ ಕೂಡಲಸಂಗಮದೇವ?

೫೩೦. ಇಪ್ಪತ್ತುನಾಲ್ಕು ತಿಥಿಯಿಂದ ವೆಗ್ಗಳ ಗ್ರಹಣ. ಸಂಕ್ರಾಂತಿಯಿಂದ ವೆಗ್ಗಳ ಏಕಾದಶಿ. ವ್ಯತೀಪಾತದಿಂದ ವೆಗ್ಗಳ. ಸೂಕ್ಷ್ಮ ಶಿವಪಥವ ನರಿದಂಗೆ ಹೋಮನೇಮ ಜಪತಪದಿಂದ ವೆಗ್ಗಳ ಕೂಡಲಸಂಗಮದೇವ ನಿಮ್ಮ ಮಾಣದೆ ನೆನವಂಗೆ.

೫೩೧. ಎಮ್ಮವರು ಬೆಸಗೊಂಡರೆ, ಶುಭ ಲಗ್ನವೆನ್ನಿರಯ್ಯಾ. ರಾಶಿಕೂಟ ಋಣ ಸಂಬಂಧ ಉಂಟೆಂದು ಹೇಳಿರಯ್ಯಾ. ಚಂದ್ರಬಲ, ತಾರಾಬಲ ಉಂಟೆಂದು ಹೇಳಿರಯ್ಯಾ. ನಾಳಿನ ದಿನಕಿಂದಿನ ದಿನ ಲೇಸೆಂದು ಹೇಳಿರಯ್ಯಾ. ಕೂಡಲಸಂಗಮದೇವನ ಪೂಜಿಸಿದ ಫಲ ನಿಮ್ಮದಯ್ಯಾ.

೫೩೨. ಹಾವಾಡಿಗನು ಮೂಕೊರಿತಿಯು ತನ್ನ ಮಗನ ಮದುವೆಗೆ ಶಕುನವ ನೋಡ ಹೋಹಾಗ, ಇದಿರಿಲೊಬ್ಬ ಮೂಕೊರಿತಿಯ ಹಾವಡಿಗನ ಕಂಡು ಶಕುನ ಹೊಲ್ಲೆಂಬ ಚಮರನ ನೋಡಾ! ತನ್ನ ಕೆಯ್ಯಲು ಹಾವು, ತಾನು ಮೂಕೊರೆಯ. ತನ್ನ ಭಿನ್ನವನರಿಯದೆ ಅನ್ಯರನೆಂಬ ಕುನ್ನಿಯನೇನೆಂಬೆ ಕೂಡಲಸಂಗಮದೇವಾ?

೫೩೩, ಶಕುನವೆಂದೆಂಬೆ, ಅವಶಕುನವೆಂದೆಂಬೆ. ನಿಮ್ಮವರು ಅಳಲಿಕೆ ಅಂದೇಕೆ ಬಂದೆ? ನಿಮ್ಮವರು ಅಳಲಿಕೆ ಇಂದೇಕೆ ಹೋದೆ? ನೀ ಹೋಹಾಗ ಳಕ್ಕೆ, ನೀ ಬಾಹಾಗಳಕ್ಕೆ. ಅಕ್ಕೆ ಬಾರದ ಮುನ್ನ ಪೂಜಿಸು ಕೂಡಲಸಂಗಮ ದೇವನ.

## (೫೦) ತೀರ್ಥಯಾತ್ರೆಗಳನ್ನು ಮಾಡಬೇಡ.

೫೩೪ ಅಡಿಗಡಿಗೆ ಸ್ಥಾನನಿಧಿ. ಅಡಿಗಡಿಗೆ ದಿವ್ಯ ಕ್ಷೇತ್ರ. ಅಡಿಗಡಿಗೆ ನಿಧಿಯು ನಿಧಾನ ನೋಡಾ. ಆತನ ಇರವೇ ಅವಿಮುಕ್ತ ಕ್ಷೇತ್ರ. ಕೂಡಲ ಸಂಗನ ಶರಣ ಸ್ವತಂತ್ರನಾಗಿ.

೫೩೫. ಶರಣ ನಿದ್ರೆಗೈದರೆ ಜಪ ಕಾಣಿರೋ. ಶರಣನೆದ್ದು ಕುಳಿತರೆ ಶಿವರಾತ್ರೆ ಕಾಣಿರೋ. ಶರಣ ನಡೆದುದೇ ಪಾವನ ಕಾಣಿರೋ. ಶರಣ ನುಡಿದುದೇ ಶಿವತತ್ವ ಕಾಣಿರೋ. ಕೂಡಲಸಂಗನ ಶರಣನ ಕಾಯವೇ ಕೈಲಾಸ ಕಾಣಿರೋ.

೫೩೬. ಬಂದು ಬಲ್ಲಹ ಬಿಡಲು ಹೊಲೆಗೇರಿ ಎಂಬ ಹೆಸರೊಳವೇ ಅಯ್ಯ? ಲಿಂಗವಿದ್ದವರ ಮನೆ ಕೈಲಾಸವೆಂದು ನಂಬಬೇಕು. 'ಚಾಂಡಾಲ ವಾಟಿಕಾಯಾಂ ವಾ । ಶಿವಭಕ್ತಸ್ಥಿತೋ ಯದಿ । ತತ್ ಶ್ರೇಣಿಶ್ಶಿವಲೋಕಸ್ಯ । ತದ್ಗೃಹಂ ಶಿವಮಂದಿರಂ'. ಲೋಕದ ಡಂಭಕರ ಮಾತು ಬೇಡ. ಕೂಡಲ ಸಂಗನಿದ್ದುದೇ ಕೈಲಾಸ.

೫೩೭ ಕೃತಯುಗದಲ್ಲಿ ಕೇದಾರವೆಂಬ ಮೂಲಸ್ಥಾನ, ತ್ರೇತಾಯುಗ ದಲ್ಲಿ ವಾರಣಾಸಿ ಎಂಬ ಮೂಲಸ್ಥಾನ, ದ್ವಾಪರಯುಗದಲ್ಲಿ ವಿರೂಪಾಕ್ಷನೆಂಬ ಮೂಲಸ್ಥಾನ, ಕಲಿಯುಗದಲ್ಲಿ ಪರ್ವತವೆಂಬ ಮೂಲಸ್ಥಾನ. ಇಂತೀ ನಾಲ್ಕು ಮೂಲಸ್ಥಾನ. ನಾನಾ ಸ್ಥಾನವ ಮೆಟ್ಟದೆ, ಜಂಗಮವೇ ಲಿಂಗವೆಂದು ನಂಬಿದ ಕೂಡಲಸಂಗಮದೇವಾ.

೫೩೮. ನೀರ ಕಂಡಲ್ಲಿ ಮುಳುಗುವರಯ್ಯ! ಮರನ ಕಂಡಲ್ಲಿ ಸುತ್ತು ವರಯ್ಯ! ಬತ್ತುವ ಜಲವನೊಣಗುವ ಮರನ ಮಚ್ಚಿದವರು ನಿಮ್ಮನೆತ್ತ ಬಲ್ಲರು ಕೂಡಲಸಂಗಮದೇವ?



೫೩೯. ತೊರೆಯ ಮೀವ ಅಣ್ಣಗಳಿರಾ, ತೊರೆಯ ಮೀವ ಸ್ವಾಮಿಗಳಿರಾ, ತೊರೆಯಿಂ ಭೋ, ತೊರೆಯಿಂ ಭೋ, ಪರನಾರಿಯ ಸಂಗವ ತೊರೆಯಿಂ ಭೋ. ಪರಧನದಾಮಿಷವ ತೊರೆಯಿಂ ಭೋ. ಇವ ತೊರೆಯದೆ ಹೋಗಿ, ತೊರೆಯ ಮಿಂದರೆ, ಬಹುದೊರೆ ಹೋಹುದು ಕೂಡಲಸಂಗಮದೇವ.

೫೪೦. ಮೀಂಬುಲಿಗನ ಹಕ್ಕಿಯಂತೆ ನೀರ ತಡೆಯಲಿದ್ದು, ಮೂಗ ಹಿಡಿದು ಧ್ಯಾನವ ಮಾಡುವರಯ್ಯ! ಬಿಟ್ಟ ಮಂಡೆವೆರಸಿ ಬಾಯ ಮಿಡುಕಿಸುತ ಕಣ್ಣ ಮುಚ್ಚಿ ಬೆರಳನೆಣಿಸುವರಯ್ಯ! ನಿಮ್ಮ ಕೆಯ್ಯಲ್ಲಿ ಕಟ್ಟಿದ ದರ್ಭೆಯ ಹುಲ್ಲು ಕೂಡಲಸಂಗನನರಿಯದೆ ಮೊರೆ ಇಡುವಂತೆ.

೫೪೧. ನಿಮ್ಮನರಿಯದ ಕಾರಣ ಕೆಯ್ಯಲ್ಲಿ ಹುಲ್ಲು. ನಿಮಗೆರಗದ ಕಾರಣ ಕೊರಳಲ್ಲಿ ನೇಣು. ಹಿಂಡಲೇಕೋ? ಕೂಡಲಸಂಗನ ಶರಣರಲ್ಲಿ ದ್ರೋಹರ ಕಕ್ಕಯ್ಯನಾವ ತೊರೆಯಲ್ಲಿ ಮಿಂದ?

೫೪೨. ಸತ್ಯ ಶೌಚದ ನಿತ್ಯ ನೇಮವ ತಪ್ಪದೆ ಮಾಡಬಲ್ಲರೆ, ಅದು ಲೇಸು. ಮತ್ಸ್ಯಕೂರ್ಮಮಂಡುಕ ಜಲದೊಳಗಿದ್ದಲ್ಲಿ ಫಲವೇನು? 'ಚಿತ್ತಮಂತರ್ಗತಂ ದುಷ್ಟಂ । ತೀರ್ಥಸ್ನಾನೇನ ಶುದ್ಧ್ಯತಿ ॥ ಶತ ಕುಂಭಜಲೇ ಶೌಚಂ । ಸುರಾಭಾಂಡಮಿವಾಶುಚಿ ।' ಅಗಡವ ಮಾಡಿ ಮಾಗಡವ ಮಿಂದರೆ, ತಾ ಕೊಡಬಲ್ಲನೇ ಕೂಡಲಸಂಗಮದೇವ ?

೫೪೩. ವೇದವನೋದಿದ ವಿಪ್ರರು ಹೊಸಲಲ್ಲಿ ಹೋದ ಕೇಡ ನೋಡಿರೊ. "ಭರ್ಗೋ ದೇವಸ್ಯ ಧೀಮಹಿ" ಎಂಬರು. ಒಬ್ಬರಿಗೂ ವಿಚಾರವಿಲ್ಲ ನೋಡಿರೋ ಕೂಡಲಸಂಗಮದೇವಾ.

## (೫೧) ಪ್ರಾಯಶ್ಚಿತ್ತಗಳಿಲ್ಲ

೫೪೪. ಎಲವೋ, ಎಲವೋ, ಪಾಪಕರ್ಮವ ಮಾಡಿದವನೇ, ಎಲವೋ, ಎಲವೋ, ಬ್ರಹ್ಮಹತ್ಯವ ಮಾಡಿದವನೇ, ಎಲವೋ ಶರಣೆನ್ನೆಲವೋ. ಒಮ್ಮೆ ಶರಣೆಂದಡೆ, ಪಾಪಕರ್ಮ ಕೆಟ್ಟೋಡುವವು. ಸರ್ವಪ್ರಾಯಶ್ಚಿತಕ್ಕೆ ಹೊನ್ನ ಪರ್ವತಂಗಳೈದಾವೆ. ಓರ್ವಂಗೆ ಶರಣೆನ್ನಿ ನಮ್ಮ ಕೂಡಲಸಂಗಮದೇವಂಗೆ.

೫೪೫. ಸದಾಚಾರ ಸದ್ಭಕ್ತಿ ಇಲ್ಲದವರನೊಲ್ಲನಯ್ಯ. ಅವರಾರಾಧನೆ ದಂಡ. ನಿಚ್ಚ ನಿಚ್ಚ ಪ್ರಾಯಶ್ಚಿತ್ತರನೊಲ್ಲ, ಕೂಡಲಸಂಗಮದೇವ ಭೂಭಾರಕರ.

೫೪೬. ಕುಲದಲ್ಲಿ ಹಾರುವನು ಬ್ರಹ್ಮೇತಿ ಸಾರುವನು. ಆರೋ ಮಾಡಿದ ಪಾಪಕ್ಕೆ ತಾನೆ ಕೆಯ್ಯಾನುವನು. ಸರಿಯೇ ದೇವಭಕ್ತಂಗಿನನು ? ಸರಿಯೇ?

ಲಿಂಗಭಕ್ತಂಗಿವನು? ಬಡಗಿ ಮಾಚಲವೇವಿಯು ಕುಲಜೆಯ ಮಾಡಿಹೆವೆಂದು ಹೊನ್ನ ಕಪಿಲೆಯ ರಾವಣದ ಶಾಕವ ಉಚ್ಛಿಷ್ಟದ ಹಾಲಿನಿಂದ ಕೊಳನಟ್ಟುಂಬ ವರನೇನೆಂಬೆನಯ್ಯ ಕೂಡಲಸಂಗಮದೇವ ?

---

## (೫೩) ಕರ್ಮಿತನಾಗಬೇಡ.

೫೪೭. ಕಣ್ಣು ಮುಚ್ಚಿ ಕನ್ನಡಿಯ ತೋರುವಂತೆ, ಇರುಳು ಹಗಲು ನಿದ್ರೆ ಸಾಲದೇ? ಬೆರಳನೆಣಿಸಿ ಪರಮಾರ್ಥವ ಹಡೆವುದು ಚೋದ್ಯವಲ್ಲವೇ ಹೇಳಾ ? ಮೂಗ ಮುಚ್ಚಿ ಮುಕ್ತಿಯ ಬಯಸುವರ ನಾಚಿಕೆ ಇಲ್ಲದವರ ನಾನೇ ನೆಂಬೆ ಕೂಡಲಸಂಗಮದೇವಾ?

೫೪೮. ಹುತ್ತವ ಬಡಿದಡೆ, ಹಾವು ಸಾಯಬಲ್ಲುದೇ ಅಯ್ಯ? ಅಘೋರ ತಪವ ಮಾಡಿದಡೇನು? ಅಂತರಂಗದಾತ್ಮಶುದ್ಧವಿಲ್ಲದವರ ಎಂತು ನಂಬುವ ವನಯ್ಯ ಕೂಡಲಸಂಗಮದೇವ?

೫೪೯. ಹಾಲ ನೇಮ, ಹಾಲ ಕೆನೆಯ ನೇಮ, ಕೆನೆಯು ತಪ್ಪಿದ ಬಳಿಕ ಕಿಚ್ಚಡಿಯ ನೇಮ, ಬೆಣ್ಣೆಯ ನೇಮ, ಬೆಲ್ಲದ ನೇಮ. ಅಂಬಲಿಯ ನೇಮ ದವರನಾರನೂ ಕಾಣೆ. ಕೂಡಲಸಂಗನ ಶರಣರಲ್ಲಿ ಅಂಬಲಿಯ ನೇಮದಾತ ಮಾದರ ಚನ್ನಯ್ಯಂಗಾಯಿತ್ತು.

೫೫೦. ಶರಣ ಸನುವತುವಪ್ಪ ನಿಜಗುಣಭರಿತನಾಹಡೆ, ಸತ್ವ, ರಜ, ತಮ, ಕ್ರೋಧ ಬಿಡವನಕ, ಅನುಭಾವವೆಲ್ಲಿಯದೋ? ಆತ್ಮಸ್ತುತಿ ಪರನಿಂದೆ ಬಿಡದನಕ. ಅರಿಷಡ್ವರ್ಗ ದಶವಾಯು ಬೆರಸಿಪ್ಪ ಕಳಂಕವಪ್ಪ ತನು ಬಿಡದ ನಕ, ಸಂಸಾರವ್ಯಾಧಿ ಮಾವಲ್ಲವೆ, ಶರಣ ಸಜ್ಜನಿಕೆ ಸಮಯಾಚಾರ ನಿಜ ವ್ರತವು ದುರಾಚಾರಿಗಳವಡದು ನಮ್ಮ ಕೂಡಲಸಂಗನ ಶರಣರಿಗಲ್ಲದೆ.

೫೫೧. ಬಂದುದ ಕೈಕೊಳ್ಳ ಬಲ್ಲರೆ ನೇಮ. ಇದ್ದುದ ವಂಚನೆಯ ಮಾಡದಿದ್ದರೆ ಅದು ನೇಮ. ನಡೆದು ತಪ್ಪದಿದ್ದರೆ ನೇಮ ನುಡಿದು ಹುಸಿ ಯದಿದ್ದರೆ ಅದು ನೇಮ. ನಮ್ಮ ಕೂಡಲಸಂಗನ ಶರಣರು ಬಂದರೆ ಒಡೆಯ ರಿಗೊಡವೆಯನರ್ಪಿಸುವದೇ ನೇಮ.

೫೫೨. ಒಡನೆ ಹುಟ್ಟಿದುದಲ್ಲ. ಒಡನೆ ಬೆಳೆದುದಲ್ಲ. ಎಡೆಯುಲಾದ ಒಂದುಡಿಗೆಯನುಟ್ಟು ಸಡಿಲಿದರೆ, ಲಜ್ಜೆ ನಾಚಿಕೆಯಾಯಿತ್ತೆಂಬ ನುಡಿ ದಿಟ ವಾಯಿತ್ತು. ಲೌಕಿಕದಲ್ಲಿ ಪಡೆದ ಗುರುಕರುಣದ ಒಡನೆ ಹುಟ್ಟಿದ ನೇಮವ ಬಿಡ ದಿರೆಲವೋ. ಬಿಟ್ಟಡೆ ಕಷ್ಟ ಕೂಡಲಸಂಗಮದೇವನಡಿಸಿ ಕೆಡಹುವ ನಾಯಕನರ ಕದಲ್ಲಿ.



೫೫೩. ಮಾಣದೆ ಅರಳೆಯ ಮರನ ಸುತ್ತನೆ ತಿರುಗುವ ಗಾಣದೆತ್ತಿನಂತೆ, ಪೂರ್ವಲಿಖಿತ ಮುಂದುಗಾಣಲೀಯದು. ನೀವೆಲ್ಲ ಪಾಯಕ್ಕೆ ಕೆಡಬೇಡ. ಮಾಣದೆ ಪೂಜಿಸು ಲಿಂಗವ. ಹೆರರ ಗೋಣ ಕೊಯ್ದೆನೆಂದು ಮಂತ್ರವನೋದುವ ನೇಣುಗಾರರ ಮೆಚ್ಚ ಕೂಡಲಸಂಗಮದೇವ.

೫೫೪. ಆದಿ ಪುರಾಣ ಅಸುರರಿಗೆ ಮಾರಿ. ವೇದ ಪುರಾಣ ಹೋತಿಂಗೆ ಮಾರಿ. ರಾಮಪುರಾಣ ರಕ್ಕಸರಿಗೆ ಮಾರಿ. ಭಾರತ ಪುರಾಣ ಗೋತ್ರಕ್ಕೆ ಮಾರಿ. ಇವೆಲ್ಲ ಪುರಾಣವು ಕರ್ಮಕ್ಕೆ ಮೊದಲು. ನಿಮ್ಮ ಪುರಾಣಕ್ಕೆ ಸರಿ ಇಲ್ಲ ಕೂಡಲಸಂಗಮದೇವಾ.

೫೫೫ ವೇದಶಾಸ್ತ್ರದವರ ಹಿರಿಯರೆಂಬೆನೇ ? ಮಾಯಾಭ್ರಾಂತಿ. ಕವಿತೆ ಗೀತಜ್ಞರ ಹಿರಿಯರೆಂಬೆನೇ? ಇವರು ಹಿರಿಯರುಗಳೇ ಯಾಗ ನಟ್ಟುವಿಗೆ ಪಾಣ್ಬರು? ಇವರಿಂದಧಿಕವ ಸಾಧಿಸುವರೇನು ಕಿರಿಯರೇ? ಇಂತು ವಿದ್ಯಾ ಗುಣ ಜ್ಞಾನ ಧರ್ಮಾಚಾರ ಶೀಲಂಗಳ ನಮ್ಮ ಕೂಡಲಸಂಗನ ಶರಣರು ಸಾಧಿಸಿದ ಸಾಧನೆಯನೆ ಸಾಧಿಸು.

---

## (೫೪) ವೀರಶೈವರಲ್ಲಿ ಜಾತಿಭೇದವಿಲ್ಲ.

೫೫೬. ಎಂತವನಾದೊಡೇನು? ಲಿಂಗ ಮುಟ್ಟದವನೇ ಕೀಳುಜಾತಿ. ಕುಲವಹುದು ತಪ್ಪದು ಲಿಂಗವ ಮುಟ್ಟಲೊಡನೆ. ಶಿವ ಕುಲವಹುದು ತಪ್ಪದು. ಪರುಷ ಮುಟ್ಟಲೊಡನೆ ಕಬ್ಬುನ ಹೊನ್ನಹುದು ತಪ್ಪದು. ಕೂಡಲಸಂಗಮ ದೇವನೊಲ್ಲ ಸರ್ವ ಸಂದೇಹಿಗಳ.

೫೫೭. ಪಟ್ಟವ ಕಟ್ಟಿದ ಬಳಿಕ, ಲಕ್ಷಣವನರಸುವರೇ? ಲಿಂಗದೇವನ ಪೂಜಿಸಿ ಕುಲವನರಸುವರೇ ಅಯ್ಯಾ? ಕೂಡಲಸಂಗಮದೇವ, ಭಕ್ತಕಾಯ ಮಮಕಾಯವೆಂದುದಾಗಿ.

೫೫೮. ಜಾತಿವಿಡಿದು ಸೂತಕವನರಸುವೆ. ಜ್ಯೋತಿವಿಡಿದು ಕತ್ತಲೆಯ ನರಸುವೆ. ಇದೇಕೆ ಮರುಳು ಮಾನವಾ ? ಜಾತಿಯಲ ಅಧಿಕನೆಂಬೆ. ವಿಪ್ರ ಶತಕೋಟಿಗಳಿದ್ದಲ್ಲಿ ಫಲವೇನು? ಭಕ್ತಶಿಖಾಮಣಿ ಎಂದುದು ವಚನ. ನಮ್ಮ ಕೂಡಲಸಂಗನ ಶರಣರ ಪಾದಪರುಷವ ನಂಬು. ಕೆಡಬೇಡ ಮಾನವಾ.

೫೫೯. ಅವಲಕ್ಷಣ ನಾಯ ನುಡಿಯ ನಾಲಿಗೆಯು, ಸಡಗರ ಡೋವಿಗೆ, ಮೃತ್ಯುವಿನ ನುಡಿಯೊಳಗಾಯಿತ್ತು. ಬೇಡವೋ ಪರವಾದಿ ಗಳಹದಿರು. ಬೇಡವೋ ದೂಷಕ ಬೊಗಳದಿರು. ಭಕ್ತಿಗೆಯು ಬೇಟಕ್ಕೆಯು ಜಾತಿ ಸೂತಕ

ಉಂಟೇ? ಪರುಷ ಮುಟ್ಟಲು ಕಬ್ಬುನ ಹೊನ್ನಾಯಿತ್ತು ಕಾಣಾ. ನಮ್ಮ ಕೂಡಲಸಂಗನ ಶರಣರನವರಿವರೆಂದಡೆ ಕುಂಭೀಪಾತಕ ನಾಯಕನರಕ ತಪ್ಪದು ಕಾಣಾ.

೫೬೦. ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ. ಜಲಬಿಂದುವಿನ ವ್ಯವಹಾರ ಒಂದೇ. ಆಸೆಯಾಮಿಷ ರೋಷ ಹರುಷ ವಿಷಯಾದಿಗಳೆಲ್ಲ ಒಂದೇ. ಏನನೋದಿ ಏನ ಕೇಳಿ ಏನು ಫಲ? ಕುಲಜನೆಂಬುದಕ್ಕಾವುದು ದೃಷ್ಟ? 'ಸಪ್ತ ಧಾತು ಸಮಂ ಪಿಂಡಂ। ಸಮಯೋನಿ ಸಮುದ್ಭವಂ॥ ಆತ್ಮ ಜೀವಸಮಾಯುಕ್ತಂ। ವರ್ಣಾನಾಂ ಕಿಂ ಪ್ರಯೋಜನಂ॥' ಎಂದುದಾಗಿ ಇದು ಕಾರಣ ಕಾಸಿ ಕಮ್ಮಾರನಾದ. ಬೀಸಿ ಮಡಿವಳನಾದ. ಹಾಸನಿಕ್ಕಿ ಸಾಲಿಗ ನಾದ. ವೇದವನೋದಿ ಹಾರುವನಾದ. ಕರ್ಣದಲಿ ಜನಿಸಿದರುಂಟೇ ಜಗ ದೊಳಗೆ? ಇದು ಕಾರಣ ಕೂಡಲಸಂಗಮದೇವ ಲಿಂಗಸ್ಥಲವನರಿದವನೇ ಕುಲಜನು.

೫೬೧. ಆದ್ಯರಿಗಲ್ಲದೆ ವೇದ್ಯವಾಗದು. ಮಾಣಿ ಭೋ, ಮಾಣಿ ಭೋ. ಶಿವಭಕ್ತನೇ ಕುಲಜ. 'ಕೈವರ್ತಕೀ ಗರ್ಭ ಸಂಭಾವನೆ ಮಾರ್ಕಂಡೇಯ ಮಹಾ ಮುನಿ ತಪಸ್ಸು ಜಾಯತೇ ವಿಪ್ರಕುಲೆ ತಸ್ಮಾತ್ ಜಾತಿಭೇದಂ ನ ಕುರ್ಯಾತ್'. ಜಾತನಲ್ಲ, ಅಜಾತನಲ್ಲ. ಕೂಡಲಸಂಗನ ಶರಣರು ನಿಸ್ಸೀಮರಯ್ಯ.

೫೬೨. ದೇವದೇವ, ಬಿನ್ನಪವ ಅವಧಾರು. ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೆಲ್ಲ ಒಂದೇ ಎಂಬೆ. ಹಾರುವ ಮೊದಲು ಅಂತ್ಯಜ ಕಡೆಯಾಗಿ ಭವಿಯಾದವರನೊಂದೇ ಎಂಬೆ. ಈ ಹೀಗೆಂದು ನಂಬುವು ದೆನ್ನ ಮನವು. ಈ ನುಡಿದ ನುಡಿಯೊಳಗೆ ಎಳ್ಳ ಮೊನೆಯಷ್ಟು ಸಂದೇಹ ವುಳ್ಳರೆ ಹಲ್ಲುದೋರ ಮೂಗ ಕೊಯ್ಯಿ ಕೂಡಲಸಂಗಮದೇವ.

೫೬೩. ನೂರನೋದಿ, ನೂರ ಕೇಳಿದರೇನು? ಆಸೆ ಹರಿಯದು, ರೋಷ ಬಿಡದು. ಮಜ್ಜನಕ್ಕೆರೆದು ಫಲವೇನು? ಮಾತಿನಂತೆ ಮನವಿಲ್ಲದ ಜಾತಿ ಡೊಂಬರ ನೋಡಿ ನಗುವ ನಮ್ಮ ಕೂಡಲಸಂಗಮದೇವ.

೫೬೪. ನೀವು ಹಿರಿಯರೆಂಬಿರಿ. ಕರ್ಮಿಗಳು ನೀವು, ಕೇಳಿರಿ. ನಿಮ್ಮ ವೇದ ಶಾಸ್ತ್ರಂಗಳು ಆರ ಹೊಗಳುತಿರ್ದವು? 'ಓಂ ದ್ಯಾವಾ ಭೂಮೀಜನ ಯನ್ ದೇವ ಏಕ ಏವ ರುದ್ರೋ ನ ದ್ವಿತೀಯ' ನೆಂದು ಶ್ರುತಿ ಸ್ಮೃತಿಗಳು ಸಾರುತಿದ್ದಾವೆ. 'ವರ್ಣಾನಾಂ ಬ್ರಾಹ್ಮಣೋ ಗುರುಃ' ಎಂಬುದು ಹುಸಿ. ವರ್ಣಾನಾಂ ಗುರು ನಮ್ಮ ಕೂಡಲಸಂಗನ ಶರಣರು.

೫೬೫. ವ್ಯಾಸ ಬೋಯಿತಿಯ ಮಗ. ಮಾರ್ಕಂಡೇಯ ಮಾತಂಗಿಯ ಮಗ. ಮಂಡೋದರಿ ಕಪ್ಪೆಯ ಮಗಳು. ಕುಲವನರಸದಿರಿಂಭೋ. ಕುಲ



ದಿಂದ ಮುನ್ನೇನಾದಿರಿಂಭೋ? ಸಾಕ್ಷಾತ್ ಅಗಸ್ತ್ಯ ಕಬ್ಬಿಲ. ದೂರ್ವಾಸ ಮುಚ್ಚಿಗ. ಕಶ್ಯಪ ಕಮ್ಮಾರ. ಕೌಂಡಿಲ್ಯನೆಂಬ ಋಷಿ ಮೂರು ಲೋಕವ ರಿಯೆ ನಾಯಿದ ಕಾಣಿರೋ. ನಮ್ಮ ಕೂಡಲಸಂಗನ ವಚನವಿಂತೆಂದುದು, ಶ್ವಪಚೋಪಿಯಾದರೇನು? ಶಿವಭಕ್ತನೇ ಕುಲಜನೆಂಬೋ.

೫೬೬. ಎನಿಸನೋದಿದರೇನು, ಎನಿಸ ಕೇಳಿದರೇನು, ಚತುರ್ವೇದ ಪಾಠ ಕೀವ್ರವಾದರೇನು, ಲಿಂಗಾರ್ಚನೆ ವಿಹೀನವಾದರೆ? ಶಿವ, ಶಿವ! ಬ್ರಾಹ್ಮಣ ನೆಂಬೆನೆ? ಎನ್ನೆನು. 'ಜನ್ಮನಾ ಜಾಯತೆ ಶೂದ್ರಃ। ಕ್ರಿಯಯಾ ದ್ವಿಜಮು ಚ್ಯತೇ॥ ಶ್ರುತೇನ ಶ್ರೋತ್ರಿಯಂಶ್ಚೈವ ಬ್ರಹ್ಮ ಜಾನಾತಿ ಬ್ರಾಹ್ಮಣಃ' ಎಂದು ದಾಗಿ, 'ಬ್ರಹ್ಮನಾಸ್ತಿ ಶ್ವಪಚರ ಮನೆ' ಎಂದುದಾಗಿ, ಇದು ಕಾರಣ ಕೂಡಲ ಸಂಗಮದೇವ ವೇದ ಭಾರಾಕ್ರಾಂತಿಕೋ ಬ್ರಾಹ್ಮಣ ಗಾರ್ದಭನೆಂಬೆನು.

೫೬೭. ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿ ಸದಿರಯ್ಯ! ಕಕ್ಕಯ್ಯನೊಕ್ಕುದನಿಕ್ಕ ನೋಡಯ್ಯ. ದಾಸಯ್ಯ ಶಿವದಾನವ ನೆರೆಯ ನೋಡಯ್ಯ. ಮನ್ನಣೆಯ ಚನ್ನಯ್ಯನೆನ್ನುವ ಮನ್ನಿಸ. ಉನ್ನತ ಮಹಿಮ ಕೂಡಲಸಂಗಮದೇವ, ಶಿವಧೋ, ಶಿವಧೋ.

---

## (೫೪) ಉಚ್ಚ ನೀಚತ್ವವು ಉದ್ಯೋಗಗಳ ಮೇಲೆ ಅವಲಂಬಿಸಿಲ್ಲ.

೫೬೮. ಎಮ್ಮ ತಾಯಿ ನಿಂಬವ್ವೆ ನೀರನೆರೆದುಂಬಳು. ಎಮ್ಮಯ್ಯ ಚನ್ನಯ್ಯರಾಯ ಕಂಪಣವ ಹೊರುವ. ನಮಗಾರು ಇಲ್ಲವೆಂಬಿರಿ. ನಮ್ಮಕ್ಕ ಕಂಚಿಯಲ್ಲಿ ಬಾಣಸವ ಮಾಡುವಳು. ನಮಗಾರು ಇಲ್ಲವೆಂಬಿರಿ. ನಮ್ಮಜ್ಜರ ಜ್ಜರು ಹಡೆದ ಭಕ್ತಿಯ ನಿಮ್ಮ ಕೈಯ್ಯಲು ಕೊಂಬೆ ಕೂಡಲಸಂಗಮದೇವ.

೫೬೯. ದೇವ ಸಹಿತ ಭಕ್ತ ಮನೆಗೆ ಬಂದರೆ ಕಾಯಕವಾವುದೆಂದು ಬೆಸ ಗೊಂಡೆನಾದರೆ, ನಿಮ್ಮಾಣೆ ನಿಮ್ಮ ಪುರಾತರಾಣೆ. ತಲೆದಂಡ, ತಲೆದಂಡ. ಕೂಡಲಸಂಗಮದೇವಾ, ಭಕ್ತನಲ್ಲಿ ಕುಲವನರಸಿದಡೆ, ನಿಮ್ಮ ರಾಣಿವಾಸದಾಣೆ.

೫೭೦. ಸೆಟ್ಟಿ ಎಂಬೆನೆ ಸಿರಿಯಾಳನ? ಮಡಿವಳನೆಂಬೆನೆ ಮಾಚಯ್ಯನ? ಡೋಹರನೆಂಬೆನೆ ಕಕ್ಕಯ್ಯನ? ಮಾದರನೆಂಬೆನೆ ಚನ್ನಯ್ಯನ? ಆನು ಹಾರುವ ನೆಂದಡೆ ಕೂಡಲಸಂಗಯ್ಯ ನಗುವನಯ್ಯ.

೫೭೧. ದೇವ ನಿಮ್ಮ ಪೂಜಿಸಿ, ಚೆನ್ನನ ಕುಲ ಚೆನ್ನಾಯಿತ್ತು. ದೇವ ನಿಮ್ಮ ಪೂಜಿಸಿ ಮಡಿವಳ ಮಾಚಯ್ಯ ನಿಮ್ಮಡಿಯಾದ. ನೀನೊಲಿದ ಕುಲಕ್ಕೆ

ನೀನೊಲಿದ ಹೊಲೆಯಗೆ ಮೇರೆಯುಂಟೆ ದೇವಾ? 'ಶ್ವಪಚೋಪಿ ಮುನಿ ಶ್ರೇಷ್ಠಃ। ಯಸ್ತು ಲಿಂಗಾರ್ಚನೆ ರತಃ॥ ಲಿಂಗಾರ್ಚನೆ ವಿಹೀನೋಪಿ। ಬ್ರಾಹ್ಮಣಃ ಶ್ವಪಚಾಧಮಃ' ಎಂಬುದಾಗಿ ಜಾತಿವಿಜಾತಿಯಾದರೇನು? ಅಜಾತಂಗೆ ಶರಣೆನ್ನದವನೇ ಹೊಲೆಯ ಕಾಣಾ ಕೂಡಲಸಂಗಮದೇವಾ.

---

## (೫೫) ಭಕ್ತರು ಪರಸ್ಪರ ಅನ್ನೋದಕ ಮತ್ತು ಲಗ್ನ ವ್ಯವಹಾರ ಮಾಡುವುದು.

೫೭೨. ವೇದ ನಡನಡುಗಿತ್ತು. ಶಾಸ್ತ್ರವಗಲಿ ಕೆಲಸಾರಿತ್ತಯ್ಯ. ತರ್ಕ ತರ್ಕಿಸಲರಿಯದೆ ಮೂಗುವಟ್ಟಿತ್ತಯ್ಯ. ಆಗಮ ಹೆರೆತೊಲಗಿ ಅಗಲಿ ಹೋಯಿತ್ತಯ್ಯ. ನಮ್ಮ ಕೂಡಲಸಂಗಯ್ಯನು ಚೆನ್ನಯ್ಯನ ಮನೆಯಲುಂಡ ಕಾರಣ.

೫೭೩. ವೇದಕ್ಕೆ ಒರೆಯ ಕಟ್ಟುವೆ. ಶಾಸ್ತ್ರಕ್ಕೆ ನಿಗಳವನಿಕ್ಕುವೆ. ತರ್ಕದ ಬೆನ್ನ ಬಾರನೆತ್ತುವೆ. ಆಗಮದ ಮೂಗ ಕೊಯ್ವೆ ನೋಡಯ್ಯ. ಮಹಾದಾನಿ ಕೂಡಲಸಂಗಮದೇವ, ಮಾದರ ಚೆನ್ನಯ್ಯನ ಮನೆಯ ಮಗ ನಾನಯ್ಯ.

೫೭೪. ನಿಜ ಭಾವ ಲಕ್ಷ್ಮಿ ಸರಸ್ವತಿಯೊಲಿದರೆ ಕುಲವನರಸಲದೇಕೆ? ದೇವನೊಲಿದ ಭಕ್ತಂಗೆ ಇನ್ನಾವ ಮಂತ್ರವೇಕೆ? ಕಾಮಧೇನು ಮನೆಯಲ್ಲಿರಲು, ಬೇರೆ ಹಯನವನರಸಲೇಕೆ? ಮೋಹವುಳ್ಳ ಠಾವಿನಲ್ಲಿ ಲಜ್ಜೆಯನರಸಲದೇಕಯ್ಯ? ಮಹಾದಾನಿ ಕೂಡಲಸಂಗಯ್ಯನೊಲಿದು ಮಾದರ ಚೆನ್ನಯ್ಯನ ಮನೆಯಲುಂಡ. ವೇದವನೋದಿದವರು ಲಿಂಗವನೊಲಿಸಿಬಂದ ತೋರಿರೋ.

೫೭೫. ಎಮ್ಮವರಧಿಕರಧಿಕರು. ಎಲ್ಲರಿಂದಲಧಿಕರು. ಪಾಕವ ಮಾಡುವ ಭಾಂಡ ಸೊಣಗನ ಡೋಣಿಗೆಯಯ್ಯ! ಕೆರಹಿನಲಿ ಮುಚ್ಚುವುದು ಆವಾಚಾರವಯ್ಯ! ಕೂಡಲಸಂಗಮದೇವ, ನಿಮ್ಮ ಶರಣರ ವಚನವಿಂತೆಂದುದು, ಭವಿಯು ನೋಡಿದ ಓಗರ ಲಿಂಗಾರ್ಪಿತವಾಗದೆಂದು.

೫೭೬. ಉಂಬಲ್ಲಿ ಉಡುವಲ್ಲಿ ಕ್ರಿಯಳಿಯಿತ್ತೆಂಬರು. ಕೊಂಬಲ್ಲಿ ಕೊಡುವಲ್ಲಿ ಕುಲವನರಸುವರೆಂತಯ್ಯ? ಅವರ ಭಕ್ತರೆಂತೆಂಬೆನಯ್ಯ? ಅವರ ಯುಕ್ತರೆಂತೆಂಬೆನಯ್ಯ? ಕೂಡಲಸಂಗಮದೇವಯ್ಯ, ಹೊಲತಿ ಶುದ್ಧ ನೀರ ಮಿಂದಂತಾಯಿತ್ತಯ್ಯ.

೫೭೭. ಆವ ಕುಲದವನಾದರೇನು? ಶಿವಲಿಂಗವಿದ್ದವನೇ ಕುಲಜನು. ಕುಲವನರಸುವರೇ ಶರಣರಲ್ಲಿ ಜಾತಿಸಂಕರನಾದ ಬಳಿಕ? 'ಶಿವೇ ಜಾತಃ



ಕುಲೇ ಧರ್ಮಃ। ಪೂರ್ವಜನ್ಮವಿವರ್ಜಿತಃ॥ ಉಮಾ ಮಾತಾ ಪಿತಾ ರುದ್ರ। ಈಶ್ವರಃ ಕುಲಮೇವ ಚ' ॥ ಎಂಬುದಾಗಿ, ಒಕ್ಕುದ ಕೊಂಬೆನವರಲ್ಲಿ ಕೂಸ ಕೊಡುವೆ. ಕೂಡಲಸಂಗಮದೇವ ನಂಬುವೆ ನಿಮ್ಮ ಶರಣರನು.

---

## (೫೬) ಹೊಲೆಯನಾದರೂ ಸದಾಚಾರಿಯೇ ಕುಲಜನು.

೫೭೮ ಕೊಲ್ಲುವನೇ ಮಾದಿಗ. ಹೊಲಸು ತಿಂಬುವನೇ ಹೊಲೆಯ. ಕುಲವೇನೊ, ಅನಂದಿರ ಕುಲವೇನೋ? ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲಸಂಗನ ಶರಣರೇ ಕುಲಜರು.

೫೭೯. ಅಪ್ಪನು ಡೋಹರ ಕಕ್ಕಯ್ಯನಾಗಿ, ಮುತ್ತಯ್ಯ ಚೆನ್ನಯ್ಯನಾದರೆ, ಆನು ಬದುಕೆನೇ? ಮತ್ತಾ ಶ್ವಪಚಯ್ಯನ ಸನ್ನಿಧಿಯಿಂದ ಭಕ್ತಿಯ ಸದ್ಗುಣವ ನಾನರಿವೆನಯ್ಯ. ಕಷ್ಟ ಜಾತಿಯ ಜನ್ಮದಲ್ಲಿ ಜನಿಸಿದೆ. ಎನಗಿದು ವಿಧಿಯೇ ಕೂಡಲಸಂಗಮದೇವಾ?

೫೮೦. ಹೊಲೆಯುಂಟೇ ಲಿಂಗವಿದ್ದೆಡೆಯಲ್ಲಿ? ಕುಲವುಂಟೇ ಜಂಗಮವಿದ್ದೆಡೆಯಲ್ಲಿ? ಎಂಜಲುಂಟೇ ಪ್ರಸಾದವಿದ್ದೆಡೆಯಲ್ಲಿ? ಇಂತೀ ಅಪವಿತ್ರದ ನುಡಿಯ ನುಡಿವ ಸೂತಕವೇ ಪಾತಕ. ನಿಷ್ಕಳಂಕ, ನಿಜೈಕ್ಯ, ತ್ರಿವಿಧ ನಿರ್ಣಯ ಕೂಡಲಸಂಗಮದೇವ ನಿಮ್ಮ ಶರಣರಿಗಲ್ಲದಿಲ್ಲ.

೫೮೧. ಚತುರ್ವೇದಿಯಾದರೇನು? ಲಿಂಗವಿಲ್ಲದವನೇ ಹೊಲೆಯ. ಶ್ವಪಚೋಪಿಯಾದಡೇನು? ಲಿಂಗವಿದ್ದವನೇ ವಾರಣಾಸಿ. ಆತನ ನುಡಿಗಡಣ ಲೇಸು. ಆತ ಜಗಕ್ಕೆ ಪಾವನ. ಆತನ ಪ್ರಸಾದವೆನಗೆ ಅಮೃತಸೇವನೆ. 'ನ ಮೇ ಪ್ರಿಯಶ್ಚತುರ್ವೇದೀ। ಮದ್ಭಕ್ತಃ ಶ್ವಪಚೋಪಿ ವಾನ್। ತಸ್ಮಾದ್ದೇಯಂ ತತೋ ಗ್ರಾಹ್ಯಂ। ಸ ಚ ಪೂಜ್ಯೋ ಯಥಾ ಸ್ವಯಂ' ಎಂಬುದಾಗಿ ಇದು ಕಾರಣ ಕೂಡಲಸಂಗಮದೇವರನರಿತು ಪೂಜಿಸಿದಾತ ಷಡುದರ್ಶನಕ್ಕಧಿಕ, ಜಗಕ್ಕೆ ಪಾವನ ನೋಡಾ.

೫೮೨. ಹೊಕ್ಕಲ್ಲಿ ಹೊಕ್ಕು, ನಿಮ್ಮ ಒಕ್ಕುದನುಂಬುವನ ಕುಲವೇನೋ? ದೇವ ನೀನೊಲಿದವನ, ಸ್ವಾಮಿ ನೀ ಹಿಡಿದವನ, ಕುಲವೇನೋ? ಕುಲಕೆ ತಿಲಕ ನಮ್ಮ ಮಾದರ ಚೆನ್ನಯ್ಯನ ಕುಲ ನಿಮ್ಮಿಂದಲಧಿಕ ಕೂಡಲಸಂಗಮ್ಮ ದೇವ.

೫೮೩. ಶ್ವಪಚನಾದಡೇನು? ಲಿಂಗವಿದ್ದವನೇ ಕುಲಜ. ನಂಬಿಯೂ ನಂಬದಿದ್ದರೆ, ಸಂದೇಹಿ ನೋಡಾ. ಕಟ್ಟಿದಡೇನು, ಮುಟ್ಟಿದರೇನು, ಹೊಸಿದರೇನು, ಮನ ಮುಟ್ಟದನ್ನಕ್ಕ? ಭಾವಶುದ್ಧವಿಲ್ಲದವಂಗೆ ಭಕ್ತಿ ನೆಲೆಗೊಳ್ಳದು, ಕೂಡಲಸಂಗಮದೇವ ನೀನೊಲಿದಂಗಲ್ಲದೆ.

೫೮೪. ಹೊಲೆಯೊಳಗೆ ಹುಟ್ಟಿ, ಕುಲವನರಸುವೆ ಎಲವೋ!. ಮಾತಂಗಿಯ ಮಗ ನೀನು. ಸತ್ತುದನೆಳೆವನೆತ್ತಣ ಹೊಲೆಯ? ಹೋತ ತಂದು ಕೊಲುವಿರಿ. ಶಾಸ್ತ್ರವೆಂಬುದು ಹೋತಿಂಗೆ ಮಾರಿ. ವೇದವೆಂಬುದು ನಿಮಗೆ ತಿಳಿಯದು. ನಮ್ಮ ಕೂಡಲಸಂಗನ ಶರಣರು ಕರ್ಮವಿರಹಿತರು, ಶರಣ ಸನ್ನಿಹಿತರು, ಅನುಪಮ ಚರಿತ್ರರು. ಅವರಿಗೆ ತೋರಲು ಪ್ರತಿ ಇಲ್ಲವು.

೫೮೫. ಹರನು ಮೂಲಿಗನಾಗಿ, ಪುರಾತನರೊಳಗಾಗಿ, ಬಳಿ ಬಳಿಯಲು ಬಂದ ಮಾದರನ ಮಗ ನಾನಯ್ಯ. ಕಳೆದ ಹೊಲೆಯ ನಮ್ಮಯ್ಯ ಜಾತಿಸೂತಕ. ಮಾದರನ ಮಗ ನಾನಯ್ಯ. ಪನ್ನಗ ಭೂಷಣ ಕೂಡಲಸಂಗಯ್ಯ, ಚೆನ್ನಯ್ಯನೆನ್ನ ಮುತ್ತಯ್ಯನಜ್ಜನಪ್ಪನಯ್ಯ.

೫೮೬. ಹೊಲೆಯ ಮಾದಿಗ ಭಕ್ತನಾದರೆ, ಆತನ ಮನೆಯ ಸೊಣಗಂಗೆ ಪಂಚ ಮಹಾವಾದ್ಯದಲ್ಲಿ ಸನ್ಮಾನವ ಮಾಡನೇ, ನೆಲನನುಪ್ಪುಡಿಸಿ, ಉಘೇ ಚಾಂಗು ಭಲಾ ಎಂದು? ಕುಲದಲ್ಲಧಿಕ ಹಾರುವಂಗೆ ಸಿದ್ಧಿಗೆಯ್ಯೆಲ್ಪೆ. ನಿಮ್ಮ ಶರಣರ ಮಹಿಮೆ ಘನಕ್ಕೆ ಘನ. ಎಲೆ ಕೂಡಲಸಂಗಮದೇವಾ ನಿಮ್ಮ ನಂಬದವನೇ ಹೊಲೆಯ.

೫೮೭. ಒಡೆಯರಿಲ್ಲದ ಮನೆಯ ತುಡುಗುಣಿ ನಾಯಿ ಹೊಗುವಂತೆ, ನೀನಿಲ್ಲದವರ ಮನೆಯ ಹೊಗೆನು. ಸಂಗಯ್ಯ ಶ್ವಪಚಕೋಪಿಯಾದಡೇನು? ಕೂಡಲಸಂಗಯ್ಯ ನೀನಿದ್ದವನೇ ಕುಲಜನು.

೫೮೮. ಸೂಳೆಗೆ ಹುಟ್ಟಿದ ಕೂಸಿನಂತೆ, ಆರನಾದಡೆಯೂ ಅಯ್ಯ ಅಯ್ಯ, ಎನಲಾರೆನಯ್ಯ. ಚೆನ್ನಯ್ಯನೆಮ್ಮಯ್ಯನು. ಚೆನ್ನಯ್ಯನ ಮಗ ನಾನು, ಕೂಡಲಸಂಗನ ಮಹಾಮನೆಯಲ್ಲಿ ಧರ್ಮಸಂತಾನ ಭಂಡಾರಿಬಸವಣ್ಣನು.

೫೮೯. ಅಪ್ಪನು ನಮ್ಮ ಮಾದರ ಚನ್ನಯ್ಯ. ಬೊಪ್ಪನು ನಮ್ಮ ಡೋಹರ ಕಕ್ಕಯ್ಯ. ಚಿಕ್ಕಯ್ಯನೆಮ್ಮಯ್ಯ ಕಾಣಿರಣ್ಣಾ. ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ. ಎನ್ನನೇತಕ್ಕರಿಯಿರಿ ಕೂಡಲಸಂಗಯ್ಯ?



೫೯೦. ಹಿರಿಯಯ್ಯ ಶ್ವಪಚಯ್ಯ. ಕಿರಿಯಯ್ಯ ಡೋಹರ ಕಕ್ಕಯ್ಯ. ಅಯ್ಯಗಳಯ್ಯ ನಮ್ಮ ಮಾದರ ಚನ್ನಯ್ಯ. ಕೂಡಲಸಂಗಮದೇವ ನಿಮ್ಮ ಶರಣರು ಎನ್ನ ಸಲಹುವರಾಗಿ.

೫೯೧. ಗೋತ್ರ ನಾಮವ ಬೆಸಗೊಂಡರೆ, ಮಾತ ನೂಂಕದೆ ಸುಮ್ಮನೇಕಿದ್ದಿರಯ್ಯ? ತಲೆಯ ಕುತ್ತಿ ನೆಲನ ಬರೆವುತಿದ್ದಿರಿದೇನಯ್ಯ? ಗೋತ್ರ ಮಾದರ ಚನ್ನಯ್ಯ, ಡೋಹರ ಕಕ್ಕಯ್ಯನೆಂಬುದೇನು ಕೂಡಲಸಂಗಮದೇವಾ!

೫೯೨. ಚೆನ್ನಯ್ಯನ ಮನೆಯ ದಾಸನ ಮಗನು, ಕಕ್ಕಯ್ಯನ ಮನೆಯ ದಾಸಿಯ ಮಗಳು, ಇವರಿಬ್ಬರೂ ಹೊಲದಲು ಬೆರಣಿಯಸಾಯ ಹೋಗಿ, ಸಂಗವ ಮಾಡಿದರು. ಅವರಿಬ್ಬರಿಗೆ ಹುಟ್ಟಿದ ಮಗ ನಾನು, ಕೂಡಲಸಂಗಮದೇವ ಸಾಕ್ಷಿಯಾಗಿ.

೫೯೩. ಭಕ್ತಿ ಇಲ್ಲದ ಬಡವ ನಾನಯ್ಯ! ಕಕ್ಕಯ್ಯನ ಮನೆಯಲು ಬೇಡಿದೆ. ದಾಸಯ್ಯನ ಮನೆಯಲು ಬೇಡಿದೆ. ಚನ್ನಯ್ಯನ ಮನೆಯಲು ಬೇಡಿದೆ. ಎಲ್ಲಾ ಪುರಾತರು ನೆರೆದು ಭಕ್ತಿಭಿಕ್ಷವನಿಕ್ಕಿದರೆ, ಎನ್ನ ಪಾತ್ರೆ ತುಂಬಿತ್ತು ಕೂಡಲಸಂಗಮದೇವಾ.

೫೯೪. ಕೋಪಿ ಮಜ್ಜನಕ್ಕೆರೆದರೆ ರಕ್ತಧಾರೆ. ಪಾಪಿ ಹುವ್ವನೇರಿಸಿದರೆ ಮಸೆದಾಯುಧದ ಗಾಯ. ಕೂಪರನಾರನೂ ಕಾಣೆ, ಮಾದರ ಚನ್ನಯ್ಯನಲ್ಲದೆ. ಕೂಪರನಾರನೂ ಕಾಣೆ, ಡೋಹರ ಕಕ್ಕಯ್ಯನಲ್ಲದೆ. ಆಪತ್ತಿಯುಳ್ಳಾತ ನಮ್ಮ ಮಡಿವಳ ಮಾಚಯ್ಯ. ನಿನ್ನ ಪತ್ತಿಗರಿವರಯ್ಯ ಕೂಡಲಸಂಗಮದೇವಾ.

# ಪ್ರಸಾದಿಸ್ಥಲ

## (೫೭) ಕರ್ಮ.

೯೫. ಪುಣ್ಯಪಾಪವೆಂಬುವು ತಮ್ಮ ಇಷ್ಟವು ಕಂಡಿರೋ. ಅಯ್ಯಾ ಎಂವಡೆ ಸ್ವರ್ಗ, ಎಲೋ ಎಂವಡೆ ನರಕ. ದೇವಭಕ್ತ ಜಯ ಜೀಯ ಎಂಬ ನುಡಿಯೊಳಗೆ ಕೈಲಾಸವೈದವೇ ಕೂಡಲಸಂಗಮದೇವಾ?

೯೬. ಕರ್ಮವೆಂಬ ಅಂಕದೊಡನೆ ತೊಡರಿವೆನು. ಬಿನ್ನಪವ ಅವಧಾರು ನಿಮ್ಮಾಳಿನ ಭಾಷೆಯ. ಕಡೆಗಳಕ್ಕೆ ನೂಂಕುವೆ. ಕೆಡಹುವೆನಂಕವ. ಕರೆದಡೋಸರಿಸಿದರೆ ನಿಮ್ಮಾಳಲ್ಲ. ಶಿವಶರಣೆಂಬ ದಂಡೆಯ ಹೂಡಿ ಗಣಮೇಳಾಪವೆಂಬ ಅಲಗಿನಲ್ಲಿರಿವೆ ಕೂಡಲಸಂಗಮದೇವ.

೯೭. ಕೆಂಚ ಕರಿಕನ ನೆನೆದಡೆ ಕರಿಕನಾಗಬಲ್ಲನೇ ? ಕರಿಕ ಕೆಂಚನ ನೆನೆದಡೆ, ಕೆಂಚನಾಗಬಲ್ಲನೇ ? ದರಿದ್ರ ಸಿರಿವಂತನ ನೆನೆದಡೆ, ಸಿರಿವಂತನಾಗಬಲ್ಲನೇ ? ಸಿರಿವಂತ ದರಿದ್ರನ ನೆನೆದಡೆ, ದರಿದ್ರನಾಗಬಲ್ಲನೇ ? ಮುನ್ನಿನ ಪುರಾತನರ ನೆನೆದು ಧನ್ಯರಾದಿಹೆವೆಂಬ ಮಾತಿನ ರಂಜಕರನೇನೆಂಬೆ ಕೂಡಲಸಂಗಮದೇವ ?

೯೮. ಪರಚಿಂತೆ ನಮಗೇಕಯ್ಯ? ನಮ್ಮ ಚಿಂತೆ ನಮಗೆ ಸಾಲದೇ? ಕೂಡಲಸಂಗಯ್ಯ ಒಲಿದಾನೋ, ಒಲ್ಲನೋ, ಎಂಬ ಚಿಂತೆ ಹಾಸಲುಂಟು ಹೊದೆಯಲುಂಟು.

೯೯. ಹಸಿದು ಬಂದ ಗಂಡಂಗೆ ಉಣಲಿಕ್ಕದೆ, ಜಡವಾದೆ ಎಂದು ಮರುಗುವ ಸತಿಯ ಸ್ನೇಹದಂತೆ, ಬಂದುದನರಿಯಳು. ಇದ್ದುದ ಸವಿಯಳು. ದುಃಖವಿಲ್ಲದ ಅಕ್ಕೆ ಹಗರಣಿಗನ ತೆರನಂತೆ, ಕೂಡಲಸಂಗಮದೇವಾ.

೧೦೦. ಹುಟ್ಟಿದ ಬಳಿಕ ಕೊಟ್ಟ ಭೋಗಂಗಳ ತಪ್ಪಿಸಿಹೆನೆಂದರೆ ತಪ್ಪವು ನೋಡಯ್ಯ. ಎನಗಿನ್ನೆಂತೋ, ಎನಗಿನ್ನೆಂತೋ, ಎಂದು ಚಿಂತಿಸಬೇಡ. 'ನ ಭುಕ್ತಂ ಕ್ಷೀಯತೆ ಕರ್ಮ' ಇಂತೆಂಬ ಶ್ರುತಿ ತಪ್ಪದು ಕೂಡಲಸಂಗಮದೇವ.

೧೦೧. ಕಾಣಲಾರದವನೆಲ್ಲವ ಕಾಣಲಾರೆನಯ್ಯ! ಕೇಳದುದನೆಲ್ಲವ ಕೇಳಲಾರೆನಯ್ಯ! ದ್ರೋಹವಿಲ್ಲ ಎಮ್ಮ ಶಿವನಲ್ಲಿ. ಸೀಮೆಯುಯ್ಯಾ! ಒಲೆಯ ಮುಂದಿದ್ದು ಮಾಡದ ಕನಸ ಕಾಂಬುವರನೊಲ್ಲನಯ್ಯ ಕೂಡಲಸಂಗಮದೇವ.



೧೦೨. 'ಯಸ್ಯ ಕ್ರಿಯಾ ತಸ್ಯ ಸಿದ್ಧಿರ್ಭವತಿ' ಎಂದು ಕಟ್ಟಾಚಾರದ ಲಿವ್ರ್ ಆಸು ಅನುಸರಿಸಿಕೊಂಡು ನಡೆವನ್ನಕ್ಕ ಕರ್ಮಕಾಂಡಿಯಲ್ಲ. ಉತ್ಪತ್ತಿ ಸ್ಥಿತಿ ಭೋಗ ಭುಕ್ತಿಕಾಯವುಳ್ಳನ್ನಕ್ಕ ಭಕ್ತಿಕಾಂಡಿಯಲ್ಲ. ಪರವು ಸಾಧ್ಯವಾಯಿತ್ತೆಂದು ಕ್ರಿಯೆಲ್ಲವ ಮೀರಿ ನಡೆವೆನು, ಪರತತ್ವವನರಿದೆನು, ಎಂಬನ್ನಕ್ಕ ಜ್ಞಾನಕಾಂಡಿಯಲ್ಲ. ಇನ್ನು ಕರ್ಮಕಾಂಡ, ಭಕ್ತಿಕಾಂಡ, ಜ್ಞಾನಕಾಂಡ, ಈ ತ್ರಿವಿಧವಲ್ಲಿ ವಂಚಕನಾದಡೆ ಈಸು ವಿಧದೊಳಗೆ ಅಂಗವಿಲ್ಲ, ಮೇಲೆ ಸತ್ಪುರುಷರ ಸಂಗವಿಲ್ಲ, ಯುಕ್ತಿ ಇಲ್ಲ. ಎನಗೆ ಭಕ್ತಿ ಎಂತಪ್ಪುದಯ್ಯ ? ಬಲ್ಲವರ ಬೆಸಗೊಂಡರೆ ಎನ್ನ ಬಿಮ್ಮು ಕೆಟ್ಟಹುದೆಂದು, ಮೆಲ್ಲನೆ ಪ್ರಸಂಗದಿಂದ ತಿಳಿದು ನೋಡುವೆ. ಕೂಡಲಸಂಗಮದೇವ ಎನ್ನವಗುಣವ ನೋಡದೆ ಶಿವರಾತ್ರಿಯ ಸಂಕಣ್ಣಂಗೆ ಕರುಣಿಸಿದಂತೆ ಎನಗೆ ಕೃಪೆಯ ಮಾಡಯ್ಯಾ.

೧೦೩. ಸುಖ ಬಂದಡೆ ಪುಣ್ಯದ ಫಲವೆನ್ನೆನು. ದುಃಖ ಬಂದಡೆ ಪಾಪದ ಫಲವೆನ್ನೆನು. ನೀ ಮಾಡಿದ್ದಾಯಿತ್ತೆಂದೆನು. ಕರ್ಮಕ್ಕೆ ಕರ್ತೃವೇ ಕಡೆ ಎಂದೆನ್ನೆನು. ಉದಾಸೀನವಿಡಿದು ಶರಣೆನ್ನೆನು. ಕೂಡಲಸಂಗಮದೇವ ನೀ ಮಾಡಿದುಪದೇಶ ಎನಗೆ. ಈ ಪರಿಯಲಿ ಸಂಸಾರದ ಸವಿಯ ಬಳಸುವೆನು.

೧೦೪. ಪುಣ್ಯ ಪಾಪವೆಂಬುಭಯ ಕರ್ಮವನಾರು ಬಲ್ಲರಯ್ಯ ? ಇವನಾರುಂಬರು ? ಕಾಯ ತಾನುಂಬರೆ, ಕಾಯ ತಾ ಮಣ್ಣು. ಜೀವ ತಾನುಂಬರೆ, ಜೀವ ತಾ ಬಯಲು. ಈ ಉಭಯ. ನಿರ್ಣಯವ ಕೂಡಲಸಂಗಮದೇವ ನಿಮ್ಮ ಶರಣ ಬಲ್ಲ.

೧೦೫. ವಿಪ್ರರ ಕರೆದು ನೃಪರುಗಳಿಪ್ಪರೇ ತಮ್ಮ ಶಿಶುವಿನೊಡನೆಂದು ಬೆಸಗೊಂಡರೆ, ಇಪ್ಪರು ಇಪ್ಪರು, ತಾವು ಬಿತ್ತಿದ ಫಲಂಗಳ ತಾವು ಉಣ್ಣದವರುಂಟೇ? ಎಂದು ಕಣ್ಣ ಕಾಣದೆ ಹೇಳಿದರು ಅಣ್ಣಗಳು ಕರ್ಮದ ಬಟ್ಟೆಯನು. ಅಂತೆಂಬ ಮಾತ ಶಿಸು ಕೇಳಿ ಕೆಟ್ಟೋಡಿ ಬಂದು, ಲಿಂಗದ ಹೊಟ್ಟೆಯ ಹೊಗಲು, ಅಟ್ಟಿ ಬಂದು, ಖಂಡೆಯವ ಕಳೆದುಕೊಂಡು ಮಂಡೆಯನೊಡೆಯಲು, ಮಂಡೆಯೊಡೆದು, ಭೂಮಂಡಲವರಿಯೆ ನಾಲ್ಕು ಪುರವಾಗಲು, ಘಟಸರ್ಪನ ತುಡುಕಿ ನಾಗನಾಥನಾಗಿ, ಇಪ್ಪತ್ತೇಳು ಬಸದಿಯನೊಡೆಯನೇ? ಆಗಳಂತೆ ಎನ್ನ ಮಾಡಿದ ಕರ್ಮವ ನಿಮ್ಮ ಕೆಯ್ಯಲು ಕೆಡಿಸುವರು. ಮುನ್ನೊಬ್ಬ ಕೆಡಿಸಿಹನೆಂದು ಬಂದು ಒಂದು ತುತ್ತನಿಟ್ಟು, ಮರಳಿ ಕೈ ಇಡಹೋದರೆ ತುತ್ತು ಹುಳುಗುಪ್ಪೆಯಾಗದೇ? ಶಿವಧರ್ಮವ ಕೆಡಿಸಿದವನು ಅಧರ್ಮಕ್ಕೆಳಿವನು. ಕೂಡಲಸಂಗಮದೇವರು ಸಾಕ್ಷಿಯಾಗಿ ಮಕರಭೋಜನವಾಗನೇ ವಿನಾಶಕ್ತಿರಾಯನು?

## (೫೮) ನಿಷ್ಕಾಮಕರ್ಮ-

೬೦೬. ಹಮ್ಮಿನ ಭಕ್ತಿ ಕರ್ಮಕ್ಕೆ ಮೊದಲು. ಮರ್ಮವನರಿಯದ ಮಾಟ ಸುಯಿಧಾನದ ಕೇಡು. ಬಂದ ಸಮಯೋಚಿತವನರಿಯದಿರ್ದರೆ, ನಿಂದಿರಲೊಲ್ಲ ಕೂಡಲಸಂಗಮದೇವ.

೬೦೭. ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ. ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ. ಮಾಡುವ ನೀಡುವ ನಿಜವುಳ್ಳರೆ, ಕೂಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವ.

೬೦೮. ಹರಿಸಿ ಮಾಡುವುದು ಹರಿಕೆಯ ದಂಡ. ನೆರಹಿ ಮಾಡುವುದು ಡಂಭಿನ ಭಕ್ತಿ. ಹರಿಸಬೇಡ, ನೆರಹಬೇಡ. ಬಂದ ಬರವನರಿವಡೆ, ಕೂಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವ.

೬೦೯. ಉಂಡುದು ಬಂದೀತೆಂಬ ಸಂದೇಹಿ ಮಾನವ ನೀ ಕೇಳಾ. ಉಂಡುದೇನಾಯಿತ್ತೆಂಬುದ ನಿನ್ನ ನೀ ತಿಳಿದು ನೋಡಾ. ಉಂಡುದು ಆಗಳೇ ಆಪ್ಯಾಯನವಾಯಿತ್ತು. ಆ ಉಂಡುದ ಉಣಬಂದ ಹಂದೆಯ ಬಾಳುವೆಯವರ ಕಂಡು ಆನು ಮರುಗುವೆನಯ್ಯ ಕೂಡಲಸಂಗಮದೇವಾ.

೬೧೦. ಆಸೆಗೆ ಹುಟ್ಟಿದ ಪ್ರಾಣಿ ಆಸೆಯನೆ ಕಲಿತು, ಪುಣ್ಯಪದವಿಯ ಬಯಸಿದರೆ, ಭವಮಾಲೆಯ ಬರವು ತಪ್ಪದು. ಬೇಡಲು ಹುಟ್ಟಿದ ಪ್ರಾಣಿಗೆ ಬೇಡಲು ವಿಧಿಯೇ? ಸೂಳೆಗೆ ಹುಟ್ಟಿದ ಪ್ರಾಣಿಗೆ ನಿಜಗುಣ ಸಜ್ಜನಗುಣವಪ್ಪುದೇ? ಲಿಂಗಮುದಯ ಶರಣ ವಿಸ್ತಾರವು ಬಯಸಿದರೊಳವೇ ಕೂಡಲಸಂಗಮದೇವ ನಿಮ್ಮಲ್ಲಿ?

೬೧೧. ಒಪ್ಪವ ನುಡಿವಿರಯ್ಯ ತುಪ್ಪವ ತೊಡೆದಂತೆ. ಶರಣ ತನ್ನ ಮೆರೆವನೇ ಬಿನ್ನಾಣಿಯಂತೆ? ಕೂಡಲಸಂಗನ ಪ್ರಸಾದದಿಂದ ಬದುಕುವನಲ್ಲದೆ, ತನ್ನ ಮೆರೆವನೇ ಶರಣ?

೬೧೨. ಲಿಂಗನಿಷ್ಠೆ ಪೂಜೆಯಲ್ಲಿ ಬಯ್ಯಾಯಿತ್ತು. ಭಕ್ತಿ ನಿಷ್ಠೆ ಆಚರಣೆಯಲ್ಲಿ ಬಯ್ಯಾಯಿತ್ತು. ಪ್ರಸಾದನಿಷ್ಠೆ ಬೆರಿಕೆಯಲ್ಲಿ ಬಯ್ಯಾಯಿತ್ತು. ಒಂದೊಂದರ ನಿಷ್ಠೆ ಅಂದಂದಿಗೆ ಬಯ್ಯಾಯಿತ್ತು. ಕೂಡಲಸಂಗಮದೇವ ತ್ರಿಜಗವನಾಳಿಗೊಂಡಿತ್ತು.

೬೧೩. ಕಾಲಾಗ್ನಿರುದ್ರನ ಮೇಳಾಪವನರಿಯದವರು, ಕಾಳುಬೀಳೆನುತಿಪ್ಪರಯ್ಯ. ಕಾನನದೊಳಗಣ ಕಿಚ್ಚು ಬಾಳುವೆಯಾಗಿ ಮಿಕ್ಕಡೊರಲುವ



ಬಳ್ಳುವಿನಂತಿಪ್ಪರಯ್ಯಾ ಮನುಜರು ನರವಿಂಧ್ಯದೊಳಗೆ. ತತ್ಕಾಲ ಪ್ರೇಮವನರಿಯದೆ, ವಿಭವಕ್ಕೆ ಮಾಡಿದ ಭಕ್ತಿ ಇರುಳು ಸತ್ತಿಗೆಯ ಹಿಡಿಸಿಕೊಂಡಂತೆ ಕೂಡಲಸಂಗಮದೇವಾ.

೬೧೪. ಬಲಿಯ ಭೂಮಿ, ಕರ್ಣನ ಕವಚ, ಖಚರನ ಅಸ್ಥಿ, ಶಿಬಿಯ ಮಾಂಸ ವೃಥಾ ಹೋಯಿತ್ತಲ್ಲಾ ! ಶಿವಭಕ್ತಿಮತಿಕ್ರಮ್ಯ । ಯತು ದ್ದಾನಂ ಕರೋತಿ ತತ್ । ನಿಷ್ಫಲಂ ತು ಭವೇದ್ದಾನಂ । ರೌರವಂ ನರಕಂ ವ್ರಜೇತ್ । ಇಂತೆಂದುದಾಗಿ ಕೂಡಲಸಂಗನ ಶರಣರನರಿಯದೆ ಕೀರ್ತಿವಾರ್ತೆಗೆ ಮಾಡಿದವನ ಧನ ವೃಥಾ ಹೋಯಿತ್ತಲ್ಲಾ!

೬೧೫. ಹಸಿವಾಯಿತ್ತೆಂದು ಅರ್ಪಿತವ ಮಾಡುವರಯ್ಯ. ತೃಷೆಯಾಯಿತ್ತೆಂದು ಮಜ್ಜನಕ್ಕೆರೆವರಯ್ಯ. ಹಸಿವು ತೃಷೆ ವಿಷಯಕ್ಕೆ ಬಳಲುವರಯ್ಯ. ಹಸಿವಾಯಿತ್ತೆಂದು ಅರ್ಪಿತವ ಮಾಡಲಿಲ್ಲ. ತೃಷೆಯಾಯಿತ್ತೆಂದು ಮಜ್ಜನಕ್ಕೆರೆಯಲಿಲ್ಲ. ಇದು ಕಾರಣ ಕೂಡಲಸಂಗಮದೇವರ ಪೂಜಿಸಿ ಪ್ರಸಾದವ ಪಡೆವರೊಬ್ಬರೂ ಇಲ್ಲ.

೬೧೬. ಪಾದಾರ್ಚನೆಯ ಮಾಡುವೆನಯ್ಯಾ ಪಾದೋದಕದ ಹಂಗಿಂಗೆ. ಶರಣಾರ್ಥಿ ಎಂಬುವೆನಯ್ಯ ಒಕ್ಕುದ ಕೊಂಬ ಹಂಗಿಂಗೆ. ಎಡೆಯಾಟ ಕಡಬಡ್ಡಿಯ ಕೊಟ್ಟು ಕೆಟ್ಟಿತ್ತು ನೋಡಾ ಭಕ್ತಿ. ಕೂಡಲಸಂಗನ ಶರಣರ ನಿಲವನರಿಯದೆ ಮುಯ್ಯಿಗೆ ಮುಯ್ಯಾಗಿ ಕೆಟ್ಟಿತ್ತಯ್ಯ ಎನ್ನ ಭಕ್ತಿ.

೬೧೭. ಒಡಲ ಕಳವಳಕ್ಕೆ ಪಾಯಸವಿಗೆ ಬಯಸಿ ಉಂಡೆನಾದಡೆ, ನಿಮ್ಮ ತೊತ್ತಿನ ಮಗ ನಾನಲ್ಲ. ಬೇಡೆ ಬೇಡೆ ನಿಮ್ಮ ನಂಬಿದ ಸದ್ಭಕ್ತರ. ಅವರೊಕ್ಕುದನುಂಬೆ ಅವರೆಂದಂತೆ ನಡೆವೆ. ಎನ್ನೊಡೆಯ ಕೂಡಲಸಂಗಮದೇವ ನೀನೊಲ್ಲದವರ ಹಿಡಿವೆನಾದರೆ ನಿಮ್ಮ ಪಾದದಾಣೆ.

೬೧೮. ಅಷ್ಟವಿಧಾರ್ಚನೆ ಷೋಡಶೋಪಚಾರವ ಅಂದಂದಿನ ಕೃತ್ಯವ ಅಂದಂದಿಂಗೆ ಆನು ಮಾಡಿ ಶುದ್ಧನಯ್ಯಾ. ಹಂಗುಹರಿ ಇಲ್ಲದ ಕಾರಣ ಕೂಡಲಸಂಗಮದೇವ ನಿಃಫಲದಾಯಕನಾಗಿ, ನಾನು ಮಾಡಿ ಶುದ್ಧನಯ್ಯ.

೬೧೯. ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡುವ ಹಮ್ಮಿನಲ್ಲಿ ಬೆಂದೆ ನಾನಯ್ಯ. ಗುರುವೆಂದರಿಯೆ, ಲಿಂಗವೆಂದರಿಯೆ, ಜಂಗಮವೆಂದರಿಯೆ. ಆನು ಬೆಂದೆನಯ್ಯಾ! ಕೂಡಲಸಂಗಮದೇವಾ ಆನು ಮಾಡುವುದೆಲ್ಲ ಉಪಚಾರವಯ್ಯ.

೬೨೦. ಅಂದಂದಿನ ಹೊಂದಿಗೆಯ ಬಿಂದುಮಾತ್ರದಲಾದ ಅಂದವ ಕೆಡಿಸಲರಿಯದ ಅಂಧಕರ ನೋಡಾ. ಸಮರಸವಿಲ್ಲದೆ ನೆರಹಿ ಮಾಡಿ ಭಕ್ತ

ರಾದಿಹೆವೆಂಬವರನೇನೆಂಬೆ? ಅಚ್ಚಾರಮಂಚಕರ ಎನಗೊಮ್ಮೆ ತೋರದಿರಾ ಕೂಡಲ ಸಂಗಮದೇವ.

೬೨೧. ಅನವರತ ಮಾಡಿಹೆನೆಂಬ, ಉಪ್ಪರ ಗುಡಿಯ ಕಟ್ಟಿ ಮಾಡುವ ಭಕ್ತನ ಮನೆಯದು ಅಂದಣಗಿತ್ತಿಯ ಮನೆ. ಸರ್ವ ಜೀವದಯಾಪಾರಿ ಎಂಬ ಭೂತದ್ರೋಹಿ ಕಕ್ಕಿವನ ಮನೆ ಸುಯಿಧಾನದ ಕೇಡು. ಸೂಳೆಯ ಮಗ ಮಹ ಳವಂ ಮಾಡಿದರೆ, ತಾಯ ಹೆಸರಾಯಿತ್ತು, ತಂದೆಯ ಹೆಸರಿಲ್ಲ ಕೂಡಲಸಂಗಮ ದೇವಾ.

---

## (೫೯) ಕ್ರಿಯೆಯಲ್ಲಿ ಪರಾವಲಂಬಿಯಾಗಬೇಡ.

೬೨೨. ಕಾಯದ ಕಳವಳಕಂಜಿ ಕಾಯಯ್ಯ ಎನ್ನೆನೆನ್ನೆನು. ಜೀವನೋ ಪಾಯಕ್ಕಂಜಿ ಈಯಯ್ಯ ಎನ್ನೆನು. ಯದ್ಭಾವಂ ತದ್ಭವತಿ. ಉರಿಬರಲಿ ಸಿರಿ ಬರಲಿ, ಬೇಕು ಬೇಡೆನ್ನೆನಯ್ಯಾ. ಆನಿಮ್ಮ ಹಾರೆನು. ಮಾನವರ ಬೇಡೆನು. ಆಣೆ ನಿಮ್ಮಾಣೆ ಅಯ್ಯಾ ಕೂಡಲಸಂಗಮದೇವ.

೬೨೩. ಲಿಂಗದಲ್ಲಿ ಸಮ್ಯಕ್ಕರು ಲಿಂಗದಲ್ಲಿ ಸನ್ನದ್ಧರು ಲಿಂಗದ ಸೊಮ್ಮು ಸಂಬಂಧವರಿತ ಸ್ವಾಮಿಭೃತ್ಯರೆಲ್ಲರು ನಿಮ್ಮ ನಾ ಬೇಡೆನು. ಅಂಜ ದಿರಿ. ಎನಗೆ ಮರ್ತ್ಯಲೋಕದ ಮಹಾಗಣಂಗಳುಂಟು. ಇದು ಕಾರಣ ಕೂಡ ಲಸಂಗಮದೇವರ ಲೋಕವ ಹಂಚಿಕೊಳ್ಳಿ ನಿಮನಿಮಗೆ.

---

## (೬೦) ಮಾಟವರತು ಮಾಡುವದು.

೬೨೪. ಮಾಡಿದೆನೆಂಬುದು ಮನದಲ್ಲಿ ಹೊಳೆದರೆ, ಏಡಿಸಿ ಕಾಡಿತ್ತು, ಶಿವನ ಡಂಗುರ. ಮಾಡಿದೆನೆನ್ನದಿರಾ ಲಿಂಗಕ್ಕೆ, ಮಾಡಿದೆನೆನ್ನದಿರಾ ಜಂಗಮಕ್ಕೆ. ಮಾಡಿದೆನೆಂಬುದು ಮನದಲ್ಲಿಲ್ಲದಿದ್ದರೆ ಬೇಡಿತ್ತನೀವ ಕೂಡಲಸಂಗಮದೇವ.

೬೨೫. ನಾರುಳಿಯ ಹಣಿವವನಾರಾದಡೆಯೂ ಆದರೆ ನಾರುಳಿದರೆ, ಮುಂದೆ ಅಂಕುರಿತ ಫಲ ತಪ್ಪದು. ಮಾಡುವನ್ನಕ್ಕ ಫಲದಾಯಕ, ಮಾಟ ವರತು ನಿಮ್ಮಲ್ಲಿ ಸ್ವಯವಾದರೆ ಆತನೇ ಅಚ್ಚ ಶರಣನಯ್ಯ. ಕೂಡಲಸಂಗ ಮದೇವಾ.



೬೨೬ ಒಡೆಯರಿಗೊಡವೆಯನೊಪ್ಪಿಸಲಾರದೆ, ಮೊರೆಯಿಡುವ ಮನವ ನಾನೇನೆಂಬೆನು ? ನೆತ್ತಿಯಲ್ಲಿ ಅಲಗು ತಿರುಹುವಂತಪ್ಪ ವೇದನೆಯಹುದೆನಗೆ. ಬೆಂದ ಹುಣ್ಣ ಕಂಬಿಯಲ್ಲಿ ಕೀಸುವಂತಪ್ಪ ವೇದನೆಯಹುದೆನಗೆ. ಕೂಡಲ ಸಂಗಮದೇವ ಮಾಡಿನೋಡುವ ಹಗರಣವ ನಾ ಮಾಡಿಹೆನೆಂದರೆ ಮನಕ್ಕೆ ಮನ ನಾಚದೇ ಅಯ್ಯಾ ?

೬೨೭. ಎಳ್ಳಿಲ್ಲದ ಗಾಣವನಾಡಿದ ಎತ್ತಿನಂತಾಯಿತ್ತೆನ್ನ ಭಕ್ತಿ. ಉಪ್ಪ ಅಪ್ಪುವಿನಲ್ಲಿ ಅದ್ದಿ ಮೆಲಿದಂತಾಯಿತ್ತೆನ್ನ ಭಕ್ತಿ. ಕೂಡಲಸಂಗಮದೇವಾ ಆನು ಮಾಡಿದೆನೆಂಬ ಕಿಚ್ಚು ಸಾಲದೇ ?

---

## (೬೧) ಕರ್ಮಚ್ಛೇದನವು.

೬೨೮. ಭವಬಂಧನ ಭವಪಾಶಗಳಾದ ಕಾರಣವೇನಯ್ಯಾ ? ಹಿಂದಣ ಜನ್ಮದಲ್ಲಿ ಲಿಂಗವ ಮರೆದೆನಾಗಿ, ಹಿಂದಣ ಸಿರಿಯಲ್ಲಿ ಜಂಗಮವ ಮರೆದೆನಾಗಿ. ಅರಿದಡೀ ಸಂಸಾರವ ಹೊದ್ದಲೀವನೇ ಕೂಡಲಸಂಗಮದೇವಾ ?

೬೨೯. ಆಸತ್ತೆನಲಿಸಿದೆನೆಂದಡೆ ಮಾಣದು. ಬೇಸತ್ತೆ ಬೆಂಬಿದ್ದೆನೆಂದಡೆ ಮಾಣದು. ಏವೆನೇವೆನೆಂದರೆ ಮಾಣದು. ಕಾಯದ ಕರ್ಮದ ಫಲಭೋಗ. ಕೂಡಲಸಂಗನ ಶರಣರು ಬಂದು, ಹೋ ಹೋ ಅಂಜದಿರೆಂದಡಾನು ಬದು ಕುವೆನು.

೬೩೦. ಅರಿಯದೆ ಜನನಿಯ ಜಠರದಲ್ಲಿ ಜನಿಸಿದೆ. ಬಾರದ ಭವಂಗ ಳಲ್ಲಿ ಬರಿಸಿದೆ ತಂದೆ. ಹುಟ್ಟುತ್ತೆ ತಪ್ಪಾಯಿತ್ತೇ ಎಲೆ ಲಿಂಗವೇ ? ಮುನ್ನ ಹುಟ್ಟಿದುದಕ್ಕೆ ಕೃಪೆಯ ಮಾಡು ಲಿಂಗವೇ. ಇನ್ನು ಹುಟ್ಟಿದೆನಾದರೆ, ಕೂಡಲ ಸಂಗಮದೇವ ನಿಮ್ಮಾಣೆ.

೬೩೧. ಪಂಚಬ್ರಹ್ಮನ ಕೆಡಿಸಿತ್ತು. ಪ್ರಣವ ಮಂತ್ರವನೀಡಾಡಿತ್ತಲ್ಲಾ ! ಕರ್ಮಂಗಳನೇ ಕಳೆಯಿತ್ತು. ಕ್ರಿಯಗಳನೇ ಮೀರಿತ್ತಲ್ಲಾ ! ಆಗಮದ ಹಲ್ಲನೇ ಕಳೆಯಿತ್ತು ಕೂಡಲಸಂಗಯ್ಯನ ಭಕ್ತಿಗಜವು.

೬೩೨. ಶಿವಜನ್ಮದಲ್ಲಿ ಹುಟ್ಟಿ ಲಿಂಗೈಕ್ಯರಾಗಿ, ತಮ್ಮಂಗದ ಮೇಲೆ ಲಿಂಗವಿರುತ್ತಿರಲು, ಅನ್ಯರನೆ ಹಾಡಿ, . ಅನ್ಯರನೆ ಹೊಗಳಿ, ಅನ್ಯರ ವಚನವ

ಕೊಂಡಾಡಲು ಕರ್ಮ ಬಿಡದು. ಭವಬಂಧನ ಶ್ವಾನಯೋನಿಯಲ್ಲಿ ಬಪ್ಪುದು ತಪ್ಪದು. ಇದು ಕಾರಣ, ಕೂಡಲಸಂಗಮದೇವಾ, ನಿಮ್ಮ ನಂಬಿಯೂ ನಂಬದ ಡಂಭಕರಿಗೆ ಮಳಲಗೋಡೆಯನಿಕ್ಕಿ ನೀರಲಿ ತೊಳೆದಂತಾಯಿತ್ತಯ್ಯಾ.

೬೩೩. ನೀನೊಲಿಯಿತ್ತೇ ಪುಣ್ಯ, ನೀ ಒಲ್ಲದುದೇ ಪಾಪ ಕಂಡಯ್ಯ. ಸಕಲ ಜಗದೊಳಗೆ ಅನುಶ್ರುತವಾಗಿಪ್ಪೆಯಯ್ಯಾ. ನೀನೊಲಿದವನೇ ನಿಮ್ಮ ನರಿವನು. ॥ ಶ್ಲೋಕ ॥ ಪ್ರಸಾದಾದ್ದೇವತಾ ಭಕ್ತಿಃ। ಪ್ರಸಾದೋ ಭಕ್ತಿ ಸಂಭವಃ। ಯಥೈವಾಂಕುರತೋ ಬೀಜಂ। ಬೀಜತೋ ವಾ ಯಥಾಂಕುರಃ॥ ಎಂದುದಾಗಿ ನೀನೊಲಿದವನೇ ಧನ್ಯ, ಜಗಕ್ಕೆ ಪಾವನ ಕೂಡಲಸಂಗಮದೇವಾ.

೬೩೪. ಕಾಣಬಹುದೇ ಪರುಷದ ಗಿರಿ ಅಂಧಕಂಗೆ? ಅರಿಯಬಹುದೇ ರಸದ ಭಾವಿ ನಿರ್ಭಾಗ್ಯಂಗೆ? ತೆಗೆಯಬಹುದೇ ಕಡವರವ ದರಿದ್ರಂಗೆ? ಕರೆಯಬಹುದೇ ಕಾಮಧೇನು ಅಶುದ್ಧಂಗೆ? ಹೊನ್ನ ಹುಳದ ಕಂಡು ನರಿ ತನ್ನ ಬಾಲ ಹುಣ್ಣು ಮಾಡಿಕೊಂಡರೆ ಹೋಲಬಹುದೇ? ಎನ್ನೊಡೆಯ ಕೂಡಲಸಂಗನ ಶರಣರನು ಪುಣ್ಯವಿಲ್ಲದೆ ಕಾಣಬಹುದೇ?

೬೩೫ ಕಬ್ಬುನ ಪರುಷವೇದಿಯಾದಡೇನು? ಕಬ್ಬುನ ಹೊನ್ನಾಗದೊಡಾ ಪರುಷವದೇಕೋ? ಮನೆಯೊಳಗಣ ಕತ್ತಲೆ ಹರಿಯದೊಡಾ ಜ್ಯೋತಿಯುದೇಕೋ? ಕೂಡಲಸಂಗಮದೇವರ ಪೂಜಿಸಿ ಕರ್ಮ ಹರಿಯದೊಡಾ ಪೂಜೆಯುದೇಕೋ?

೬೩೬ ಕೋಣನ ಹೇರಿಂಗೆ ಕುನ್ನಿ ಬಸುಗುತ್ತ ಬಡಿವಂತೆ, ತಾವು ನಂಬರು, ನಂಬುವರನು ನಂಬಲೀಯರು. ತಾವು ಮಾಡರು, ಮಾಡುವರನು ಮಾಡಲೀಯರು. ಮಾಡುವ ಭಕ್ತರ ಕಂಡು ಸೈರಿಸಲಾರದವರ, ಕೂಗಿಡೆ ಕೂಗಿಡೆ, ನರಕದಲಿಕ್ಕುವ ಕೂಡಲಸಂಗಮದೇವ.

೬೩೭. ಹೊನ್ನು ಹೆಣ್ಣು ಮಣ್ಣೆಂಬ ಕರ್ಮದ ಬಲೆಯಲ್ಲಿ ಸಿಲುಕಿ ವೃಥಾ ಬರುದೊರೆ ಹೋಹ ಕೆಡುಕ ಹಾರುವ ನಾನಲ್ಲ. ಹಾರುವೆನಯ್ಯ ಭಕ್ತರ ಬರವ ಗುಡಿಗಟ್ಟಿ. ಹಾರುವೆನಯ್ಯ ಶರಣರ ಬರವ ಗುಡಿಗಟ್ಟಿ. ಕೂಡಲಸಂಗಮದೇವನು ವಿಪ್ರಕರ್ಮವ ಬಿಡಿಸಿ ಅಶುದ್ಧನ ಶುದ್ಧನ ಮಾಡಿದನಾಗಿ.

---



## (೬೨) ಲಿಂಗಾರ್ಪಿತದಿಂದ ಮಾಡುವುದು.

೬೩೮. ಲಿಂಗಮುಖದಿಂದ ಬಂದ ಪ್ರಸಾದವಲ್ಲದೆ ಕೊಂಡೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ಲಿಂಗಾರ್ಪಿತವಲ್ಲದೆ ಉದಕವ ಮುಕ್ಕುಳಿಸಿದಡೆ, ಸಲ್ಲೆನು ನಿಮ್ಮ ಗಣಾಚಾರಕ್ಕಯ್ಯ. ಲಿಂಗಾರ್ಪಿತವಲ್ಲದೆ ಹಲ್ಲು ಕಡ್ಡಿಯ ಕೊಂಡರೆ ನಾ ಬಲ್ಲೆ ಮುಂದೆ ಭವ ಘೋರ ನರಕವೆಂಬುದ. ನಿಮಗೆತ್ತಿದ ಕರದಲ್ಲಿ ಮತ್ತೊಂದಕ್ಕೆ ಕೆಯ್ಯಾನೆನು. ಅಳದರಿಯದೆ ನುಡಿದೆನು. ಕಡೆಮುಟ್ಟಿಸದಿರ್ದಡೆ, ತಲೆದಂಡ ತಲೆದಂಡ, ಕೂಡಲಸಂಗಮದೇವ.

೬೩೯. ಲಿಂಗವಿಲ್ಲದೆ ನಡೆವರ, ಲಿಂಗವಿಲ್ಲದೆ ನುಡಿವರ, ಲಿಂಗವಿಲ್ಲದೆ ಉಗುಳ ನುಂಗಿದರೆ, ಅಂದಂದಿಗೆ ಕಿಲ್ಬಿಷವಯ್ಯ. ಏನೆಂಬೆನೆಂತೆಂಬೆನಯ್ಯ? ಲಿಂಗವಿಲ್ಲದೆ ನಡೆವವರ ಅಂಗಲೌಕಿಕ ಮುಟ್ಟಲಾಗದು. ಲಿಂಗವಿಲ್ಲದೆ ನುಡಿವರ ಶಬ್ದಸೂತಕವ ಕೇಳಲಾಗದು. ಲಿಂಗವಿಲ್ಲದೆ ಗಮಿಸಿದಡೆ ಆ ನಡೆನುಡಿಗೊಮ್ಮೆ ವ್ರತಗೇಡಿಯಯ್ಯ ಕೂಡಲಸಂಗಮದೇವ.

೬೪೦. ಭಕ್ತರನಲ್ಲದೆ ಒಲ್ಲೆವೆಂಬಿರಿ. ಭಕ್ತರಿಗಲ್ಲದೆ ಕೆಯ್ಯಾನೆವೆಂಬಿರಿ. ಏನ ಮಾಡುವಿರಿ, ಎಲ್ಲಿಗೊಯ್ಪಿರಿ? ಪಾವನವಾದುದ ಲಿಂಗಕ್ಕೆ ಮಾಡುವುದಾಚಾರ. ವಿಷಯಕ್ಕಿಕ್ಕಿ ಅಸುಗತಿಗಳಿಯದಿರಿ, ಕೂಡಲಸಂಗನ ಶರಣರ ಒಡವೆಯ.

೬೪೧ ಹೊತ್ತಾರೆ ಎದ್ದು ಕಣ್ಣ ಹೊಸೆವುತ್ತ, ಎನ್ನ ಒಡಲಿಂಗೆ ಎನ್ನ ಒಡವೆಗೆ ಎನ್ನ ಮಡದಿ ಮಕ್ಕಳಿಗೆಂದು ಕುದಿದೆನಾದಡೆ, ಎನ್ನ ಮನಕ್ಕೆ ಮನವೇ ಸಾಕ್ಷಿ. 'ಆಸನೇ ಶಯನೇ ಯಾನೇ ಸಂಪರ್ಕೇ ಸಹಭೋಜನೇ। ಸಂಚರಂತಿ ಮಹಾ ಘೋರೆ ನರಕೇ ಕಾಲಮಕ್ಷಯಂ॥' ಎಂಬ ಶ್ರುತಿಯ ಬಸವಣ್ಣ ನೋದುವನು. ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು ಓಲೈಸಿಹನೆಂದು ನುಡಿವರಯ್ಯ ಪ್ರಮಥರು: ಕೊಡುವೆನುತ್ತರವನವರಿಗೆ, ಕೊಡಲಮ್ಮೆನು. ಹೊಲೆ ಹೊಲೆಯರ ಮನೆಯ ಹೊಕ್ಕಾದಡೆಯೂ ಸಲೆ ಕೈಕೂಲಿಯ ಮಾಡಿಯಾದಡೆಯೂ ನಿಮ್ಮ ನಿಲವಿಂಗೆ ಕುದಿವೆನಲ್ಲದೆ, ಎನ್ನೊಡಲವಸರಕ್ಕೆ ಕುದಿದೆನಾದಡೆ ತಲೆದಂಡ ಕೂಡಲಸಂಗಮದೇವ.

೬೪೨. ಅಂಗದ ಮೇಲಣ ಲಿಂಗ ಹಿಂಗಿ, ಬಂದ ಸುಖವನಾರಿಗರ್ಪಿಸುವೆ? ಲಿಂಗ ಹಿಂಗಲಾಗದು, ಭಕ್ತಿಪಥಕ್ಕೆ ಸಲ್ಲದಾಗಿ. ಹಿಂಗಲಾಗದು ಶರಣಪಥಕ್ಕೆ ಸಲ್ಲದಾಗಿ. ಕೂಡಲಸಂಗಮದೇವರ ಹಿಂಗಿ ನುಂಗಿದುಗುಳು ಕಿಲ್ಬಿಷ.

೧೪೩. ಮೌನದಲುಂಬುವುದಾಚಾರವಲ್ಲ. ಲಿಂಗಾರ್ಪಿತವ ಮಾಡಿದ ಬಳಿಕ, ತುತ್ತಿಗೊಮ್ಮೆ ಶಿವಶರಣೆನುತಿರಬೇಕು. ಕರಣವೃತ್ತಿಗಳಡಗುವವು, ಕೂಡಲ ಸಂಗನ ನೆನೆವುತ್ತ ಉಂಡರೆ.

೧೪೪. ಹುಟ್ಟಿದ ಮಕ್ಕಳೆಲ್ಲ ಅರ್ಥಪ್ರಾಣಾಭಿಮಾನಕ್ಕೆ ಒಡೆಯರಾದ ಪರಿಯ ನೋಡಾ! ಅಟ್ಟಡಿಗೆಯ ವಿಷವನು ನಿಮಗೆ ಕೊಟ್ಟಲ್ಲದೆ ಉಣೆ ನೆಂಬ ಭಾಷೆ. ಕೂಡಲಸಂಗಮದೇವ ನಿಮಗೆಂದಟ್ಟಡಿಗೆಯ ನೀಡ ಕಲಿಸಿದಾತ ಕೆಂಭಾವಿಯ ಭೋಗಯ್ಯ.

೧೪೫. ನಡೆ ಚನ್ನ, ನುಡಿ ಚನ್ನ, ಎಲ್ಲಿ ನೋಡಿದಡೆ ಚೆನ್ನ. ಪ್ರಮಥ ರೊಳಗೆ ಚನ್ನ. ಪುರಾತರೊಳಗೆ ಚನ್ನ. ಸವಿದು ನೋಡಿ ಅಂಬಿಲಿ ರುಚಿ ಯಾಯಿತ್ತೆಂದು ಕೂಡಲಸಂಗಮದೇವಂಗೆ ಬೇಕೆಂದು ಕೈವೆಗೆದ ನಮ್ಮ ಮಾದರ ಚನ್ನ.

೧೪೬. ಆಳಿಕಾರನೆನಗೊಬ್ಬ ಮಗ ಹುಟ್ಟಿದನೆಂದು ಆಳಿಯ ಕೆಡಲೀ ಸದೆ, ನಡಿಸುವ ನಮ್ಮಯ್ಯ. ಪಂಚಭೂತಕಾಯವ ಭವಿ ಎಂದೆನಲೀಯದೆ, ಪ್ರಸಾದ ಕಾಯವ ಮಾಡಿ ಸಲಹುವ ನಮ್ಮಯ್ಯ. ಆಳಿ ಸಾವಲ್ಲಿ ಅವಧಾನಿ ಯಾಗಿದ್ದರೆ, ಆಳ್ದನು ನಮ್ಮ ಕೂಡಲಸಂಗಮದೇವ.

೧೪೭. ದುರ್ವ್ಯಸನಿ, ದುರಾಚಾರಿ ಎಂದೆನಿಸದಿರಯ್ಯಾ. ಎನ್ನ ಲಿಂಗ ವ್ಯಸನಿ ಜಂಗಮಪ್ರೇಮಿ ಎಂದೆನಿಸಯ್ಯ. 'ಅವಶ್ಯಮನುಭೋಕ್ತವ್ಯಂ' ಎಂದೆನಿ ಸದಿರಯ್ಯ! ಕೂಡಲಸಂಗಮದೇವರ ಸೆರೆಗೊಡ್ಡಿ ಬೇಡುವೆನು.

೧೪೮. ಎಲ್ಲರ ಗಂಡರು ಬೇಂಟೆಗೆ ಹೋದರು. ನೀನೇಕೆ ಹೋಗೆ ಎಲೆ ಗಂಡನೇ? ಸತ್ತುದ ತಾರದಿರು. ಕೈಮುಟ್ಟಿ ಕೊಲ್ಲದಿರು. ಅಡಗಿಲ್ಲದೆ ಮನೆಗೆ ಬಾರದಿರು. ದೇವರ ಧರ್ಮದಲೊಂದು ಬೇಂಟೆ ದೊರೆಕೊಂಡರೆ, ಕೂಡಲ ಸಂಗಮದೇವಂಗರ್ಪಿತವ ಮಾಡುವೆ ಎಲೇ ಗಂಡನೇ.

೧೪೯. ಬೆಟ್ಟಕ್ಕೆ ಬೆಳ್ಳಾರ ಸುತ್ತಿತ್ತಯ್ಯಾ. ಪಾಪದ ಬಲೆಯ ಮುಂದೆ ತಂದೊಡ್ಡದಿರಯ್ಯ. ಬೇಟೆಕಾರ ಮೃಗವನಟ್ಟೆ, ಮೃಗವು ಗುರಿಗೊಳಗಾಗದಯ್ಯ. ಹರನೊಡ್ಡಿದ ಬಲೆಯಲ್ಲಿ ಸಿಲುಕಿದ ಮೃಗವು ಕೂಡಲಸಂಗಮದೇವಂಗೆ ಓಗರ ವಾಯಿತ್ತು.

೧೫೦. ಹಡೆದೊಡವೆ ವಸ್ತುವನು ಮೃಡಭಕ್ತರಿಗಲ್ಲದೆ ಕಡಬಡ್ಡಿಯ ಕೊಡಲಾಗದು. ಬಂದರೊಂದು ಲೇಸು. ಬಾರದಿದ್ದರೆರಡು ಲೇಸು. ಅಲ್ಲಿ



ದ್ದಡೆಯೂ ಲಿಂಗಕ್ಕೆ ಬೋನ. ಇಲ್ಲಿದ್ದಡೆಯೂ ಲಿಂಗಕ್ಕೆ ಬೋನ. ಲಿಂಗ ದೊಡವೆ ಲಿಂಗಕ್ಕೆ ಸಾರಿತ್ತಾಗಿ ಬಂದೀತೆಂಬ ಪರಿಣಾಮವಿಲ್ಲ. ಬಾರದೆಂಬ ದುಃಖವಿಲ್ಲ. ಇದು ಕಾರಣ ಕೂಡಲಸಂಗಮದೇವ ನಿಮ್ಮ ಶರಣರಿಗಲ್ಲದೆ ಕಡಬಡ್ಡಿಯ ಕೊಡಲಾಗದು.

---

## (೧೩) ಆತ್ಮಾರ್ಪಣ

೧೫೧. ಪಂಡಿತನಾಗಲಿ, ಮೂರ್ಖನಾಗಲಿ, ಸಂಚಿತಕರ್ಮ ಉಂಡಲ್ಲದೆ ಬಿಡದು. ಪ್ರಾರಬ್ಧ ಕರ್ಮ ಭೋಗಿಸಿದಲ್ಲದೆ ಬಿಡದು. ಇಂತೆಂದು ಶ್ರುತಿ ಸಾರುತಿದ್ದಾವೆ ನೋಡಾ. ತಾನಾವ ಲೋಕದೊಳಗಿರ್ದಡೆಯೂ ಬಿಡದು. ಕರ್ಮಫಲಗೂಡಿ ಕೂಡಲಸಂಗಮದೇವಂಗೆ ಆತ್ಮನೈವೇದ್ಯವ ಮಾಡಿದವನೇ ಧನ್ಯ.

೧೫೨. ಪರಿಯಾಣವೇ ಭಾಜನವೆಂಬರು. ಪರಿಯಾಣ ಭಾಜನವಲ್ಲ. ಲಿಂಗಕ್ಕೆ ತನ್ನ ಮನವೇ ಭಾಜನ. ಪ್ರಾಣವನು ಬೀಸರವೋಗಲೀಯದೆ ಮೀಸಲಾಗರ್ಪಿಸಬಲ್ಲಡೆ, ಕೂಡಿಕೊಂಡಿಪ್ಪನಯ್ಯಾ ಕೂಡಲಸಂಗಮದೇವ.

೧೫೩. ಅರ್ಥ ಪ್ರಾಣಾಭಿಮಾನವನೊಪ್ಪಿಸಿದಲ್ಲಿ ಭಕ್ತನಪ್ಪನೇ? ಅಲ್ಲ. ಆದಿ ರುದ್ರನ ಮಗಳು ಆದಿಶಕ್ತಿ. ಆದಿಶಕ್ತಿಯ ಮಗ ವಿಷ್ಣು. ವಿಷ್ಣುವಿ ನರ್ಧಾಂಗಿ ಲಕ್ಷ್ಮಿ. ಈ ತೊತ್ತಿನ ತೊತ್ತಿನ ಪಡಿದೊತ್ತನೊಪ್ಪಿಸಿದಲ್ಲಿ ಭಕ್ತನ ಪ್ಪನೇ? ಅಲ್ಲ ಎನ್ನ ಮನದೊಡೆಯ ಮಹಾದೇವ ನಿಮ್ಮ ಮನವ ನಿಮ ಗೊಪ್ಪಿಸಿ ನಾನು ಶುದ್ಧ ಕಾಣಾ ಕೂಡಲಸಂಗಮದೇವಾ.

೧೫೪. ಅರ್ಥ ಪ್ರಾಣಾಭಿಮಾನವ ಕೊಟ್ಟೆನೆಂಬರಲ್ಲದೆ, ಕೊಟ್ಟ ಭಕ್ತ ರನಾರನೂ ಕಂಡುದಿಲ್ಲ ದಾಸ ತನ್ನ ವಸ್ತ್ರವ ಕೊಟ್ಟನಲ್ಲದೆ ತನ್ನ ಕೊಟ್ಟು ದಿಲ್ಲ. ಬಲ್ಲಾಳ ತನ್ನ ವಧುವ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ. ಸಿರಿಯಾಳ ತನ್ನ ಮಗನ ಕೊಟ್ಟನಲ್ಲದೆ, ತನ್ನ ಕೊಟ್ಟುದಿಲ್ಲ. ಇವೆಲ್ಲ ಹೊರಗಣ ಮಾತು. ಕೂಡಲಸಂಗಮದೇವರಲ್ಲಿ ತನ್ನ ಕೊಟ್ಟ ಸಿಂಧುಮರಾಳ.

೧೫೫. ಕಾಯವೆಂಬ ಘಟಕ್ಕೆ ಚೈತನ್ಯವೇ ಸುಯಿಧಾನ. ಸಮತೆ ಎಂಬ ಜಲ. ಕರಣಾದಿಗಳೇ ಸ್ರಪಣ. ಜ್ಞಾನವೆಂಬ ಅಗ್ನಿಯನಿಕ್ಕಿ, ಮತಿ ಎಂಬ ಸಟ್ಟುಗದಲ್ಲಿ ಘಟ್ಟಿಸಿ, ಪಾಕಕ್ಕೆ ತಂದು, ಭಾವದಲ್ಲಿ ಕುಳ್ಳಿರಿಸಿ, ಪರಿ ಣಾಮದೋಗರವ ನೀಡಿದರೆ, ಕೂಡಲಸಂಗಮದೇವಂಗಾರೋಗಣೆಯಾಯಿತ್ತು.

೬೫೬. ಎಲ್ಲವ ಬೇಡಿಪರೆಮ್ಮವರು. ಒಂದ ಬೇಡಮರೆದರಯ್ಯ ! ಮರ್ತ್ಯಲೋಕದ ಮಹಾಗಣಂಗಳು ಒಂದ ಬೇಡವ ಮರೆದರು. ಕೂಡಲ ಸಂಗಮದೇವಾ, ಎನ್ನ ಬೇಡಮರೆದರು.

---

## ( ೬೪ ) ತನುಮನಧನವನ್ನರ್ಪಿಸು.

೬೫೭. ಕಾಣುತ್ತ ಕಡೆಗಣಿಸಿ ಕೆಡಿಸಿ ಅರಸುವ ಮತಿಭ್ರಷ್ಟ ನಾನು ಲಿಂಗಯ್ಯ! ತನುಲೋಭ, ಮನಲೋಭ, ಧನಲೋಭ ಮುಂದುಗೆಡಿಸಿ ಕಾಡಿಹವೆನ್ನ. ತನುಮನುಧನವ ನಿವೇದಿಸಿದವರ ಮನೆಯ ಮಗ ನಾನಯ್ಯ ಕೂಡಲಸಂಗಮದೇವಾ.

೬೫೮. ಸೋಲಬಲ್ಲರು ಅವರು ಗೆಲಲರಿಯರಯ್ಯ ! ತನುಮನ ಧನದಲ್ಲಿ ವಂಚನೆಯನರಿಯರಯ್ಯ ದಾಸ ಸಿರಿಯಾಳನವರು. ಕೂಡಲಸಂಗನ ಶರಣರು ಉಪಚಾರವನರಿಯರಯ್ಯ.

೬೫೯. ಊರ ಸೀರೆಗೆ ಅಸಗ ಬಡಿವಡೆದಂತೆ, ಹೊನ್ನೆನ್ನದು, ಹೆಣ್ಣೆನ್ನದು, ಮಣ್ಣೆನ್ನದು ಎಂದು ಮರುಳಾದೆ. ನಿಮ್ಮನರಿಯದ ಕಾರಣ ಕೆಮ್ಮನೆ ಕೆಟ್ಟೆ ಕೂಡಲಸಂಗಮದೇವಾ.

೬೬೦. ತನುವ ಕೊಟ್ಟು ಗುರುವನೊಲಿಸಲುಬೇಕು. ಮನವ ಕೊಟ್ಟು ಲಿಂಗವನೊಲಿಸಲೇಬೇಕು. ಧನವ ಕೊಟ್ಟು ಜಂಗಮವನೊಲಿಸಲೇಬೇಕು. ಈ ತ್ರಿವಿಧವ ಹೊರಗು ಮಾಡಿ, ಹರೆಯ ಹೊಯಿಸಿ, ಕುರುಹ ಪೂಜಿಸುವರ ಮೆಚ್ಚ ಕೂಡಲಸಂಗಮದೇವ.

೬೬೧ ಒಲಿವ ಗಂಡನೊಮ್ಮೆ ಒಲ್ಲದಿಪ್ಪ ಕಂಡವ್ವಾ ! ತಪ್ಪೆನ್ನದು ತಪ್ಪೆನ್ನದು. ತನುಮನಧನದಲ್ಲಿ ಮಾಟಕೂಟವೆಂದರಿಯದ ತಪ್ಪೆನ್ನದು. ಕಡೆ ಇಲ್ಲದ ಹುಸಿ ಎನ್ನದು ಕೂಡಲಸಂಗಮದೇವಾ.

---

## (೬೫) ಪರಮಾತ್ಮನ ಸೊಮ್ಮನ್ನು ಪರಮಾತ್ಮನಿಗೆ ಅರ್ಪಿಸು.

೬೬೨. ನಾನು ಆರಂಬವ ಮಾಡುವೆನಯ್ಯ ಗುರುಪೂಜೆಗೆಂದು. ನಾನು ಬೆವಹಾರವ ಮಾಡುವೆನಯ್ಯ ಲಿಂಗಾರ್ಚನೆಗೆಂದು. ನಾನು ಪರಸೇವೆಯ ಮಾಡುವೆನಯ್ಯ ಜಂಗಮದಾಸೋಹಕ್ಕೆಂದು. ನಾನಾವ ಕರ್ಮಂಗಳ ಮಾಡಿದಡೆಯೂ, ಆ ಕರ್ಮದ ಫಲಭೋಗವ ನೀ ಕೊಡುವೆ ಎಂಬುದ



ನಾನು ಬಲ್ಲೆನು. ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದಕ್ಕೆ ಮಾಡೆನು. ನಿಮ್ಮ ಸೊಮ್ಮ ನಿಮಗೆ ಸಲಿಸುವೆನು ನಿಮ್ಮಾಣೆ ಕೂಡಲ ಸಂಗಮದೇವ.

೬೬೩. ಹತ್ತು ಮತ್ತರ ಭೂಮಿ, ಬತ್ತದ ಹಯನ, ನಂದಾದೀವಿಗೆಯ ನಡಿಸಿಹೆನೆಂಬವರ ಮುಖವ ನೋಡಲಾಗದು. ಅವರ ನುಡಿಯ ಕೇಳಲಾಗದು. ಅಂಡಜ, ಸ್ವೇದಜ, ಉದ್ಭಿಜ, ಜರಾಯುಜವೆಂಬ ಪ್ರಾಣಿಗಳಿಗೆ ಭವಿತವ್ಯವ ಕೊಟ್ಟವರಾರೋ? ಒಡೆಯರಿಗೆ ಉಂಡಲಿಗೆಯ ಮುರಿದಿಕ್ಕಿದಂತೆ ಎನ್ನಿಂದಲೇ ಆಯಿತ್ತು, ಎನ್ನಿಂದಲೇ ಹೋಯಿತ್ತು, ಎಂಬವನ ಬಾಯಲ್ಲಿ ಮೆಟ್ಟಿ ಹುಡಿಯ ಹೊಯ್ಯದೆ ಮಾಣ್ಬನೇ ಕೂಡಲ ಸಂಗಮದೇವ?

೬೬೪. ತನು ನಿಮ್ಮದೆಂಬೆ, ಮನ ನಿಮ್ಮದೆಂಬೆ, ಧನ ನಿಮ್ಮದೆಂಬೆ. ಮತ್ತೆಯೂ ವಂಚನೆ ಮಾಣದಯ್ಯಾ! ಲಿಂಗ ಜಂಗಮವೆಂಬೆ, ಜಂಗಮ ಲಿಂಗವೆಂಬೆ. ಮತ್ತೆಯೂ ವಂಚನೆ ಮಾಣದಯ್ಯ. ಒಡಲೊಡವೆ ಹಡೆದರ್ಥ ನಿಮ್ಮದೆಂದರಿಯದೆ ಕೆಮ್ಮನೆ ಕೆಟ್ಟೆ ಕೂಡಲಸಂಗಮದೇವಾ.

೬೬೫. ಹಲವು ಕಾಲ ಧಾವತಿಗೊಂಡು ಒಟ್ಟಿರ್ದ ಹಿದಿರೆಯೊಂದು ಮಿಡಿ ಕಿಡಿಯಲ್ಲಿ ಬೇವಂತೆ, ಸಲೆ ಸನ್ನಿಹಿತನಾಗಿಪ್ಪ ಶರಣನ ಭಕ್ತಿ ಒಂದ ನಾಯತದಿಂದ ಕೆಡುವುದು. ಸ್ವಧರ್ಮದಲ್ಲಿ ಗಳಿಸಿದ ಪಿತನ ಧನವ ಅಧರ್ಮದಲ್ಲಿ ಕೆಡಿಸುವ ಸುತನಂತೆ, ಶಿವನ ಸೊಮ್ಮ ಶಿವಂಗೆ ಮಾಡದೆ ಅನ್ಯಕ್ಕೆ ಮಾಡಿದರೆ ತನ್ನ ಭಕ್ತಿ ತನ್ನ ಕೆಡಿಸುವುದು ಕೂಡಲಸಂಗಮದೇವ.

---

## (೬೬) ಭಾವದಲ್ಲಿ ಅರ್ಪಣವು

೬೬೬. ಹಾಲೆಂಜಲು ವತ್ಸನ- ಉದಕವೆಂಜಲು ಮತ್ಸ್ಯನ. ಪುಷ್ಪವೆಂಜಲು ತುಂಬಿಯ. ಎಂತು ಪೂಜಿಸುವೆನಯ್ಯ ? ಎಂತು ಪೂಜಿಸುವೆ ? ಶಿವಶಿವಾ, ಈ ಎಂಜಲವನತಿಗಳೆವರೆ ಎನ್ನಳವಲ್ಲ. ಬಂದುದ ಕೈಕೋ ಕೂಡಲಸಂಗಮದೇವಾ.

೬೬೭. ಮಿಸಲು ಬೀಸರವಾದ ಪರಿಯ ನೋಡಾ ! ಕಾಲು ತಾಗಿದ ಅಗ್ಗವಣಿ, ಕೈಮುಟ್ಟಿದರ್ಪಿತ, ಮನಮುಟ್ಟಿದಾರೋಗಣೆಯನೆಂತು ಘನವೆಂಬೆನಯ್ಯ? ಬಂದ ಪರಿಯಲಿ ಪರಿಣಾಮಿಸಿ, ನಿಂದ ಪರಿಯಲಿ ನಿಜ ಮಾಡಿ, ಆನಂದ ಪರಿಯಲಿ ಕೈಕೋ ಕೂಡಲಸಂಗಮದೇವಾ.

೬೬೮. ಶುದ್ಧವಾಯಿತ್ತೆಂಬೆನೇ ? ಸುಯಿಧಾನಿ ನಾನಲ್ಲ. ಅನುವಾಯಿತ್ತೆಂಬೆನೇ? ಅವಧಾನಿ ನಾನಲ್ಲ. ಸುಯಿಧಾನವವಧಾನ ಅರ್ಪಿತವ ನಾನರಿಯೆ. ಇದ್ದ ಪರಿಯಲಿ ನೀಡಿವಡೆ, ಬಂಧ ಪರಿಯಲಿ ಕೈಕೋ ಕೂಡಲ ಸಂಗಮದೇವಾ.

೬೬೯. ಬಾರದು ಬಾರದು ಭಕ್ತಂಗೆ ಪರಧನ, ಪರಸತಿ. ಬಾರದು ಬಾರದು ವಿಷಯಿಗೆ ಪಶುಪತಿಬ್ರತವು. ಬಾರದು ಬಾರದು ಭವಭಾರಿಗೆ ಕೂಡಲಸಂಗಮದೇವನೊಕ್ಕುದ ಕೊಳಬಾರದು.

---

## (೬೭) ಪ್ರಸಾದದಿಂದ ಸಾಮರಸ್ಯವು.

೬೭೦. ಹುಸಿಯಿಂದ ಜನಿಸಿದೆನಯ್ಯ ಮರ್ತ್ಯಲೋಕದೊಳಗೆ. ಹುಸಿಯಿಂದ ಲಿಂಗವ ಹೆಸರುಗೊಂಡು ಕರೆದೆನಯ್ಯಾ. ಅದು ಎನಗೆ ಭಾವವೂ ಅಲ್ಲ, ನಿರ್ಭಾವವೂ ಅಲ್ಲದೆ ನಿಂದಿತಯ್ಯ. ಅದರ ಅವಯವಂಗಳೆಲ್ಲವು ಜಂಗಮವಯ್ಯ. ಅದಕ್ಕೆ ಎನ್ನಲ್ಲಿ ಉಳ್ಳ ಸುಯಿಧಾನವ ಮಾಡಿ ನೀಡಿದೆನಯ್ಯಾ. ಆ ಪ್ರಸಾದಕ್ಕೆ ಶರಣೆಂಬೆನಯ್ಯ! ಅದು ಎನಗೆ ಸಾರವೂ ಅಲ್ಲ, ನಿಸ್ಸಾರವೂ ಅಲ್ಲ. ಆ ಪ್ರಸಾದದಲ್ಲಿ ನಾನೆ ತತ್ಗತನಾದೆ ಕಾಣಾ ಕೂಡಲ ಸಂಗಮದೇವಾ.

೬೭೧. ಲಿಂಗವಿಕಾರಿಗೆ ಅಂಗವಿಕಾರವೆಂಬುದಿಲ್ಲ. ಜಂಗಮವಿಕಾರಿಗೆ ಧನವಿಕಾರವೆಂಬುದಿಲ್ಲ. ಪ್ರಸಾದವಿಕಾರಿಗೆ ಮನವಿಕಾರವೆಂಬುದಿಲ್ಲ. ಇಂತೀ ತ್ರಿವಿಧ ಗುಣವನೀದಾತನು ಅಚ್ಚ ಲಿಂಗೈಕ್ಯನು ಕೂಡಲಸಂಗಮದೇವಾ.

೬೭೨. ಬೆಳಗಿನೊಳಗಣ ಬೆಳಗು, ಮಹಾ ಬೆಳಗೆಂಬ ಪ್ರಸಾದದಲೊದಗಿದ ಪ್ರಸಾದಿಯ ಪರಿಣಾಮದ ಪರಮಾನಂದವನೇನೆಂದುಪಮಿಸುವೆನಯ್ಯಾ? ಪರಮಾಶ್ರಯವೆ ತಾನಾಗಿ ಕೂಡಲಸಂಗಮದೇವ ಚನ್ನಬಸವಣ್ಣನೆಂಬ ಮಹಾ ಪ್ರಸಾದಿ ಎನ್ನ ವಾಙ್ಮನಕ್ಕಗೋಚರವಾಗಿರ್ದಾದ ನಾನೇನೆಂಬೆನಯ್ಯ ?

೬೭೩. ಆಸೆಯಾಮಿಷ ತಾಮಸದಿಂದ ಭವಬಂಧನವಾದುದನರಿಯ. ತ್ರಿವಿಧ ತ್ರಿವಿಧಾವಸ್ಥೆಯ ಮರೆಯ. 'ಓಂ ನಮಶ್ಶಿವಾಯ ಶರಣೆ'ಂಬುದ ಬಿಡದೆ ನೆನೆ ಮನವೇ. 'ಮಹತಶ್ಶಿವಲಿಂಗಸ್ಯ ಮಹತೋ ಜಂಗಮಸ್ಯ ಚ'. ಕೂಡಲಸಂಗದೇವನ ಪ್ರಸಾದ ಸಾನ್ನಿಧ್ಯದಿಂದ ಎನ್ನ ಭವಜನ್ಮ ಕರ್ಮಪಂಚ ಭೂತ ಪೂರ್ವ ನಾಸ್ತಿ.



೬೭೪. ಮಿಥ್ಯವನಳಿದುಳಿದ ಸತ್ಯ ಪ್ರಸಾದಿ. ಅಂಜನವಿಲ್ಲದ ನಿರಂಜನ ಪ್ರಸಾದಿ. ದುಃಖವನಳಿದ ಘನಾನಂದ ಪ್ರಸಾದಿ. ಅನಿತ್ಯವಿಲ್ಲದ ನಿತ್ಯ ಪ್ರಸಾದಿ. ಖಂಡಿತವಿಲ್ಲದಖಂಡಿತ ಪ್ರಸಾದಿ. ಕೂಡಲಸಂಗಮದೇವರಲ್ಲಿ ತಾನೇ ಪ್ರಸಾದಿ.

೬೭೫. ಆ ರತ್ನಪ್ರಸಾದವನಾರಾಧಿಸುತ್ತಿರಲು, ಆ ಪ್ರಸಾದದಲ್ಲಿ ಬೀಳುತ್ತ ಆಳುತ್ತಿದ್ದಿತ್ತು ನೋಡಾ. ಅದ ಹಲಬರು ನೋಡಿ ನೋಡಿ, ಹೋಗುತ್ತಿದ್ದಾರು. ಆ ಪ್ರಸಾದ ತಾನೇ ಬಂದು ಎನ್ನ ಸುತ್ತಿಕೊಂಡಿತ್ತು. ಇದ ಪದಾರ್ಥವ ಮಾಡಿಕೊಡಯ್ಯಾ ಕೂಡಲಸಂಗಮದೇವಾ.

೬೭೬. ಮಾಟಕೂಟ ಫಲಪ್ರಾಪ್ತಿ ಎಂಬ ಮಾತ ಕೇಳಲಾಗದು. ಶಿವ ಶಿವ, ನಿಮ್ಮ ಭಕ್ತರಿಗೆ ಮಾಡಿದೆನೆಂದೆನ್ನದಿರೆಂದು, ಶ್ರೀಗುರು ಲಿಂಗವು ಕೃಪೆ ಮಾಡಿದ ಕಾರಣ, ಅಲ್ಲಿ ಮಾಡುವರು ಮಾಡಿಸಿಕೊಂಬುವರು ನೀವೇ ಕೂಡಲಸಂಗಮದೇವಾ.

೬೭೭. ಲೋಹ ಪರುಷವ ಮುಟ್ಟುವುದಲ್ಲದೆ, ಪರುಷ ಲೋಹವ ಮುಟ್ಟುವುದೇ ಅಯ್ಯ ? ಅಂಗವಿಡಿದಂಗೆ ಪ್ರಸಾದವಲ್ಲದೆ, ಲಿಂಗವಿಡಿದಂಗೆ ಪ್ರಸಾದವೆಲ್ಲಿಯದೋ ? 'ಅಣೋರಣೀಯಾನ್ ಮಹತೋ ಮಹೀಯಾನ್' ಹಿರಿದಕ್ಕೆ ಹಿರಿದು ಕಿರಿದಕ್ಕೆ ಕಿರಿದು, ವಾಙ್ಮನಕ್ಕಗೋಚರ. ಕೂಡಲಸಂಗಮ ದೇವ, ಸ್ವರೂಪು ಪ್ರಸಾದ, ನಿರೂಪು ಲಿಂಗೈಕ್ಯ.

---

## (೬೮) ಪ್ರಸಾದದಲ್ಲಿ ನಂಬಿಗೆ.

೬೭೮. ನಂಬಿದಡೆ ಪ್ರಸಾದ. ನಂಬದಿರ್ದಡೆ ವಿಷವು. ತುಡುಕಬಾರದು ನೋಡಾ ಲಿಂಗನ ಪ್ರಸಾದ, ಸಂಗನ ಪ್ರಸಾದ. ಕೂಡಲಸಂಗನ ಪ್ರಸಾದ ಸಿಂಗಿಕಾಳಕೂಟ ವಿಷವು.

೬೭೯. ಹುತ್ತದ ಮೇಲಣ ರಜ್ಜು ಮುಟ್ಟಿದರೆ, ಸಾವರು ಶಂಕಿತರಾದವರು. ಸರ್ಪದಷ್ಟವಾದರೆಯೂ, ಸಾಯರು ನೋಡಾ ನಿಶ್ಶಂಕಿತರಾದವರು. ಕೂಡಲಸಂಗಮದೇವ ಶಂಕಿತಂಗೆ ಪ್ರಸಾದ ಸಿಂಗಿಕಾಳಕೂಟ ವಿಷವು.

೬೮೦. ದಿಟ ಮಾಡಿ ಪೂಜಿಸಿದೊಡೆ, ಸಟೆ ಮಾಡಿ ಕಳೆವೆ. ಸಟೆ ಮಾಡಿ ಪೂಜಿಸಿದಡೆ, ದಿಟ ಮಾಡಿ ಕಳೆವೆ. ಏನೆಂಬೆನೆಂತೆಂಬೆ? ಸುಖಕ್ಕೆ ತುಂಬಿದ ದೀವಿಗೆ ಮನೆ ಎಲ್ಲವ ಸುಟ್ಟಂತೆ, ಆನು ಮಾಡಿದ ಭಕ್ತಿ ಎನಗಿಂತಾಯಿತ್ತು ಕೂಡಲಸಂಗಮದೇವಾ.

೬೮೧. ಸಿಥಾನವನರಸಿಹೆನೆಂದು ಹೋದರೆ, ವಿಘ್ನ ಬಪ್ಪುದು ಮಾಣ್ಬುದೇ ? ಸದಾಶಿವನೆಂದರೆ, ಬೆದರಟ್ಟಿ ಸುಡುವುದು ಮಾಣ್ಬುದೇ? ಹಸು ಳಿಗನಾಗಿ ಉಳಿದರೆ, ಪದವಿಯನೀವ ಕಾಣಾ ಕೂಡಲಸಂಗಮದೇವ.

೬೮೨. ಕರ್ತನನರಿಯದವನು ವಿಪ್ರನಾದಡೇನು, ಚತುರ್ವೇದಿಯಾದ ಡೇನು? ಭಕ್ತಿ ಕಾರಣ ಲೋಕದಿಚ್ಛೆಯ ನುಡಿದು ನಡೆವರಯ್ಯ. ಭವಿ ಮಾಡಿದ ಪಾಕವ ತಂದು ಲಿಂಗಕ್ಕರ್ಪಿಸುವ ಕಷ್ಟರ ಕಂಡು ನಾಚಿತ್ತೆನ್ನ ಮನವು. ಕೂಡಲಸಂಗನ ಶರಣರ ಒಕ್ಕುದ ಕೊಂಡು ಅನ್ಯವನಾಚರಿಸಿದಡೆ ತಪ್ಪದು ಸೂಕರನ ಶುಚಿಭ್ರೂತತೆಯ ಪ್ರಾಣಿಯಂತೆ.

## (೬೯) ಪ್ರಸಾದಿಯ ಪ್ರಾರ್ಥನೆಗಳು.

೬೮೩. ಮತಿಮಂದನಾಗಿ ಗತಿಯ ಕಾಣದೆ ಇಪ್ಪೆನಯ್ಯ! ಹುಟ್ಟು ಗುರುಡನ ಕೆಯ್ಯಕೋಲ ಕೊಟ್ಟು ನಡಿಸುವಂತೆ, ನಡಿಸಯ್ಯ ಎನ್ನ! ನಿಮ್ಮುಚ್ಚ ಶರಣರ ಒಕ್ಕುದ ಮಿಕ್ಕುದ ನಚ್ಚಿಸು ಕೂಡಲಸಂಗಮದೇವಾ.

೬೮೪ ಬಾಣಮಯೂರನಂತೆ ಬಣ್ಣಿಸಬಲ್ಲೆನೇ ? ಸಿರಿಯಾಳನಂತೆ ಉಣಲಿಕ್ಕಬಲ್ಲೆನೇ? ದಾಸಿಮಯ್ಯನಂತೆ ಉಡಕೊಡಬಲ್ಲೆನೇ ? ಉಂಡುಟ್ಟು ಕೊಟ್ಟರೆ ಮುಯ್ಯಿಗೆ ಮುಯ್ಯನಿಸಿತ್ತು. ಎನಗೆ ಕೊಟ್ಟರೆ ನಿಮ್ಮ ಧರ್ಮ ಕೂಡಲಸಂಗಮದೇವಾ.

೬೮೫. ದಾಸನಂತೆ ತವನಿಧಿಯ ಬೇಡುವನಲ್ಲ. ಚೋಳನಂತೆ ಹೊನ್ನ ಮಳೆಯ ಕರಿಸೆಂಬುವನಲ್ಲ. ಅಂಜದಿರು. ಅಂಜದಿರು, ಅವರಂದವ ನಾನಲ್ಲ. ಎನ್ನ ತಂದೆ ಕೂಡಲಸಂಗಮದೇವ ಸದ್ಭಕ್ತಿಯನೆ ಕರುಣಿಸೆನಗೆ.

೬೮೬. ಸಿರಿಯಾಳನ ಮಗನ ಬಾಣಸವ ಮಾಡಿಸಿ, ಉಣಲೊಲ್ಲದೆ ಕಾಡಿದೆ. ಚೋಳನ ಮನೆಯಲುಣಲೊಲ್ಲದೆ ಚನ್ನನ ಮನೆಯಲುಂಡೆ. ಒಬ್ಬ ರಿಗೊಂದು ಪರಿಯ ಮಾಡಿದೆ ಕೂಡಲಸಂಗಮದೇವ!

೬೮೭. ಎಲ್ಲಿ ಹೊಕ್ಕಲ್ಲಿ ನಿಮ್ಮ ವಿಕಾರವ ಮಾಣೆ. ಇದೊಂದು ಗರುವತನವೇ ? ದಾಸನ ವಸ್ತ್ರವ ಬೇಡುವುದೊಂದು ಗರುವತನವೇ ? ಸಿರಿಯಾಳನ ಮಗನ ಬೇಡುವುದೊಂದು ಗರುವತನವೇ? ಕೋಡಗನ ಹುಲ್ಲಲ್ಲಿ ಮುಸುಕಿಟ್ಟಂತೆ ಕೂಡಲಸಂಗಮದೇವ ನಿಮ್ಮ ಪರಿ ಬೇರೆ.

೬೮೮. ಒಬ್ಬರ ಮನೆಯಲುಂಡು ಹೊತ್ತುಗಳೆದೆ. ಒಬ್ಬರ ಮನೆಯ ಲುಡಲೊಂದು ಗಳಿಸಿದೆ ಗರ್ವ ಬೇಡ ಬೇಡ ನಿನಗೆ. ಚನ್ನಯ್ಯನ ಮನೆ



ಯಂಬಿಲಿಯನುಂಡು ಬದುಕಿದೆ. ಗರ್ವ ಬೇಡ ಬೇಡ. ಕೂಡಲಸಂಗಮ ದೇವ, ಸಿರಿಯಾಳನಿಂದ ಮಾನಿಸ ಲೋಕಂಗಂಡೆ.

೬೮೯. ಕಾಯದ ಕರಣದ ಕೆಯ್ಯಲು ಪದಾರ್ಥವ ಹಿಡಿವಲ್ಲಿ ನಿಮಗೆ ಕೊಡುವ ಭರದ ಭೀತಿಯಿಂದ ಆನರಿದಿಪ್ಪೆನಾಗಿ, ಎನ್ನ ನೀನರಿದು ಸಲಹು ತಿಪ್ಪೆಯಯ್ಯ ಕೂಡಲಸಂಗಮದೇವ.

೬೯೦. ಲಿಂಗವಶದಿಂದ ಬಂದ ನಡೆಗಳು, ಲಿಂಗವಶದಿಂದ ಬಂದ ನುಡಿ ಗಳು, ಲಿಂಗವಂತರು ತಾವು ಅಂಜಲೇಕೆ ? ಲಿಂಗವಿರಿಸಿದಂತಿಪ್ಪುದಲ್ಲದೆ ಮತ್ತೊಂದನ್ಯವನರಿಯದಂತಿರಬೇಕು. ಕೂಡಲಸಂಗಮದೇವ ಭಕ್ತರಭಿಮಾನ ತನ್ನದೆಂಬನಾಗಿ.

೬೯೧. ಮರನ ಹುವ್ವ ಕೊಯ್ದು, ಮರಕ್ಕೇರಿಸಿ, ನದಿಯುದಕವ ನದಿಗರ್ಪಿತವ ಮಾಡಿ, ಕರುವನಗಲಿಸಿ ತಾಯಮೊಲೆವಾಲ ಮರುಗಿಸಿ ಕರೆ ದುಣಬೇಡವೋ. ಕೂಡಲಸಂಗಮದೇವ ಮಾಡಿದ ಮಾಯೆ ಹಲಬರ ಬಾಯ ಟೊಣೆದು ಹೋಯಿತ್ತು.

೬೯೨. ಕಳಂಬಿಂದು ವಟಾಮುಖಿ ಎಂಬ ಹೆಂಗುಸಿನ ಕೆಯ್ಯಲು ಜಲಾಕಾರವೆಂಬ ಗಡಿಗೆ ಇದ್ದಿತ್ತು. ಆ ಗಡಿಗೆಯಲ್ಲಿ ಚನ್ನಬಸವಣ್ಣ ನೀರ ತಂದ. ಮಡಿವಾಳಯ್ಯ ಮಯಿಥಾನವ ತಂದ. ಇದರೊಲೆಯನುರುಹಿಕೊಡಾ ಕೂಡಲಸಂಗಮದೇವಾ.

೬೯೩. ಮಾಡುವರಿಲ್ಲ ನೀ ಮಾಡದೆ ನಿಲಿಸಾಲೆ. ಬೇಡುವರಿಲ್ಲ ನೀ ಬೇಡದೆ ನಿಲಿಸಾಲೆ. ಕೂಡುವರಿಲ್ಲ ನೀ ಕೂಡದೆ ನಿಲಿಸಾಲೆ. ಕೂಡಲ ಸಂಗಮದೇವ ತಾನು ತಾನಾಗಿ ನೀ ನೋಡದೆ ನಿಲಿಸಾಲೆ.

## (೭೦) ದಾಸೋಹ.

೬೯೪. ಶಾಸ್ತ್ರ ಘನವೆಂಬೆನೆ ? ಕರ್ಮವ ಭಜಿಸುತ್ತಿದೆ. ವೇದ ಘನ ವೆಂಬೆನೆ ? ಪ್ರಾಣವಧೆಯ ಹೇಳುತ್ತಿದೆ. ಶ್ರುತಿ ಘನವೆಂಬೆನೆ ? ಮುಂದಿ ಟ್ಟರಸುತ್ತಿದೆ. ಅಲ್ಲೆಲ್ಲಿಯೂ ನೀವಿಲ್ಲದ ಕಾರಣ, ತ್ರಿವಿಧ ದಾಸೋಹದಲ ಲ್ಲದೆ ಕಾಣಬಾರದು ಕೂಡಲಸಂಗಮದೇವ.

೬೯೫. ಜನ್ಮಜನ್ಮಕ್ಕೆ ಹೋಗಲೀಯ್ಯದೆ, ಸೋಹಂಮೆಂದೆನಿಸದೆ ದಾಸೋಹಂಮೆಂದೆನಿಸಯ್ಯ. ಲಿಂಗಜಂಗಮಪ್ರಸಾದದ ನಿಲವ ತೋರಿ, ಬದುಕಿಸಯ್ಯ ಕೂಡಲಸಂಗಮದೇವ ನಿಮ್ಮ ಧರ್ಮ.

೧೯೬. ಭಕ್ತನೆಂತೆಂಬೆನಯ್ಯ, ಭವಿಸಂಗ ಬಿಡದನ್ನಕ್ಕ ? ಮಹೇಶ್ವರನೆಂತೆಂಬೆನಯ್ಯಾ, ಪರಸ್ತ್ರೀ ಪರಧನದಾಸೆ ಬಿಡದನ್ನಕ್ಕ? ಪ್ರಸಾದಿ ಎಂತೆಂಬೆನಯ್ಯ, ಆದಿ ವ್ಯಾಧಿ ನಷ್ಟವಾಗದನ್ನಕ್ಕ? ಪ್ರಾಣಲಿಂಗಿ ಎಂತೆಂಬೆನಯ್ಯ, ಪ್ರಾಣ ಸ್ವಸ್ಥಿರವಾಗದನ್ನಕ್ಕ ? ಶರಣನೆಂತೆಂಬೆನಯ್ಯಾ, ಪಂಚೇಂದ್ರಿಯ ನಷ್ಟವಾಗದನ್ನಕ್ಕ? ಐಕ್ಯನೆಂತೆಂಬೆನಯ್ಯಾ, ಜನನ ಮರಣ ವಿರಹಿತವಾಗದನ್ನಕ್ಕ ? ಇಂತೀ ಭಾಷಾವ್ರತನೇಮಂಗಳ ನಾನರಿಯೆನಯ್ಯ. ಅಘಟಿತ ಘಟಿತ ವರ್ತಮಾನವ ನಾನರಿಯೆನಯ್ಯ! ನಿಮ್ಮ ಶರಣರ ಬೊತ್ತ ಭೃತ್ಯಾಚಾರವ ಮಾಡುವೆ ಕೂಡಲಸಂಗಮದೇವಾ.

೧೯೭. ಭಕ್ತನಾಯಿತ್ತೇ ಭಕ್ತಿದಾಸೋಹ. ಯುಕ್ತನಾಯಿತ್ತೇ ಯುಕ್ತಿದಾಸೋಹ. ಐಕ್ಯನಾಯಿತ್ತೇ ಮಮಕಾರ ದಾಸೋಹ. ಸರ್ವರಲ್ಲಿ ದಾಸೋಹವೇ ಬೇಕು. ದಾಸೋಹದನುವ ಕೂಡಲಸಂಗಯ್ಯ ತಾನೇ ಬಲ್ಲ.

೧೯೮. ಅಯ್ಯ ನಿಮ್ಮ ಶರಣರ ದಾಸೋಹಕ್ಕೆ ಎನ್ನ ತನು ಮನ ಧನವಲಸದಂತೆ ಮಾಡಯ್ಯ. ತನುದಾಸೋಹಕ್ಕೆ ಉಬ್ಬುವಂತೆ ಮಾಡು. ಮನದಾಸೋಹಕ್ಕೆ ಲೀಯವಾಹಂತೆ ಮಾಡು. ಧನದಾಸೋಹಕ್ಕೆ ಸವಿದು ನಿಮ್ಮ ಶರಣರ ಪ್ರಸಾದದಲ್ಲಿ ನಿರಂತರ ಆಡಿ, ಹಾಡಿ, ನೋಡಿ, ಕೂಡಿ, ಭಾವಿಸಿ, ಸುಖಿಸಿ, ಪರಿಣಾಮಿಸುವಂತೆ ಮಾಡು ಕೂಡಲಸಂಗಮದೇವಾ.

೧೯೯. ಭಕ್ತಿ ವಿಶೇಷವ ಮಾಡುವರೆ, ಹತ್ತು ಬೆರಳುಂಟು. ಹಾಸಿ ದುಡಿವರೆ, ತನಗುಂಟು, ಪ್ರಮಥರಿಗುಂಟು. ಮಾರಿತಂದೆಗಳಂತೆ, ಎನಗೇಕಹುದಯ್ಯಾ! ರತ್ನದ ಸಂಕೋಲೆಯನಿಕ್ಕಿ ಕಾಡಿಹ ಕೂಡಲಸಂಗಮದೇವ, ಶಿವಧೋ ಶಿವಧೋ.

೨೦೦. ಭಕ್ತಿಹೀನನ ದಾಸೋಹವ ಸದ್ಭಕ್ತರು ಸವಿಯರು. ಬೇವಿನ ಹಣ್ಣು ಕಾಗೆಗೆ ಇನಿದಲ್ಲದೆ ಕೋಗಿಲೆಗೆ ಮೆಲಲು ಬಾರದು. ಲಿಂಗಸಂಬಂಧವಿಲ್ಲದವರ ನುಡಿ ಕೂಡಲಸಂಗನ ಶರಣರಿಗೆ ಸಮನಿಸದು.

೨೦೧. ಆಡಿದರೇನು, ಹಾಡಿದರೇನು, ಓದಿದರೇನು, ತ್ರಿವಿಧ ದಾಸೋಹವಿಲ್ಲದನ್ನಕ್ಕ ? ಆಡದೇ ನವಿಲು, ಹಾಡದೇ ತಂತಿ, ಓದದೇ ಗಿಳಿ ? ಭಕ್ತಿ ಇಲ್ಲದವರನೊಲ್ಲ ಕೂಡಲಸಂಗಮದೇವ.

೨೦೨. ಕಾಂಚನವೆಂಬ ನಾಯ ನೆಚ್ಚಿ ನಿಮ್ಮ ನಾನು ಮರೆದೆನಯ್ಯ! ಕಾಂಚನಕ್ಕೆ ವೇಳೆಯಲ್ಲದೆ ಲಿಂಗಕ್ಕೆ ವೇಳೆ ಇಲ್ಲ. ಹಡಿಕಿಗೆ ಮೆಚ್ಚಿದ ಸೊಣಗನಮೃತದ ರುಚಿಯ ಬಲ್ಲುದೇ ಕೂಡಲಸಂಗಮದೇವಾ?



೨೦೩. ದಾಸೋಹವೆಂಬ ಸೋಹಗೊಂಡು ಹೋಗಿ, ಗುರುವ ಕಂಡೆ, ಲಿಂಗವ ಕಂಡೆ, ಜಂಗಮವ ಕಂಡೆ, ಪ್ರಸಾದವ ಕಂಡೆ. ಇಂತೀ ಚತುರ್ವಿಧ ಸಂಪನ್ನನಾದೆ ಕಾಣಾ ಕೂಡಲಸಂಗಮದೇವಾ.

---

## (೨೧) ಇಂದ್ರಿಯಂಗಳನ್ನು ವ್ಯಥೆಪಡಿಸದಿರು.

೨೦೪. ಇಂದ್ರಿಯ ನಿಗ್ರಹವ ಮಾಡಿದರೆ, ಹೊಂದುವವು ದೋಷಂಗಳು. ಮುಂದೆ ಬಂದು ಕಾಡುವವು ಪಂಚೇಂದ್ರಿಯಂಗಳು. ಸತಿಪತಿರತಿಸುಖವ ಬಿಟ್ಟರೇ ಸಿರಿಯಾಳಚಂಗಳೆಯವರು ? ಸತಿಪತಿರತಿಸುಖ ಭೋಗೋಪಭೋಗ ವಿಳಾಸವ ಬಿಟ್ಟರೇ ಸಿಂಧು ಬಲ್ಲಾಳನವರು ? ನಿಮ್ಮ ಮುಟ್ಟಿ ಪರಧನ ಪರಸತಿಗಳುಪಿದರೆ, ನಿಮ್ಮ ಚರಣಕ್ಕೆ ದೂರ ಕೂಡಲಸಂಗಮದೇವ.

೨೦೫. ಒಲ್ಲೆನೆಂಬುದು ವೈರಾಗ್ಯ. ಒಲಿದೆನೆಂಬುದು ಕಾಯದ ಗುಣ. ಆವ ಪದಾರ್ಥವಾದಡೆಯೂ ತಾನಿದ್ದೆಡೆಗೆ ಬಂದುದ ಲಿಂಗಾರ್ಪಿತ ಮಾಡಿ ಭೋಗಿಸುವುದೇ ಆಚಾರ. ಕೂಡಲಸಂಗಮದೇವಂನೊಲಿಸಬಂದ ಪ್ರಸಾದ ಕಾಯವ ಕೆಡಿಸಲಾಗದು.

---

## (೨೨) ಕರ್ಮಿಗಳಿಗೆ ಪ್ರಸಾದವಿಲ್ಲ.

೨೦೬. ಹಾರುವನ ಭಕ್ತಿ ಓಡಿನೊಳಗಗೆಯ ಹೊಯ್ದಂತೆ, ಕೆಳಯಿಂಕೆ ಬೇರೂರದು. ಮೇಲೆ ಫಲವಾಗದು. ಪ್ರಾಣಲಿಂಗದ ಪ್ರಸಾದವ ಮುಂದಿಟ್ಟುಕೊಂಡು 'ಪ್ರಾಣಾಯ ಸ್ವಾಹಾ, ಅಪಾನಾಯ ಸ್ವಾಹಾ, ವ್ಯಾನಾಯ ಸ್ವಾಹಾ, ಉದಾನಾಯ ಸ್ವಾಹಾ, ಸಮಾನಾಯ ಸ್ವಾಹಾ' ಎಂಬ ಕರ್ಮಿಗಳ ನಾನೇನೆಂಬೆ ಕೂಡಲಸಂಗಮದೇವಾ ?

೨೦೭. ನಾನು ಭಕ್ತ, ನಾನು ಪ್ರಸಾದಿ ಎಂದು, ವಿಪ್ರಕರ್ಮವ ಮಾಡುವೆ ಕರ್ಮಿ. ಲಿಂಗದೇವನ ಮುಟ್ಟಿ ಮಜ್ಜನಕ್ಕೆರೆವರ ಕೆಯ್ಯಲು ವಿಪ್ರನ ಕಾಲ ತೊಳೆದರೆ, ಲಿಂಗೋದಕ ಹೃದಯದಲ್ಲಿ, ವಿಪ್ರನ ಕಾಲ ತೊಳೆದ ನೀರು ಮಂಡೆಯ ಮೇಲೆ. 'ಶ್ರೋತ್ರೋತ್ಕಟ ದುರಾಚಾರೀ । ಯಜ್ಞಕೂಪೇ ವಿಘಾತಕಃ । ಉದ್ರೇಕೈಕ ವಿಧಿಶ್ಯಾಂತಿ । ವಿಪ್ರರೂಪೇಣ ರಾಕ್ಷಸಃ ॥ ಇದು ಕಾರಣ ಕೂಡಲಸಂಗಮದೇವ ಇಂತಪ್ಪ ದುರಾಚಾರಿಗಳ ಮುಖವ ನೋಡಲಾಗದು.

---

# ಪ್ರಾಣಲಿಂಗಿಸ್ಥಲ.

## (೨೩) ಪರಮಾತ್ಮನು ತನ್ನಲ್ಲಿಯೇ ಇದ್ದಾನೆ.

೨೦೮. ಮನ ವಂಚನೆಯು ಅನ್ಯಲಿಂಗಾರ್ಚನೆ. ಅದು ನಿಜವಲ್ಲ, ನಿಜವಲ್ಲ, ಕೂಡಲಸಂಗಮದೇವ ಮನದಂತರ್ಯಾಮಿ ತಾನಾಗಿ.

೨೦೯. ಕಣ್ಣೊಳಗೆ ಕಣ್ಣಿರ್ದು ಕಾಣಲೇಕರಿಯಿರಯ್ಯ? ಕಿವಿಯೊಳಗೆ ಕಿವಿ ಇರ್ದು ಕೇಳಲೇಕರಿಯಿರಯ್ಯ? ಘ್ರಾಣದೊಳಗೆ ಘ್ರಾಣವಿರ್ದು ವಾಸಿಸಲೇಕರಿಯಿರಯ್ಯ? ಜಿಹ್ವೆಯೊಳಗೆ ಜಿಹ್ವೆ ಇರ್ದು ರುಚಿಸಲೇಕರಿಯಿರಯ್ಯ? ಸ್ಪರ್ಶನದೊಳಗೆ ಸ್ಪರ್ಶನವಿರ್ದು, ಮುಟ್ಟಲೇಕರಿಯಿರಯ್ಯ ? ಪ್ರಾಣದೊಳಗೆ ಪ್ರಾಣವಿರ್ದುದನೇಕರಿಯಿರಯ್ಯ ? ಕಾಯದೊಳಗೆ ಕಾಯವಿರ್ದು, ಬಿಚ್ಚಿ ಬೇರಾಗದು. ಕೂಡಲಸಂಗಮದೇವ, ನೀನಿಕ್ಕಿದ ಅಣಕದ ಭೇದವ ಭೇದಿಸಬಾರದಯ್ಯಾ.

೨೧೦. ಉಳ್ಳವರು ಶಿವಾಲಯವ ಮಾಡುವರು. ನಾನೇನ ಮಾಡುವೆನಯ್ಯಾ ? ಬಡವನು. ಎನ್ನ ಕಾಲೇ ಕಂಭ, ದೇಹವೇ ದೇಗುಲ, ಶಿರವೇ ಹೊನ್ನ ಕಲಶವಯ್ಯ! ಕೂಡಲಸಂಗಮದೇವ ಕೇಳಯ್ಯ ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.

೨೧೧. ಕಾಯದ ಗಡಣ ಕೆಲಬರಿಗುಂಟು. ಜೀವದ ಗಡಣ ಕೆಲಬರಿಗುಂಟು, ಭಾವದ ಗಡಣ ಕೆಲಬರಿಗುಂಟು. ವಚನದ ಗಡಣ ಕೆಲಬರಿಗುಂಟು. ಪ್ರಾಣಲಿಂಗದ ಗಡಣ ಆರಿಗೂ ಇಲ್ಲ, ಕೂಡಲಸಂಗನ ಶರಣರೊಳಗೆ ತಂಗಟೂರ ಮಾರಯ್ಯಂಗಲ್ಲದೆ.

೨೧೨. ಶರಣ ಸನ್ನಿಹಿತ ಐಕ್ಯವಹಲ್ಲಿ, ಹರಿಬ್ರಹ್ಮಾದಿಗಳು ಮೊದಲಾದ ತೆತ್ತೀಸಾದಿ ದೇವರ್ಕಳು ಉಘೆ, ಉಘೇ ಎನುತಿರಲು, ಐಕ್ಯ ಬಸವಣ್ಣಂಗೆ ಠಾವಾವುದಯ್ಯಾ ಎಂದಡೆ, ಅಂಗದ ಕಳೆಯ ಬಲದಲ್ಲಿ ಬ್ರಹ್ಮನ ಸ್ಥಾನ, ಎಡದಲ್ಲಿ ನಾರಾಯಣನ ಸ್ಥಾನ. ಒಲ್ಲೆನಯ್ಯಾ! ಕೊರಳು ಗರಳ ಸ್ಥಾನ, ಬಾಯಿ ಅಪ್ಪುವಿನ ಸ್ಥಾನ, ನಾಸಿಕ ವಾಯುವಿನ ಸ್ಥಾನ, ಕಂಗಳು ಅಗ್ನಿಯ ಸ್ಥಾನ, ಜಡೆಯು ಗಂಗೆಯ ಸ್ಥಾನ, ನೊಸಲು ಚಂದ್ರನ ಸ್ಥಾನ, ಹಿಂದು ಸೂರ್ಯನ ಸ್ಥಾನ, ಚರಣಂಗಳು ಅಷ್ಟದಿಕ್ಪಾಲಕರ ಸ್ಥಾನ, ಗುಹ್ಯ ಕಾಮನ ಸ್ಥಾನ, ಹಸ್ತಂಗಳು ಕಪಾಲಖಟ್ವಾಂಗತ್ರಿಶೂಲ ಡಮರುಗ ಸ್ಥಾನ,



ದೇಹ ರುಂಡಮಾಲೆಯ ಸ್ಥಾನ, ಕರ್ಣ ನಾಗೇಂದ್ರನ ಸ್ಥಾನ. ಇಂತೀ ಸ್ಥಾನಂಗಳ ನಾನೊಲ್ಲೆನಯ್ಯಾ. ಹೃದಯ ಮಧ್ಯದಂತರಾಳದ ನಿರಾಳದ ಏಕಪೀಠದ ಸಿಂಹಾಸನದ ತೆರಪ ಕುಡು ಕೂಡಲಸಂಗಮದೇವಾ.

೨೧೩. ಕಂಡ ಕನಸು ನಿಧಾನವ ಕಂಡೆನಯ್ಯ! ಬಿಡಲಾರದ ನಿಧಾನವ ಕಂಡೆನಯ್ಯ! ಕೂಡನಸಂಗಯ್ಯನೆಂಬ ನಿಧಾನವ ಕಂಡು ಬಿಡಲಾರೆನಯ್ಯಾ

## (೨೪) ಪರಮಾತ್ಮನನ್ನು ತನ್ನಲ್ಲಿಯೇ ಕಾಣುವುದು.

೨೧೪. ಅಹಂಕಾರ ಮನವನಿಂಬುಗೊಂಡಲ್ಲಿ ಲಿಂಗ ತಾನೆಲ್ಲಿಪ್ಪುದೋ? ಅಹಂಕಾರಕ್ಕೆ ಎಡೆಗೊಡದೆ, ಲಿಂಗತನುವಾಗಿರಬೇಕು. ಅಹಂಕಾರರಹಿತನಾದಲ್ಲಿ ಸನ್ನಿಹಿತ ಕಾಣಾ ಕೂಡಲಸಂಗಮದೇವಾ.

೨೧೫. ತನು ನಿಮ್ಮದೆಂದ ಬಳಿಕ ಎನಗೆ ಬೇರೆ ತನುವಿಲ್ಲ. ಮನ ನಿಮ್ಮದೆಂದ ಬಳಿಕ, ಎನಗೆ ಬೇರೆ ಮನವಿಲ್ಲ. ಧನ ನಿಮ್ಮದೆಂದ ಬಳಿಕ, ಎನಗೆ ಬೇರೆ ಧನವಿಲ್ಲ. ಇಂತೀ ತ್ರಿವಿಧವು ನಿಮ್ಮದೆಂದರಿದ ಬಳಿಕ ಎನಗೆ ಬೇರೆ ವಿಚಾರ ಉಂಟೇ ಕೂಡಲಸಂಗಮದೇವ ?

೨೧೬. ತೊತ್ತಿಂಗೆ ಬಲ್ಲಹನೊಲಿವಡೆ, ಪದವಿಯ ಮಾಡದೆ ಮಾಣ್ಬನೇ? ಜೇಡರ ದಾಸಯ್ಯಂಗೊಲಿದಾತ ಮತ್ತೊಬ್ಬ ದೇವನೇ ಅಯ್ಯಾ? ಮಾದರ ಚನ್ನಯ್ಯಂಗೆ ಡೋಹರ ಕಕ್ಕಯ್ಯಂಗೆ ತೆಲುಗು ಜೊಮ್ಮಯ್ಯಂಗೆ ಒಲಿದಾತ ಮತ್ತೊಬ್ಬ ದೇವನೇ ಅಯ್ಯ ? ಎನ್ನ ಮನದ ಪಂಚೇಂದ್ರಿಯಗಳು ನಿಮ್ಮತ್ತಲದರೆ ತನ್ನಂತೆ ಮಾಡುವ ಕೂಡಲಸಂಗಮದೇವ.

೨೧೭. ಪ್ರಾಣಲಿಂಗ ಪ್ರತಿಗ್ರಾಹಕನಾದ ಬಳಿಕ ಲಿಂಗವಿರಹಿತನಾಗಿ ನಡೆವ ಪರಿ ಇನ್ನೆಂತೋ? ಲಿಂಗವಿರಹಿತನಾಗಿ ನುಡಿವ ಪರಿ ಇನ್ನೆಂತೋ? ಪಂಚೇಂದ್ರಿಯ ಸುಖವನು ಲಿಂಗವಿರಹಿತನಾಗಿ ಭುಂಜಿಸಲಾಗದು. ಲಿಂಗವಿರಹಿತನಾಗಿ ಉಗುಳ ನುಂಗಲಾಗದು. ಇಂತೆಂದುದು ಕೂಡಲಸಂಗನ ವಚನ.

೨೧೮. ಅಭ್ಯಾಸವೆನ್ನ ! ವರ್ತಿಸಿತ್ತಯ್ಯ ! ಭಕ್ತಿ ಸಾಧ್ಯವಾಗದು. ನಾನೇನೇವೆನಯ್ಯ ! ಅಯ್ಯಾ ಆನಿಮ್ಮ ಮನಂಬುಗುವನ್ನಕ್ಕ, ನೀವೆನ್ನ ಮನಂಬುಗುವನ್ನಕ್ಕ, ಕಾಯಗುಣಂಗಳ ಕಳೆದವರಿಗೆ ಶರಣೆಂಬೆ ಕೂಡಲಸಂಗಮದೇವಾ.

೨೧೯. ಹತ್ತುಸಾವಿರ ಗೀತವ ಹಾಡಿ, ಅರ್ಥವಿಟ್ಟಲ್ಲಿ ಫಲವೇನು, ಮುಟ್ಟುವ ತೆರನರಿಯದನ್ನಕ್ಕ? ಕಟ್ಟಿದರೇನು, ಬಿಟ್ಟರೇನು, ಮನವು ಲಿಂಗವ ಮುಟ್ಟದನ್ನಕ್ಕ ? ಮಾತಿನಲ್ಲಿ ಒಲಿಸಿ ಮಹತ್ತಪ್ಪ ಲಿಂಗವ ಕಂಡಿಹೆನೆಂಬ ಪಾತಕರ ಮೆಚ್ಚ ಕೂಡಲಸಂಗಮದೇವ.

೨೨೦. ಮೆಯಿಗೆ ಕಾಹ ಹೇಳುವರಲ್ಲದೆ, ಮನಕ್ಕೆ ಕಾಹ ಹೇಳುವರೇ? ಅಣಕದ ಮಿಂಡನ ಹೊಸ ಪರಿಯ ನೋಡಾ ! ಕೂಡಲಸಂಗಮದೇವನೆನ್ನ ಮನವ ನಂಬದೆ ತನ್ನಲ್ಲಿರ್ದ ಲೇಸ ಕಾಹ ಹೇಳಿದನು!

೨೨೧. ಮಂಡೆಯ ಬೋಳಿಸಿಕೊಂಡು ಗಂಡುದೊತ್ತುವೊಕ್ಕೆನಯ್ಯ. ಲಜ್ಜೆಗೆಟ್ಟಾದರೂ ಲಿಂಗವನೊಲಿಸುವೆ. ನಾಣುಗೆಟ್ಟಾದರೂ ಲಿಂಗವನೊಲಿಸುವೆ. ಕೆಲದ ಸಂಸಾರಿಗಳು ನಗುತಿರ್ದರಿರಲಿ. ಕೂಡಲಸಂಗಮದೇವ ಶರಣುಗತಿವೊಕ್ಕೆನಯ್ಯ.

೨೨೨ ಆಚಾರ ಶಿವಾಚಾರವೆಂಬುದರಿಯದ ಕಾರಣ, ಷಡುವರ್ಣ ಸಂಗಳೆಲ್ಲ ತಮತಮಗೆ ಶರಣೆನುತಿರ್ದವು. ಮಹತ್ವದ ಸಮಯಾದಿ ಶೈವಂಗಳೆಂಬುವೆಲ್ಲ ಶರಣು ಶರಣೆನುತಿರ್ದವು. ನಮ್ಮ ಕೂಡಲಸಂಗನ ಶರಣರು ಮಾಡಿದ ವಿನಿಯೋಗ ಬಹಿರಂಗದಲ್ಲಿ ವರ್ತಿಸುವರಿಗೆಲ್ಲಿಯದೋ?

೨೨೩. ನಾ ನಿಮ್ಮ ನೆನೆವೆನು. ನೀವೆನ್ನನರಿಯಿರಿ. ನಾ ನಿಮ್ಮ ನೋಲೈಸುವೆ. ನೀವೆನ್ನ ಕಾಣಿರಿ. ಆನೆಂತು ಬದುಕುವೆನೆಂತು ಜೀವಿಸುವೆ? ಕೂಡಲಸಂಗಮದೇವಾ ಎನಗೆ ನೀವೇ ಪ್ರಾಣಗತಿಮತಿ ನೋಡಯ್ಯಾ.

---

## (೨೫) ಲಿಂಗಧ್ಯಾನ.

೨೨೪. ಆಸೆ ರೋಷ ಹರುಷಾದಿಗಳೆಂಬ ಕರಣೇಂದ್ರಿಯಂಗಳ ಮುಟ್ಟಲೀಯದೆ, ಆಚಾರವ ಶಿವಾಚಾರವ ಮಾಡುವೆ. ಭಯಭಕ್ತಿಯಿಂದ ತೋರುವೆ. ಮನದಲ್ಲಿ ವಂಚನೆ ಇಲ್ಲದೆ ಭಾವಶುದ್ಧ ಪೂಜೆಯ ಮಾಡುವೆ. ಎನ್ನ ಪ್ರಾಣಶಕ್ತಿಯಿಂದ ಕೂಡುವೆ ಕೂಡಲಸಂಗಮದೇವರ.

೨೨೫. ನಿಮ್ಮ ನೋಟವನಂತ ಸುಖ. ನಿಮ್ಮ ಕೂಟ ಪರಮ ಸುಖವಯ್ಯ. ಅಷ್ಟಕೋಟಿ ರೋಮಂಗಳೆಲ್ಲ ಕಂಗಳಾಗಿ ನೋಡುತಿರ್ದೆನು. ಕೂಡಲಸಂಗಮದೇವಯ್ಯ ನಿಮ್ಮ ನೋಡಿ ನೋಡಿ ಮನದಲ್ಲಿ ರತಿ ಹುಟ್ಟಿ, ನಿಮಿರ್ದವೆನ್ನ ಕಳೆಗಳು.



೨೨೬. ಜ್ಞಾನದ ಗಮನದ ಸಹಜದ ಉದಯದಲ್ಲಿ ಏನೆಂದರಿಯೆನು. ಲಿಂಗದ ಬೆಳಗು ಒಳಕೊಂಡಿತ್ತಾಗಿ ಏನೆಂದರಿಯೆನು. ಕೂಡಲಸಂಗಮದೇವನ ಧ್ಯಾನದಿಂದ ಆನೇನೆಂದರಿಯೆನು.

೨೨೭. ಸರ್ಪನ ಸಂಯೋಗ, ಜ್ಯೋತಿಯ ಪತಂಗನ ಬೆಸನದಂತೆ, ಮನದ ಮಥನವನರಿಯದೆ, ನಿಮ್ಮ ಕೃಪೆಯಿಂದ ನಿಮ್ಮ ನೆನೆವೆ. ನೀವೆನ್ನ ಭಾವದ ಕೊನೆಯ ಮೊನೆಯ ಮೇಲೆ ಮನೆಯ ಮಾಡಿಕೊಂಡಿಪ್ಪೆಯಯ್ಯ, ಕೂಡಲಸಂಗಮದೇವ ನೀವೆನ್ನ ಪ್ರಾಣನಾಥನಾಗಿ.

---

## (೨೬) ಅಂತರಂಗದಲ್ಲಿ ಲಿಂಗಸಾನ್ನಿಧ್ಯವು.

೨೨೮. ಪಶ್ಚಿಮ ಪದ್ಮಾಸನದಲ್ಲಿ ಕುಳ್ಳಿರ್ದು ನಿಟ್ಟೆಲು ಮುರಿದು ತುಟಿ ಮಿಡುಕದೆ ಅಟ್ಟಿಯಾಡಿತ್ತಲ್ಲಾ ! ಬಿಟ್ಟ ಕಣ್ಣು, ಬಿಗಿದ ಹುಬ್ಬು, ಬ್ರಹ್ಮರಂಧ್ರದಲ್ಲಿ ಕಟ್ಟು ಗುಡಿಯ. ಕೂಡಲಸಂಗಮದೇವ ಹಿಡಿವಡೆದ.

೨೨೯ ಪೃಥ್ವಿ ಅಪ್ಪು ತೇಜ ವಾಯು ಆಕಾಶ ನಿರಂಜನದೇವಾ, ನಿಮ್ಮ ಮಹಿಮೆಯು ಪ್ರಣವಸ್ವರೂಪಂಗಲ್ಲದೆ ಕಾಣಬಾರದಾರಿಗೆಯೂ, ಬಾರದಯ್ಯ. ಜ್ಞಾನಜ್ಯೋತಿಯ ಧ್ಯಾನದಿಂದ ನಾಳಶುದ್ಧದ್ವಾರನಾಗಿ, ಆರಾಧಿಸಿ ಕಂಡೆ ನಮ್ಮ ಕೂಡಲಸಂಗಮದೇವನ.

೨೩೦. ಅಷ್ಟದಳಕಮಳವ ಸುತ್ತುವ ಜೀವಾತ್ಮನ ಮೆಟ್ಟದ ದಳವನರಿಯದೆ, ಆನು ಭಕ್ತನೆಂತೆಂಬೆ? ಆನು ಶರಣನೆಂತೆಂಬೆ? ಆನು ಲಿಂಗೈಕ್ಯನೆಂತೆಂಬೆ? ಕೂಡಲಸಂಗಮದೇವ ಎನ್ನ ಮನವು ಸಮಾಧಾನವಾಗದನ್ನಕ್ಕ?

೨೩೧. ಗುರು ತೋರದ ಲಿಂಗವು ಮನಸ್ಥಲವಾಗಿರಲು, ಪವನಭೇದದಿಂದರಿದಿಹೆನೆಂದರೆ, ಅದೇ ದ್ರೋಹ. ಈಡಾ ಪಿಂಗಳ ಸುಷುಮ್ನ ನಾಳವಿಡಿದು ಅರಿದಿಹೆನೆಂದರೆ, ಕೂಡಲಸಂಗಮದೇವ ಮೂಗ ಕೊಯ್ಯದೆ ಮಾಣ್ಬನೇ?

---

## (೨೭) ಲಿಂಗದಲ್ಲಿ ಸಾಮರಸ್ಯವು.

೨೩೨. ಅಂತರಂಗ, ಬಹಿರಂಗ, ಆತ್ಮಸಂಗ, ಒಂದೇಯಯ್ಯಾ. ನಾದ ಬಿಂದು ಕಳಾತೀತ ಆದಿಯಾಧಾರ ನೀನೇ ಅಯ್ಯ. ಆರೂಢದ ಕೂಟದ ಸುಖವ ಕೂಡಲಸಂಗಯ್ಯ ತಾನೇ ಬಲ್ಲ

೨೩೩. ನಾಲಿಗೆ ತಾಗಿದ ರುಚಿಗೆ ಮನ ಮನವೇ ಸಾಕ್ಷಿ ಸಾಲದೇ ಅಯ್ಯ ? ಮಾಲೆಗಾರನ ಕೇಳಿ, ನನೆಯರಳುವುದೇ ? ಆಗಮುವನಿದಿರಿಂಗೆ ತೋರುವುದು ಆಚಾರವೇ ಅಯ್ಯ ? ಕೂಡಲಸಂಗನ ಕೂಡಿದ ಕೂಟದ ಕರುಳ ಕಲೆಯನಿದಿರಿಂಗೆ ತೋರುವುದು ಆಚಾರವೇ ಅಯ್ಯಾ?

೨೩೪. ರಕ್ಕಸಿಯ ಮನೆಯಲು ಭೋಜನವನುಂಡು ತೃಪ್ತಿಯಾಯಿತ್ತೆಂದು ಬೆಸಗೊಂಡರೆ ಹೇಳಿಹೆನು. ನೀರ ಕೆಯ್ಯಲು ಕಿಚ್ಚ ಬಯಕೆಯ ಕೊಟ್ಟಂತೆ. ಸಾಯುಜ್ಯಪದವಿಯನವರೆತ್ತ ಬಲ್ಲರು ? ಮಹಾದಾನಿ ಕೂಡಲ ಸಂಗನ ಸಮರಸದ ಸುಖವನವರೆತ್ತ ಬಲ್ಲರು ?

೨೩೫. ಜಗವ ಸುತ್ತಿಪ್ಪುದು ನಿನ್ನ ಮಾಯೆಯಯ್ಯಾ. ನಿನ್ನ ಸುತ್ತಿಪ್ಪುದು ಎನ್ನ ಮನ ನೋಡಯ್ಯಾ. ಜಗಕೆ ಬಲ್ಲಿದ ನೀನು. ಆನು ನಿನಗೆ ಬಲ್ಲಿದನು, ಕಂಡಯ್ಯ. ಕರಿಯು ಕನ್ನಡಿಯೊಳಡಗಿದಂತಯ್ಯ. ಎನ್ನೊಳಗೆ ನೀನಡಗಿದೆ ಕೂಡಲಸಂಗಮದೇವಾ.

೨೩೬. ಎಲ್ಲರ ಗಂಡರ ಪರಿಯಂತಲ್ಲ ನೋಡೆಲಗವ್ವ. ನಮ್ಮ ನಲ್ಲನು ಸುಳಿಯಲಿಲ್ಲ. ಸುಳಿದು ಸಿಂಗಾರವ ಮಾಡಲಿಲ್ಲ. ಕೂಡಲಸಂಗಮದೇವ ತನ್ನಲ್ಲಿ ಬೈಚಿಟ್ಟನಾಗಿ.

೨೩೭ ರಜ್ಜೆಯ ನೆರವಿಗೆ ನಾಣ್ನುಡಿ ಇಲ್ಲದಿಹುದೇ ? . ಅದರಂತೆನಬಹುದೇ ಸಜ್ಜನ ಸ್ತ್ರೀಯ ? ಅದರಂತೆನಬಹುವೇ ಭಕ್ತಿರತಿಯ? ಕರುಳಕಲೆ ಪ್ರಕಟಿತ ಉಂಟೇ ಕೂಡಲಸಂಗಮದೇವ ?

೨೩೮. ಬೆಳಗಿನೊಳಗಣ ಬೆಳಗು. ಮಹಾ ಬೆಳಗು. ಶಿವಶಿವ, ಪರಮಾಶ್ರಯುವೇ ತಾನಾಗಿ ಶತಪತ್ರಕಮಳಕರ್ಣಿಕಾಮಧ್ಯದಲ್ಲಿ ಸ್ವತ: ಸಿದ್ಧನಾಗಿಪ್ಪ ನಮ್ಮ ಕೂಡಲಸಂಗಮದೇವ.

---



# ಶರಣಸ್ಥಲ.

## (೨೮) ಶರಣನ ಲಕ್ಷಣಗಳು.

೨೩೯. ಆಪ್ಯಾಯನಕ್ಕೆ ನೀಡುವೆ. ಲಾಂಛನಕ್ಕೆ ಶರಣೆಂಬೆ. ಲಾಂಛನಕ್ಕೆ ತಕ್ಕ ಆಚಾರವಿಲ್ಲದಿದ್ದರೆ, ಕೂಡಲಸಂಗಮದೇವ ನೀ ಸಾಕ್ಷಿಯಾಗಿ ಛೀ ಎಂಬೆ.

೨೪೦. ಸಂಚಲವಿಲ್ಲದ ಭಕ್ತಿ, ವಂಚನೆ ಇಲ್ಲದ ಮಹಾಂತನ ತೋರಾ! ತನುಶುಚಿಗಳ, ಮನಶುಚಿಗಳ ತೋರಾ ! ಇಂತಪ್ಪ ಶಿವಲಿಂಗೈಕ್ಯರ ತೋರಿ ಬದುಕಿಸು ಕೂಡಲಸಂಗಮದೇವಾ.

೨೪೧. ತನುಸಾರಾಯರ ಮನಸಾರಾಯರ ಜ್ಞಾನಸಾರಾಯರ ತೋರಯ್ಯ, ನಿಮ್ಮ ಧರ್ಮ. ಭಾವಸಾರಾಯರ ಭಕ್ತಿಸಾರಾಯರ ತೋರಯ್ಯ, ನಿಮ್ಮ ಧರ್ಮ. ಕೂಡಲಸಂಗಮದೇವಯ್ಯ, ನಿಮ್ಮನರಿಯದ ಅವಗುಣಿಗಳ ತೋರದಿರಯ್ಯ, ನಿಮ್ಮ ಧರ್ಮ.

೨೪೨. ಕಂಡುದಕ್ಕೆಳಸೆನೆನ್ನ ಮನವಲ್ಲಿ. ನೋಡಿ ಸೋಲೆನೆನ್ನ ಕಂಗಳಲ್ಲಿ. ಆಡಿ ಹುಸಿಯನೆನ್ನ ಜಿಹ್ವೆಯಲ್ಲಿ. ಕೂಡಸಂಗಮದೇವ ನಿಮ್ಮ ಶರಣನ ಪರಿ ಇಂತುಟಯ್ಯ.

೨೪೩. ಮುನ್ನೂರರುವತ್ತು ನಕ್ಷತ್ರಕ್ಕೆ ಬಾಯ ಬಿಟ್ಟುಕೊಂಡಿಪ್ಪುದೇ ಸಿಪ್ಪು ? ಅದು ಸ್ವಾತಿಗಲ್ಲದೆ ಬಾಯ್ದೆರೆಯದು ಕೇಳಾ ತಂದೆ. ಎಲ್ಲವಕ್ಕೆ ಬಾಯ್ಬಿಟ್ಟರೆ, ತಾನೆಲ್ಲಿಯ ಮುತ್ತಪ್ಪುದು ? ಪರಮಂಗಲ್ಲದೆ ಹರುಷವಿಲ್ಲೆಂದು ಕರಣಾದಿ ಗುಣಂಗಳ ಮರೆದರು. ಇದು ಕಾರಣ ಕೂಡಲಸಂಗನ ಶರಣರು ಸಪ್ತ ವ್ಯಸನಿಗಳಲ್ಲಾಗಿ.

೨೪೪. ಅರ್ಥಕ್ಕೆ ತಪ್ಪಿದಡೇನು ? ಪ್ರಾಣಕ್ಕೆ ತಪ್ಪಿದಡೇನು? ಅಭಿಮಾನಕ್ಕೆ ತಪ್ಪಿದಡೇನು? ಶರಣರು ಶರಣರಲಿ ಗುಣವನರಸುವರೇ ? ಕೂಡಲ ಸಂಗನ ಶರಣರು ನೊಂದು ಸೈರಿಸಬೇಕು.

೨೪೫. ಅನಾಯಾಸದಿಂದ ಮನೆಯ ಮಾಡಿ, ನಿರಾಯಾಸದಿಂದ ಪರಮ ಸುಖಿ. ರೂಹಿಸುವಲ್ಲಿ ರೂಪಾಧಿಕ. ನೋಡುವಲ್ಲಿ ನೋಟ ಘನ. ಇಂತಹ ಸಹಜ ಸಂಗಿಯ ನಿಲವನ ಪರಿ. ಉದಕದೊಳಗಣ ಬಿಂದು ಉದಯರತ್ನದಂತೆ ಕೂಡಲಸಂಗನ ಶರಣನ ನಿಲವು.

೭೪೬. ಬಂಜೆ ಬೇನೆಯನರಿಯದಂತೆ, ಒಬ್ಬರೊಂದ ನುಡಿವಿರಿ, ಕೇಳಿರಯ್ಯ. ಎನಗೆ ಆಯುಷ್ಯ ಭವಿಷ್ಯೆಯು ಎನ್ನ ಭಕ್ತರು ಕಂಡಯ್ಯ. ಎನಗೆ ಆಯುಷ್ಯ ಭವಿಷ್ಯೆಯು ಎನ್ನ ಪ್ರಮಥರು ಕಂಡಯ್ಯ. ಕೂಡಲಸಂಗನ ಶರಣರು ಮುಖಲಿಂಗಿಗಳಯ್ಯ.

೭೪೭. ಶಿವಚಿಂತೆ ಶಿವಜ್ಞಾನವಿಲ್ಲದ ಮನುಜರು, ಜಗಣಕ್ಕೆ ಸಾಸಿರ ಹುಳು ಹುಟ್ಟವೇ ಹೇಳಾ ದೇವಾ? ಕಾಡಮೃಗ ಒಂದಾಗಿರಲಾಗದೇ ದೇವಾ? ಊರ ಮೃಗ ಒಂದಾಗಿರಲಾಗದೇ ಹರನೇ? ನಮ್ಮ ಕೂಡಲಸಂಗನ ಶರಣರಿಲ್ಲದ ಊರು, ದೇಶ ವನವಾಸ ನರವಿಂಧ್ಯ ಕಾಣಿರಣ್ಣಾ.

೭೪೮. ಏತ ತಲೆವಾಗಿದರೇನು, ಗುರುಭಕ್ತನಾಗಬಲ್ಲುದೇ? ಇಕ್ಕುಳ ಕೈಮುಗಿದರೇನು, ಭೃತ್ಯಾಚಾರಿಯಾಗಬಲ್ಲುದೇ? ಗಿಳಿಯೋದಿದರೇನು, ಲಿಂಗವೇದಿಯಾಗಬಲ್ಲುದೇ? ಕೂಡಲಸಂಗನ ಶರಣರು ಬಂದ ಬರವ ನಿಂದ ನಿಲವ ಅಂಗಸಂಗಿಗಳೆತ್ತ ಬಲ್ಲರು?

೭೪೯. ಅಯ್ಯಾ, ನಿಮ್ಮ ಶರಣರ ಚರಣದ ಚಮ್ಮಾವುಗೆಗೆ ಪೃಥ್ವಿ ಸಮಬಾರದು. ಸರಿಯಲ್ಲ ನೋಡಾ, ಕೂಡಲಸಂಗಮದೇವಾ, ನಿಮ್ಮ ಶರಣರ ಚಮ್ಮಾವುಗೆಗೆ.

೭೫೦. ಕುಲಮದವಳಿಯದನ್ನಕ್ಕ ಶರಣನಾಗಲೇಕೆ? ವಿಧಿವಶ ಬಿಡದನ್ನಕ್ಕ ಭಕ್ತನಾಗಲೇಕೆ? ಹಮ್ಮಿನ ಸೊಮ್ಮಿನ ಸಂಬಂಧವ ಬಿಟ್ಟು ಕಿಂಕರ ಕಿಂಕರನಾಗಿರಬೇಕು. ಹೆಪ್ಪನೆರೆದ ಹಾಲು ಕೆಟ್ಟು ತುಪ್ಪವಪ್ಪಂತೆ ಇಪ್ಪರು ಕೂಡಲಸಂಗಮದೇವ ನಿಮ್ಮ ಶರಣರು.

೭೫೧. ಹಾವಿನ ಡೊಂಕು ಹುತ್ತಕ್ಕೆ ಸಸಿನ. ನದಿಯ ಡೊಂಕು ಸಮುದ್ರಕ್ಕೆ ಸಸಿನ. ನಮ್ಮ ಕೂಡಲಸಂಗನ ಶರಣರ ಡೊಂಕು ಲಿಂಗಕ್ಕೆ ಸಸಿನ.

೭೫೨. ಆವಾವ ಭಾವದಲ್ಲಿ ಶಿವನ ನಂಬಿರ್ದ ಶರಣರೆಂತಿರ್ದರೇನಯ್ಯ? ಆವಾವ ಭಾವದಲ್ಲಿ ಶಿವನ ನಂಬಿರ್ದ ಮಹಿಮರೆಂತಿರ್ದರೇನಯ್ಯ? ಸುಚರಿತ್ರರೆಂತಿರ್ದರೇನಯ್ಯ? ಅವಲೋಹವ ಕಳೆವ ಪರುಷ ಎಂತಿರ್ದರೇನಯ್ಯ? ಕೂಡಲಸಂಗನ ಶರಣರು ಪರುಷ ವಾರುಧಿಗಳು ಎಂತಿರ್ದರೇನಯ್ಯ?

೭೫೩. ಉಪಮಿಸಬಾರದ ಉಪಮಾತೀತರು, ಕಾಲಕರ್ಮವಿರಹಿತರು, ಭವವಿರಹಿತರು, ಕೂಡಲಸಂಗಮದೇವ, ನಿಮ್ಮ ಶರಣರು.

---



## (೭೯) ಶರಣನು ನಿರ್ಭಯನು.

೭೫೪. ಭವಕ್ಕೆ ಹುಟ್ಟುವನಲ್ಲ. ಸಂದೇಹ ಸೂತಕಿಯಲ್ಲ. ಆಕಾರ ನಿರಾಕಾರನಲ್ಲ ನೋಡಯ್ಯಾ. ಕಾಯವಂಚಕನಲ್ಲ. ಜೀವವಂಚಕನಲ್ಲ. ಶಂಕೆ ಇಲ್ಲದ ಮಹಾಮಹಿಮನು ನೋಡಯ್ಯ. ಕೂಡಲಸಂಗನ ಶರಣನುಪಮಾತೀತನು ನೋಡಯ್ಯ.

೭೫೫. ಧನದಲ್ಲಿ ಶುಚಿ, ಪ್ರಾಣದಲ್ಲಿ ನಿರ್ಭಯ, ಇದಾರಿಗಳವಡುವುದಯ್ಯಾ? ನಿಧಾನ ತಪ್ಪಿ ಬಂದರೆ ಒಲ್ಲೆನೆಂಬುವರಿಲ್ಲ. ಪ್ರಮಾದವಶದಿಂದ ಬಂದರೆ, ಒಲ್ಲೆನೆಂಬುವರಿಲ್ಲ. ನಿರಾಸೆ ನಿರ್ಭಯ ಕೂಡಲಸಂಗಮದೇವ ನೀನೊಲಿದ ಶರಣಂಗಲ್ಲದಿಲ್ಲ.

೭೫೬. ಕಲಿತನ ತನಗುಳ್ಳರೆ ಸೂಜಿಬಾಳು ಮೊದಲಾಗಿ ಕಾದಬೇಕು. ಶರಣಪಥ ತನಗುಳ್ಳರೆ ಶಿವಭಕ್ತರ ಮನೆಯ ಶಿವರಸವ ಪಂಚಾಮೃತವ ಮಾಡಿಕೊಳಬೇಕು. ಭ್ರಾಂತುವಿಡಿದು ಲಿಂಗಕ್ಕೋಗರವನರಸುವ ಪಾತಕರ ಮೆಚ್ಚ ನಮ್ಮ ಕೂಡಲಸಂಗಮದೇವ.

೭೫೭. ಮುನ್ನಿನ ಕಲಿ ವೀರ ಧೀರರು ಕಾದಿದ ರಣಗಳನು ಪರಿಪರಿಯಲಿ ಬಣ್ಣಿಸಿ ಹೇಳಬಹುದಲ್ಲದೆ, ಆ ದಳವಿದಿರಾದಲ್ಲಿ, ಬಿರಿದುಪಚಾರಿಸಿ, ಕಡಿದು ತೋರಿಗಬಾರದು. ಮುನ್ನಿನ ಪುರುಷ ಬ್ರತಿಯರು ಒಲಿಸಿದ ಆಯತವನು ಪರಿಪರಿಯಲಿ ಬಣ್ಣಿಸಬಹುದಲ್ಲದೆ, ಪುರುಷ ನಿರ್ವಾಣಕ್ಕುರಿವಗ್ನಿಯ ಬಂದು ಹೊಕ್ಕು ತೋರಲು ಬಾರದು. ಮುನ್ನಿನ ಪುರಾತರೆಲ್ಲರು ತನುಮನಧನವನಿತ್ತು ಮಾಡಿ ನೀಡಿ ಲಿಂಗವ ಕೂಡಿದ ಪರಿಯನು ಅನುಭಾವದಲರ್ಥೈಸಿ ಹೇಳಬಹುದಲ್ಲದೆ, ಮಾಡಿ ನೀಡಿ ತೋರಲುಬಾರದು. ಇಂತೀ ಅರೆಬಿರಿದಿನ ಬಂಟರು ಪುರುಷಬ್ರತಿಯರು ಪುರಾತರು ಬರಿಯ ಮಾತನಾಡಿ ಹೋಗಿ ಮೆರೆವರಲ್ಲ. ಪರೀಕ್ಷೆಯುಂಟಾಗಿದ್ದರೆ, ಒಳಗಣವರ ಹೆಸರ ಹಿಡಿದು ಪರಿಪರಿಯಲು ಹೊಗಳುವರು. ಶರೀರ ಅರ್ಥ ಪ್ರಾಣವ ಗುರು ಲಿಂಗ ಜಂಗಮಕ್ಕೆ ಪರೀಕ್ಷೆಯುಂಟಾಗಿಯೇ ಆತ ಮಹೇಶ್ವರ, ಪುರಾತರವಳಿ ಎಂಜೆ. ಪರಮಬಂಧುಗಳಾತನ ನೆನೆನೆನೆದು ಬದುಕುವರು. ಇಂತೀ ಅನುಭಾವದ ಓದಿನಕ್ಷರಾಭ್ಯಾಸವ ಸಾಧಿಸಿ ತರ್ಕಿಸಿ ನಿಂದಿಸಲಾಗದು. ಕೂಡಲಸಂಗನ ಶರಣರಿಗಲ್ಲದನುಭಾವವಿಲ್ಲ.

೭೫೮. ಮಾಡುವ ನೀಡುವ ಭಕ್ತನ ಕಂಡರೆ, ನಿಧಿನಿಧಾನವ ಕಂಡಂತಾಯಿತ್ತು. ಪಾದೋದಕ ಪ್ರಸಾದ ಜೀವಿಯ ಕಂಡರೆ, ಹೋದ ಪ್ರಾಣ ಬಂದಂತಾಯಿತ್ತು. ಅನ್ಯರ ಮನೆಗೆ ಹೋಗಿ, ತನ್ನುದರವ ಹೊರೆಯದ ಅಚ್ಚ ಶರಣರ ಕಂಡರೆ, ನಿಶ್ಚಯವಾಗಿ ಕೂಡಲಸಂಗಯ್ಯನೆಂಜೆ.

೭೫೯. ಈ ಲೋಕದ ಭೀತರು ಆ ಲೋಕದ ಕಲಿಗಳು. ಸಾಲೋಕ್ಯ ಸಾರೂಪ್ಯ ಸಾಮೀಪ್ಯ ಸಾಯುಜ್ಯರೆಲ್ಲರು ಅಜನಿತಂಗೆ ಸರಿಯೇ? ಮೂಜಗದಲ್ಲಿ ಸಿರುತರು ಕೂಡಲಸಂಗನ ಶರಣರು ತ್ರಿವಿಧವನರಿಯರು.

## (೮೦) ಶರಣನ ಅರ್ಪಣಭಾವವು.

೭೬೦. ಹಲವು ಮಣಿಯ ಕಟ್ಟಿ ಕುಣಿ ಕುಣಿದಾಡಿ, ಹಲವು ಪರಿಯಲಿ ವಿಭೂತಿಯ ಹೂಸಿ, ಗಣಾಡಂಬರದ ನಡುವೆ ನಲಿನಲಿದಾಡಿ, ಉಂಡು ತಾಂಬೂಲಗೊಂಡು ಹೋಹುವಲ್ಲ! ತನುಮನಧನವ ಸಮರ್ಪಿಸದವರ ಕೂಡಲಸಂಗಮದೇವನೆಂತೊಲಿವ?

೭೬೧. ಶುದ್ಧಾತ್ಮ ಪರಮಾತ್ಮರಿಬ್ಬರು ಒಂದು ರತ್ನಕ್ಕೆ ಹೆಣಗಾಟವನಾಡಿಹರು. ಅವರ ಹೆಣಗಾಟವ ನೋಡಿ, ಆ ರತ್ನವ ಸೆಳೆದುಕೊಂಡರೆ, ಕೂಡಲಸಂಗಮದೇವಂಗಾರೋಗಣೆಯಾಯಿತ್ತು.

೭೬೨. ಎನಗೆ ಗುರುವಿನ ಪ್ರಸಾದ ನಿನಗೆ ಚೆನ್ನನ ಪ್ರಸಾದ. ಎನಗೆ ನಿನಗೆ ಸಮಯಾಚಾರ ಸರಿ. ಕೂಡಲಸಂಗಮದೇವ, ನೀನೆನಗೆ ಚಿಕ್ಕ ತಮ್ಮ.

## (೮೧) ಶರಣನು ಲಿಂಗಮಯನು.

೭೬೩. ಪೂರ್ವಬೀಜ ಮಾಯಪ್ರಾಣಿಯಲ್ಲ. ಲಿಂಗಪ್ರಾಣಿ ಶರಣನು. ಏಕೋಗ್ರಾಹಿ ಭಾವಭೇದವಿಲ್ಲಾಗಿ ಮನ ಪ್ರವೇಶಿಯಾದ ಶರಣನು ನಿಮ್ಮುವ ಪೂಜಿಸಿ, ತನುಧರ್ಮವ ಮರೆದು, ನಿಮ್ಮ ಪ್ರತಿಬಿಂಬದಂತಿಪ್ಪ ಕೂಡಲಸಂಗಮದೇವ, ನಿಮ್ಮ ಶರಣನು.

೭೬೪. ನಿಷ್ಠೆಯಿಂದ ಲಿಂಗವ ಪೂಜಿಸಿ, ಮತ್ತೊಂದು ಪಥವನರಿಯದ ಶರಣರು ಸರ್ಪನ ಹೆಡೆಯ ಮಾಣಿಕವಂತಿಪ್ಪರು ಭೂಷಣರಾಗಿ. ದರ್ಪಣದೊಳಗಣ ಪ್ರತಿಬಿಂಬದಂತೆ ಹಿಂಗದಿಪ್ಪರು, ಕೂಡಲಸಂಗಮದೇವ, ನಿಮ್ಮ ಶರಣರು.

೭೬೫. ಸಮುದ್ರ ಘನವೆಂಬೆನೇ? ಧರೆಯ ಮೇಲಡಗಿತ್ತು. ಧರೆ ಘನವೆಂಬೆನೇ? ನಾಗೇಂದ್ರನ ಫಣಿಯ ಮೇಲಡಗಿತ್ತು. ನಾಗೇಂದ್ರ ಘನವೆಂಬೆನೇ? ಪಾರ್ವತಿಯ ಕಿರುಕುಣಿಕೆಯ ಮುದ್ರೆಯಾಯಿತ್ತು. ಅಂಥ ಪಾರ್ವತಿ ಘನವೆಂಬೆನೇ? ಪರಮೇಶ್ವರನರ್ಧಾಂಗಿಯಾದಳು. ಅಂಥ ಪರಮೇಶ್ವರ ಘನವೆಂಬೆನೇ? ನಮ್ಮ ಕೂಡಲಸಂಗನ ಶರಣರ ಮನದ ಕೊನೆಯ ಮೊನೆಯ ಮೇಲಡಗಿದನು.



೭೬೬. ಆಚಾರವನರಿಯಿರಿ. ವಿಚಾರವನರಿಯಿರಿ. ಜಂಗಮಸ್ಥಲ ಲಿಂಗ ಕಾಣಿರಯ್ಯ. ಜಾತಿಭೇದವಿಲ್ಲವಾಗಿ ಸೂತಕವಿಲ್ಲ. ಅಜಾತಂಗೆ ಕುಲವಿಲ್ಲ. ನುಡಿದಂತೆ ನಡೆಯದಿದ್ದರೆ ಕೂಡಲಸಂಗಮದೇವ ಮೆಚ್ಚ ಕಾಣಿರಯ್ಯ.

೭೬೭. ಅಚ್ಚ ಶರಣರು ನಿಮ್ಮ ನಿಚ್ಚ ನೆನೆವರು. ಬಚ್ಚಬರಿಯ ಮಾತನಾಡುವೆನು. ಒಪ್ಪಚ್ಚಿ ಅರೆಭಕ್ತಿ ನೆನೆಯಲೀಯ್ಯದು ಮೆಚ್ಚರು ನಿಮ್ಮವರು ಎನ್ನ ಕೂಡಲಸಂಗಮದೇವಾ.

೭೬೮. ಹಾಲ ಕಂದಲು, ತುಪ್ಪದ ಮಡಿಕೆಯ ಬೋಡ, ಮುಕ್ಕ ನೆನಬೇಡ. ಹಾಲು ಸಿಹಿ, ತುಪ್ಪ ಕಮ್ಮಗೆ, ಲಿಂಗಕ್ಕೆ ಬೋನ. ಕೂಡಲಸಂಗನ ಶರಣರ ಅಂಗಹೀನರೆಂದಡೆ ನಾಯಕ ನರಕ.

## (೮೨) ಶರಣನು ಲಿಂಗಜ್ಞಾನಿಯು.

೭೬೯. ಕೆರೆ ಹಳ್ಳ ಬಾವಿಗಳು ಮೈದೆಗೆದರೆ, ಗೊಳ್ಳೆ, ಗೊರಜೆ, ಚಿಪ್ಪು ಕಾಣಬಾಹವು. ವಾರುಧಿ ಮೈದೆಗೆದರೆ, ರತ್ನಂಗಳು ಕಾಣಬಾಹವು. ನಮ್ಮ ಕೂಡಲಸಂಗನ ಶರಣರು ಮನದೆರೆದು ಮಾತನಾಡಿದರೆ, ಲಿಂಗವ ಕಾಣಬಾಹುದು.

೭೭೦. ತೆರನನರಿವುದಪೂರ್ವ. ಅರಿದು ಮರೆವುದಪೂರ್ವ. ಕೂಡೆ ಶರಣೆಂಬುದಪೂರ್ವ. ಕೂಡಲಸಂಗಮದೇವರ ಭಕ್ತಿ ಅಭಿಮಾನಿಯ ಜವ್ವನದಂತೆ.

೭೭೧. ಕುರಿವಿಂಡು ಕಬ್ಬಿನ ತೋಟವ ಹೊಕ್ಕು ತೆರನನರಿಯದೆ, ತನಿ ರಸದ ಹೊರಗಣ ಎಲೆಯನೆ ಮೆಲಿದವು. ನಿಮ್ಮನರಿದ ಮದಕರಿಯಲ್ಲದೆ, ಕುರಿ ಬಲ್ಲುದೇ ಕೂಡಲಸಂಗಮದೇವ?

೭೭೨. ಉಂಬುವ ಬಟ್ಟಲು ಬೇರೆ ಕಂಚಲ್ಲ. ನೋಡುವ ದರ್ಪಣ ಬೇರೆ ಕಂಚಲ್ಲ. ಭಾಂಡ ಭಾಜನ ಒಂದೇ. ಬೆಳಗೆ ಕನ್ನಡಿ ಎನಿಸಿತ್ತು. ಅರಿದರೆ ಶರಣನು. ಮರೆದರೆ ಮಾನವ. ಮರೆಯದೆ ಪೂಜಿಸು ನಮ್ಮ ಕೂಡಲಸಂಗಮದೇವನ.

೭೭೩. ಶ್ವಾನಜ್ಞಾನ ಗಜಜ್ಞಾನ ಕುಕ್ಕುಟಜ್ಞಾನವೆಂಬ ಜ್ಞಾನತ್ರಯಂಗಳೇನಾದವೋ! ಕೂಡಲಸಂಗಮದೇವ, ನಿಮ್ಮನರಿಯದ ಜ್ಞಾನವೆಲ್ಲ ಅಜ್ಞಾನ.

೨೨೪. ಗುರುಭಕ್ತಿಯ ಮಾಡಬಹುದಲ್ಲದೆ, ಲಿಂಗಭಕ್ತಿಯ ಮಾಡಬಾರದು. ಲಿಂಗಭಕ್ತಿಯ ಮಾಡಬಹುದಲ್ಲದೆ, ಜಂಗಮಭಕ್ತಿಯ ಮಾಡಬಾರದು. ಜಂಗಮಭಕ್ತಿಯ ಮಾಡಬಹುದಲ್ಲದೆ, ಸಮಯಭಕ್ತಿಯ ಮಾಡಬಾರದು. ಸಮಯಭಕ್ತಿಯ ಮಾಡಬಹುದಲ್ಲದೆ, ಸಮಯಸಂತೋಷವ ಮಾಡಬಾರದು. ಇವೆಲ್ಲವ ಮಾಡಬಹುದಲ್ಲದೆ, ತನ್ನ ತಾನರಿಯಬಾರದು. ತನ್ನ ತಾನರಿದಿಹೆನೆಂಬ ಅಹಂಕಾರವುಳ್ಳನ್ನಕ್ಕ, ನಿಮ್ಮನರಿಗೆ ದೂರ. ಎಲೆ ದೇವಾ, ಅನ್ಯಕ್ಕಾಸೆ ಮಾಡಿದೆನಾದರೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ ಕೂಡಲಸಂಗಮದೇವ.

೨೨೫. ನೆಲನೊಂದೇ. ಹೊಲೆಗೇರಿ ಶಿವಾಲಯಕ್ಕೆ. ಜಲ ಒಂದೇ ಶೌಚಾಚಮನಕ್ಕೆ. ಕುಲ ಒಂದೇ ತನ್ನ ತಾನರಿದವಂಗೆ. ಫಲ ಒಂದೇ ಷಡುದರ್ಶನ ಮುಕ್ತಿಗೆ. ನಿಲವೊಂದೇ ಕೂಡಲಸಂಗಮದೇವ ನಿಮ್ಮನರಿದವಂಗೆ.

೨೨೬. ಗೃಹ ಬಂದಾವರಿಸಲೊಡನೆ, ತನ್ನ ಮರಿಸುವುದು. ಮತ್ತೊಂದ ಕ್ಷೆಂಬುಗೊಡಲೀಯದಯ್ಯ. ಕೂಡಲಸಂಗಮದೇವರರಿವು ಅನುಪಮವಾಗಲೊಡನೆ ಬೆವಹಾರದೊಳಗಿರಲೀಯದಯ್ಯ.

೨೨೭. ಓದಿದಡೇನು, ಕೇಳಿದಡೇನು, ಶಿವಪಥವನರಿಯದನ್ನಕ್ಕ ? ಓದಿತ್ತು ಕಾಣಿರೋ ಶುಕನು, ಶಿವಜ್ಞಾನವನರಿಯದನ್ನಕ್ಕ. ಓದಿದ ಫಲವು ಮಾದರ ಚನ್ನಯ್ಯಂಗಾಯಿತ್ತು ಕೂಡಲಸಂಗಮದೇವಾ.

೨೨೮. 'ಈಶ್ವರ ಸದ್ಭಾವೇ ಕಿಂ ಪ್ರಮಾಣಂ' ಎಂಬ ಮೀಮಾಂಸಕನ ಮೂಗಿನ ಕೊನೆಯ 'ವಿಶ್ವತೋ ಚಕ್ಷುರುತ, ವಿಶ್ವತೋ ಮುಖ, ವಿಶ್ವತೋ ಬಾಹುರುತ, ವಿಶ್ವತಃ ಪಾತ್ ಸಂಬಾಹುಭ್ಯಾಂ ದಮತಿ ಸಂಪದ್ ದ್ಯಾವಾ ಭೂಮೀ ಜನಯನ್ ದೇವ ಏಕ ಏವ' ಎಂಬ ಸುರಿಗೆಯಲಿರಿದು, ವೈಶೇಷಿಕವೆಂಬ ಇಟ್ಟಿಗೆಯಲಿರಿಸಿ, ಕೂಡಲಸಂಗಯ್ಯನೆಂಬ ಕನ್ನಡಿಯ ತೋರುವೆನು.

---

## (೨೩) ಶರಣನ ಸಾಮರಸ್ಯವು.

೨೨೯. ತೆರಹಿಲ್ಲದ ನಡೆ, ತೆರಹಿಲ್ಲದ ನುಡಿ, ತೆರಹಿಲ್ಲದ ಸಂಭಾಷಣೆಯ ಸುಖವು. ತೆರಹಿಲ್ಲದೆ ನಂಬಿದೆ ಸ್ವಾನುಭವ ಸುಖವ. ತೆರಹಿಲ್ಲದ ಮಹಿಮೆ. ತೆರಹಿಲ್ಲದ ವಿಚಾರ ಕೂಡಲಸಂಗಮದೇವಾ ನಿಮ್ಮ ಶರಣಂಗೆ.

೨೩೦. ಸತ್ತು ಹುಟ್ಟುವನಲ್ಲ. ಸಂದೇಹಿ ಸೂತಕಿಯಲ್ಲ. ಆಕಾರ ನಿರಾಕಾರನಲ್ಲ ನೋಡಯ್ಯ. ಕಾಯವಂಚಕನಲ್ಲ. ಜೀವವಂಚಕನಲ್ಲ.



ನಿರಂತರ ಸಹಜ ನೋಡಯ್ಯ. ಶಂಕೆ ಇಲ್ಲದ ಮಹಾ ಮಹಿಮ ನೋಡಯ್ಯ. ಕೂಡಲಸಂಗನ ಶರಣನು ಉಪಮಾತೀತ ನೋಡಯ್ಯ.

೨೩೧. ತಾಗು ನಿರೋಧ ಆಗುಹೋಗನರಿಯದ ಶರಣನ ಚರಿತ್ರವನು ನೋಡಿ ನೋಡಿ ಬೆರಗಾದೆನಯ್ಯಾ ಕೂಡಲಸಂಗಮದೇವನಲ್ಲಿ ತಾನೆ ಸುಯಿಧಾನಿಯಾಗಿ.

೨೩೨. ದೇವಲೋಕ ಮರ್ತ್ಯಲೋಕವೆಂಬ ಸೀಮೆಯುಳ್ಳನ್ನಕ್ಕ ಕೇವಲ ಶರಣನಾಗಲರಿಯ. ಸತ್ತು ಬೆರಸಿಹೆನೆಂದರೆ, ಕಬ್ಬಿನ ತುದಿಯ ಮೆಲಿದಂತೆ ಕೂಡಲಸಂಗಮದೇವಾ.

೨೩೩. ಮಣ್ಣ ಮಡಿಕೆ ಮಣ್ಣಾಗದು, ಕ್ರಿಯಳಿದು. ಬೆಣ್ಣೆ ಕರಗಿ ತುಪ್ಪವಾಗಿ ಮರಳಿ ಬೆಣ್ಣೆಯಾಗದು ಕ್ರಿಯಳಿದು. ಹೊನ್ನು ಕಬ್ಬುನವಾಗದು ಕ್ರಿಯಳಿದು. ಮುತ್ತು ನೀರಲ್ಲಿ ಹುಟ್ಟಿ, ಮತ್ತೆ ನೀರಾಗದು ಕ್ರಿಯಳಿದು. ಕೂಡಲಸಂಗನ ಶರಣನಾಗಿ, ಮರಳಿ ಮಾನವನಾಗ ಕ್ರಿಯಳಿದು.

೨೩೪. ಎಂಬತ್ತೆಂಟು ಪವಾಡವ ಮೆರೆದು, ಹಗರಣದ ಚೋಹದಂತಾಯಿತ್ತೆನ್ನ ಭಕ್ತಿ. ತನುವಿನೊಳಗೆ ಮನ ಸಿಲುಕದೆ, ಮನದೊಳಗೆ ತನು ಸಿಲುಕದೆ, ತನು ಅಲ್ಲಮನಲ್ಲಿ ಸಿಲುಕಿತ್ತು, ಮನ ಚನ್ನಬಸವಣ್ಣನಲ್ಲಿ ಸಿಲುಕಿತ್ತು. ನಾನೇತರಲ್ಲಿ ನೆನೆವೆನಯ್ಯ ಕೂಡಲಸಂಗಮದೇವಾ ?

೨೩೫. ಮರುಳು ತಲೆ, ಹುರುಳು ತಲೆ ನೀನೇ ದೇವಾ. ಹೆಂಗುಸು ಗಂಡುಸು ನೀನೇ ದೇವಾ. ಎಮ್ಮಕ್ಕನ ಗಂಡ ನೀನೇ ದೇವಾ. ಕೂಡಲಸಂಗಮದೇವ ಭ್ರಾಂತಳಿದು ಭಾವ ನಿಂದುದಾಗಿ.

೨೩೬. ಭೂತಿಕನ ಸೀರೆಯ ಸಾತ್ವಿಕ ನೆರೆಯುಟ್ಟರೆ, ಭೂತಿಕ ಸಾತ್ವಿಕನಾದ. ಸಾತ್ವಿಕ ಭೂತಿಕನಾದ. ಈ ಮಾತು ಬಿದ್ದುದು ನೋಡಾ ರಾಜಬೀದಿಯಲ್ಲಿ. ಭೂತ ಕೆಣಕಿದರಿಲ್ಲ. ಮಾತು ಮುಚ್ಚಿದರಿಲ್ಲ. ಓತು ಕೂಡುವ ಅನುವ ಕೂಡಲಸಂಗಮದೇವ ತಾನೇ ಬಲ್ಲ.

೨೩೭. ಐದು ಮಾನವ ಕುಟ್ಟಿ ಒಂದು ಮಾನವ ಮಾಡು ಕಂಡಾ. ಮದವಳಿಗೆ, ಇದು ನಮ್ಮ ಬಾಳುವೆ. ಮದವಳಿಗೆ, ಇದು ನಮ್ಮ ವಿಸ್ತಾರ. ಮದವಳಿಗೆ, ಮದವಳಿದು ನಿಜವುಳಿದಡೆ ಬಳಿಕದು ಸತ್ಯ ಕಾಣಾ ಕೂಡಲಸಂಗಮದೇವ.

---

# ಐಕ್ಯಸ್ಥಲ.

## (೮೪) ಕ್ರಿಯೆಯಲ್ಲಿ ಶೂನ್ಯತ್ವವು.

೨೮೮. ಕಂಗಳು ತುಂಬಿದ ಬಳಿಕ ನೋಡಲಿಲ್ಲ. ಕಿವಿ ತುಂಬಿದ ಬಳಿಕ ಕೇಳಲಿಲ್ಲ. ಕೈಗಳು ತುಂಬಿದ ಬಳಿಕ ಪೂಜಿಸಲಿಲ್ಲ. ಮನ ತುಂಬಿದ ಬಳಿಕ ನೆನೆಯಲಿಲ್ಲ ಮಹಾಂತ ಕೂಡಲಸಂಗಮದೇವನ.

೨೮೯. ಅರಿದುದನರಿಯಲೊಲ್ಲದು. ಅದೆಂತಯ್ಯ ? ಮರೆದುದು ಮರೆಯಲೊಲ್ಲದು. ಅದೆಂತಯ್ಯ ? ಅರಿದು ಮರೆತವ ಮಾನವ. ಕೂಡಲಸಂಗಮದೇವ ತಾನೆ ಬಲ್ಲ.

೨೯೦. ಸ್ವಯಲಿಂಗದನುಭಾವ ತನಗೆ ದೊರೆಕೊಂಡ ಬಳಿಕ ದೇವಲೋಕ ಮರ್ತ್ಯಲೋಕವೆಂಬುದೇನೋ ? ಆವುದರಲ್ಲಿಯೂ ಭೇದವೇನಯ್ಯ? ಕೂಡಲಸಂಗಮದೇವ ಸರ್ವವೂ ನೀವಾದ ಬಳಿಕ ಆಲಸ್ಯ ಉಂಟೇ ?

೨೯೧. ಮಾತಿಲ್ಲ, ನುಡಿ ಇಲ್ಲ. ಏತಕ್ಕೆ ಮುನಿವಿರಿ ? ಮಾತನಾಡಿದರೆ ಕೆಯ್ಯಬೆಳಸೆಂಬುದನರಿಯಿರೇ ಅಯ್ಯ ? ಮಾತುಗೆಟ್ಟಲ್ಲದೆ, ತಾನಾಗಬಾರದು. ಕೂಡಲಸಂಗಮದೇವಯ್ಯ ಮಾತಿಂದ ಬಕ್ಕು ಭವಭಾರ ಘೋರ, ನೋಡಯ್ಯ.

೨೯೨. ಸತ್ಯವಿದೆ, ಸಮಾಧಾನವಿದೆ. ಮನಕ್ಕೆ ಬಾರದಿದೇನಯ್ಯ ? ಸರ್ವಸನುಮತವೆಂಬ ಸುಖವಿದೆ. ಮನಕ್ಕೆ ಸೋಂಕದಿದೇನಯ್ಯ ? ಆನು ನೀನೆಂಬುದೊಂದು ಘನವಿದೆ. ಕೂಡಲಸಂಗಮದೇವ, ಭ್ರಮೆಯೋ.

೨೯೩. ಕುರುಹಿಲ್ಲ, ಕುರುಹಿಲ್ಲ, ಲಿಂಗವೆಂದೆಂಬರೆ. ತೆರಹಿಲ್ಲ, ತೆರಹಿಲ್ಲ, ಜಂಗಮವೆಂದೆಂಬರೆ. ಇದೇ ನೋಡಾ ಶಿವಾಚಾರ, ಇದೇ ನೋಡಾ ಶಿವದೊಡಕು. 'ಆತ್ಮನಾಂ ಪ್ರಕೃತಿಃ ಸ್ವಭಾವಃ' ಎಂದುದಾಗಿ, ಮುಟ್ಟಬಾರದ ಠಾವ ಮರೆಗೊಂಡಿಪ್ಪ ಮಮ ಕರ್ತು ಕೂಡಲಸಂಗಮದೇವ.

೨೯೪. ಆಕಳ ಕಳ್ಳರು ಕೊಂಡೊಯ್ದರೆನ್ನದಿರಿಂಭೋ ! ನಿಮ್ಮ ಧರ್ಮ. ಬೊಬ್ಬಿಡಿದಿರಿಂಭೋ ! ನಿಮ್ಮ ಧರ್ಮ. ಆಡದಿರಿಂಭೋ ! ನಿಮ್ಮ ಧರ್ಮ. ಅಲ್ಲಿ ಉಂಬರೆಯು ಸಂಗ. ಇಲ್ಲಿ ಉಂಬರೆಯು ಸಂಗ. ಕೂಡಲಸಂಗಮದೇವ ಏಕೋಭಾವ.



೨೯೫. ಮೂರರಾಪ್ಯಾಯನ, ಐದು ಬೆಟ್ಟವನಿಂಬುಗೊಂಡು, ಆಕಟಕಟಾ, ಮಾಡಿ ಕೆಟ್ಟರು, ಮಾಡದೆ ಕೆಟ್ಟರು, ನೀಡಿ ಕೆಟ್ಟರು. ನೀಡದೆ ಕೆಟ್ಟರು. ಕೂಡಲಸಂಗಮದೇವನ ಬಸಿರ ಮಧ್ಯದ ಬಯಲ ಸಮಾಧಿಯ ಲಿಕ್ಕದೆ ಕೆಟ್ಟರು.

೨೯೬. ಸಿನೆ ಬಂಜೆಯರಿಬ್ಬರಿಗೊಬ್ಬ ಮಗ ಹುಟ್ಟಿ, ಅವನೆನ್ನ ರಿಣಕೆ ಒಡೆಯನಾದ. ಅವನೆನ್ನ ಧನಕೆ ಒಡೆಯನಾದ ಆನು ಗಳಿಸಿದ ಒಮ್ಮನಕ್ಕೆ ಆಗಲದೆ ಮೋಹಿತನಾದ. ಕೂಡಲಸಂಗಮದೇವನಂತಪ್ಪ ಮಗ ಹುಟ್ಟಿದರೆ, ಇದ್ದನಯ್ಯ ಕಾಯ ಮಾತೆಯಾಗಿ, ಜೀವ ಪಿತನಾಗಿ ನೀನಿರಿಸಿದಂತೆ.

೨೯೭. ಒಲೆಯುಡಿಯನುರುಹಿದಡೆ, ಹೊಗೆ ಗೋಳಕನಾಥನ ಕೊರಳ ಸುತ್ತಿತ್ತು. ಮಹೀತಳನ ಜಡೆ ಸೀಯಿತ್ತು. ಮರೀಚಿಕನ ಸಿರ ಬೆಂದಿತ್ತು. ರುದ್ರನ ಹಾವುಗೆ ಉರಿಯಿತ್ತು. ದೇವಗಣಂಗಳು ನಿವಾಟವಾದರು. ಮಡದಿಯರೈವರು ಮುಡಿಯ ಹಿಡಿದುಕೊಂಡು ಹೋದರು. ಕೂಡಲಸಂಗಮದೇವ ಭಸ್ಮ ಧಾರಿಯಾದ.

೨೯೮. ತಾಪತ್ರಯವೆಂದಡೆ ರೂಪ ಕಾಣುತ್ತ ಕನಲಿದ. ಕೋಪದಲ್ಲಿ ಶಿವಕಳೆಯ ಕರಡಿಗೆಯನೆ ಮುರಿದ. ಧೂಪಗುಂಡಿಗೆಯನೊಡೆದ. ದೀಪಾರತಿಯ ನಂದಿಸಿದ. ಬಾಹ್ಯ ಪರಿಯಾಣದೋಗರವ ತುಡುಕಿದ. ಪಾಪಕರ್ಮ ಕೂಡಲಸಂಗಮದೇವ ನಿಮ್ಮ ಶರಣ.

೨೯೯. ಜೀವಾತ್ಮ ಅಂತರಾತ್ಮನ ಸುದ್ದಿಯ ಬೆಸಗೊಂಡರೆ, ಹೇಳಿಹೆ ಕೇಳಿ ಭೋ. ಹುಸಿಯ ಸಂಕೊಲೆಯಾಗಿರ್ದಲ್ಲಿ, ಕಾದುಕೊಂಡಿರ್ದನೊಬ್ಬ. ಕಥೆ ಕನಸ ಮಾಡಿ ಹೇಳುತಿರ್ದನೊಬ್ಬ. ಪರಾಪರಕೆ ಹೋಗಿ, ಪರಮನ ಸುದ್ದಿಯ ಕೊಂಡು ಬರುತಿಪ್ಪನೊಬ್ಬ. ಅವರಿಬ್ಬರನು ಕೆಡೆಮೆಟ್ಟಿ ಹೋಹಾಗ ಲೋಕ ನಿರ್ಬುದ್ಧಿಗೊಂಡಿತ್ತು ಕೂಡಲಸಂಗಮದೇವಾ.

---

## (೮೫) ಲಿಂಗಪೂಜೆಯಲ್ಲಿ ಶೂನ್ಯತ್ವವು.

೩೦೦. ಪೂಜೆಯುಳ್ಳನ್ನಬರ ಲಿಂಗವ ಹಾಡಿದೆ. ಮಾಟವುಳ್ಳನ್ನಬರ ಜಂಗಮವ ಹಾಡಿದೆ. ಜಿಹ್ವೆಯುಳ್ಳನ್ನಬರ ಪ್ರಸಾದವ ಹಾಡಿದೆ ಈ ತ್ರಿವಿಧ ನಾಸ್ತಿಯಾದ ಬಳಿಕ ಎನ್ನ ನಾ ಹಾಡಿಕೊಂಡೆ ಕಾಣಾ ಕೂಡಲಸಂಗಮದೇವಾ.

೩೦೧. ಏನು ಮಾಡುವೆನೆನ್ನ ಪುಣ್ಯದ ಫಲವು! ಶಾಂತಿಯ ಮಾಡಹೋದರೆ ಬೇತಾಳನಾಯಿತ್ತು! ಕೂಡಲಸಂಗಮದೇವರ ಪೂಜಿಸಿಹೆನೆಂದರೆ ಭಕ್ತಿ ಎಂಬ ಮೃಗವೆನ್ನನಟ್ಟಿ ಬಂದು ನುಂಗಿತ್ತಯ್ಯಾ.

೮೦೨. ಭಿತ್ತಿ ಇಲ್ಲದ ಚಿತ್ತಾರದಂತೆ, ಭಕ್ತಿ ಇಲ್ಲದ ಪ್ರಮಥನಾಗಿ ಎಂದಿಪ್ಪೆನಯ್ಯಾ ? ಸತ್ಯವಿಲ್ಲದ ಶರಣನಾಗಿ ಎಂದಿಪ್ಪೆನಯ್ಯಾ? ಗೆರೆ ಇಲ್ಲದ ಕೋಲಲ್ಲಿ ಉದ್ದರೆಯನಿಕ್ಕಿದ ಭಂಡದ ಹರದನಂತಾದೆನಯ್ಯಾ ಕೂಡಲಸಂಗಮದೇವಾ.

೮೦೩. ಆಯತ ಒಂದೆಡೆಯಲಿ ತೆರನನರಿಯರಾಗಿ ನೋಡಬಾರದು, ನುಡಿಸಬಾರದು. ಅದ ತಿದ್ದಬಾರದ ಡೊಂಕು ಕೂಡಲಸಂಗನ ಭಕ್ತಿ.

೮೦೪. ಲಿಂಗಾರ್ಚನೆಯ ಮಾಡುವ ಮಹಿಮರೆಲ್ಲರು ಸಲುಗೆವಂತರಾಗಿ, ಒಳಗೈದಾರೆ. ಆನು ದೇವ ಹೊರಗಣವನು. ಸಂಭೋಳಿ ಸಂಭೋಳಿ ಎನ್ನುತ್ತ, ಇಂಬಿನಲ್ಲಿದ್ದೇನೆ. ಕೂಡಲಸಂಗಮದೇವ, ನಿಮ್ಮ ನಾಮವಿಡಿದ ಅನಾಮಿಕ ನಾನಯ್ಯ.

೮೦೫. ಶಿವಚಿತ್ತ ಶಿವಜ್ಞಾನ ಭ್ರಮೆ ತಿಳಿದವಂಗಲ್ಲದೆ ಆಚಾರ ಶಿವಾಚಾರ ತಮತಮಗೆ ಸೂರೆಯೇ, ಕೂಡಲಸಂಗನ ಪೂಜಿಸಿದವಂಗಲ್ಲದೆ?

೮೦೬. ಜಲವ ನುಂಗಿತ್ತಯ್ಯ ಎನ್ನ ಕರವು. ಪತ್ರೆಯ ನುಂಗಿತ್ತಯ್ಯ ಎನ್ನ ಶಿಖಿ. ಇದೇನಯ್ಯ ಮಂತ್ರ ಭಿನ್ನವಾಯಿತ್ತು? ಈ ದ್ವಿವಿಧ ಒಂದಾಗದ ಮುನ್ನ ಕೂಡಲಸಂಗಮದೇವರು ಪೂಜೆಗೊಂಡರು.

---

## (೮೬) ಲಿಂಗಾಂಗಸಾಮರಸ್ಯವು.

೮೦೭. ಏನೆಂಬೆನೇನೆಂಬೆ ಒಂದೆರಡಾದುದ? ಏನೆಂಬೆನೇನೆಂಬೆ ಎರಡೊಂದಾದುದ? ಏನೆಂಬೆನೇನೆಂಬೆನವಿರಳ ಘನವ? ಮಹಾದಾನಿ ಕೂಡಲಸಂಗಯ್ಯ ತಾನೇ ಬಲ್ಲ.

೮೦೮. ಘನ ಗಂಭೀರ ಮಹಾಘನದೊಳಗೆ ಘನಕ್ಕೆ ಘನವಾಗಿದ್ದೆನಯ್ಯ. ಕೂಡಲಸಂಗಮದೇವನೆಂಬ ಮಹಾ ಬೆಳಗಿನ ಬೆಳಗಿನೊಳಗಿರ್ದು ಶಬ್ದ ಮುಗ್ಧವಾದುದನೇನೆಂಬೆನಯ್ಯ ?

೮೦೯. ಸಮಸ್ತ ಕತ್ತಲೆಯ ಮುಸುಕವ ಕಳೆದಿಪ್ಪ ಇರವ ನೋಡಾ. ಬೆಳಗಿಂಗೆ ಬೆಳಗು ಸಿಂಹಾಸನವಾಗಿ, ಬೆಳಗು ಬೆಳಗು ಕೂಡಿದ ಕೂಟದ ಸುಖವ ಕೂಡಲಸಂಗಯ್ಯ ತಾನೇ ಬಲ್ಲ.

೮೧೦. ಬಯಲ ರೂಪ ಮಾಡಬಲ್ಲಾತನೇ ಶರಣ. ಆ ರೂಪ ಬಯಲ ಮಾಡಬಲ್ಲಾತನೇ ಲಿಂಗಾನುಭಾವಿ. ಬಯಲ ರೂಪ ಮಾಡಲರಿಯದಿದ್ದರೆ ಎಂತು ಶರಣನೆಂಬೆ? ಆ ರೂಪ ಬಯಲ ಮಾಡಲರಿಯದಿರ್ದಡೆ ಎಂತು ಲಿಂಗಾನುಭಾವಿ ಎಂಬೆ? ಈ ಉಭಯ ಒಂದಾದಡೆ ನಿಮ್ಮಲ್ಲಿ ತೆರಹುಂಟೇ ಕೂಡಲಸಂಗಮದೇವಾ ?



೮೧೧. ಹುತ್ತಕ್ಕೇಸು ಬಾಯಾದಡೇನು? ಸರ್ಪನಿಪ್ಪದು ಒಂದೇ ಸ್ಥಾನ. ಭಾವ ಭಾವಿಸಿ ಭ್ರಮೆಯಳಿದುದು ನೋಡಾ. ಆ ಭಾವ ಭಾವಿಸಲು ನಿರ್ಭಾವ ನೋಡಾ ಕೂಡಲಸಂಗಮದೇವಾ

೮೧೨. ಧರೆ ಗಗನ ದಶದಿಕ್ಕೆಂಬುದ ನಾನರಿಯೆನಯ್ಯಾ! 'ಲಿಂಗಮಧ್ಯೆ ಜಗತ್ಸರ್ವಂ' ಎಂಬುದ ನಾನರಿಯೆನಯ್ಯಾ! ಲಿಂಗಸೋಂಕಿನ ಸುಖದೊಳಗೆ ಕೂಡಲಸಂಗಮದೇವ, ಅಂಬುಧಿಯೊಳಗೆ ಬಿದ್ದ ಆಲಿಕಲ್ಲಿನಂತೆ ಭಿನ್ನಭಾವವರಿಯದೆ 'ಶಿವ, ಶಿವಾ,' ಎನುತಿರ್ದೆನು.

೮೧೩. ನೀನೊಲಿದರೆ ಒಲಿ ಒಲ್ಲದಿರ್ದಡೆ ಸಮವೇಧಿಸಿಕೊಳ್ಳಯ್ಯಾ. ಲಿಂಗದ ಬೆಳಗನೊಳಕೊಂಡು ಸಮವೇಧಿಸಿಕೊಳ್ಳಯ್ಯಾ. ಕೂಡಲಸಂಗಮದೇವಲ್ಲಿ ತದ್ಗತನಾದೆನಯ್ಯಾ.

೮೧೪. ಆಯತವೆಂಬುದು ಭಂಗ. ಸ್ವಾಯತವೆಂಬುದು ಭಂಗ. ಆಯತವನರಿಯೆ. ಸ್ವಾಯತವನರಿಯೆ. ಭಾವದಲ್ಲಿ ಪ್ರತಗೆಟ್ಟುದಾಗಿ, ಆ ಭಾವದಲ್ಲಿ ಜೀವ ಸಂಹಾರಿ, ಕೂಡಲಸಂಗಮದೇವ ಸರ್ವನಿವಾಸಿಯಾಗಿ.

೮೧೫. ಶಿವಾಶಿವಾ, ಮೂರ್ತಿಗೆ ಸತ್ಯ ಶುದ್ಧ ಉಂಟೆಂಬಿರಿ. ಸತ್ಯಶುದ್ಧವುಳ್ಳವಂಗೆ ಗುರುವಿಲ್ಲ. ಸತ್ಯ ಶುದ್ಧವುಳ್ಳವಂಗೆ ಲಿಂಗವಿಲ್ಲ. ಸತ್ಯಶುದ್ಧವುಳ್ಳವಂಗೆ ಜಂಗಮವಿಲ್ಲ. ಸತ್ಯ ಶುದ್ಧವುಳ್ಳವಂಗೆ ಪ್ರಸಾದವಿಲ್ಲ. ಶತ್ಯ ಶುದ್ಧವುಳ್ಳವಂಗೆ ಗಣತ್ವವಿಲ್ಲ. ಕೇಳಿರೇ, ಸತ್ಯ ಶುದ್ಧ ದೇವರಿಗೆ ಉಪಚಾರ ಉಂಟು. ಸತ್ಯ ಶುದ್ಧ ದೇವರಿಗೆ ಧ್ಯಾನ ಮೌನ ಅನುಷ್ಠಾನ ಉಂಟು. ಸತ್ಯ ಶುದ್ಧ ಉಪದೇಶಕ್ಕೆ ಜಪ ತಪ ಸಂಧ್ಯಾ ಸಮಾಧಿ ಹೋಮ ನೇಮ ನಿತ್ಯ ಅಷ್ಟವಿಧಾರ್ಚನೆ ಷೋಡಶೋಪಚಾರ ಉಂಟು. ಸತ್ಯ ಶುದ್ಧ ದೇವರಿಗೆ ಉಪಚಾರ ಉಂಟಾದ ಕಾರಣ, ಇಂತಪ್ಪ ಸತ್ಯ ಶುದ್ಧ ಗುರುವಿಂಗೆ ಶರಣೆನ್ನೆ. ಇಂತಪ್ಪ ಸತ್ಯ ಶುದ್ಧ ಲಿಂಗಕ್ಕೆ ಶರಣೆನ್ನೆ. ಇಂತಪ್ಪ ಸತ್ಯ ಶುದ್ಧ ಜಂಗಮಕ್ಕೆ ಶರಣೆನ್ನೆ. ಇಂತಪ್ಪ ಸತ್ಯ ಶುದ್ಧ ಪ್ರಸಾದಕ್ಕೆ ಕೆಯ್ಯಾನೆ. ಇವರೆಲ್ಲರು ಬ್ರಹ್ಮನ ಮಕ್ಕಳು. ಎನಗೆ ಸತ್ಯವು ಇಲ್ಲ, ಅಸತ್ಯವು ಇಲ್ಲ, ಶುದ್ಧವು ಇಲ್ಲ. ಆವ ಸಹಜವಿಲ್ಲದ ಲಿಂಗೈಕ್ಯ ಕಾಣಾ ಕೂಡಲಸಂಗಮದೇವಾ.

೮೧೬. ಮಾಡುವ ಭಕ್ತನ ಕಾಯ ಬಾಳೆಯ ಕಂಭದಂತಿರಬೇಕು. ಮೆಲ್ಲ ಮೆಲ್ಲನೆ ಹೊರೆ ಎತ್ತಿ ನೋಡಿದಡೆ, ಒಳಗೆ ಕೆಚ್ಚಿಲ್ಲದಿರಬೇಕು. ಮೇಲಾದ ಫಲವ ನಮ್ಮವರು ಬೀಜ ಸಹಿತ ನುಂಗಿದರು. ಎನಗಿನ್ನಾವ ಭಯವಿಲ್ಲ ಕಾಣಾ ಕೂಡಲಸಂಗಮದೇವಾ.

೮೧೭. ಭಕ್ತಿ ಎಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕುರಿಸಿ, ಲಿಂಗವೆಂಬ ಎಲೆಯಾಯಿತ್ತು. ಲಿಂಗವೆಂಬ ಎಲೆಯ ಮೇಲೆ ವಿಚಾರವೆಂಬ ಹೂವ್ವಾಯಿತ್ತು. ಆಚಾರವೆಂಬ ಕಾಯಾಯಿತ್ತು. ನಿಷ್ಪತ್ತಿ ಎಂಬ ಹಣ್ಣಾಯಿತ್ತು. ನಿಷ್ಪತ್ತಿ ಎಂಬ ಹಣ್ಣು ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ, ಕೂಡಲ ಸಂಗಮದೇವ ತನಗೆ ಬೇಕೆಂದೆತ್ತಿಕೊಂಡ.

೮೧೮. ಮನೆಯ ಗಂಡನ ಮನೆವಾರ್ತೆಯನೇನ ಹೇಳುವೆನವ್ವ! ಅಂಗ ವಿದ್ಯೆಯನೊಲ್ಲ. ಕಂಗಳೊಳಗಣ ಕಸವ ಕಳೆದಲ್ಲದೆ ನೋಡಲೀಯ್ಯ ಕೆಯ್ಯ ತೊಳೆದಲ್ಲದೆ ಮುಟ್ಟಲೀಯ್ಯ. ಕಾಲತೊಳೆದಲ್ಲದೆ, ಹೊದ್ದಲೀಯ್ಯ. ಇಂತು ಸರ್ವಾಂಗವ ತಲೆದೊಳೆದ ಕಾರಣ ಕೂಡಲಸಂಗಮದೇವನೆನ್ನ ಕೂಡಿ ಕೊಂಡೆನವ್ವಾ.

೮೧೯. ಅಳಿಯನ ಕಂಡರೆ, ನಾಚೆಂಬೆ ಮಗಳೇ. ಅಳಿಯನ ಕಂಡರೆ, ತೊಲಗೆಂಬೆ ಮಗಳೇ. ನಾಚುವರೆ ಮರೆ ಇಲ್ಲ. ತೊಲಗುವರೆ ನೆಲನಿಲ್ಲ. ಇಬ್ಬರಿಗೊಬ್ಬ ಗಂಡನಾದ ಬಳಿಕ, ಇನ್ನೆಲ್ಲಿಯ ಮರೆ ಮಗಳೇ? ಕೂಡಲ ಸಂಗಮದೇವನೆಂಬ ಗಂಡನಾದ ಬಳಿಕ, ಇನ್ನೆಲ್ಲಿಯ ಮರೆ ಮಗಳೇ?

೮೨೦. ನಾನೊಮ್ಮೆ ಬೇಂಟೆಯ ಹೋದರೆ ಭಸಿತಕ್ಕಾಹುತಿಯನಿಕ್ಕಿ ಹೆನೆಂದು ಸಾಸಿರದೇಳುನೂರು ವರುಷ ಒಬ್ಬ ರಾಜನ ಕೊಂದೆನು. ಅವನ ಹೆಂಡಿತಿ ಐವತ್ತೆರಡು ಕಣ್ಣವಳು. ಅವಳು ತನ್ನ ಹೂಮುಡಿಯ ಬಿಟ್ಟು ಅತ್ತಳು. ಅವಳ ಬಾಯಲ್ಲಿ ಅಜ ಬಿದ್ದ. ಕಂಗಳಲ್ಲಿ ಧೂಮಕೇತ, ಬಿದ್ದ. ಕೂಡಲಸಂಗಮದೇವರ ದೇವತ್ವ ಕೆಟ್ಟಿತ್ತು.

೮೨೧. ಆ ಭಸ್ಮತಾಗಿ, ಬ್ರಹ್ಮ ತನ್ನ ಕಪಾಲವಿಡಿದನು. ಗಣನಾಥನ ಐವತ್ತೆರಡು ಸರ ಹರಿದು ಬಿದ್ದವು. ಆ ಭಸ್ಮತಾಗಿ ಅಂಡಜ ಮುಗ್ಧೆಯ ಮೂರು ಮೊಲೆ ಹರಿದು ಬಿದ್ದವು. ನಾದಪ್ರಿಯ ನಂದಿಯನೇರಿಕೊಂಡು, ಅತೀತನ ಮೇಲೆ ಆನಂದಸಿಂಹಾಸನವನಿಕ್ಕಿ, ಕುಳಿತು ಕೂಡಲಸಂಗಮದೇವರ ದೇವತ್ವ ಕೆಟ್ಟಿತ್ತು.

---

# ಅಷ್ಟಾವರಣಗಳು.

## ಗುರು.

### (೧) ಗುರುಕರುಣ.

೧. ಮುತ್ತು ಉದಕದಲಾಗದು, ಉದಕ ಮುತ್ತಿನಲಾಗದು, ತತ್ವ ಘಟಿಸಿದ ಸುಮುಹೂರ್ತದಲಲ್ಲದೆ. ಚಿತ್ತ ವೇದ್ಯವಾಗದು, ಸದ್ಗುರುವಿನ ಕರುಣಕ್ಕಲ್ಲದೆ. ಕರ್ತು ಕೂಡಲಸಂಗಮದೇವರ ಒಲವಿನುದಯದ ಚಿತ್ರವಿಡಿದಂಗಲ್ಲದೆ ಶಿವತತ್ವ ಸಾಹಿತ್ಯವಾಗದು.

೨. ಗುರುವಚನದಿಂದಲ್ಲದೆ ಲಿಂಗವೆಂದೆನಿಸದು. ಗುರುವಚನ ದಿಂದಲ್ಲದೆ ನಿತ್ಯವೆಂದೆನಿಸದು. ಗುರುವಚನದಿಂದಲ್ಲದೆ ನೇಮವೆಂದೆನಿಸದು. ತಲೆ ಇಲ್ಲವಟ್ಟೆಗ ಪಟ್ಟವ ಕಟ್ಟುವ ಉಭಯಭ್ರಷ್ಟರ ಮೆಚ್ಚುವನೇ ನಮ್ಮ ಕೂಡಲಸಂಗಮದೇವ?

೩. ಮಡಕೆಯ ಮಾಡುವರೆ ಮಣ್ಣೇ ಮೊದಲು. ತೊಡಿಗೆಯ ಮಾಡುವರೆ ಹೊನ್ನೇ ಮೊದಲು. ಶಿವಪಥವನರಿವಡೆ ಗುರು ಪಥವೇ ಮೊದಲು. ಕೂಡಲಸಂಗಮದೇವನರಿವುದಕ್ಕೆ, ಶರಣರ ಸಂಗವೇ ಮೊದಲು.

೪. ಕೇಳಿರೇ ಕೇಳಿರೇ ಹಿರಿಯರು ಗುರುವಿನುಪದೇಶವನು. ಒಂದು ಗೀಜಗನುಪದೇಶದಿಂದ ಪೌಲಸ್ತ್ಯನಂದು ಪಡೆಯನೇ ದಶಶಿರನ? ಆ ದಶ ಶಿರನು ಶಿರವ ಪೇದಿಕ್ಕಿ ಪರಮಸಿದ್ಧಿಡೆಯ ಕಾಣದೆ ಇಳೆಯಲ್ಲಿ ಕರುಳ ತಂತಿಯ ಉಪದೇಶದಿಂದ ಅಸುರನಂದು ಪಡೆಯನೇ ಸುರಪದವ? ತರುಣಿ ಹರಿಣಿಯ ಉಪದೇಶದಿಂದ ಗತಿಪಥ ಮುಕ್ತಿಬಟ್ಟೆಯ ಹತ್ತನೇ ವಿನಾ ಶಕ್ತಿ ರಾಯನು? ರಂಭೆಯುಪದೇಶದಿಂದ ಶಂಭುವಿನೋಲಗದೊಳಗೆ ಕುಳ್ಳಿರನೇ ಶ್ವೇತನು? ಕೂಡಲಸಂಗನ ಶರಣರ ಉಪದೇಶವ ಕೇಳಿದವರಿಗೆ ದುರಿತ ಪಾಪಂಗಳು ಕೆಟ್ಟು ಹೋಗಿ ಮನ ನಿರತರಾಗಿಪ್ಪರು ಲಿಂಗದಲ್ಲಿ.

೫. ಸುಪಥಮಂತ್ರದುಪದೇಶವ ಕಲಿತು, ಯುಕ್ತಿಗೆಟ್ಟು ನಡೆವಿರಯ್ಯಾ. ತತ್ವಮಸಿ ಎಂಬುದನರಿದು ಕತ್ತಲೆಗೊಡಹಿರಯ್ಯಾ. ವೇದವಿಪ್ರವಿಚಾರಿಸಿ ನೋಡಲು, ಉಪದೇಶಪರೀಕ್ಷೆ ನಾಯಕನರಕವೆಂದುದು ಕೂಡಲಸಂಗನ ವಚನದ ಸೂಚನೆ.

೬. ಪೂರ್ವಜನ್ಮ ನಿವೃತ್ತಿಯಾಗಿ, ಗುರುಕಾರುಣ್ಯವಿಡಿದಂಗೆ ಭವವೆಲ್ಲಿಯದೋ? ಬಂಧನವೆಲ್ಲಿಯದೋ? ಸಂಕಲ್ಪ ವಿಕಲ್ಪವೆಂಬ ಸಂದೇಹವಳಿದಂಗೆ ಕೂಡಲಸಂಗಮದೇವರ ತ್ರಿಸಂಧ್ಯಾ ಕಾಲದಲ್ಲಿ ಮಾಣದೆ ನೆನೆವಂಗೆ?

೭. ನೋಡಿ, ನೋಡಿ, ಮಾಡುವ ನೇಮ ಸಲ್ಲವು ಸಲ್ಲವು. ತನು ಉದ್ದಿಶ್ಯ ಮನ ಉದ್ದಿಶ್ಯ ಮಾಡುವ ನೇಮವು ಸಲ್ಲವು ಸಲ್ಲವು. ಗುರುಪಥವ ಮೀರಿ ಮಾಡುವ ನೇಮ ಸಲ್ಲವು, ಸಲ್ಲವು. ಕೂಡಲಸಂಗಮದೇವ, ಇವು ನಿಮ್ಮ ನಿಜದೊಳಗೆ ನಿಲ್ಲವು, ನಿಲ್ಲವು.

೮. ಸಗಣಿಯ ಜಿನಕಂಗೆ ಸಂಪಿಗೆಯರಳಲ್ಲಿ ಪೂಜಿಸಿದರೆ, ರಂಜನೆಯಹುದಲ್ಲದೆ, ಅದರ ಗಂಜಳ ಬಿಡದಣ್ಣ. ಮಣ್ಣ ಪುತ್ಥಳಿಯ ಮಾಣದೆ ಜಲದಲ್ಲಿ ತೊಳೆದರೆ, ನಿಚ್ಚನಿಚ್ಚಕ್ಕೆ ಕೆಸರಹುದಲ್ಲದೆ, ಅದರಂಚ್ಚುಗ ಬಿಡದಣ್ಣ ಲೋಕದ ಮಾನವಂಗೆ ಶಿವದೀಕ್ಷೆಯ ಕೊಟ್ಟರೆ, ಕೆಟ್ಟವನೇಕೆ ಸದ್ಭಕ್ತನಹನು ಕೂಡಲಸಂಗಮದೇವಾ?

೯. ಕಬ್ಬುನದ ಕೋಡಗನ ಪರುಷ ಮುಟ್ಟಲು, ಹೊನ್ನಾದರೇನು, ಮತ್ತೇನಾದರೇನು, ತನ್ನ ಮುನ್ನಿನ ರೂಹ ಬಿಡದನ್ನಕ್ಕ ಕೂಡಲಸಂಗಮದೇವ ನಿಮ್ಮ ನಂಬಿಯೂ ನಂಬದ ಡಂಭಕರಿಗಯ್ಯಾ?

೧೦. ಕುಂಬಳದ ಕಾಯಿಗೆ ಕಬ್ಬುನದ ಕಟ್ಟ ಕೊಟ್ಟರೆ ಕೊಳೆವುದಲ್ಲದೆ, ಬಲುಹಾಗಬಲ್ಲುದೇ? ಅಳಿಮನದವಂಗೆ ಶಿವದೀಕ್ಷೆಯ ಕೊಟ್ಟರೆ, ಭಕ್ತಿ ಎಂತಹುದೋ? ಮುನ್ನಿನಂತೆ. ಕೂಡಲಸಂಗಯ್ಯ ಮನಹೀನನ ಮೀಸಲ ಕಾಯ್ದಿರಿಸಿದಂತೆ.

೧೧. ಸಮರತಿ. ಸಮಕಳೆ, ಸಮಸುಖ, ಸ್ವಾನುಭಾವ, ಹಿರಿದು ಕಿರಿದಾದುದನಾರು ಬಲ್ಲರು? ಪಾಷಾಣ ಪರೀಕ್ಷನಂತನಂತೆ, ಗುರುವಿಲ್ಲದವರು ಅಂತಿರಲಿ. ಕೂಡಲಸಂಗಮದೇವ, ಗುರುವುಳ್ಳವರ ನಿಜವಿಂತುಟು.

---



# ಲಿಂಗ.

## (೧) ಇಷ್ಟಲಿಂಗ.

೧೨. ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ. ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮುಗುಟ. ||ಶ್ಲೋಕ|| ಪಾದಭಿನ್ನಾಹಿ ಲೋಕೇನ। ಮೌಳಿ ಬ್ರಹ್ಮಾಂಡ ಭಿತ್ತಯೋಃ॥ ಭುಜಃ ಪ್ರಾಂತ ದಿಗಂತಾನಾಂ। ಭೂತಾಯ ಪತಯೇ ನಮಃ॥ ಎಂದುದಾಗಿ ಅಗಮ್ಯ ಅಪ್ರಮಾಣ ಅಗೋಚರ ಅಪ್ರತಿಮ ಲಿಂಗವೇ, ನೀವೆನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯ ಕೂಡಲಸಂಗಮದೇವ.

೧೩. ಲಜ್ಜೆಗೆಟ್ಟೆನು, ನಾಣುಗೆಟ್ಟೆನು, ಕುಲಗೆಟ್ಟೆನು, ಛಲಗೆಟ್ಟೆನು. ಸಂಗಾ ನಿಮ್ಮ ಪೂಜಿಸಿ ಭವಗೆಟ್ಟೆನು ನೋಡಯ್ಯ. ಕೂಡಲ ಸಂಗಮದೇವಯ್ಯ ನಿಮ್ಮ ಮುಟ್ಟಿ ಹುಟ್ಟುಗೆಟ್ಟೆನು.

---

## (೨) ಲಿಂಗಧಾರಿಯು ಸದ್ವರ್ತನೆಯುಳ್ಳವನಾಗಿರುವುದು.

೧೪. ಪರುಷ ಮುಟ್ಟಿದ ಬಳಿಕ, ಕಬ್ಬುನವಾಗದು ನೋಡಾ! ಲಿಂಗ ಮುಟ್ಟಿದ ಬಳಿಕ, ಕುಚಿತಾಚಾರವಾಗದು, ಕೂಡಲಸಂಗನ ಶರಣರು ಅನ್ಯವನರಿಯರಾಗಿ.

೧೫. ಆರಾಧ್ಯ ಪ್ರಾಣಲಿಂಗವೆಂದರಿದು, ಪೂರ್ವಗುಣವಳಿದು, ಪುನರ್ಜಾತನಾದ ಬಳಿಕ, ಸಂಸಾರ ಬಂಧುಗಳಿನ್ನವರೆಂದರೆ, ನಂಟುಭಕ್ತಿ ನಾಯಕ ನರಕ. ಇಂತೆಂದುದು ಕೂಡಲಸಂಗನ ವಚನ

೧೬. ಲಿಂಗದುಂಡಿಗೆಯ ಪಶುವಾನಯ್ಯ. ವೇಷಧಾರಿಯಾನಯ್ಯ. ಉದರಪೋಷಕ ನಾನಯ್ಯ. ಕೂಡಲಸಂಗನ ಶರಣರ ಧರ್ಮದ ಕವಿಲೆಯಾನು.

೧೭. ಲಿಂಗವ ಪೂಜಿಸಿ ಫಲವೇನಯ್ಯ, ಸಮರತಿ ಸಮಕಳೆ ಸಮಸುಖವನರಿಯದನ್ನಕ್ಕ? ಲಿಂಗವ ಪೂಜಿಸಿ ಫಲವೇನಯ್ಯ, ಕೂಡಲಸಂಗಮದೇವರ ಪೂಜಿಸಿ ನದಿಯೊಳಗೆ ನದಿ ಬೆರೆದಂತಾಗದನ್ನಕ್ಕ?

೧೮. ಅರ್ಥ ರೇಖೆ ಇದ್ದಲ್ಲಿ ಫಲವೇನು, ಆಯುಷ್ಯರೇಖೆ ಇಲ್ಲವನ್ನಕ್ಕ? ಷಂದೆಯ ಕೈಯ್ಯಲ್ಲಿ ಚಂದ್ರಾಯುಧವಿದ್ದು ಫಲವೇನು ? ಅಂಧಕನ ಕೈಯ್ಯಲ್ಲಿ ದರ್ಪಣವಿದ್ದು ಫಲವೇನು? ಮರ್ಕಟನ ಕೈಯ್ಯಲ್ಲಿ ಮಾಣಿಕವಿದ್ದು ಫಲವೇನು? ನಮ್ಮ ಕೂಡಲಸಂಗನ ಶರಣರನರಿಯದವರ ಕೈಯ್ಯಲು ಲಿಂಗವಿದ್ದು ಫಲವೇನು, ಶಿವಪಥವನರಿಯದನ್ನಕ್ಕ ?

೧೯. ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದರೆ, ಹಿಡಿದಿರ್ದ ಲಿಂಗವು ಘಟಸರ್ಪನಯ್ಯ. ನುಡಿಯಲು ಬಾರದು. ನಡೆಯಲು ಬಾರದು. ಲಿಂಗದೇವನೆಂದೆಂಬುವ್ರೋ. ಅಯ್ಯಾ ಬಡವನ ಕೋಪ ದವಡೆಗೆ ಮೃತ್ಯುವಾದಂತೆ ಕಡೆಗೆ ದಾಂಟದು ಕಾಣಾ ಕೂಡಲಸಂಗಮದೇವಾ.

---

## ಜಂಗಮ.

### (೪) ಲಿಂಗಜಂಗಮ ಸಂಬಂಧ.

೨೦. ಭಿತ್ತಿ ಇಲ್ಲದೆ ಬರೆಯಬಹುದೇ ಚಿತ್ತಾರವ ? ಬಿತ್ತಿ ಬೆಳೆಯಬಹುದೆ ಧರೆ ಇಲ್ಲದೆ? ಜಂಗಮವಿಲ್ಲದೆ ಲಿಂಗಾರ್ಚನೆಯ ಮಾಡಬಹುದೇ ? ರೂಢಿಗೀಶ್ವರನ ಭೇದಿಸಬಹುದೇ ? ಒಡಲಿಲ್ಲದ ನಿರಾಳ ಕರ್ತು ಕೂಡಲಸಂಗಮದೇವ ಜಂಗಮಮುಖಲಿಂಗವಾದನಾಗಿ ಮತ್ತೊಂದನರಿಯೆನಯ್ಯ.

೨೧. ನಿನ್ನ ನಾನರಿಯದ ಮುನ್ನ ನೀನೆಲ್ಲಿದ್ದೆ ? ಎನ್ನೊಳಗಿರ್ದು, ನಿನ್ನ ತೋರಲಿಕೆ ನೀನೆ ರೂಪಾದೆ. ಇನ್ನು ಜಂಗಮವೇ ಲಿಂಗವೆಂದು ನಂಬಿದೆ ಕೂಡಲಸಂಗಮದೇವ.

೨೨ ಎಡದ ಕೈಯ್ಯಲು ನಿಗಳವನಿಕ್ಕಿ, ಬಲದ ಕೈಯ್ಯ ಕಡಿದುಕೊಂಡರೆ, ನೋಯದಿಪ್ಪುದೇ ? ಪ್ರಾಣ ಒಂದಾಗಿ ದೇಹ ಬೇರಿಲ್ಲ. ಲಿಂಗವ ಪೂಜಿಸಿ ಜಂಗಮವನುದಾಸೀನವ ಮಾಡಿದರೆ, ಬೆಂದೆನಯ್ಯ ನಾನು ಕೂಡಲಸಂಗಮದೇವಾ.

೨೩. ಅಗ್ನಿಯಾಧಾರದಲ್ಲಿ ಕಬ್ಬುನ ನೀರುಂಬುದಯ್ಯ. ಭೂಮಿಯಾಧಾರದಲ್ಲಿ ವೃಕ್ಷ ನೀರುಂಬುದಯ್ಯ. ಜಂಗಮವಾಪ್ಯಾಯನವಾದರೆ, ಲಿಂಗಸಂತುಷ್ಟಿಯಹುದಯ್ಯ. ॥ಸಾಕ್ಷಿ॥ ವೃಕ್ಷಸ್ಯ ವದನಂ ಭೂಮಿಃ। ಸ್ಥಾವರಸ್ಯತು



ಜಂಗಮಃ। ಭೂಷಾ ವೃಕ್ಷಸ್ಯರೇಲ್ಲಿಂಗಂ। ತೃಪ್ತಿಮಾಪ್ನೋತಿ ಶಾಂಕರೀ ॥ ಇದು ಕಾರಣ ಕೂಡಲಸಂಗಮದೇವರಲ್ಲಿ ಜಂಗಮವಾಪ್ಯಾಯನವಾದರೆ ಲಿಂಗಸಂತುಷ್ಟಿ.

೨೪. ಮರಕ್ಕೆ ಬಾಯಿ ಬೇರೆಂದು ತಳಕ್ಕೆ ನೀರನೆರೆದಡೆ, ಮೇಲೆ ಪಲ್ಲವಿಸಿತ್ತು ನೋಡಾ ! ಲಿಂಗದ ಬಾಯಿ ಜಂಗಮವೆಂದು ಪಡಿಪದಾರ್ಥವ ನೀಡಿದಡೆ, ಮುಂದೆ ಸಕಳಾರ್ಥವನೀವನು. ಆ ಜಂಗಮವ ಹರನೆಂದು ಕಂಡು ನರನೆಂದು ಭಾವಿಸಿದಡೆ, ನರಕ ತಪ್ಪದು ಕಾಣಾ ಕೂಡಲಸಂಗಮದೇವಾ.

೨೫ ಅರಸನ ಕಂಡು ತನ್ನ ಪುರುಷನ ಮರೆದರೆ, ಮರನನೇರಿ ಕೈಯ್ಯ ಬಿಟ್ಟಂತಾಬೆನಯ್ಯ. ಇಹಲೋಕಕ್ಕೆ ದೂರ, ಪರಲೋಕಕ್ಕೆ ದೂರ, ನಮ್ಮ ಕೂಡಲಸಂಗಮದೇವ ಜಂಗಮಮುಖ ಲಿಂಗವಾದ ಕಾರಣ.

೨೬. ಭೂಮಿಯೊಳಗೆ ನಿಧಾನವಿದ್ದುದ ಅಂಜನಸಿದ್ಧರು ತೋರುವರಯ್ಯ. ಅಂಜಲು ಬೇಡ ಕಂಡಾ. ಮನದಲ್ಲಿ ಸಂದೇಹವ ಮಾಡದಿರು ಕಂಡಾ. ಜಂಗಮದೊಳಗೆ ಲಿಂಗಯ್ಯನಿದ್ದನೆಂದು ನಂಬಿಗೆಯುಳ್ಳರೆ, ತನ್ನ ತೋರುವ ಕೂಡಲಸಂಗಮದೇವಯ್ಯ.

೨೭. ಲಿಂಗದರ್ಶನ ಕರಮುಟ್ಟಿ, ಜಂಗಮದರ್ಶನ ಶಿರಮುಟ್ಟಿ, ಆವುದು ಘನವೆಂಬೆನಾವುದು ಕಿರಿದೆಂಬೆ ? ತಾಳಸಂಪುಟಕ್ಕೆ ಬಾರದ ಘನವ ಅರ್ಪಿಸಹೋದರೆ, ಅರ್ಪಣ ಮುನ್ನಿಲ್ಲ. ಗಮನ ನಿರ್ಗಮನವಾಯಿತ್ತು. ಈ ಉಭಯ ಭೇದವನರಿಯರಾಗಿ ಜಂಗಮವೇ ಲಿಂಗ ಕೂಡಲಸಂಗಮದೇವಾ.

೨೮ ಅಷ್ಟದಳ ಕಮಲದ ಆತ್ಮನೊಳಗೆ ನೆಟ್ಟನೆ ಪುನಃಪ್ರೇರಕನೆಂದು ನಂಬಿದೆ, ಮತ್ತೊಂದನರಿಯದೆ ಮತ್ತೊಂದ ಕೇಳದೆ ನಿತ್ಯ ಸ್ವತಂತ್ರನು ನೀನೆ. ದೃಷ್ಟ ಲಿಂಗಜಂಗಮ ಒಂದೇ ಎಂದಿಪ್ಪೆನು ಪ್ರಭುವೇ ಕೂಡಲಸಂಗಮದೇವ.

---

### (೫) ಸ್ಥಾವರಜಂಗಮ ಸಂಬಂಧ.

೨೯. ದ್ವೈತಾದ್ವೈತವನೋದಿ ಏನು ಮಾಡುವಿರಯ್ಯಾ, ನಮ್ಮ ಶರಣರಿಗುರಿಗರಗಾಗಿ ಕರಗದನ್ನಕ್ಕ, ಸ್ಥಾವರ ಜಂಗಮ ಒಂದೇ ಎಂದು ನಂಬದನ್ನಕ್ಕ ? ಕೂಡಲಸಂಗಮದೇವ ಬರಿಯ ಮಾತಿನ ಮಾಲೆಯಲೇನಹುದು ?

೩೦. ಕನ್ನಡಿಯ ನೋಡುವ ಅಣ್ಣಗಳಿರಾ, ಜಂಗಮವ ನೋಡಿರೇ. ಜಂಗಮದೊಳಗೆ ಲಿಂಗಯ್ಯ ಸನ್ನಿಹಿತನಾಗಿಪ್ಪ. ಸ್ಥಾವರ ಜಂಗಮ ಒಂದೇ ಎಂದುದು ಕೂಡಲಸಂಗನ ವಚನ.

೩೧. ಆರಾಧನೆಯ ಮಾಡಿದರೆ ಅಮೃತದ ಬೆಳಸು. ವಿರೋಧಿಸಿದಡೆ ವಿಷದ ಬೆಳಸು. ಇದು ಕಾರಣ ಲಿಂಗಜಂಗಮಕ್ಕಂಜಲೇಬೇಕು. ಸ್ಥಾವರ ಜಂಗಮ ಒಂದೇ ಎಂದಡೆ, ಕೂಡಲಸಂಗಮದೇವ ಶರಣಸನ್ನಿಹಿತನು.

೩೨. ಎರೆದಡೆ ನೆನೆಯದು. ಮರೆದಡೆ ಬಾಡದು ಹುರುಳಿಲ್ಲ ಹುರುಳಿಲ್ಲ. ಲಿಂಗಾರ್ಚನೆ. ಕೂಡಲಸಂಗಮದೇವ, ಜಂಗಮಕ್ಕೆರೆದಡೆ ಸ್ಥಾವರ ನೆನೆಯಿತ್ತು.

೩೩ ಸ್ಥಾವರ ಜಂಗಮ ಒಂದೇ ಎಂದು ಇದಿರ ನುಡಿವೆ. ನಾನೆಡ ಹುತಿಪ್ಪೆ. ಸಹಜನಲ್ಲಯ್ಯ ಆನು ಸಮ್ಯಕ್ಕನಲ್ಲಯ್ಯ, ಆನುಭಯಲಿಂಗಸಂಗಿ ಎಂಬೆನು. ಈ ನುಡಿ ನುಡದಿಹುದೇ ಕೂಡಲಸಂಗಮದೇವಾ ?

---

## (೬) ಭಕ್ತಜಂಗಮ ಸಂಬಂಧ.

೩೪. ಮನದ ಕೊನೆಯ ಮೊನೆಯ ಮೇಲೆ ಮನೆಯ ಮಾಡಿಕೊಂಡಿಪ್ಪನೊಬ್ಬ ದಾಸೋಹಿ. ಆದಿವಿಡಿದು ಬಂದಾತನೇ ಭಕ್ತ. ಅನಾದಿವಿಡಿದು ಬಂದಾತನೇ ಜಂಗಮ. ಆದಿ ಗುರು ಅನಾದಿ ಶಿಷ್ಯ. ಈ ಉಭಯ ಕುಳಸ್ಥಳವ ಬಲ್ಲಡೆ, ಆತ ಲಿಂಗಸಂಬಂಧಿ ಕೂಡಲಸಂಗಮದೇವ.

೩೫. ಸ್ಥಾವರ ಭಕ್ತಂಗೆ ಸೀಮೆಯುಲ್ಲದೆ, ಘನ ಲಿಂಗಜಂಗಮಕ್ಕೆ ಸೀಮೆಯುಂಟೇ ? ಅಂಬುಧಿಗೆ ಸೀಮೆಯಲ್ಲದೆ, ಹರಿವ ನದಿಗೆ ಸೀಮೆ ಎಲ್ಲಿಯದೋ ? ಭಕ್ತಂಗೆ ಸೀಮೆಯಲ್ಲದೆ ಜಂಗಮಕ್ಕೆ ಸೀಮೆಯುಂಟೇ ಕೂಡಲಸಂಗಮದೇವ?

೩೬. ಎನ್ನಾಪತ್ತು ಸುಖ ದುಃಖವನಿನ್ನಾರಿಗೆ ಹೇಳುವೆ ? ಶರಣಸ್ಥಲದವರಿಗೆ ಹೇಳಿದರೆ ಮಚ್ಚರ. ಸವತಿ ಮತ್ಸರ- ಬೇವು ಬೆಲ್ಲ ಉಂಟೇ? ಇನ್ನಾರಿಗೆ ಹೇಳುವೆ ? ಕೂಡಲಸಂಗಮದೇವ ಜಂಗಮವಾಗಿ ಬಂದು ಎನ್ನ ಮನದ ಸೂತಕವ ಕಳೆಯುಯ್ಯಾ.



೩೭. ಜಂಗಮವಿಲ್ಲದ ಮಾಟ ಕಂಗಳಿಲ್ಲದ ನೋಟ. ಹಿಂಗಿತು ಶಿವಲೋಕ. ಇನ್ನೆಲ್ಲಿಯದಯ್ಯ ? ಲಿಂಗಕ್ಕೆ ಮಾಡಿದ ಬೋನವ ಸಿಂಬಕ ತಿಂಬಂತೆ. ಸಮಯೋಚಿತವನರಿಯದೆ ಉದರವ ಹೊರೆವರ ನರಕದಲಿಕ್ಕದೆ ಮಾಣ್ಬನೇ ಕೂಡಲಸಂಗಮದೇವ ?

೩೮. ಅಷ್ಟವಿಧಾರ್ಚನೆ ಷೋಡಶೋಪಚಾರಂಗಳನು ಅರಸರಿಯದ ಬಿಟ್ಟಿಯ ಮಾಡುವೆನು. ಎನ್ನ ತಾಗಿದ ಸುಖವ ಜಂಗಮಕ್ಕರ್ಪಿಸಲರಿಯದ ಉಪಚಾರಿಯಾನು. ಸ್ಥಾವರ ಜಂಗಮವನರಿಯದ ಪೂಜಕ ನಾನು. ಮತ್ತೆ ನಾಚದೆ ಕೂಡಲಸಂಗಮದೇವಯ್ಯ ಜಂಗಮವೆನ್ನ ಪ್ರಾಣಲಿಂಗವೆಂಬೆನು.

೩೯. ಭಕ್ತನಾಗಿ ಲಿಂಗಜಂಗಮವ ಪೂಜಿಸಬೇಕಲ್ಲದೆ, ಭಕ್ತನಾಗಿ ತನ್ನ ತಾ ಪೂಜಿಸಿಕೊಂಬುದು ಎಂತಯ್ಯ ? ಸ್ವಾಮಿಭೃತ್ಯ ಸಂಬಂಧವು ಎಂತಯ್ಯ ಪೂರೈಸುವುದು ? ಕೂಡಲಸಂಗಮದೇವ ಕಣ್ಣ ಕಟ್ಟಿ ಕನ್ನಡಿಯ ತೋರುವಂತೆ.

---

## (೭) ಜಂಗಮಸನ್ನಿಹಿತ ಲಿಂಗಾರ್ಚನೆ.

೪೦. ಜಂಗಮವಿರಹಿತ ಲಿಂಗಾರ್ಚನೆ ಮಳಲಲೆರೆದ ಜಲವಂತೆ. ಜಂಗಮಸನ್ನಿಹಿತ ಲಿಂಗಾರ್ಚನೆ ಇದೇ ಭಕ್ತಿಗೆ ಪಥವಯ್ಯ. ಜಂಗಮ ಪ್ರಸಾದ ಭೋಗೋಪಭೋಗವು ಎನಗಿದೇ ಲಿಂಗಾರ್ಚನೆ. ಬೇರೆ ಮತ್ತೊಂದ ನೆನೆದೆನಾದರೆ ಕೂಡಲಸಂಗಮದೇವ ನರಕವಲಿಕ್ಕುವ.

೪೧. ಹಿಡಿವಡೆಯನೆ ಕಾಸಿ ಹಿಡಿದ ಕೈ ಬೆಂದು ಮಿಡುಮಿಡನೆ ಮಿಡುಕುವ ಮರುಳು ಮಾನವನ ನಾನೇನೆಂಬೆ ? ಬಡವನೆಂದೆನಬೇಡ ಲಾಂಛನಧಾರಿಯನು. ಕಡು ಸ್ನೇಹದಿಂದವರ ಪೂಜೆಯ ಮಾಡುವುದು. ನಿಜವಡಗಿದ ರೂಪು ನಿರ್ವಯಲ ಸ್ಥಾನ, ನಡೆ ಲಿಂಗಜಂಗಮ ಕೂಡಲಸಂಗಮದೇವಾ.

೪೨. ಬತ್ತೀಸಾಯುಧದಲ್ಲಿ ಅಭ್ಯಾಸವ ಮಾಡಿದರೇನು ? ಹಗೆಯ ಕೊಲುವಡೊಂದಲಗು ಸಾಲದೇ ? ಲಿಂಗವ ಗೆಲುವಡೆ ಶರಣಸತಿ ಲಿಂಗಪತಿ ಎಂಬುದೊಂದಲಗು ಸಾಲದೇ ? ಎನಗೆಯು ನಿನಗೆಯು ಜಂಗಮ ಪ್ರಸಾದವೆಂಬಲಗು ಸಾಲದೇ ಕೂಡಲಸಂಗಮದೇವ?

೪೩. ಲಿಂಗವ ಪೂಜಿಸಿ ಜಂಗಮವನುದಾಸೀನವ ಮಾಡಿದರೆ, ಆ ಲಿಂಗ ಪೂಜಕರಿಗೆ ಮಾಡಿದ ಶಿವದೂತರ ದಂಡವೆಂಬುದ. ಲೋಕದ ಕರ್ಮಿಗಳಿಗೆ ಮಾಡಿದ ಯಮದೂತರ ದಂಡವೆಂಬುದ. ಇದು ಕಾರಣ ಲಿಂಗಜಂಗಮ ಒಂದೇ ಎಂದರಿಯದವರೆನಗೆ ತೋರದಿರಯ್ಯ ಕೂಡಲ ಸಂಗಮದೇವಾ.

೪೪. ಸುಪ್ರಭಾತ ಸಮಯದಲಿ ಅರ್ಥಿಯಲಿ ಲಿಂಗವ ನೆನೆದಡೆ ತಪ್ಪುವುದು ಅಪಮೃತ್ಯು, ಕಾಲಕರ್ಮಂಗಳಯ್ಯ! ದೇವಪೂಜೆಯ ಮಾಟ ದುರಿತ ಬಂಧನದೋಟ. ಶಂಭು ನಿಮ್ಮಯ ನೋಟ ಹರೆ ಹಿಂಗವ ಕಣ್ಬೇಟ. ಸದಾ ಸನ್ನಿಹಿತನಾಗಿ ಶರಣೆಂದು ನಂಬುವುದು. ಜಂಗಮಾರ್ಚನೆಯ ಮಾಟ ಕೂಡಲಸಂಗನ. ಕೂಟ.

೪೫. ಜಂಗಮವ ನಿಂದೆಯ ಮಾಡಿ, ಲಿಂಗವ ಪೂಜಿಸುವ ಭಕ್ತನ ಅಂಗವಣೆ ಎಂತೋ? ಶಿವಶಿವಾ, ನಿಂದಿಸುವ ಪೂಜಿಸುವ ಪಾತಕವಿದ ಕೇಳಲಾಗದು. ಗುರುವಿನ ಗುರು ಜಂಗಮ ಇಂತೆಂದುದು ಕೂಡಲ ಸಂಗನ ವಚನ.

೪೬. ಲಿಂಗವ ಪೂಜಿಸಿದ ಬಳಿಕ ಜಂಗಮಕ್ಕೆ ಅಂಜಲೇಬೇಕು. ದಕ್ಕನೆ ನುಂಗಿದಂತೆ ಬೆರೆತುಕೊಂಡಿರಬೇಡ. ಬೀಗಿ ಬೆಳೆದ ಕೊನೆವಾಳೆ ಯಂತೆ ಬಾಗಿಕೊಂಡಿದ್ದರೆ, ಬೇಡಿದ ಪದವಿಯನೀವ ಕೂಡಲಸಂಗಮದೇವ.

---

## (೮) ಭಕ್ತಜಂಗಮ ಸಾಮರಸ್ಯ.

೪೭. ಎಲ್ಲರಿಗಿಂದ ಶಿವಭಕ್ತರೇ ಅಧಿಕ ನೋಡಯ್ಯ. ಇದಕ್ಕೆ ಅಧಿಕ ವಾಗಿ ಜಂಗಮವ ಕಂಡೆ. ಈ ದ್ವಿವಿಧವನೊಂದೇ ಎಂದು ನಂಬಿದೆ ಕೂಡಲ ಸಂಗಮದೇವಾ

೪೮. ಜಂಗಮವ ಕೂಡಿಕೊಂಡು ಲಿಂಗಾರ್ಚನೆಯ ಮಾಡುವುದು ಲೇಸಯ್ಯ ಭಕ್ತಂಗೆ. ಆ ಭಕ್ತನ ಕೂಡಿಕೊಂಡು ಲಿಂಗಾರ್ಚನೆಯ ಮಾಡು ವುದು ಲೇಸಯ್ಯ ಜಂಗಮಕ್ಕೆ. ಆ ಜಂಗಮದ ಕರ್ತವ್ಯವೇ ಭಕ್ತಂಗೆ ದಾಸೋಹ. ಆ ಭಕ್ತನ ಕಿಂಕಲವೇ ಜಂಗಮಕ್ಕೆ ದಾಸೋಹ. ಆ ಭಕ್ತ



ನೊಳಗೆ ಜಂಗಮವಡಗಿ, ಆ ಜಂಗಮದೊಳಗೆ ಭಕ್ತನಡಗಿದುದನೇನೆಂಥು ಹವಣಿಸುವೆನಯ್ಯಾ? ಎರಡೊಂದಾದ ಘನವ ಇದನೇನೆಂದುಪಮಿಸುವೆ ನಯ್ಯಾ? ತೆರಹಿಲ್ಲದ ಘನವ ಈ ಎರಡಕ್ಕೆಯು ಭವವಿಲ್ಲವೆಂದು, ನಿಮ್ಮ ಶ್ರುತಿಗಳು ಹೇಳಿದವಾಗಿ ನಿಮ್ಮ ಕರುಣವೆನಗಾಯಿತ್ತು ಕೂಡಲಸಂಗಮ ದೇವಾ

೪೯. ಭಕ್ತನ ಮಠವೆಂದು ಜಂಗಮವು ನಡೆದು ಬಂದಲ್ಲಿ, ಆ ಭಕ್ತನು ಕಾಣುತ ಆಸನವ ತ್ಯಜತೆಯ ಮಾಡುತ್ತ, ಕೊಂಕುತ್ತ, ಕೈಮುಗಿದು ನಿಂದಿರ್ದು, ಬಾಗಿ ಬಳುಕುತ್ತ ‘ಬಿಜಯಂ ಮಾಡಿ ದೇವಾ’ ಎಂದು ಕರೆದು ಕುಳ್ಳಿರಿಸಿ, ಪಾದಾರ್ಚನೆಯ ಮಾಡಿ, ಪಾದೋದಕವಂ ಕೊಂಡು, ವಿಭೂತಿ ವೀಳೆಯವಂ ಕೊಟ್ಟು, ಕಂಗಳು ತುಂಬಿ ನಿರೀಕ್ಷಿಸಿ. ಶ್ರೋತ್ರ ತುಂಬಿ ಹಾರೈಸಿ, ಬಾಯ ತುಂಬಿ ಮಾತನಾಡಿ, ಏಗೂದು ಬೆಸನೆಂದು ತನು ಕರಗಿ ಮನ ಕರಗಿ ನೋಡಿ ಮಾಡಿ ಕೂಡುವುದೀಗ ಭಕ್ತಸ್ಥಲ. ಬಡವನಾಗಲಿ, ಬಲ್ಲಿದನಾಗಲಿ, ಇನಿತು ಮುಖ್ಯವಾಗಿ ಮಾಡಿಸಿಕೊಂಬುದು ಜಂಗಮಸ್ಥಲ. ಈ ಎರಡೊಂದಾದ ಘನವನಂತಿಂತೆಂದುಪಮಿಸಬಾರದಂತಿರಲಿ. ಇನಿತಲ್ಲದೆ ಮಾಡಿದ ಮಾಟ ಭಕ್ತಸ್ಥಲಕ್ಕೆ ಸಲ್ಲದು. ಫಲದಾಯಕನೈಸೆ. ಇನಿತಲ್ಲದೆ ಮಾಡಿಸಿಕೊಂಬುದು ಜಂಗಮಸ್ಥಲಕ್ಕೆ ಸಲ್ಲದು. ಉಪಜೀವಿತನೈಸೆ. ಈ ಎರಡ ಕ್ಕೆಯೂ ಭವ ಹಿಂಗದು ಕಾಣಾ ಕೂಡಲಸಂಗಮದೇವಾ.

೫೦. ಗುರುಶಿಷ್ಯಸಂಬಂಧವಾದುದಕ್ಕೆ ಇದು ಚಿಹ್ನ. ಹಿಂದು ಬಿಟ್ಟು ಮುಂದು ಹಿಡಿಯಲೇಬೇಕು. ಕೂಡಲಸಂಗಮದೇವ ಕೇಳಯ್ಯ ಕಿಚ್ಚಿನೊ ಳಗೆ ಕೋಲ ಬೈಚಿಟ್ಟಂತಿರಬೇಕು.

---

## (೯) ಜಂಗಮದಲ್ಲಿ ನಂಬಿಗೆ.

೫೧. ಎತ್ತಿಕೊಳಲೇಕೆ, ಮತ್ತಿಳುಹಲೇಕಯ್ಯಾ? ದರದುರ ಭಕ್ತಿಯ ಮಾಡಲೇಕೆ? ಮತ್ತೆ ನಿಂದಿಸಲೇಕೆ? ?ಸ್ತುತಿಸಲೇಕೆ? ಹೋಗಬಿಟ್ಟು ಜಂಗ ಮವ ಹಿಂದೆಯಾಡುವನ ಬಾಯಲ್ಲಿ ಮೆಟ್ಟಿ ಹುಡಿಯ ಹೊಯ್ಯದೆ ಮಾಣ್ಬನೇ ಕೂಡಲಸಂಗಮದೇವ?

೫೨. ಗುರು ಮುನಿದರೆ, ಒಂದು ದಿನ ಬಾಳುವೆ. ಲಿಂಗ ಮುನಿದರೆ ದಿನವರೆ ಬಾಳುವೆ. ಜಂಗಮ ಮುನಿದರೆ ಕ್ಷಣ ಮಾತ್ರ ಸೈರಿಸಿದೆನಾ ದಡೆ, ಎನ್ನ ಪ್ರಾಣದ ಹೋಕು ಕೂಡಲಸಂಗಮದೇವ.

೫೩. ಅರಸು ಮುನಿದರೆ, ನಾಡೊಳಗಿರಬಾರದಯ್ಯ. ಗಂಡ ಮುನಿದರೆ, ಹೆಂಡಿತಿಯಾಗಿರಬಾರದಯ್ಯ. ಕೂಡಲಸಂಗಮದೇವ, ಜಂಗಮ ಮುನಿದರೆ ನಾನೆಂತು ಬದುಕುವೆನು ?

೫೪. ಹೇಡಿ ಬಿರಿದ ಕಟ್ಟಿದಂತಾಯಿತ್ತೆನ್ನ ವೇಷ. ಕಾದಬೇಕು. ಕಾದುವರೆ ಮನವಿಲ್ಲ ಅಗಳೇ ಹೋಯಿತ್ತ ಬಿರಿದು. ಹಗರಣಿಗ ನಗೆಗೆಡೆಯಾಯಿತ್ತು. ಮಾರಂಕ ಜಂಗಮ ಮನೆಗೆ ಬಂದರೆ, ಕಾಣದಂತಡ್ಡ ಮುಸುಡಿಟ್ಟರೆ, ಕೂಡಲಸಂಗಮದೇವ ಜಾಣ ಮೂಗ ಕೊಯ್ದು ಹಲುದೋರಲು.

---

## (೧೦) ಜಂಗಮರಲ್ಲಿ ಭೇದವಿಲ್ಲ.

೫೫. ಉಟ್ಟು ತೊಟ್ಟು ಪೂಜ್ಯವಾಗಿ ಬಂದ ಜಂಗಮವನೆ ವಿಶೇಷವೆಂದು ಕಂಡು, ಕಂಥೆಯ ಬೊಂತೆಯ ಜಂಗಮ ಬಂದರೆ ಹೀನವೆಂದು ಕಂಡೆನಾದಡೆ, ಪಂಚಮಹಾಪಾತಕ. ಇದು ಕಾರಣ ಅನ್ನ ವಸ್ತ್ರ ಧನ ಮಾಟದಲು ಎರಡಾಗಿ ಕಂಡೆನಾದಡೆ ನರಕದಲಿಕ್ಕುವ ಕೂಡಲಸಂಗಮದೇವ

೫೬. ಬೇರೂರಿಂದ ಬಂದ ಜಂಗಮವೇ ಲಿಂಗವೆಂದು ಮನೆಯಲಿದ್ದ ಜಂಗಮವನುದಾಸೀನವ ಮಾಡಿದರೆ, ನಾನು ಬೆಂದೆನಯ್ಯ. ಆಸುಬೆಂದ ಬೇಗೆಯನರಿಯೆನಯ್ಯಾ ಕೂಡಲಸಂಗಮದೇವಾ.

೫೭. ಉತ್ತಮ, ಮಧ್ಯಮ, ಕನಿಷ್ಠವೆಂದು ಬಂದ ಜಂಗಮವನೆಂದೆನಾದರೆ ನೊಂದೆನಯ್ಯ, ನಾನು ಬೆಂದೆನಯ್ಯ. ಎನ್ನ ಕಿಚ್ಚು ಎನ್ನ ಸುಟ್ಟಿತ್ತು. ಸುಖಿ ಜಂಗಮ, ಸಾಮಾನ್ಯ ಜಂಗಮ ಉಂಟೇ ಕೂಡಲಸಂಗಮದೇವಾ?

೫೮. ದೂರದಿಂದ ಬಂದ ಜಂಗಮವೇ ಅಯ್ಯಗಳೆಂದು ಸಾರಿರ್ದ ಜಂಗಮವ ಪರಿಚಾರಕರೆಂಬ ಕೇಡಿಂಗೆ ನಾನು ಬೆರಗಾದೆನಯ್ಯ. ಸಾರಿರ್ದವರು ದೂರಿರ್ದವರು ಎಂದು ಬೇರೆ ಮಾಡಿ ಕಂಡರೆ, ಕೂಡಲಸಂಗಮದೇವ ಸಿಂಗಾರದ ಮೂಗ ಹಲುದೋರ ಕೊಯ್ಯದೆ ಮಾಣ್ಬನೇ ?

---



# ಪಾದೋದಕ.

## (೧೧) ಪಾದೋದಕದ ಸ್ವರೂಪ.

೫೯. ಬ್ರಹ್ಮಂಗೆ ವಾಕ್ಪರುಷ. ವಿಷ್ಣುವಿಗೆ ನಯನಪರುಷ. ರುದ್ರಂಗೆ ಹಸ್ತಪರುಷ. ನಮ್ಮ ಕೂಡಲಸಂಗನ ಶರಣರಿಗೆ ಪಾದವೇ ಪರುಷ.

೬೦. ಸಜ್ಜನ ಶರಣರ ಕಂಡು ಎನ್ನ ಮನ ಉಬ್ಬಿತ್ತು ನೋಡಾ. ಶ್ರೀಗುರುಪಾದವ ಹಿಡಿದು ಪಾವನವಾದೆನಯ್ಯ. ಪಾದೋದಕ ಪ್ರಸಾದದಿಂದ ಭವಗೆಟ್ಟೆನು ಕೂಡಲಸಂಗಮದೇವಾ.

೬೧. ಗುರುಲಿಂಗಜಂಗಮದಿಂದ ಪಾದೋದಕ ಪ್ರಸಾದವಾಯಿತ್ತು. ಆ ಭಾವವೇ ಮಹಾನುಭಾವವಾಗಿ, ಎನಗೆ ಬೇರೆ ಪ್ರಸಾದವೆಂಬುದಿಲ್ಲ ಕೂಡಲಸಂಗಮದೇವ.

೬೨. ಮುನ್ನಿನ ಜನ್ಮದಲ್ಲಿ ಗುರುಲಿಂಗಜಂಗಮವ ಪೂಜಿಸಲರಿಯದ ಕಾರಣ, ಬಹು ಜನ್ಮಕ್ಕೆ ತಂದಿಕ್ಕಿದೆಯಯ್ಯ ಎನ್ನನು. ಎನಗೆ ಗುರುಪಥವ ತೋರಿದವರಾರು ? ಲಿಂಗಪಥವ ತೋರಿದವರಾರು? ಜಂಗಮಪಥವ ತೋರಿದವರಾರು? ಪಾದೋದಕ ಪ್ರಸಾದವ ತೋರಿದವರಾರು ? ತೋರುವ ಮನವೇ ನೀವೆಂದರಿವೆ. ಎನಗಿನ್ನಾವ ಭಯವಿಲ್ಲ ಕೂಡಲಸಂಗಮದೇವಾ.

---

# ಪ್ರಸಾದ.

## (೧೨) ಜಂಗಮಪ್ರಸಾದ.

೬೩ ಎನ್ನವರೆನಗೊಲಿದು, ಹೊನ್ನ ಶೂಲದಲಿಕ್ಕಿದರಯ್ಯಾ. ಅಹಂಕಾರ ಪೂರಾಯ ಗಾಯದಲ್ಲಿ ಆನೆಂತು ಬದುಕುವೆನೆಂತು ಜೀವಿಸುವೆ ? ಜಂಗಮವಾಗಿ ಬಂದು ಜರಿದು ಶೂಲವನಿಳುಹಿ, ಪ್ರಸಾದದ ಮದ್ದನಿಕ್ಕಿ, ಸಲಹು ಕೂಡಲಸಂಗಮದೇವಾ.

೬೪. ಹಾರುವೆ ಹಾರುವನಪ್ಪೆ ನಾನು, ಸದ್ಭಕ್ತರೆನ್ನವರೆನ್ನವರೆಂದು. ಹಾರುವೆ ಹಾರುವೆನಪ್ಪ ನಾನು ಶರಣರೆನ್ನವರೆಂದು. ಕೂಡಲಸಂಗನ ಶರಣರು ತಮ್ಮೊಕ್ಕುದನಿಕ್ಕಿ ಸಲಹುವರಾಗಿ.

೬೫. ಅಹುದೆಂದರಿಯೆ, ಅಗದೆಂದರಿಯೆ, ಆದಿ ಪಥವ ತೋರಲರಿಯೆ, ಸತ್ಯವನರಿಯೆ, ಸಹಜವನರಿಯೆ, ಸಜ್ಜನಶುದ್ಧವ ಮುನ್ನವೆ ಅರಿಯೆ. ನಿಮ್ಮ ಶರಣರ ಒಕ್ಕುದನುಂಡಿಪ್ಪೆ ಕೂಡಲಸಂಗಮದೇವಾ.

## (೧೩) ಲಿಂಗಜಂಗಮ ಪ್ರಸಾದಗಳು

೬೬. ಜಂಗಮವೇ ಲಿಂಗವೆನಗೆ. ಜಂಗಮವೇ ಪ್ರಾಣವೆನಗೆ, ಕೂಡಲಸಂಗಮದೇವ, ಎನಗೆಯೂ ನಿನಗೆಯೂ ಜಂಗಮದ ಪ್ರಸಾದವೇ ಪ್ರಾಣ.

೬೭. ಸ್ಥಾವರ ಜಂಗಮವೆಂಬುಭಯ ಪಕ್ಷ ಒಂದೇ. ಆನ ಮುಖದಲು ಬಂದರೂ ತೃಪ್ತಿಯೊಂದೇ. ಕೂಡಲಸಂಗಮದೇವರ ಆಪ್ಯಾಯನ ಒಂದೇ.

---

## (೧೪) ಗುರು ಲಿಂಗ ಜಂಗಮ ಪ್ರಸಾದಗಳು.

೬೮. ಭೂತ ಒಲಿದಾತ್ಮನ ಸೋಂಕಿದ ಬಳಿಕ, ಭೂತನ ಗುಣವಲ್ಲದೆ, ಆತ್ಮನ ಗುಣವುಂಟೇ? ಗುರು ಕಾರುಣ್ಯವಾಗಿ, ಹಸ್ತ ಮಸ್ತಕ ಸಂಯೋಗವಾದ ಬಳಿಕ ಗುರುಲಿಂಗಜಂಗಮವೇ ಗತಿಯಾಗಿರ್ಪ ಕೂಡಲ ಸಂಗಮದೇವ.

೬೯. ಲಿಂಗಕ್ಕಲ್ಲದೆ ಮಾಡೆನೀ ಮನವ. ಜಂಗಮಕ್ಕಲ್ಲದೆ ಮಾಡೆನೀ ಧನವ. ಪ್ರಸಾದಕ್ಕಲ್ಲದೆ ಮಾಡೆನೀ ತನುವ. ಲಿಂಗ ಜಂಗಮ ಪ್ರಸಾದಕ್ಕಲ್ಲದೆ ಬಾಯ್ದೆರೆಯೆನೆಂದೆನ್ನ ಭಾಷೆ. ಅನರ್ಪಿತವ ದೊಡೆ ತಪ್ಪೆನ್ನದು, ಮೂಗ ಕೊಯ್ಯಿ ಕೂಡಲಸಂಗಮದೇವ.

೭೦. ಸರ್ವ ಭೂತಾತ್ಮನೆಂಬ ಮಾತಿನ ಮಾತಿನಲ್ಲಿ ಹೋಗದ ತನುಮನಧನವ ಗುರುಲಿಂಗಜಂಗಮಕ್ಕೆ ಸವಿಸಲೇಬೇಕು. ನಮ್ಮ ಕೂಡಲ ಸಂಗನ ಶರಣರಿಗೆ ಅಂಜಲೇಬೇಕು.

೭೧. ಗುರುವಿನಲ್ಲಿ ಸದಾಚಾರ ಲಿಂಗದಲ್ಲನುದಿನ ವೇಳೆ. ಜಂಗಮದಲ್ಲನುಭಾವ ಸಮಯಾಚಾರ ಲಿಂಗದಲ್ಲನುದಿನ ವೇಳೆ. ಈ ಉಭಯಾಚಾರದಿಂದ ತಿಳಿದ ತಿಳಿವು ಲಿಂಗದಲ್ಲನುದಿನ ವೇಳೆ. ಬೇರೆ ತೋರಲಿಲ್ಲ, ಲಿಂಗಜಂಗಮದಲ್ಲಿ ಲೀಯ್ಯವಾಗ ಸಮಯಾಚಾರ. ಇದು ಕಾರಣ ಕೂಡಲ ಸಂಗಮದೇವ ಲಿಂಗದಲ್ಲನುದಿನ ವೇಳೆ.

೭೨. ಮುತ್ತು ನೀರಲ್ಲಿ ಹುಟ್ಟಿ ಮತ್ತೆ ನೀರಪ್ಪುದೇ? ಗುರು ಕಾರುಣ್ಯವ ಪಡೆದ ಭಕ್ತನು ಹಿಂದಣ ಪೂರ್ವಾಶ್ರಯವ ಬೆರಸಿದರೆ, ಗುರುದ್ರೋಹ, ಲಿಂಗದ್ರೋಹ, ಜಂಗಮದ್ರೋಹ, ಆಚಾರದ್ರೋಹ, ಪ್ರಸಾದದ್ರೋಹ. ಇಂತೀ ಪಂಚಮಹಾಪಾತಕಂಗಳು ಭಕ್ತಂಗಲ್ಲದೆ ಭವಿಗೆಲ್ಲಿಯದೋ? ಗುರುವಿದು, ಲಿಂಗವಿದು, ಜಂಗಮವಿದು, ಆಚಾರವಿದು, ಪ್ರಸಾದವಿದು, ಎಂದರಿಯದಿದ್ದರೆ ಕುಂಭೀಪಾತಕ ನಾಯಕ ನರಕದಲಿಕ್ಕುವ ಕೂಡಲ ಸಂಗಮದೇವ.

---



## (೧೫) ಗುರು ಲಿಂಗ ಜಂಗಮ ಪ್ರಸಾದ ಇವುಗಳಲ್ಲಿ ಸಾಮರಸ್ಯ.

೭೩. ಶುದ್ಧವ ಗುರುವಿಂಗೆ ಕೊಟ್ಟು ಶುದ್ಧವಾಯಿತ್ತೆಂಬೆನಯ್ಯ. ಸಿದ್ಧವ ಲಿಂಗಕ್ಕೆ ಕೊಟ್ಟು ಸಿದ್ಧವಾಯಿತ್ತೆಂಬೆನಯ್ಯ. ಪ್ರಸಿದ್ಧವ ಜಂಗಮಕ್ಕೆ ಕೊಟ್ಟು ಪ್ರಸಿದ್ಧವಾಯಿತ್ತೆಂಬೆನಯ್ಯ. ಗುರುಲಿಂಗಜಂಗಮತ್ರಯ ಏಕವಾಗಿ ಕಾಣಲರಿಯದಿರ್ದಡೆ, ಶುದ್ಧ ಸಿದ್ಧ ಪ್ರಸಿದ್ಧ ಒಡನೆ ನಗುತಿದ್ದಾವೆ. ತನು ಮನಧನವ ನಿವೇದಿಸಲರಿಯೆನಾಗಿ, ಕೂಡಲಸಂಗಮದೇವ ಒಲಿ ಒಲಿ ಎಂದೊಡೆಂತೊಲಿವ?

೭೪. ಗುರುಲಿಂಗಜಂಗಮದಿಂದ ಪಾದೋದಕ ಪ್ರಸಾದವಾಯಿತ್ತು ಆ ಭಾವವೇ ಮಹಾ ಪ್ರಸಾದವಾಗಿ, ಎನಗೆ ಬೇರೆ ಪ್ರಸಾದವೆಂಬುದಿಲ್ಲ ಕೂಡಲಸಂಗಮದೇವಾ.

೭೫. ಧನಕ್ಕೆ ಮನವನೊಡ್ಡಿದರೇನು? ಮನಕ್ಕೆ ಧನವನೊಡ್ಡಿದರೇನು? ತನು ಮನ ಧನವ ಮೀರಿ ಮಾತಾಡಬಲ್ಲರೆ, ಆತ ನಿಸ್ಸೀಮನು. ಆತ ನಿಜೈಕ್ಯನು. ತನು ಮನ ಧನವ ಸವೆದರೆ ಕೂಡಲಸಂಗಮದೇವನೊಲಿವ

೭೬. ತ್ರಿವಿಧ ಪ್ರಸಾದವೆಂದೆಂಬರು. ಅದೆಂತಹುದೋ? ಶುದ್ಧ ಪ್ರಸಾದ ಲಿಂಗದದು. ಸಿದ್ಧ ಪ್ರಸಾದ ಜಂಗಮದದು. ಪ್ರಸಿದ್ಧ ಪ್ರಸಾದ ಗುರುವಿನದು. ಇಂತೀ ತ್ರಿವಿಧ ಒಂದಾದವರ ತೋರಾ ಕೂಡಲಸಂಗಮದೇವ.

೭೭. ಆತ್ಮ ಲಿಂಗ, ಪರಮಾತ್ಮ ಜಂಗಮ, ತನುಮಧ್ಯಪ್ರಸಾದವಾಯಿತ್ತು. ನಿಶ್ಚಿಂತನಿವಾಸವಾಯಿತ್ತು. ಕೂಡಲಸಂಗನ ಶರಣರ ಸಂಗದಿಂದ ನಿಶ್ಚಿಂತ ನಿವಾಸವಾಯಿತ್ತು.

೭೮. ಲಿಂಗದಲ್ಲಿ ಕಠಿಣ ಉಂಟೇ? ಜಂಗಮದಲ್ಲಿ ಕುಲ ಉಂಟೇ? ಪ್ರಸಾದದಲ್ಲಿ ಅರುಚಿ ಉಂಟೇ? ಈ ತ್ರಿವಿಧದಲ್ಲಿ ಭಾವ ಭೇದವನರಸುವೆ. ಕೂಡಲಸಂಗಮದೇವ, ಧಾರೆವಟ್ಟಿಲೆನ್ನ ಭಕ್ತಿ.

---

## (೧೬) ಪ್ರಸಾದದ ಪರಿಣಾಮಗಳು.

೭೯. ಹಸಿವು ತೃಷೆ ನಿದ್ರೆ ವಿಷಯಂಗಳ ಮರೆದೆ. ನೀವು ಕಾರಣ. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಂಗಳ ಮರೆದೆ. ನೀವು ಕಾರಣ. ಪಂಚೇಂದ್ರಿಯ ಸಪ್ತಧಾತು ಅಷ್ಟಮದಂಗಳ ಮರೆದೆ. ನೀವು ಕಾರಣ. ಕೂಡಲಸಂಗಮದೇವ ಕೇಳಯ್ಯಾ, ನಿಮ್ಮ ಶರಣರಿಗೆ ಆಪ್ಯಾಯನವಾದರೆ, ಎನಗೆ ತೃಪ್ತಿಯಾಯಿತ್ತು.

೮೧. ಕರ್ತರು ನಿಮ್ಮ ಗಣಂಗಳು ಎನ್ನ ತೊತ್ತ ಮಾಡಿ ಸಲಹಿದ ಸುಖವು ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯದಂತುಟಲ್ಲ ಕೇಳಯ್ಯಾ, ಕೂಡಲಸಂಗನ ಶರಣರು ತಮ್ಮೊಕ್ಕುದನಿಕ್ಕಿ ಸಲಹುವ ಸುಖವು.

೮೧. ಅಯ್ಯಾ ನೀನೆಂದಡೆ ಎಂಬೆನು. ನಿನ್ನ ಹಂಗೇನು ಅರಿಯೆನು. ನಿನ್ನ ಮುಖದಲ್ಲಿ ಒಂದಗುಳು ಸವೆಯದು. ನಿನ್ನ ಪ್ರಸಾದವ ಕೊಂಡೆನ್ನ ಭವಕ್ಕೆ ಬೀಜವಾಯಿತ್ತು. ಜಂಗಮವೇ ಲಿಂಗವೆಂದು ಒಕ್ಕುದ ಕೊಂಡಡೆ ಎನ್ನ ಭವ ನಾಸ್ತಿಯಾಯಿತ್ತು ಕಾಣಾ ಕೂಡಲಸಂಗಮದೇವಾ.

೮೨. ನಾನು ಹೊತ್ತ ಹುಳ್ಳಿಯನಂಬಿಲಿಗೆ ಕೊಂಬುವರಿಲ್ಲ ನೋಡಯ್ಯಾ. ಆನು ನಿಮ್ಮ ಶರಣರ ಒಕ್ಕುದನುಂಡು ಬದುಕಿವೆನಯ್ಯಾ. ಮೇರುವ ಸಾರಿದ ಕಾಗೆ ಹೊಂಬಣ್ಣವಪ್ಪುದು ತಪ್ಪದು ಕೂಡಲಸಂಗಮದೇವಾ.

೮೩ ದಾಸಿಯ ವರ್ಗದಲಿಪ್ಪೆನು. ಶಿವಶರಣರ ಮನೆಯಲ್ಲಿ ಅವರೊಕ್ಕುದನುಂಡು, ಮಿಕ್ಕುದ ಕಾಯ್ದುಕೊಂಡಿಪ್ಪ ಕಾರಣ, ಕಾಲ ಮುಟ್ಟಲಮ್ಮದು. ಕಲ್ಪಿತ ತೊಡೆಯಿತ್ತು. ಎನ್ನ ಭವಬಂಧನ ಹಿಂಗಿತ್ತು. ಎನ್ನ ಕರ್ಮ ನಿರ್ಮಳವಾಯಿತ್ತು. ಅವರ ತೊತ್ತಿನ ತೊತ್ತಿನ ಮರುದೊತ್ತಿನ ಮಗನೆಂದು, ಕೂಡಲಸಂಗಮದೇವ, ಇತ್ತ ಬಾರೆಂದೆತ್ತಿಕೊಂಡನು.

---

## ವಿಭೂತಿ.

### (೧೭) ವಿಭೂತಿಯ ಮಹತ್ವ.

೮೪ ಅಡ್ಡ ತ್ರಿಪುಂಡ್ರ ಮಣಿಮಕುಟ ವೇಷದ ಶರಣರ ಕಂಡಡೆ, ನಂಬುವುದೆನ್ನ ಮನವು. ನಚ್ಚುವುದೆನ್ನ ಮನವು ಸಂದೇಹವಿಲ್ಲದೆ. ಇವಿಲ್ಲದವರ ಕಂಡಡೇನೆಂಬೆ ಕೂಡಲಸಂಗಮದೇವಾ ?



೮೫. ಅಡ್ಡ ವಿಭೂತಿ ಇಲ್ಲದವರ ಮುಖ ಹೊಲ್ಲ. ನೋಡಲಾಗದು. ಲಿಂಗದೇವನಿಲ್ಲದ ಠಾವು ಸರವಿಂಧ್ಯ. ಹೊಗಲಾಗದು. ದೇವಭಕ್ತನಿಲ್ಲದೂರು ಸಿನೆ ಹಾಳು ಕೂಡಲಸಂಗಮದೇವ.

೮೬. ಮುನ್ನ ಮಾಡಿದ ಪಾಪನೆಂತು ಹೋಹುದೆಂದು ಚಿಂತಿಸಬೇಡ. ಕಹಿ ಸೋರೆಯ ಕಾಯ ತಂದು, ವಿಭೂತಿಯ ತುಂಬಿದರೆ ಸಿಹಿಯಾಗದೇ ಮೂರು ದಿವಸಕ್ಕಯ್ಯ ? ಹಲವು ಕಾಲವು ಕೊಂದ ಸೊನೆಗಾರನ ಕೆಯ್ಯ ಕತ್ತಿಯಾದರೇನು ? ಪರುಷ ಮುಟ್ಟಲಿಕೆ ಹೊನ್ನಾಗದೇ ಅಯ್ಯಾ? ಲಲಾಟದಲ್ಲಿ ಶ್ರೀ ವಿಭೂತಿಯ ಬರೆಯಲಿಕೆ ಪಾಪ ಪಲ್ಲಟವಾಗದೇ ಕೂಡಲ ಸಂಗಮದೇವಾ.

೮೭. ನೀರಿಂಗೆ ನೈದಿಲೆಯೇ ಶೃಂಗಾರ. ಊರಿಂಗೆ ಆಗರವೇ ಶೃಂಗಾರ. ಸಮುದ್ರಕ್ಕೆ ತೆರೆಯೇ ಶೃಂಗಾರ. ನಾರಿಗೆ ಗುಣವೇ ಶೃಂಗಾರ. ಗಗನಕ್ಕೆ ಚಂದ್ರಮನೇ ಶೃಂಗಾರ. ನಮ್ಮ ಕೂಡಲಸಂಗನ ಶರಣರ ನೊಸಲಿಗೆ ವಿಭೂತಿಯೇ ಶೃಂಗಾರ.

---

## ರುದ್ರಾಕ್ಷಿ.

### (೧೮) ರುದ್ರಾಕ್ಷಿಯ ಮಹತ್ವ

೮೮. ಅಯ್ಯ, ಎನಗೆ ರುದ್ರಾಕ್ಷಿಯೇ ಸರ್ವ ಪಾವನ. ಅಯ್ಯ, ಎನಗೆ ರುದ್ರಾಕ್ಷಿಯೇ ಸರ್ವ ಸಿದ್ಧಿ. ಅಯ್ಯ, ನಿಮ್ಮ ಪಂಚ ವಕ್ತ್ರಗಳೇ ಪಂಚಮುಖದ ರುದ್ರಾಕ್ಷಿಗಳಾದವಾಗಿ, ಅಯ್ಯ ಕೂಡಲಸಂಗಮದೇವಾ, ಎನ್ನ ಮುಕ್ತಿಪಥಕ್ಕೆ ಈ ರುದ್ರಾಕ್ಷಿ ಸಾಧನವಯ್ಯ.

೮೯. ಹಸ್ತಕಡಗ ಕೈಗಧಿಕ ನೋಡಾ. ಕೊಡಲಹುದು, ಕೊಳಲಹುದು. ಬಾಹುಬಳೆ ತೋಳಿಂದಧಿಕ ನೋಡಾ. ಪರ ವಧುವನಪ್ಪಲಾಗದು. ಕರ್ಣಕ್ಕೆ ರುದ್ರಾಕ್ಷಿಯೇ ಅಧಿಕ ನೋಡಾ. ಶಿವ ನಿಂದೆಯ ಕೇಳಲಾಗದು. ಕಂಠಮಾಲೆ ಕೊರಳಿಂದಧಿಕ ನೋಡಾ. ಅನ್ಯ ದೈವಕ್ಕೆ ತಲೆ ಬಾಗಲಾಗದು. ಆವಾಗಳೂ ನಿಮ್ಮುವನೆ ನೆನೆದು ನಿಮ್ಮುವ ಪೂಜಿಸಿ ಕೂಡಲಸಂಗಯ್ಯನ ಪದಸನ್ನಿಹಿತನಾಗಿಪ್ಪಡೆ ಅಂಗಶಿಖಾಮಣಿಯಯ್ಯ.

೯೦. ಶ್ರೀ ರುದ್ರಾಕ್ಷಿಯ ಧರಿಸಿದಾತನ ಲಿಂಗವೆಂಬೆ. ಶ್ರೀರುದ್ರಾಕ್ಷಿಯ ಧರಿಸದ ಅಧಮರನೆ ಭವಿ ಎಂಬೆ. ಕೂಡಲಸಂಗಮದೇವಯ್ಯ ಶ್ರೀರುದ್ರಾಕ್ಷಿಯ ಧರಿಸುವ ಭಕ್ತರ ನೀನೆಂಬೆ.

# ಮಂತ್ರ.

## (೯) ಮಂತ್ರ ಮಹತ್ವ.

೯೧. ಎನ್ನ ಮನದಲ್ಲಿ ಮತ್ತೊಂದನರಿಯೆನಯ್ಯಾ. 'ಓಂ ನಮಃ ಶಿವಾಯ' 'ಓಂ ನಮಃ ಶಿವಾಯ' ಎನುತಿದ್ದೆನಯ್ಯಾ. ಎನಗಿದೇ ಮಂತ್ರ, ಎನಗಿದೇ ತಂತ್ರ. ಎನಗಿದೇ ಜಪ. ಕೂಡಲಸಂಗಮದೇವ, ನೀನೇ ಬಲ್ಲೆ ಎಲೇ ಲಿಂಗವೇ.

೯೨. ಸಂಸಾರವೆಂಬ ಸರ್ಪ ಮುಟ್ಟಲು, ಪಂಚೇಂದ್ರಿಯ ವಿಷಯ ವೆಂಬ ವಿಷದಿಂದ ಆಸು; ಮುಂದುಗೆಟ್ಟೆನಯ್ಯಾ! ಆಸು ಹೊರಳಿ ಬೀಳು ತಿರ್ದೆನಯ್ಯಾ! 'ಓಂ ನಮಃ ಶಿವಾಯ' ಎಂಬ ಮಂತ್ರವ ಜಪಿಸುತಿರ್ದೆ ನಯ್ಯಾ ಕೂಡಲಸಂಗಮದೇವಾ.

೯೩. ಅಕಟಕಟಾ! ಬೆಡಗು ಬಿನ್ನಾಣವೆಂಬುದೇನೋ? 'ಓಂ ನಮಃ ಶಿವಾಯ' ಎಂಬುದೇ ಮಂತ್ರ. 'ಓಂ ನಮಃ ಶಿವಾಯ' ಎಂಬುದೇ ತಂತ್ರ. ನಮ್ಮ ಕೂಡಲಸಂಗಮದೇವರ ನೆನೆವುದೇ ಮಂತ್ರ.

೯೪. ನಮಃ ಶಿವಾಯ, ನಮಃ ಶಿವಾಯ, ನಮಃ ಶಿವಾಯ ಶರ ಣೆಂದಿತ್ತು. ಲಲಾಟಲಿಖಿತ ಬರೆದ ಬಳಿಕ ಪಲ್ಲಟ ಮಾಡಬಾರದಾಗಿಯು. ಎನ್ನುರದಲುಂಡಿಗೆ ಶಿರದಲಕ್ಷರ ಕೂಡಲಸಂಗಯ್ಯ ಶರಣೆಂದಿತ್ತು.

೯೫. ಕರಿಯಂಜುವುದು ಅಂಕುಶಕಯ್ಯಾ. ಗಿರಿಯಂಜುವುದು ಕುಲಿ ಶಕ್ಕಯ್ಯಾ. ತಮಂಧವಂಜುವುದು ಜ್ಯೋತಿಗಯ್ಯಾ. ಕಾನನವಂಜುವುದು ಬೇಗೆ ಗಯ್ಯಾ. ಪಂಚಮಹಾಪಾತಕವಂಜುವುದು ನಮ್ಮ ಕೂಡಲಸಂಗನ ನಾಮ ಕ್ಕಯ್ಯಾ.

೯೬. ಪಾತಕ ಶತಕೋಟಿಯನೊರಿಸಲು, ಸಾಲದೇ ಒಂದು ಶಿವನ ನಾಮ? ಸಾಲದೇ ಒಂದು ಹರನ ನಾಮ? ಕೂಡಲಸಂಗಮದೇವ ನಿಮ್ಮ ಉಂಡಿಗೆಯ ಪಶುವ ಮಾಡಿದೆಯಾಗಿ.

೯೭. ಜಪ ತಪ ನಿತ್ಯ ನೇಮವೆನಗೆ ಉಪದೇಶ. ನಿಮ್ಮ ನಾಮ ವೆನಗೆ ಮಂತ್ರ. ಶಿವನಾಮವೆನಗೆ ತಂತ್ರ. ಕೂಡಲಸಂಗಮದೇವಯ್ಯ, ನಿಮ್ಮ ನಾಮ ಕಾಮಧೇನುವೆನಗೆ.



೯೮. 'ಓಂ ನಮಃ ಶಿವಾಯ' ಎಂಬ ಮಂತ್ರವ ಮೀರಲಮ್ಮದೆ, ನಿಂದುವು ವೇದ. 'ಓಂ ನಮಃ ಶಿವಾಯ' ಎಂಬ ಮಂತ್ರವ ಮೀರಲಮ್ಮದೆ, ನಿಂದುವು ಶಾಸ್ತ್ರ. 'ಓಂ ನಮಃ ಶಿವಾಯ' ಎಂಬ ಮಂತ್ರವ ಮೀರಲಮ್ಮದೆ, ನಿಂದುವು ತರ್ಕ. ಭಯಂಕರ ಭ್ರಮೆಗೊಂಡಿತ್ತು ಮಂತ್ರ ತಂತ್ರ. ಶಿವ ನಂತುವನರಿಯದೆ ಚಿಂತಿಸುತಿದ್ದಿತೀ ಲೋಕ. ಕೂಡಲಸಂಗಮದೇವ, ಶ್ವಪ ಚನು ಮೆರೆದರೆ, ಜಾತಿಭೇದವ ಮಾಡಲಮ್ಮದೆ ನಿಂದವು.

೯೯. ಪ್ರಣಮವನುಚ್ಚರಿಸುವ ಅಪ್ರಮಾಣಿಕರೆಲ್ಲರು ಪ್ರಣಮ ಮಂತ್ರಾ ರ್ಥವನೋದಿ, ಮಂತ್ರಾರ್ಥವನರಿಯರು. ಪ್ರಣಮ ಓಂ ನಮಃ ಶಿವಾಯ ಪ್ರಣಮ ಓಂ ನಮಃ ಶಿವಾಯ, ಪ್ರಣಮ ಓಂ ನಮಃ ಶಿವಾಯ, ಎಂದುವು ಶ್ರುತಿಗಳೆಲ್ಲ. ಪ್ರಣಮ ಭರ್ಗೋದೇವ ಎಂದುವು ಶ್ರುತಿಗಳು. ಕೂಡಲಸಂಗನ ನರಿಯದ ದ್ವಿಜರೆಲ್ಲ ಭ್ರಮಿತರು

೧೦೦. ವಶ್ಯವ ಬಲ್ಲೆವೆಂಬಿರಯ್ಯಾ. ಬುದ್ಧಿಯನರಿಯದ ಮನುಜರು ಕೇಳಿರಯ್ಯ. ವಶ್ಯವಾವುದೆಂದರಿಯದೆ, ಮರುಳುಗೊಂಬಿರೆಲೆ ಗಾವಿಲ ಮನು ಜರಿರ. 'ಓಂ ನಮಃ ಶಿವಾಯ' ಎಂಬುದೇ ಮಂತ್ರ, ಸರ್ವಜನವಶ್ಯ' ಕೂಡಲಸಂಗಮದೇವ.

೧೦೧. ಭವಬಂಧನ ದುರಿತಂಗಳ ಗೆಲುವಡೆ, ಓಂ ನಮಶ್ಶಿವಾಯ ಶರಣೆಂದರೆ ಸಾಲದೇ? ಹರಹರ ಶಂಕರ, ಶಿವಶಿವ ಶಂಕರ, ಜಯ ಜಯ ಶಂಕರ ಶರಣೆನುತಿದ್ದೇನೆ. ಎನ್ನ ಪಾತಕ ಪರಿಹಾರ ಕೂಡಲಸಂಗಮದೇವ ಶರಣೆನುತಿದ್ದೇನೆ.